
ಬೆಳ್ಳಿ ಮಾಲಿಕೆ



# ಕೊಪ್ಪಳ ಜಿಲ್ಲೆಯ
# ಜನಪದ ಕಲಾವಿದರು

ಗವೀಶ ಹಿರೇಮಠ



# ಕೊಪ್ಪಳ ಜಿಲ್ಲೆಯ

# ಜನಪದ ಕಲಾವಿದರು

•

ಗವೀಶ ಹಿರೇಮಠ

•

ಕರ್ನಾಟಕ ಜಾನಪದ ಅಕಾಡೆಮಿ,
ಬೆಂಗಳೂರು-೦೨

KOPPAL JILLEYA JANAPADA KALAVIDARU
Written by Gavish Hiremath

Published by : Dr. S. Prasada Swamy,
Registrar,
Karnataka Janapada Academy
Kannada Bhavan, J. C. Road,
Bangalore -02

Pages : 12 + 164 = 176

Price : Rs. 60-00

© : ಕರ್ನಾಟಕ ಜಾನಪದ ಅಕಾಡೆಮಿ

ಪ್ರಕಟಣೆ : ಅಕ್ಟೋಬರ್ ೧, ೨೦೦೯

ಪ್ರಕಾಶಕರು : ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಹಿಂದಿನ ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

ಶ್ರೀ ಗವೀಶ ಹಿರೇಮಠ ಡಾ. ಹಂಪನಹಳ್ಳಿ ತಿಮ್ಮೇಗೌಡ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಡಾ. ಕೆ. ಚಿನ್ನಪ್ಪಗೌಡ

ಶ್ರೀ ಅರಾಟೆ ಮಂಜುನಾಥ ಡಾ. ಬಿ. ಎಸ್. ತಲ್ವಾಡಿ

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೦೯೦೪೭೦೭

# ಅಧ್ಯಕ್ಷರ ನುಡಿ

ಅಕಾಡೆಮಿ ಈ ಅವಧಿಯಲ್ಲಿ ಮಹತ್ವದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಾನಪದದ ಬೌದ್ಧಿಕ ಅಧ್ಯಯನ ಹಾಗೂ ಪ್ರದರ್ಶನ, ಸಂರಕ್ಷಣೆಗಳು ಈ ಯೋಜನೆಯ ಹಿನ್ನೆಲೆಯಾಗಿವೆ. ಪ್ರಕಟಣೆಗೆ ಒತ್ತು ನೀಡುವ ಅಗತ್ಯ-ಸಂದರ್ಭಗಳ ಕಾರಣದಿಂದ ತ್ರೈಮಾಸಿಕ, ಮಹಾಪ್ರಬಂಧ, ಅಪ್ರಕಟಿತ ಲೇಖನ ಸಂಗ್ರಹಗಳ ಪ್ರಕಟಣೆಯ ಜೊತೆ ಜಾನಪದಕ್ಕಾಗಿ ದುಡಿವ, ಬದುಕನ್ನು ಮುಡಿಪಾಗಿಟ್ಟಿರುವ ಕಲಾವಿದರ ಪರಿಚಯದ ಕೃತಿಗಳು ಈ ದಿಸೆಯಲ್ಲಿ ಮುಖ್ಯವಾದವು.

'ಜಾನಪದ ತಲೆಮಾರು' ಮಾಲಿಕೆಯ ಐದನೆ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ. ಇದರೊಡನೆ ಕನ್ನಡ, ಇಂಗ್ಲಿಷ್‌ನಲ್ಲಿ ಜಾನಪದ ಕುರಿತ ಗ್ರಂಥವೊಂದರ ಪ್ರಕಟಣೆಯ ಯೋಜನೆಯಿದೆ.

ಕೊಪ್ಪಳ ಜಿಲ್ಲೆಯ ಕಲಾವಿದರ ಪರಿಚಯದ ಈ ಕೃತಿ ಮಾಹಿತಿಯುಕ್ತ. ಸರಳತೆ, ಸ್ಪಷ್ಟತೆ ಇದರ ಗುಣ. ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಈ ಪ್ರಯತ್ನ ಜನಪದರ ಅಸ್ತಿತ್ವದ ಗುರುತೂ ಹೌದು. 'ಬೆಳ್ಳಿಮಾಲಿಕೆ'ಯ ಈ ಕೃತಿಯನ್ನು ರೂಪಿಸಿದ ಶ್ರೀ ಗವೀಶ ಹಿರೇಮಠ ಅವರಿಗೆ, ಸಹಕರಿಸುವ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ, ಕಛೇರಿ ಸಿಬ್ಬಂದಿಗೆ ಮತ್ತು ಓದುಗರಿಗೆ ಕೃತಜ್ಞತೆಗಳು.

**ಗೊ. ರು. ಚನ್ನಬಸಪ್ಪ**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

# ಕೆಲಮಾತು

●

ಅಕಾಡೆಮಿಗೆ ೨೫ ವರ್ಷ ತುಂಬಿದ ನೆನಪಿನ 'ಬೆಳ್ಳಿ ಮಾಲಿಕೆ'ಯಲ್ಲಿ ಈಗಾಗಲೇ ಏಳು ಪುಸ್ತಕ ಹೊರಬಂದಿವೆ. ಈಗಿನ ಮೂರು ಸೇರಿದಲ್ಲಿ ಹತ್ತು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಕಾಡೆಮಿ ಮಹತ್ವದ ಹೆಜ್ಜೆಗುರುತುಗಳನ್ನು ದಾಖಲಿಸಿದೆ. ಈ ಹಿಂದಿನ ಅಧ್ಯಕ್ಷರು ಒಂದೊಂದು ಆಯಾಮ ಜೋಡಿಸಿ ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಬಹುಮುಖ ಹಾಗೂ ಜನಮುಖಿತ್ವಗಳನ್ನು ಕಲ್ಪಿಸಿರುವುದು ವೇದ್ಯ.

ಮಾನ್ಯ ಗೊ. ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಅಕಾಡೆಮಿ ಇನ್ನಷ್ಟು ಕ್ರಿಯಾಶೀಲವಾಗಿದೆ. 'ಜನಪದ ಜಗಲಿ', 'ಜಾನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಹಲವು ಹತ್ತು ಯೋಜನೆಗಳು ಕಾರ್ಯಗತವಾಗುತ್ತಲಿವೆ. ಅಂತೆಯೇ 'ಜಾನಪದ ತಲೆಮಾರು' ಮಾಲಿಕೆಯ ಐದನೇ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾ 'ಕಲಾವಿದರ ಪರಿಚಯ ಮಾಲಿಕೆ' ಯೋಜನೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ, ಪರಿಚಯಕ್ಕೆ ಉತ್ತಮ ವೇದಿಕೆಯಾಗಿರುವ ಈ ಯೋಜನೆಗೆ ಅಕಾಡೆಮಿ ಮರುಚಾಲನೆ ನೀಡಿದೆ.

'ಬೆಳ್ಳಿ ಮಾಲಿಕೆ'ಯ ಸರಣಿಗೆ ಈ ಕೃತಿ ಹೊಸ ಸೇರ್ಪಡೆ. ಕೊಪ್ಪಳ ಜಿಲ್ಲೆಯ ಜಾನಪದ ಕಲಾವಿದರನ್ನು ಕುರಿತ ಈ ಕೃತಿ ಮಾಹಿತಿಗಳ ತೌರಾಗಿದೆ. ಕನ್ನಡ ಸಂಸ್ಕೃತಿ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಿರುವ ಈ ಅಪೂರ್ವ ಕಲಾವಿದರ ಮಾಹಿತಿ ನೀಡುವ ಈ ಕೃತಿ ಅಕಾಡೆಮಿಯ ಹೆಮ್ಮೆಯ ಪ್ರಕಟಣೆಯಾಗಿದೆ.

ಈ ಕಲಾವಿದರ ಮಾಹಿತಿಯನ್ನು ಕಲೆಹಾಕಿ, ಸಂಗ್ರಹಗೊಳಿಸಿ, ಸೂಕ್ತ ಪ್ರಸ್ತಾವನೆ ನೀಡಿರುವ ಶ್ರೀ ಗವೀಶ ಹಿರೇಮಠ ಅವರಿಗೆ, ಅಂತೆಯೇ ಅಕಾಡೆಮಿ ಸದಸ್ಯರಿಗೆ ಮತ್ತು ಸ್ಥಾಯಿ ಸಮಿತಿ ನೀಡಿದ ಸಹಕಾರಕ್ಕಾಗಿ ವಿಶೇಷ ನೆನಕೆಗಳು.

ಅಕಾಡೆಮಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ಜಯರಾಮರಾಜೇ ಅರಸು ಅವರಿಗೆ, ಆಗಾಗ ಸೂಕ್ತ ಸಲಹೆಗಳ ಮೂಲಕ ಅಕಾಡೆಮಿಯ ಕಾರ್ಯಗಳಿಗೆ ನಿರ್ದಿಷ್ಟತೆಯನ್ನು ಒದಗಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ವಂದನೆಗಳು.

ಅಕಾಡೆಮಿಯ ಸಿಬ್ಬಂದಿಗಳಾದ ಪ್ರಕಾಶ್, ನಾಗರತ್ನ, ಶಿವಲಿಂಗಯ್ಯ, ಕಲ್ಪನಾ ಅವರ ಸಹಕಾರ ಅಪೂರ್ವವಾದುದು.

ಈ ಕೃತಿಯ ಕರಡು ತಿದ್ದಿ, ಪುಸ್ತಕದ ಸೊಗಸಿಗೆ ಕಾರಣರಾಗಿರುವ ಶ್ರೀ ಗವೀಶ ಹಿರೇಮಠ ಅವರಿಗೆ, ಸುಂದರವಾಗಿ ಮುದ್ರಿಸಿರುವ ಗದುಗಿನ ಪ್ರಭು ಗ್ರಾಫಿಕ್ಸ್‌ನವರಿಗೆ, ಓದುವ ಸಹೃದಯರಿಗೆ ಅನಂತ ನಮನಗಳು.

ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

# ಲೇಖಕರ ಒಂದೆರಡು ಮಾತು.....

ನಮ್ಮ ನಾಡಿನ ಜನಪದ ಕಲೆ-ಸಾಹಿತ್ಯ ಬಹುಮುಖವಾಗಿ ಬೆಳೆದು ಬಂದಿದೆ. ಶತ ಶತಮಾನಗಳಿಂದ ಉಳಿದು ಬಂದಿರುವ ಈ ಜನಪದ ಕಲೆ ನಾಡಿನ-ದೇಶದ ಅತ್ಯಮೂಲ್ಯ ಆಸ್ತಿಯಾಗಿದೆ. ನಮ್ಮ ಹಳ್ಳಿಗರು ಈ ಕಲೆಯನ್ನು ಈ ಸಾಹಿತ್ಯವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದಾರೆ.

ಬೀಸುವ ಹಾಡು, ಕುಟ್ಟುವ ಹಾಡು, ಸೀಗೆ ಹಾಡು, ಗೌರಿ ಹಾಡು, ದೋಣಿ ಹಾಡು, ಸುಗ್ಗಿ ಹಾಡು ಹೀಗೆ ಅನೇಕ ಜಾನಪದ ವೈವಿಧ್ಯಮಯ ಹಾಡುಗಳು, ಸಾವಿರಾರು ಹಳ್ಳಿಗರ ಬಾಯಿಯಲ್ಲಿ ಕೇಳಿಬರುತ್ತಿವೆ. ಹಾಡಿನ ಜೊತೆ ಕುಣಿತ, ವಾದ್ಯ ಮೂಡಿಬಂದು ಜನರನ್ನು ಆಕರ್ಷಿಸಿ ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಮನರಂಜನೆ ಯಾಗುತ್ತಿವೆ. ಡೊಳ್ಳು, ಕೋಲಾಟ, ತಮಟೆ, ಚೌಡಕಿ ಹೀಗೆ ಅನೇಕ ವಾದ್ಯಗಳಲ್ಲಿ ಹಾಡು, ಕುಣಿತ, ತಾಳಮೇಳಗಳಲ್ಲಿ ಜನಪದ ಕಲೆ-ಸಾಹಿತ್ಯ ಸಮೃದ್ಧಿಗೊಂಡು ನಮ್ಮ ನಾಡಿನ ಸಂಪತ್ತಾಗಿದೆ.

ಜನಪದ ಕಲೆಯಲ್ಲಿ ನಮ್ಮ ಸಂಸ್ಕೃತಿ, ಅರಳಿ ನಿಂತಿದೆ. ನಮ್ಮ ಸಂಸ್ಕೃತಿ, ನಮ್ಮ ಪರಂಪರೆ, ನಮ್ಮ ದೇವರು ನಮ್ಮ ನಂಬಿಕೆಗಳಲ್ಲ ಜನಪದ ಕಲೆಯಲ್ಲಿ ಅಡಕವಾಗಿವೆ. ಇಂಥ ಕಲೆ, ಸಾಹಿತ್ಯ ಮರೆಯಾಗುತ್ತ ನಮ್ಮತನ ಕಳೆದುಕೊಳ್ಳುತ್ತಿದ್ದೇವೆ ಎನಿಸುತ್ತಿದೆ. ನಮ್ಮ ಪೀಳಿಗೆ ಪಾಶ್ಚಿಮಾತ್ಯ ಕಲೆ, ಸಾಹಿತ್ಯ ಸಂಗೀತದತ್ತ ವಾಲುತ್ತಿರುವುದು ವಿಷಾದನೀಯ. ಅದಕ್ಕೆ ಅನೇಕ ಮಾಧ್ಯಮಗಳೂ ಕಾರಣ. ವಿಶೇಷವಾಗಿ ಟಿ. ವ್ಹಿ. ಚಾನಲ್‌ಗಳು ಪ್ರಮುಖವಾಗಿವೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ನಮ್ಮ ಕಲೆ-ಸಂಸ್ಕೃತಿ ಉಳಿಸಿಕೊಳ್ಳುವುದು. ಸರಕಾರ, ಅಕಾಡೆಮಿ ಸಂಘ ಸಂಸ್ಥೆಗಳ ಕರ್ತವ್ಯವಾಗಿದೆ. ಜಾನಪದ ಅಕಾಡೆಮಿ ಆ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ರೂಪಿಸುತ್ತ ಕಾರ್ಯೋನ್ಮುಖವಾಗಿದೆ.

ಅಕಾಡೆಮಿಗೆ ೨೫ ವರ್ಷ ತುಂಬ ಬೆಳ್ಳಿ ಹಬ್ಬ ಆಚರಿಸುತ್ತಿರುವ ಈ ಸಂಭ್ರಮದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡದ್ದು ಅವುಗಳಲ್ಲಿ ಎಲ್ಲಾ ಜಿಲ್ಲೆಗಳ ಜಾನಪದ ಕಲಾವಿದರ ಪರಿಚಯ ಪುಸ್ತಕಗಳನ್ನು ತರುವುದೊಂದಾಗಿದೆ.

ನಮ್ಮ ನಾಡಿನ ಎಷ್ಟೋ ಪ್ರತಿಭಾನ್ವಿತ ಕಲಾವಿದರು ಹೇಳ ಹೆಸರಿಲ್ಲದಂತೆ ಹೋಗಿದ್ದಾರೆ. ಅವರನ್ನು ಗುರುತಿಸಿ ಅವರ ಪ್ರತಿಭೆ, ಸಾಧನೆ ಕುರಿತು ಪುಸ್ತಕಗಳು ತೀರ ಕಡಿಮೆ ಹಿರಿಯ ಪ್ರತಿಭೆಗಳನ್ನು ಅವರ ಬದುಕು ಸಾಧನೆ, ಹಲವಾರು ವಿವರಗಳೊಂದಿಗೆ ಪುಸ್ತಕ ತರಬೇಕೆಂದು ನಿರ್ಧರಿಸಿ ಆ ಆ ಭಾಗದ ಸಾಹಿತ್ಯಾಸಕ್ತಿಯುಳ್ಳ ಜಾನಪದ ಅಕಾಡೆಮಿ ಸದಸ್ಯರಿಗೆ ಹಾಗೂ ಹೊರಗಿನ ಲೇಖಕರಿಗೆ ಅಕಾಡೆಮಿ ಈ ಕಾರ್ಯ ಒಪ್ಪಿಸಿದೆ. ಕೊಪ್ಪಳ, ಬೀದರ ಜಿಲ್ಲೆಯ ಕಲಾವಿದರ ಪರಿಚಯ ಪುಸ್ತಕ ರಚನೆಯ ಜೊತೆ ಉಳಿದೆಲ್ಲ ಲೇಖಕರ ಹಸ್ತಪ್ರತಿ ಅವಲೋಕಿಸಿ ಪುಸ್ತಕ ವಿನ್ಯಾಸ ಮುದ್ರಣದ, ಕಾರ್ಯವನ್ನು ನನಗೊಪ್ಪಿಸಿ ನನ್ನ ಜವಾಬ್ದಾರಿ ಹೆಚ್ಚಿಸಿದೆ. ಅದಕ್ಕಾಗಿ ಅಕಾಡೆಮಿ ಅಧ್ಯಕ್ಷರಿಗೆ, ಸದಸ್ಯರಿಗೆ ನಾನು ಋಣಿಯಾಗಿದ್ದೇನೆ.

ಈಗಾಗಲೇ ಸುಮಾರು ಹತ್ತು ಜಿಲ್ಲೆಗಳ ಕಲಾವಿದರ ಪರಿಚಯ ಪುಸ್ತಕ ಹೊರಬಂದಿವೆ. ಉಳಿದವುಗಳೆಲ್ಲ ಈ ಸಾಲಿನ ಅಕಾಡೆಮಿ ಅಧ್ಯಕ್ಷರು ಹಿರಿತನದಲ್ಲಿ ಬರುತ್ತಿವೆ. ಹಿಂದಿನ ಅಕಾಡೆಮಿಯ ಈ ಯೋಜನೆಯನ್ನು ಮುಂದುವರಿಸಿಕೊಂಡು ಬಂದಿರುವದು ಇಂದಿನ ಅಧ್ಯಕ್ಷರ ವಿಶಾಲ ಮನಸ್ಸು ಹಿರಿಯ ಗುಣವನ್ನೇ ಸ್ಪಷ್ಟಪಡಿಸುತ್ತದೆ. ಅದಕ್ಕಾಗಿ ಇಂದಿನ ಅಕಾಡೆಮಿ ಅಧ್ಯಕ್ಷರಿಗೂ, ಸದಸ್ಯರಿಗೂ ನಾನು ಋಣಿ ಎನ್ನದಿರಲಾರೆ.

ಈ ಕಾರ್ಯ ಕೈಗೆತ್ತಿಗೊಂಡು ಜಿಲ್ಲೆಯನ್ನೆಲ್ಲ ಸುತ್ತಿದ್ದೇನೆ. ಕಲಾವಿದರನ್ನು ಕಂಡು ಅವರ ಸ್ಥಿತಿ–ಗತಿ, ಅನಿಸಿಕೆ, ಆಲೋಚನೆ ತಿಳಿದು ಕೊಂಡಿದ್ದೇನೆ. ಮಾಹಿತಿ ಪಡೆಯುವಾಗ ಬಹುಪಾಲು ಕಲಾವಿದರ ಜನ್ಮ ದಿನಾಂಕನೇ ದೊರೆಯಲಿಲ್ಲ. ಯಾವ ಕಲಾವಿದರ ತಂದೆ ತಾಯಿ ನಮೂದಿಸಿಕೊಂಡಿಲ್ಲ. ಎಲ್ಲರೂ ಸುಮಾರು ಇಷ್ಟು ವರ್ಷವಿರಬೇಕೆಂದು ಅಂದಾಜಿನಲ್ಲಿಯೇ ತಮ್ಮ ವಯಸ್ಸನ್ನು ಹೇಳಿದ್ದಾರೆ. ಕಲಾವಿದರ ಸಂದರ್ಶನದಲ್ಲಿ ತಿಳಿದಿದ್ದು ; ಕಂಡಿದ್ದು, ಬಡತನ, ದಾರಿದ್ರ್ಯ ಅಶಿಕ್ಷಣ ಬಹುಪಾಲು ಜನರು ಬದುಕಿನಲ್ಲಿ ಸೋತವರು, ಅವಕಾಶಗಳಿಂದ ವಂಚಿತರಾದವರು. ಆದರೆ ಅಷ್ಟೇ ಸ್ವಾಭಿಮಾನಿಗಳು, ಕಷ್ಟ ಸಮಸ್ಯಗಳೇನೇ ಇರಲಿ ಸರಕಾರಕ್ಕಾಗಲಿ, ಸಂಘ ಸಂಸ್ಥೆಗಳಿಗಾಗಲಿ ದೇಹಿ ಅಂದವರಲ್ಲ, ಇಂಥ ಜನರ ಮಧ್ಯದಿಂದಲೇ ಜಾನಪದ – ಕಲೆ ಸಾಹಿತ್ಯ ಹರಿದು ಬಂದಿದೆ. ನಮ್ಮ ತಾಯಂದಿರಲ್ಲಿಯ ಸಂಪ್ರದಾಯದ ಹಾಡು ಕೇಳುತ್ತ ಕುಳಿತರೆ ಹಾಗೇ ಕೊಡಬೇಕೆನಿಸುತಿತ್ತು. ಹಂತಿಹಾಡು, ಸುಗ್ಗಿಹಾಡು ಹಿರಿಯ ರೈತರಿಂದ ಕೇಳಿದಾಗ ಈಗ ಅವೆಲ್ಲ ಈ ತಲೆಮಾರಿಗೆ ಕೊನೆಗೊಳ್ಳುತ್ತಿರುವುದು ವ್ಯಥೆ ಎನಿಸುತ್ತದೆ. ಕ್ರಮೇಣ ಪುಸ್ತಕದಲ್ಲಿ ಸಂಗ್ರಹವಾಗಿ ಓದುವದಷ್ಟೇ ಆಗುತ್ತದೆ ಏನೋ ಎನಿಸುತ್ತಿದೆ.

ನನಗೀ ಕೆಲಸ ತೃಪ್ತಿ ತಂದಿದೆ. ಸುಮಾರು ನೂರಾರು ಕಲಾವಿದರನ್ನು ಕಂಡು ಮಾಹಿತಿ ಪಡೆದು ಈ ಕೃತಿ ರಚಿಸಿದ್ದೇನೆ. ನನಗೆ ಗೊತ್ತಿದೆ ಹುಡುಕಿದರೆ ಇದೇ ಜಿಲ್ಲೆಯಲ್ಲಿ ಇನ್ನೂ ನೂರಾರು ಜನ ಕಲಾವಿದರು ಸಿಗುತ್ತಾರೆ. ಇನ್ನೂ ಪ್ರತಿಭಾನ್ವಿತರು ಉಳಿದಿದ್ದಾರೆ.

ಈ ಕೆಲಸ ಪೂರ್ಣವೆಂದು ನಾನು ಭಾವಿಸಿಲ್ಲ. ಸಾಧ್ಯವಾದಷ್ಟು ಹಿರಿಯರಿಗೆ ಆದ್ಯತೆ ನೀಡಿದ್ದೇನೆ. ಈ ಪುಸ್ತಕ ಬರುವುದರಲ್ಲಿಯೇ ಕೆಲವು ಕಲಾವಿದರು ಕಣ್ಣು ಮುಚ್ಚಿದ್ದಾರೆ. ಈ ಪುಸ್ತಕದಲ್ಲಿ ಅವರ ತಮ್ಮ ಪರಿಚಯ ಪ್ರಕಟವಾಗಿದೆಯೆಂಬುವುದು ತಿಳಿದುಕೊಳ್ಳಲಿಲ್ಲ ಎನ್ನುವ ನೋವಿದ್ದರೂ ಕನಿಷ್ಟ ಅಂಥವರ ಪರಿಚಯ ದಾಖಲೆಯಲ್ಲಿ ಉಳಿಯುತ್ತಲ್ಲಾ ಎನ್ನುವ ಸಮಾಧಾನವಿದೆ.

ಈ ಅವಕಾಶ ನೀಡಿದ ಅಕಾಡೆಮಿ ಅಧ್ಯಕ್ಷರಾದ ಗೊ. ರು. ಚ. ಅವರಿಗೆ ಸಹಕರಿಸಿದ ರಿಜಿಸ್ಟ್ರಾರ್ ಹಾಗೂ ಸಿಬ್ಬಂದಿ ವರ್ಗಕ್ಕೆ ನಮನ.

ಕ್ಷೇತ್ರ ಕಾರ್ಯ ಕೈಕೊಂಡಾಗ ಶ್ರೀ ಎಸ್. ವ್ಹಿ. ಪಾಟೀಲ, ಗಂಗಾವತಿ, ಶ್ರೀ ಗುರಯ್ಯ ಬ್ರಹನ್ಮಠ ಬೆಟಗೇರಿ, ಲಕ್ಷ್ಮಣ ಮಾಸ್ತರ್ ಬಿಸರಳ್ಳಿ, ಯಲಬುರ್ಗಾದ ಜಾನಪದ ಕಲಾವಿದ ಶ್ರೀ ಶರಣಪ್ಪ ವಡಗೇರಿ, ಚಮನ್ ಸಾಬ, ಬಾಬಣ್ಣ ಕುಕನೂರು, ವಿ. ಎಸ್. ಶಿವಪ್ಪಯ್ಯಮಠ, ಮಾಹಿತಿ ಸಂಗ್ರಹಿಸುವಲ್ಲಿ ಬಹಳಷ್ಟು ನೆರವಾಗಿದ್ದಾರೆ. ಹಳ್ಳಿ ಹಳ್ಳಿಗೆ ಕರೆದುಕೊಂಡು ಹೋಗಿ ಕಲಾವಿದರನ್ನು ಪರಿಚಯಿಸಿದ್ದಾರೆ. ಗಂಗಾವತಿ ತಾಲೂಕಿನ ಕನಕಗಿರಿಗೆ ಹೋದಾಗ ಆತ್ಮೀಯರಾದ ಶ್ರೀ ಶೇಖರಗೌಡರು ಹಾಗೂ ಶ್ರೀ ಮಹಾಬಲೇಶ್ವರ ಸ್ವಾಮಿ ಬಹಳಷ್ಟು ಸಹಾಯಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ನೆನೆಯದಿರಲಾರೆ.

ಗದುಗಿನ ಪ್ರಭು ಗ್ರಾಫಿಕ್ಸ್ ಮಾಲಿಕರೂ ಸ್ನೇಹಿತರೂ ಆದ ಶ್ರೀ ಶಾಂತವೀರ ಜಂಗಮನಿ ಸುಂದರವಾಗಿ ಮುದ್ರಿಸಿಕೊಟ್ಟಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ಕೃತಜ್ಞತೆಗಳು.

ಕೊನೆಯದಾಗಿ ಓದುಗರಾದ ತಮ್ಮೆಲ್ಲರಿಗೂ ಅನಂತನಂತ ಕೃತಜ್ಞತೆಗಳು.

**ಗವೀಶ ಹಿರೇಮಠ**

# ಪರಿವಿಡಿ


| | | |
|---|---|---|
| ೧. | ಶ್ರೀಮತಿ ಭೀಮವ್ವ ದೊಡ್ಡಬಾಳಪ್ಪ ಶಿಳ್ಳಿಕ್ಯಾತರ | ೧ |
| ೨. | ಶ್ರೀ ವೀರಭದ್ರಪ್ಪ ಮರಿವೀರಪ್ಪ ಬಳಿಗಾರ | ೪ |
| ೩. | ಶ್ರೀ ಭರಮಪ್ಪ ಪೂಜಾರ | ೭ |
| ೪. | ಶ್ರೀ ಮುದಕಪ್ಪ ಹೂಗಾರ | ೯ |
| ೫. | ಶ್ರೀ ಏಕನಾಥಪ್ಪ ಜಂಬಣ್ಣ | ೧೨ |
| ೬. | ಶ್ರೀ ಲಕ್ಷ್ಮಣ ಮಾಸ್ತರ ಬಿಸರಳ್ಳಿ | ೧೫ |
| ೭. | ಶ್ರೀ ಈಶ್ವರಪ್ಪ ಹಡಪದ | ೧೮ |
| ೮. | ಶ್ರೀ ಹನುಮಂತಪ್ಪ ಗೊಂದಲಿಗ | ೨೦ |
| ೯. | ಶ್ರೀ ಶಿವಯ್ಯ ಮರುಳಸಿದ್ದೇಶ್ವರಮಠ | ೨೩ |
| ೧೦. | ಶ್ರೀ ದೇವೇಂದ್ರಪ್ಪ ಕಮ್ಮಾರ | ೨೬ |
| ೧೧. | ಶ್ರೀ ಕಲ್ಲಪ್ಪ ಎಲಿಗಾರ | ೨೮ |
| ೧೨. | ಶ್ರೀ ಲೋಕಪ್ಪ ಗಾಳಿ | ೩೦ |
| ೧೩. | ಶ್ರೀ ಗುರುಬಸಯ್ಯ ಬ್ರಹನ್ಮಠ | ೩೨ |
| ೧೪. | ಶ್ರೀ ಜಗದೀಶ ಬಸಪ್ಪ ಭಾವಿ | ೩೫ |
| ೧೫. | ಶ್ರೀ ಬಡಕಪ್ಪ ಮಾಸ್ತರ ಬಳ್ಳಾರಿ | ೩೭ |
| ೧೬. | ಶ್ರೀ ಶಂಕರಪ್ಪ ಹೊರಪೇಟ | ೩೯ |
| ೧೭. | ಶ್ರೀಮತಿ ಸಾವಿತ್ರಿ ಮುಜುಮದಾರ. | ೪೧ |
| ೧೮. | ಶ್ರೀ ಚೆನ್ನಪ್ಪ ಹೂಗಾರ | ೪೪ |
| ೧೯. | ಶ್ರೀ ಪತ್ರೆಪ್ಪ ಚೆನ್ನಪ್ಪ ಹಡಪದ | ೪೬ |
| ೨೦. | ಶ್ರೀ ದೊಡ್ಡಪರಸಪ್ಪ ದೊಡ್ಡಮನಿ | ೪೮ |

೨೧. ಶ್ರೀ ಮಾರೆಪ್ಪ ಮಾರೆಪ್ಪ ದಾಸರ . . . . . ೫೦
೨೨. ಶ್ರೀಮತಿ ಸುಟ್ಟವ್ವ ಹರಿಜನ . . . . . ೫೩
೨೩. ಶ್ರೀ ರೇಚಪ್ಪ ಮಾಸ್ತರ ಮಡಿವಾಳ . . . . . ೫೫
೨೪. ಶ್ರೀ ಬೀರಪ್ಪ ಯಡಿಯಾಪುರ . . . . . ೫೮
೨೫. ಶ್ರೀಮತಿ ಲಕ್ಷ್ಮೀಬಾಯಿ ಚೆಲುವಾದಿ . . . . . ೬೧
೨೬. ಶ್ರೀ ದುರಗಪ್ಪ ಜಗ್ಗಲ . . . . . ೬೪
೨೭. ಶ್ರೀಮತಿ ಹನುಮವ್ವ ಕುರುಬರ . . . . . ೬೭
೨೮. ಶ್ರೀ ಭೀಮಪ್ಪ ಬಿಂಗಿ . . . . . ೭೦
೨೯. ಶ್ರೀ ಸಿದ್ಧಲಿಂಗಯ್ಯ ಮೃತ್ಯುಂಜಯ ಚೌಡಿ. . . . . ೭೩
೩೦. ಶ್ರೀ ಶೇಖರಗೌಡ ಕಲ್ಲನಗೌಡ ಮಾಲಿಪಾಟೀಲ . . . . . ೭೫
೩೧. ಶ್ರೀ ರೇವಣಪ್ಪ ನಿಂಗಪ್ಪ ಹಿರೇಕುರುಬರ . . . . . ೭೭
೩೨. ಶ್ರೀಮತಿ ನೀಲಮ್ಮ ಹಳ್ಳಿಗುಡಿ . . . . . ೭೯
೩೩. ಶ್ರೀ ಸಿದ್ಧಪ್ಪ ನರಸಪ್ಪ ಗೊಂಡಬಾಳ . . . . . ೮೧
೩೪. ಶ್ರೀಮತಿ ಈರಮ್ಮ ನಾಗಪ್ಪ ಉಂಡಿ . . . . . ೮೩
೩೫. ಶ್ರೀ ಹನುಮಪ್ಪ ಕೌದಿ . . . . . ೮೫
೩೬. ಶ್ರೀ ಭರಮಪ್ಪ ಹರಿಜನ . . . . . ೮೭
೩೭. ಶ್ರೀ ಶರಣಪ್ಪ ವಡಗೇರಿ . . . . . ೮೯
೩೮. ಶ್ರೀ ಬಸಪ್ಪ ಚೌಡಕಿ . . . . . ೯೨
೩೯. ಶ್ರೀ ಭಾಷಾಸಾಬ ಇಮಾಮಸಾಬ ಚೌದರಿ . . . . . ೯೫
೪೦. ಶ್ರೀ ಶಿವಪ್ಪ ಬೀರಪ್ಪ ಡೊಳ್ಳಿನ . . . . . ೯೮
೪೧. ಶ್ರೀ ದಾವಲಸಾಬ ಅತ್ತಾರ . . . . . ೧೦೧
೪೨. ಶ್ರೀಮತಿ ಮುದುಕವ್ವ ಮಾದರ . . . . . ೧೦೩
೪೩. ಶ್ರೀ ಯಲ್ಲಪ್ಪ ರಾಜಪ್ಪ ಶಾಖಾಪುರ . . . . . ೧೦೫
೪೪. ಶ್ರೀ ಶರಣಪ್ಪ ಪಿ. ಗಟ್ಟಿ . . . . . ೧೦೮
೪೫. ಶ್ರೀಮತಿ ಹನುಮವ್ವ ಹಡಪದ . . . . . ೧೧೦
೪೬. ಶ್ರೀ ವೆಂಕಟಸಿಂಗ ನರಸಿಂಗಬಾನು . . . . . ೧೧೨
೪೭. ಶ್ರೀ ಭಾಷಾಸಾಬ ಮಹ್ಮದ ಹುಸೇಬಸಾಬ . . . . . ೧೧೪

೪೮. ಶ್ರೀ ಸಂಗಪ್ಪ ಬಸಪ್ಪ ದೊಡ್ಡಬಸಪ್ಪನವರ್ . . . ೧೧೭
೪೯. ಶ್ರೀ ದುರಗಪ್ಪ ಗೆನ್ನಕ್ಕಿ . . . . ೧೧೯
೫೦. ಶ್ರೀ ಮಲ್ಲಿಕಾರ್ಜುನಪ್ಪ ಗುರಪ್ಪ ಗಾಣಿಗೇರ . . . ೧೨೨
೫೧. ಶ್ರೀ ಕೃಷ್ಣಪ್ಪ ಮಲಿಗೆಪ್ಪ ಗೊಂದಲಿಗ . . . ೧೨೪
೫೨. ಶ್ರೀ ಚಂದ್ರಶೇಖರ ಲಿಂಗದಳ್ಳಿ . . . . ೧೨೭
೫೩. ಶ್ರೀ ಫಕೀರಸಾಬ ಮೌಲಾಸಾಬ ಭಾವಿಕಟ್ಟಿ . . . ೧೨೯
೫೪. ಶ್ರೀ ಕೆ. ದೊಡ್ಡವೀರಣ್ಣ . . . . ೧೩೧
೫೫. ಶ್ರೀ ರಂಗಪ್ಪ ಮಾರ್ತಾಂಡಪ್ಪ ಐಲಿ . . . . ೧೩೪
೫೬. ಶ್ರೀ ಶಂಕರಪ್ಪ ಗುರುಪಾದಪ್ಪ ಮಾಂತಾ . . . ೧೩೬
೫೭. ಶ್ರೀ ನಾಗಪ್ಪ ಡೋಣಾಪುರ . . . . ೧೩೮
೫೮. ಶ್ರೀ ಚಿದಾನಂದಪ್ಪ ಮುಷ್ಟೂರ . . . . ೧೪೧
೫೯. ಶ್ರೀಮತಿ ಈರಮ್ಮ ಲೈನದಾರಿ . . . . ೧೪೪
೬೦. ಶ್ರೀ ಹೊನ್ನಂಬಿ ಗೊರಳ್ಳಿ . . . . . ೧೪೬
೬೧. ಶ್ರೀ ಶಿರಸಪ್ಪಯ್ಯ ವಿಶ್ವಕರ್ಮ . . . . ೧೪೮
೬೨. ಶ್ರೀ ದೊಡ್ಡಹನುಮಂತಪ್ಪ ಹೂಗಾರ . . . ೧೫೦
೬೩. ಶ್ರೀಮತಿ ಕೆ. ಸರೋಜಾಬಾಯಿ ಗಡ್ಡಿ . . . ೧೫೩
೬೪. ಶ್ರೀ ಖುದಾನಸಾಬ ಜೂಲಕೇರಿ . . . . ೧೫೫
೬೫. ಶ್ರೀಮತಿ ಮಹಾದೇವಮ್ಮ ಶೆಟ್ಟರ . . . . ೧೫೮
೬೬. ಶ್ರೀ ಕರಿಯಪ್ಪ ಮಾಸ್ತರ ಗುರಿಕಾರ . . . ೧೬೦
೬೭. ಶ್ರೀಮತಿ ಹೊನ್ನಮ್ಮ ಆರಬಳ್ಳು . . . . ೧೬೨

# ಭೀಮವ್ವ ದೊಡ್ಡಬಾಳಪ್ಪ ಶಿಳ್ಳಿಕ್ಯಾತರ

ಕೊಪ್ಪಳ ತಾಲೂಕಿನ ಮೋರನಾಳ ಗ್ರಾಮದ ಊರ ಕೊನೆಯ ಭಾಗದಲ್ಲಿ ಚಿಕ್ಕಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೊಂದಿಗೆ ವಾಸಿಸುವ ೮೫ರ ಹಿರಿಯ ಕಲಾವಿದೆ ಭೀಮವ್ವ ತೊಗಲಗೊಂಬೆಯಾಟದ ಕಲಾವಿದೆ. ಚಿಕ್ಕಗ್ರಾಮದಲ್ಲಿ ; ಮುರುಕು ಮನೆಯಲ್ಲಿ ವಾಸಿಸುತ್ತಿರುವ ಈ ಶ್ರೀಮಂತ ಕಲೆಯ ಕಲಾವಿದೆ ನಾಡು, ದೇಶ, ವಿದೇಶಗಳನ್ನು ಸುತ್ತಿಬಂದಿರುವುದು ಗಮನಾರ್ಹ ಸಂಗತಿ. ೧೯೯೨ರಲ್ಲಿ ವಿದೇಶಗಳಲ್ಲೆಲ್ಲ ತಿರುಗಿ ಜಪಾನದಲ್ಲಿ ಗೌರವ ಪತ್ರ ; ಸನ್ಮಾನ ಪಡೆದುಕೊಂಡು ಬಂದಿರುವುದು ದೇಶಕ್ಕನೇ ಗೌರವದ ಮಾತು.

ಶಿಳ್ಳಿಕ್ಯಾತ ಜನರ ಉದ್ಯೋಗವೇ ಈ ತೊಗಲು ಗೊಂಬೆಯಾಟ ಪ್ರದರ್ಶನ. ಹಳ್ಳಿಹಳ್ಳಿಗಳಲ್ಲಿ ಇದನ್ನು ಪ್ರದರ್ಶಿಸಿ ಅಲ್ಲಿಯ ಜನರು ನೀಡಿದ ದವಸ-ಧಾನ್ಯದಿಂದ ವರ್ಷವಿಡೀ ಜೀವನ ಸಾಗಿಸುತ್ತ ಬರುವ ಜನಾಂಗವಿದು. ಒಂದು ರೀತಿ ಅಲೆಮಾರಿ ಜೀವನ ಇವರದು. ನಾಡು, ಹೊರನಾಡು ಗ್ರಾಮಗಳಲ್ಲಿ ತಿರುಗುತ್ತ ಕಲಾಪ್ರದರ್ಶನ ಮಾಡುತ್ತ ಸಾಗಿದ ಈ ಜನಾಂಗದ ಕಲೆ ಈಗ ಗುರುತಿಸಿ ಗೌರವಿಸುವಂತಾಗಿರುವುದು ಸಂತಸದ ಮಾತು.

ಜಿಂಕೆ ಚರ್ಮವನ್ನು ಅಥವಾ ಮೇಕೆ ಚರ್ಮವನ್ನು ಹದಗೊಳಿಸಿ ಸರಿಯಾದ ಆಕಾರದಲ್ಲಿ ಪಾತ್ರಗಳಿಗೆ ತಕ್ಕಂತೆ ರೂಪಕೊಟ್ಟು ಕತ್ತರಿಸಿ ಅದಕ್ಕೆ ಬಣ್ಣಹಚ್ಚಿ ಗೊಂಬೆಗಳ ಕೈಕಾಲುಗಳು ಚಲಿಸುವಂತೆ ಮಾಡಿ ಸೂತ್ರದಾರ ಅವುಗಳನ್ನು ತನ್ನ ಕಥೆಗೆ ತಕ್ಕಂತೆ ಚಲನೆ-ವಲನೆ ಮಾಡಿಸುತ್ತ, ಓಡಾಡಿಸುತ್ತ ಕುಣಿಸುತ್ತಾನೆ. ನಾಲ್ಕಾರು ಅಡಿಯ ಜಾಗದಲ್ಲಿ ರಂಗಭೂಮಿ ನಿರ್ಮಿಸಿಕೊಂಡು ತೆಳುವಾದ ಪರದೆ ಕಟ್ಟಿ ಹಿಂದೆ ಗೊಂಬೆಗಳು ಸ್ಪಷ್ಟವಾಗಿ ಕಾಣುವಂತೆ ಬೆಳಕಿನ ವ್ಯವಸ್ಥೆ ಮಾಡಿಕೊಂಡು ಪ್ರದರ್ಶನ ನೀಡುತ್ತಾರೆ. ಗೊಂಬೆಗಳಿಗೆ

ಸೂತ್ರದದಾರ ಕಟ್ಟಿ ಅವುಗಳನ್ನು ಸೂತ್ರದಾರ ತನ್ನ ಬೆರಳಿಗೆ ಹಾಕಿಕೊಂಡು ಸಂದರ್ಭಕ್ಕೆ ತಕ್ಕಂತೆ ಪಾತ್ರಗಳನ್ನು ಓಡಾಡಿಸುತ್ತಾನೆ. ಗಂಡು ಹೆಣ್ಣಿನ ಧ್ವನಿಯಲ್ಲಿ ತಾನೇ ಮಾತುಗಳನ್ನು ಹೇಳುತ್ತಾನೆ. ಹಿಂದೆ ೩–೪ ಜನ ಹಿಮ್ಮೇಳ ಕಲಾವಿದರು ಹಾಡನ್ನು ಮುಂದುವರಿಸುತ್ತಾರೆ. ತಾಳ, ಮೃದಂಗ, ಹಾರ್ಮೋನಿಯಂ, ಗೆಜ್ಜೆ ಇವರ ವಾದ್ಯಗಳು.

ಒಂದು ಕಾಲದಲ್ಲಿ ಇದು ಬಹಳ ಜನಪ್ರೀಯ ಕಲೆ, ಹಳ್ಳಿಗರಿಗೆ ಮನರಂಜನೆಯೂ ಆಗ ಇದೇ ಆಗಿತ್ತು. ಶಿಳ್ಳಿಕ್ಯಾತರು ಇದನ್ನೇ ವೃತ್ತಿಮಾಡಿಕೊಂಡು ಬದುಕುತ್ತಿದ್ದರು. ಈಗ ಈ ಕಲೆ–ಕಲಾವಿದರು ಮರೆಯಾಗುತ್ತಿದ್ದಾರೆ. ಉತ್ತರ ಕರ್ನಾಟಕದ ಕೆಲವೇ ಕೆಲವು ಭಾಗಗಳಲ್ಲಿ ಈ ಕಲೆ–ಕಲಾವಿದರು ಕಾಣಿಸಿಕೊಳ್ಳುತ್ತಿದ್ದಾರೆ. ಇವರ ಪ್ರದರ್ಶನದಲ್ಲಿ ಕಥೆಗೆ ಪ್ರಾಮುಖ್ಯತೆ. ರಾಮಾಯಣ, ಮಹಾಭಾರತ ಕಥೆಗಳೇ ಕಥಾವಸ್ತು. ಕರ್ಣಪರ್ವ, ದ್ರೋಣಪರ್ವ, ವಿರಾಟ ಪರ್ವ, ಅರಣ್ಯಪರ್ವ ಹೀಗೆ ಮಹಾಭಾರತದ ಪ್ರಮುಖ ಘಟ್ಟಗಳ ಸನ್ನಿವೇಶಗಳನ್ನು ಗೊಂಬೆ ಮುಖಾಂತರ ಜನರಿಗೆ ಬಿತ್ತರಿಸುತ್ತಾರೆ.

ಇಂಥ ಜನಾಂಗದಲ್ಲಿ ಕೊಪ್ಪಳ ಜಿಲ್ಲೆಯ ಹನುಮನ ಕಟ್ಟಿ ಗ್ರಾಮದ ಸಂಜೀವಪ್ಪ, ಹೊಳಿಯಮ್ಮ ಕಲಾದಂಪತಿಗಳ ಐದನೇ ಮಗಳಾಗಿ ಜನಿಸಿದ ಭೀಮವ್ವನಿಗೆ ಕಲೆ ರಕ್ತಗತವಾಗಿ ಬಂದಿದ್ದುಂಟು. ತಂದೆ, ಅಜ್ಜ, ಮುತ್ತಜ್ಜನ ಕಾಲದಿಂದ ಬಂದ ಈ ಕಲೆ ಭೀಮವ್ವನಿಗೆ ಯಾರೂ ಕಲಿಸಿ ಕೊಡಬೇಕಾಗಿರಲಿಲ್ಲ. ಅಜ್ಜನ ಕಲಾಪ್ರತಿಭೆ, ಕಲಾಪ್ರದರ್ಶನಕ್ಕೆ ಮಾರುಹೋಗಿದ್ದ ನಿಜಾಮ ಸರಕಾರ ಆಗ ಭೂಮಿಯನ್ನು ಉಂಬಳಿಯಾಗಿ ಕೊಟ್ಟದ್ದು ಗಮನಾರ್ಹ ಸಂಗತಿ.

ಮೋರನಾಳ ಗ್ರಾಮದ ದೊಡ್ಡಬಾಳಪ್ಪನನ್ನು ಪತಿಯನ್ನಾಗಿ ಪಡೆದು ಬಂದ ಮೇಲೆ ಇಲ್ಲಿಯೂ ಅದೇ ಕಲೆ ಮುಂದುವರೆಯಿತು. ಪತಿಯ ಮನೆಯಲ್ಲಿಯೂ ಪರಂಪರೆಯಾಗಿಯೇ ಬಂದಂತಹ ಕಲೆ ಇದಾಗಿತ್ತು.

ಭೀಮವ್ವನ ಕಲಾಪ್ರದರ್ಶನ ಒಂದು ಕಾಲದಲ್ಲಿ ಪ್ರಸಿದ್ಧಿ ಪಡೆದಿತ್ತು. ಕಲೆಯ ಪ್ರದರ್ಶನ, ಹಾಡುಗಾರಿಕೆ, ವಾದ್ಯಗಳ ನುಡಿಸುವಿಕೆ ಹೀಗೆ ಆ ಕಲೆಯ ಎಲ್ಲಾ ಅನುಭವ ಭೀಮವ್ವನದು. ಹಳ್ಳಿಗಳಲ್ಲಿ ಮಳೆ ಹೋದಾಗ ಈ ಕಲಾವಿದೆಗೆ ಆಮಂತ್ರಣವಿರುತ್ತಿತ್ತು. ಈಕೆ ಪತಿಯ ಜೊತೆ ಹೋಗಿ "ವಿರಾಟ ಪರ್ವ" ಕಥೆ ಪ್ರದರ್ಶಿಸಿದಾಗ ಮಳೆಬರುತ್ತಿತ್ತೆಂಬ ನಂಬಿಕೆ, ವಿಶ್ವಾಸ ಹಳ್ಳಿಗರದು. ಕಥೆಗೆ ಪಾತ್ರಕ್ಕೆ ತಕ್ಕಂತೆ ಮಾತುಗಳನ್ನು ಹೇಳುತ್ತ ಗೊಂಬೆಗಳನ್ನು ಸಂದರ್ಭಕ್ಕೆ ತಕ್ಕಂತೆ ಓಡಾಡಿಸುತ್ತ ಹಿಮ್ಮೇಳನದ ಕಲಾವಿದರನ್ನು ಗಮನದಲ್ಲಿಟ್ಟುಕೊಂಡು ಪ್ರದರ್ಶನ ನೀಡುತ್ತಿದ್ದ ಈ ಮಹಿಳೆಯ ಪ್ರತಿಭೆಗೆ ಜನರು ಮಾರು ಹೋಗಿದ್ದರು.

ಭೀಮವ್ವನ ಕಲೆ ಪ್ರದರ್ಶನ ನಾಡಿನಾದ್ಯಂತ ಅದರಲ್ಲೂ ಕೊಪ್ಪಳ, ಉಡುಪಿ, ಚಿತ್ರದುರ್ಗ, ಬೆಂಗಳೂರು, ಗುಲಬರ್ಗಾ, ದೆಹಲಿ ಪ್ರಮುಖ ಸ್ಥಳಗಳಾಗಿವೆ. ನಾಡಿನ

ಸಾಂಸ್ಕೃತಿ ಉತ್ಸವಗಳಾದ ಹಂಪಿ, ಆನೆಗೊಂದಿ, ಮೈಸೂರು ಪ್ರದರ್ಶನದ ಪ್ರಮುಖ ಕಾರ್ಯಕ್ರಮಗಳಾಗಿವೆ.

ಬಾಳಪ್ಪ-ಭೀಮವ್ವ ಕಲಾದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು ಮೂರು ಜನ ಹೆಣ್ಣು ಮಕ್ಕಳು. ಮಕ್ಕಳೆಲ್ಲ ಇದೇ ವೃತ್ತಿಯಲ್ಲಿದ್ದಾರೆ. ವಿರುಪಾಕ್ಷಪ್ಪ, ಯಂಕಪ್ಪ, ಕೇಶಪ್ಪ ಈ ಮೂವರೂ ಒಬ್ಬರಿಗಿಂತ ಒಬ್ಬರು ಪ್ರತಿಭಾನ್ವಿತರು ಇವರು ಕೂಡ ತಂದೆ ತಾಯಿ ಜೊತೆ ವಿದೇಶಕ್ಕೆ ಹೋಗಿ ಬಂದವರು. ಇವರಿಗೂ ನಾಡಿನ ನಾನಾ ಭಾಗಗಳಲ್ಲಿ ಸನ್ಮಾನ ಗೌರವ ಪ್ರಶಸ್ತಿ ಪತ್ರ ಲಭಿಸಿವೆ.

ಭೀಮವ್ವನಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ದೆಹಲಿಯ ಸಂಗೀತ ನಾಟಕ ಅಕಾಡೆಮಿ ಸನ್ಮಾನಿಸಿದೆ. ಭೀಮವ್ವ ಶಿಳ್ಳಿಕೇತರ ನಾಡಿನ ಕಲಾಸಂಪತ್ತಾಗಿ ಗೌರವಾನ್ವಿತ ಕಲಾವಿದೆಯಾಗಿದ್ದಾಳೆ.

ಭೀಮವ್ವ ದೊಡ್ಡಬಾಳಪ್ಪ
ಮೋರನಾಳ, ಪೊ : ಬಟಗೇರಿ
ತಾ : ಜಿ : ಕೊಪ್ಪಳ

# ವೀರಭದ್ರಪ್ಪ ಮರಿವೀರಪ್ಪ ಬಳಿಗಾರ

ಕೊಪ್ಪಳದಿಂದ ೧೦-೧೨ ಕಿಲೋಮೀಟರ ಹತ್ತಿರದ ಬಿಸರಹಳ್ಳಿ ಕಲೆ, ಸಾಹಿತ್ಯ, ಸಂಗೀತಕ್ಕೆ ಒಂದು ಕಾಲದಲ್ಲಿ ಹೆಸರಾಗಿತ್ತು. ರಾಷ್ಟ್ರಪ್ರಶಸ್ತಿ ಪಡೆದ ಕವಿ, ಸಾಹಿತಿ ಡಾ. ಪಂಚಾಕ್ಷರಿ ಹಿರೇಮಠ ಈ ಹಳ್ಳಿಯವರೆ. ಇಲ್ಲಿಯ ದೇಸಾಯಿ ಮನೆತನ ಮಾಂಡಲಿಕ ಸಂಸ್ಥೆಯಾಗಿತ್ತು. ಅರಮನೆಯಲ್ಲಿ ಹತ್ತುದಿನಗಳು (ನವರಾತ್ರಿ ಹಬ್ಬದಲಿ) ಜರುಗುತ್ತಿದ್ದ ಸಂಗೀತ ಕಛೇರಿ ಸಂಗೀತ ಪ್ರಿಯರನ್ನು ಆಕರ್ಷಿಸುತಿತ್ತು. ಪಬ್ಬ ಹರಿದಿನಗಳಲಿ, ಜಾತ್ರೆ ಉತ್ಸವಗಳಲ್ಲಿ ಜರುಗುತ್ತಿದ್ದ ಬಯಲಾಟ, ನಾಟಕಗಳು, ಸುತ್ತಲು ಹಳ್ಳಿಗರ ಮನಸೂರೆ ಗೊಳ್ಳುತ್ತಿದ್ದವು. ಒಟ್ಟಿನಲ್ಲಿ ಅದೊಂದು ಸಾಂಸ್ಕೃತಿಕ ಕೇಂದ್ರವಾಗಿತ್ತು.

ಸುಮಾರು ೫೦-೬೦ ವರ್ಷಗಳ ಹಿಂದೆ ಈ ಹಳ್ಳಿಯಲ್ಲಿ ಹುಟ್ಟಿಕೊಂಡಿದ್ದ ಎರಡು ಬಯಲಾಟ ತಂಡಗಳು ಬಹಳ ವರ್ಷ ಜೀವಂತವಾಗಿದ್ದವು. ಒಂದು ವಿರುಪಾಕ್ಷಪ್ಪ ಬಳಿಗಾರ ಹುಟ್ಟು ಹಾಕಿದರೆ ಇನ್ನೊಂದು ದಾವಣಗೇರಿ ಚೆನ್ನಪ್ಪನವರ ತಂಡ. ಆಗಿನಂತೆ ಈಗ ನಿರಂತರವಾಗಿ ಈ ತಂಡಗಳು ಬಯಲಾಟ ಪ್ರಯೋಗಿಸದಿದ್ದರೂ ಯಾವಾಗದರೊಮ್ಮೆ ಬಯಲಾಟಗಳನ್ನು ಪ್ರಯೋಗಿಸುತ್ತಿರುತ್ತವೆ.

ಈ ಎರಡೂ ತಂಡಗಳು ಊರಿನ ಎರಡು ವಿರುದ್ಧ ದಿಕ್ಕಿನಿಂದ ಆರೋಗ್ಯಕರ ಸ್ಪರ್ಧಾತ್ಮಕವಾಗಿ ಬೆಳೆದು ಬಂದವು. ವಿರುಪಾಕ್ಷಪ್ಪನವರ ತಂಡದಿಂದ ಚಂದ್ರಹಾಸ ಕಥೆ, ದಾವಣಗೇರಿ ಚೆನ್ನಪ್ಪನವರ ತಂಡದಿಂದ ಮಾರ್ಕಂಡೇಯ ಕಥೆ ಪ್ರಸಿದ್ಧಿ ಪಡೆದಿದ್ದವು. ಈ ಎರಡೂ ತಂಡಗಳ ಹುಟ್ಟಿಗೆ ಕಾರಣರಾದ ಈ ಮಹನೀಯರೀರ್ವರು ಇಂದು ಇಲ್ಲದಿದ್ದರೂ ಅವರು ಈ ಹಳ್ಳಿಯಲ್ಲಿ ಸ್ಮರಣೀಯರಾಗಿದ್ದಾರೆ.

ಊರಿನ ಎರಡು ತಂಡಗಳ ಬಯಲಾಟಗಳ ಪ್ರಯೋಗಗಳ ಪ್ರಭಾವಕ್ಕೊಳಗಾದ ಹರಿಹರೆಯದ ವೀರಭದ್ರಪ್ಪ ತಮ್ಮ ೧೪-೧೫ನೇ ವಯಸ್ಸಿನಲ್ಲಿ "ಕನಕಾಂಗಿ"

ಬಯಲಾಟದಲ್ಲಿ ವನಪಾಲಕನ ಪಾತ್ರದಿಂದ ಬಣ್ಣಹಚ್ಚಿ ಕ್ರಮೇಣ ನಾಟಕಗಳಲ್ಲಿಯೂ ಅಭಿನಯಿಸಿದ್ದುಂಟು. ನಂತರ ಅಭಿನಯಕ್ಕಿಂತ ಕಥಾ ನಿರ್ದೇಶನದತ್ತ ವಾಲಿದ ವೀರಭದ್ರಪ್ಪ ಸಾಹಿತ್ಯಸಕ್ತಿಯುಳ್ಳವರು. ಅನೇಕ ಬಯಲಾಟಗಳ ಕೆಲವು ಪಾತ್ರಗಳ ಮಾತುಗಳು ಇವರಿಗೆ ಕಂಠ ಪಾಠ. ಇತ್ತೀಚಿಗೆ ಮುಂಬೈ ಕನ್ನಡ ಸಂಘದಲ್ಲಿ ಒಂದೆರಡು ಬಯಲಾಟಗಳ ದೀರ್ಘ ಮಾತುಗಳನ್ನು ಹೇಳಿದಾಗ ಇಡೀ ಸಭೆ ಗಂಭೀರವಾಗಿ ಆಲಿಸಿತ್ತು. ಮಾತುಗಳ ಸ್ಪಷ್ಟ ಉಚ್ಛಾರಣೆ ; ಮಾತುಗಳ ಏರಿಳಿತ ಎಲ್ಲವೂ ಆಕರ್ಷಿತವಾಗಿ ಮುಂಬೈ ಕನ್ನಡಿಗರು ಮೆಚ್ಚಿಕೆ ವ್ಯಕ್ತಪಡಿಸಿದ್ದು ಅವರ ಪ್ರತಿಭೆಯನ್ನೇ ಸ್ಪಷ್ಟಪಡಿಸುತ್ತಿದೆ.

ಇಂದು ವೀರಭದ್ರಪ್ಪ ಬಳಿಗಾರ ಸಂಘಟಿಕರಾಗಿ ; ಬಯಲಾಟಗಳ ಕಥಾನಿರ್ದೇಶಕರಾಗಿ ಸೇವೆಸಲ್ಲಿಸುತ್ತಿರುವುದು ಮೆಚ್ಚುವಂತಹದ್ದು ಈ ಆಧುನಿಕ ದಿನಗಳಲ್ಲಿ ಬಯಲಾಟಗಳ ಆಕರ್ಷಣೆ ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಊರಿನ ಯುವಕರನ್ನು ಹುರಿದುಂಬಿಸುತ್ತ, ಸಂಘಟಿಸುತ್ತ ಜಾನಪದ ರಂಗಭೂಮಿಗೆ ಜೀವ ತುಂಬುತ್ತ ಈ ಎಪ್ಪತ್ತರ ವೃದ್ಧಾಪ್ಯದಲ್ಲಿಯೂ ಬಯಲಾಟಗಳ ಉಳಿವಿಗಾಗಿ ಹೋರಾಡುತ್ತ ಸಾಗಿರುವುದು ಸಣ್ಣ ಮಾತಲ್ಲ. ಬಿಸರಳ್ಳಿಯಲ್ಲಿ ನೂರಾರು ಆಸಕ್ತಿಯುಳ್ಳ ಯುವಕರನ್ನು ಕಲಾವಿದರನ್ನಾಗಿ ಮಾಡಿದ ಕೀರ್ತಿ ವೀರಭದ್ರಪ್ಪನವರದು. ಕಳೆದ ವರ್ಷ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಇವರಿಗೆ ಬಂದಾಗ ಬಹಳ ಜನರಿಗೆ ಆಶ್ಚರ್ಯ. ಅಷ್ಟೇ ಅಲ್ಲ ಅವರು ಕಲಾವಿದರಾಗಿ ರಂಗದಲ್ಲಿ ಕಂಡಿದ್ದು ತೀರಕಡಿಮೆ ಅದು ಹೇಗೆ ಪ್ರಶಸ್ತಿ ಬಂದಿತು. ಈ ರೀತಿ ಪ್ರಶ್ನಿಸುವವರಿಗೆ ಒಂದು ಮಾತು ಹೇಳಲೇಬೇಕಾಗಿದೆ. ಜಾನಪದ ರಂಗಭೂಮಿಯಲ್ಲಿ ಯಾವುದೇ ಆಯಾಮದಿಂದ ಸೇವೆಸಲ್ಲಿಸಿದರೂ ಅದನ್ನು ಅಕಾಡೆಮಿ ಪರಿಗಣಿಸುತ್ತದೆ.

ವೀರಭದ್ರಪ್ಪ ಬಳಗಾರ ಆಡಿಸಿದ ಬಯಲಾಟ ಕಥೆಗಳೆಂದರೆ "ಸುಂದರರೂಪ ಸುಂದರ" "ಕುಶ-ಲವರ ಕಾಳಗ," "ಪ್ರಮಿಳಾ ದರ್ಭಾರ", "ದ್ರೋಣಪರ್ವ", "ಮುಲಕಾಸುರನ ವಧೆ" ಪ್ರಮುಖ ಕಥೆಗಳಾಗಿವೆ. ಇವರ ಇನ್ನೊಂದು ವಿಶೇಷ ಗಮನಾರ್ಹ ಸಂಗತಿಯಂದರೆ ಈ ಮೇಲಿನ ಕೆಲವು ಕಥೆಗಳ ಹಸ್ತಪ್ರತಿಗಳು ನಾಶವಾಗುತ್ತಿದ್ದಂತೆ ಅವುಗಳನ್ನು ನಕಲುಮಾಡಿ ಅವೆಲ್ಲ ಉಳಿದು ಬರುವಂತೆ ಮಾಡಿದ್ದಾರೆ.

ವೀರಭದ್ರಪ್ಪ ಬಳಗಾರ ಅವರ ಸಂಘಟನಾ ಸೇವೆ ಬಹಳಷ್ಟು ಲೆಕ್ಕಕ್ಕೆ ಬರುತ್ತದೆ. ಊರಿನ ಆಸಕ್ತ ಯುವಕರನ್ನು ಆಯ್ಕೆ ಮಾಡಿಕೊಂಡು ಅವರಿಗೆ ತಕ್ಕ ಪಾತ್ರಗಳನ್ನು ಹಂಚಿ ನಿರಂತರ ತರಬೇತಿ ನೀಡಿ ಕಥೆಯ ಸಾರಂಶ, ಪಾತ್ರದ ಹಿನ್ನಲೆ ಮಾತಿನ ಏರಿಳಿತ ಆ ಅನಕ್ಷರ ಕಲಾವಿದರಿಗೆ ತಿಳಿಸಿ ಕಥಾನಿರ್ದೇಶಕನಾಗಿ ಉತ್ತಮ ರೀತಿಯಲ್ಲಿ ಪ್ರದರ್ಶನಗೊಳ್ಳುವಂತೆ ದುಡಿಯುವ ಈ ನಿರ್ದೇಶಕ ಕಲಾವಿದನಿಗಿಂತ ಕಡಿಮೆ ಏನಿಲ್ಲ.

ಬಿಸರಹಳ್ಳಿಯ ಬೇಸಾಯ ಮನೆತನದ ಶ್ರೀ ಮರಿವೀರಪ್ಪ ಶ್ರೀಮತಿ ಗಂಗಮ್ಮ ಬಳೆಗಾರ ದಂಪತಿಗಳ ಹಿರಿಯ ಮಗನಾಗಿ ಜನ್ಮ ಪಡೆದ ವೀರಭದ್ರಪ್ಪ ಓದಿದ್ದು ಕನ್ನಡ ೫ನೇ ತರಗತಿ. ಊರಿನ ಮಠದ ಶಾಲೆಯ ದಿ. ಶ್ರೀ ವೀರಭದ್ರಯ್ಯ ಹಿರೇಮಠ ಅವರ ಶಿಷ್ಯನಾಗಿ, ಅವರಂತೆ ಸಾಹಿತ್ಯದಲ್ಲಿ ಆಸಕ್ತಿಯುಳ್ಳವರಾಗಿ ಇಂದಿಗೂ ಓದುವ ಅಭ್ಯಾಸವಿಟ್ಟುಕೊಂಡಿದ್ದಾರೆ. ಮಹಾಭಾರತ, ರಾಮಾಯಣ, ಶ್ರೀಕೃಷ್ಣ ದರ್ಶನ, ವಚನಸಾಹಿತ್ಯದ ಪುಸ್ತಕಗಳ ಪುಟ ತಿರುಗಿಸಿರುವ ವೀರಭದ್ರಪ್ಪ ಬಳೆಗಾರ ಜಾನಪದ ರಂಗಭೂಮಿಯ ವಿಶೇಷ ವಿಶಿಷ್ಟ ವ್ಯಕ್ತಿ.

ಕಲೆಯಲ್ಲಿ ತೊಡಗಿಸಿಕೊಂಡು ದುಡಿಯಲು ಹಚ್ಚಿದ ಸಿದ್ಧಪ್ಪ ಮಾಸ್ತರ; ಅಂದಪ್ಪ ಸಿಳ್ಳಿನ, ಸಿದ್ಧಪ್ಪ ಸಿಳ್ಳಿನ ಅವರ ಪ್ರೋತ್ಸಾಹ ಸ್ಮರಿಸುತ್ತ ಇಲ್ಲಿಯ ಪ್ರಸಿದ್ಧ ಬಯಲಾಟ ಸಂಗೀತ ಮಾಸ್ತರರಾದ ದಿ. ಕಟಗಾಲಿ ಭರಮಪ್ಪ, ಕಲಾವಿದ ದಿ. ಪರಸಪ್ಪ ಡಂಬಳ ಅವರನ್ನು ನೆನಪಿಸಿಕೊಳ್ಳುತ್ತ, ಅವರ ಅಗಾಧ ಕಲೆ ಸೇವೆಯ ಬಗ್ಗೆ ಗುಣಗಾನ ಮಾಡುತ್ತ ತಾವು ಮಾತ್ರ ಈ ಕ್ಷೇತ್ರದಲ್ಲಿ ಸಣ್ಣವನೆನ್ನುವ ಅವರ ಮಾತು ಅವರ ಹಿರಿಯ ಗುಣವನ್ನೇ ಸ್ಪಷ್ಟಪಡಿಸುತ್ತದೆ.

೧೯೫೭ರಲ್ಲಿ ಶಾವಕ್ಕ ಅವರನ್ನು ಪತ್ನಿಯನ್ನಾಗಿ ಸ್ವೀಕರಿಸಿದ ವೀರಭದ್ರಪ್ಪ ಬಳಿಗಾರ ಅವರಿಗೆ ನಾಲ್ಕು ಜನ ಗಂಡು ಮಕ್ಕಳು. ಒಬ್ಬ ಹೆಣ್ಣು ಮಗಳು. ಮಕ್ಕಳು ಹೈಸ್ಕೂಲ ಅಭ್ಯಾಸದವರೆಗೆ ಓದಿದ್ದಾರೆ. ಅವರಲ್ಲಾರೂ ಕಲೆಯತ್ತ ವಾಲಲಿಲ್ಲ. ಬೇಸಾಯ ಹಾಗೂ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವೀರಭದ್ರಪ್ಪನವರಿಗೆ ಮಾತ್ರ ಜಾನಪದ ರಂಗಭೂಮಿಯೇ ಬದುಕಾಗಿದೆ. ಉಸಿರಾಗಿದೆ.

ಇವರ ಬಯಲಾಟ ಸೇವೆ ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೫ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರಕಾರ ಮಾಸಾಶನ ಮಂಜೂರಿಸಿ ಆರ್ಥಿಕ ನೆರವು ನೀಡಿದೆ. ಈ ಕಲಾವಿದರ ಕಲೆ ಪರಿಗಣಿಸಿ ಊರಿನ ಹಾಗೂ ಸುತ್ತಲು ಹಳ್ಳಿಯ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

**ವೀರಭದ್ರಪ್ಪ ಬಳೆಗಾರ**
**ಅಂಚೆ : ಬಿಸರಳ್ಳಿ**
**ತಾ : ಜಿ : ಕೊಪ್ಪಳ**

# ಭರಮಪ್ಪ ಪೂಜಾರ

ಕೊಪ್ಪಳ ಜಿಲ್ಲೆಯ ಬಿಸರಹಳ್ಳಿ ಗ್ರಾಮದ ಭರಮಪ್ಪ ಪೂಜಾರ ಕಟಗಾಲಿ ಭರಮಪ್ಪನೆಂದೇ ಪ್ರಸಿದ್ಧ ಪಡೆದ ಬಯಲಾಟ ಮಾಸ್ತರ. ರಾತ್ರಿ ನಿಶಬ್ದ ವಾತಾವರಣದಲ್ಲಿ ಭರಮಪ್ಪ ಕೋಚೆತ್ತಿ ಹಾಡಲು ಪ್ರಾರಂಭಿಸಿದರೆ ಸುತ್ತಲೂ ಮೂರು ನಾಲ್ಕು ಕಿಲೋಮೀಟರ್ ದೂರದ ಹಳ್ಳಿಗಳಿಗೆಲ್ಲ ಕೇಳಿಸುತ್ತಿತ್ತು. ಕಂಚಿನ ಕಂಠ ಆತನದು. ಆಗ ಜಿಲ್ಲೆಯ ಉದ್ದಗಲಕ್ಕೂ ಭರಮಪ್ಪನ ಬಯಲಾಟದ ಪ್ರಭಾವ ಹರಡಿತ್ತು. ಆಗ ಬಯಲಾಟಗಳ ಪ್ರದರ್ಶನಗಳಿಗೆ ಲೆಕ್ಕವೇ ಇರಲಿಲ್ಲ. ಒಂದಿಲ್ಲ ಒಂದು ಹಳ್ಳಿಯಲ್ಲಿ ಆತನ ಬಯಲಾಟ ತರಬೇತಿ ನಡದೇ ಇರುತಿತ್ತು. ಜಾತ್ರೆ, ಉರುಸು ಉತ್ಸವಗಳಲ್ಲಂತೂ ಒಂದೊಂದು ಹಳ್ಳಿಯಲ್ಲಿ ಎರಡು ಮೂರು ಬಯಲಾಟ ಪ್ರದರ್ಶನ ಗೊಂಡಿದ್ದುಂಟು.

ಭರಮಪ್ಪ ಪೂಜಾರ ಅವರ ನಿರ್ದೇಶನದ ಬಯಲಾಟವೆಂದರೆ ಸಾಕು ಜನ ತಂಡೋಪತಂಡದಲ್ಲಿ ಬಂದು ಸೇರುತಿತ್ತು. ಆತನ ನಿರ್ದೇಶನದಲ್ಲಿ ಬಯಲಾಟ ಹೆಚ್ಚು ಆಕರ್ಷಿಸುತ್ತಿದ್ದವು. ಆಳವಾದ ಅನುಭವ, ಕುಣಿತ, ಹಾಡುಗಾರಿಕೆ, ಅಭಿನಯ ಹಾರ್ಮೋನಿಯಂ, ಮದ್ದಳೆ ಎಲ್ಲ ಬಲ್ಲ ಭರಮಪ್ಪ ಬಯಲಾಟದ ಒಂದು ಆಕರ ಗ್ರಂಥವಾಗಿದ್ದ. ತನ್ನ ವೃತ್ತಿಗೆ ತನ್ನ ಕರ್ತವ್ಯಕ್ಕೆ, ತನ್ನ ಸಾಮರ್ಥ್ಯಕ್ಕೆ ನಿಷ್ಠೆಯಿಂದ ನಡೆದುಕೊಂಡು ಬಂದು ಯಶಸ್ಸು ಸಾಧಿಸಿದ್ದ. ಆ ಕ್ಷೇತ್ರಕ್ಕೆ ತನ್ನನು ಸಂಪೂರ್ಣ ತೊಡಗಿಸಿಕೊಂಡು ಅರ್ಪಿತ ಭಾವದಿ ದುಡಿದ ಅನುಭಾವಿ ಮಾಸ್ತರನಾಗಿದ್ದ.

ಬಯಲಾಟಗಳಲ್ಲಿ ಹಾಡುಗಳಿಗೆ ಹೆಚ್ಚು ಪ್ರಾಮುಖ್ಯತೆ ಇರುತ್ತೆ. ಕಥೆಯ ಬೆಳವಣಿಗೆ ಹಾಡುಗಳಿಂದಲೇ. ಹಾಡುಗಳು ಸಂದರ್ಭಾನುಸಾರ ವೀರ, ಭೀಕರತೆ, ದುಃಖ, ಉತ್ಸಾಹ ಹೀಗೆ ಪಾತ್ರಗಳ ಸನ್ನಿವೇಶಕ್ಕೆ ತಕ್ಕಂತಿರುತ್ತವೆ. ಎಷ್ಟೋ ಕಥೆಗಳಲ್ಲಿ ಹಾಡುಗಳಲ್ಲಿಯೇ ಉತ್ತರ ಪ್ರತ್ಯುತ್ತರ, ಸಂವಾದ ಎಲ್ಲವೂ ಗಮನಾರ್ಹ. ಮುಮ್ಮೇಳನದ ಪ್ರಮುಖ ಹಾಡುಗಾರನಾಗಿ ಕೆಲವೊಮ್ಮೆ ಸ್ತ್ರೀ ಪಾತ್ರಗಳ ಜೊತೆ ಜೊತೆ ಮೃದು ಮಧುರ ಹಾಡುಗಾರನಾಗಿ ಭರಮಪ್ಪ ಪ್ರಭಾವ ಬೀರಿದ್ದುಂಟು.

ಭರಮಪ್ಪನವರ ಹಿರಿಯರು ಮೂಲತಃ ಸಂಕಲಾಪುರದವರು. ತುಂಗಭದ್ರ ಆಣೆಕಟ್ಟಿಗೆ ಹಳ್ಳಿ ಮುಳುಗಿದಾಗ ಕೊಪ್ಪಳ ಹತ್ತಿರದ ಬಿಸರಳ್ಳಿಗೆ ಬಂದು ಸೇರಿದವರು. ಭರಮಪ್ಪನಿಗೆ ಬಿಸರಳ್ಳಿಯೇ ಆಧಾರವಾಯಿತು. ಬಿಸರಳ್ಳಿಯ ಪೂಜಾರಿ ಮನೆತನದ ನರಸವ್ವನನ್ನು ಮದುವೆಯಾಗಿ ಪ್ರಾಪಂಚಿಕ ಬದುಕಿಗೂ ಕಾರಣವಾಯಿತು. ಓದಿದ್ದು ತೀರ ಕಡಿಮೆ.

ಬಾಲ್ಯದಲ್ಲಿಯೇ ಭರಮಪ್ಪನಿಗೆ ಬಯಲಾಟದ ಹುಚ್ಚು. ಕ್ರಮೇಣ ಇತನಲ್ಲಿಯ ಕಲಾಸಕ್ತಿ ಅಂತರಾಳದಲ್ಲಿ ಹುದುಗಿದ್ದ ಕಲಾ ಪ್ರತಿಭೆ ಗುರುತಿಸಿದ ಬಿಸರಳ್ಳಿಯ ಪ್ರಸಿದ್ಧ ಬಯಲಾಟ ಮಾಸ್ತರ ದಿ. ಬಳಿಗಾರ ವಿರುಪಾಕ್ಷಪ್ಪನವರು ಈತನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ವರ್ಷಗಟ್ಟಲೇ ಶಿಷ್ಯನಿಗೆ ತರಬೇತಿ ನೀಡಿ ತಮ್ಮ ವಿದ್ಯೆಯನ್ನೆಲ್ಲ ಧಾರೆ ಎರೆದರು. ಭರಮಪ್ಪ ನಟ, ನಿರ್ದೇಶಕ, ಹಾರ್ಮೋನಿಯಂ ಮೃದಂಗದ ಮಾಸ್ತರನಾಗಿ ಗುರುವಿನ ಎತ್ತರಕ್ಕೆ ಬಂದು ನಿಂತ.

ಭರಮಪ್ಪ ಪೂಜಾರ ಬಯಲಾಟ ಕಲಿಸುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಸುತ್ತಲೂ ಹಳ್ಳಿಗಳಲ್ಲಿ ಬಯಲಾಟ ಮಾಸ್ತರನೆಂದು ಗುರುತಿಸಿಕೊಂಡು ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರನಾದ. ಮೂರು ನಾಲ್ಕು ದಶಕಗಳ ಕಾಲ ಜಾನಪದ ರಂಗಭೂಮಿಗೆ ದುಡಿದು ನಾಡಿನ ಕಲಾಪ್ರಿಯರ ಗೌರವಕ್ಕೆ ಪಾತ್ರನಾದ. ಸುಮಾರು ೩೦-೩೫ ಬಯಲಾಟಗಳನ್ನು ಕಲಿಸಿರಬೇಕು. ಅವುಗಳಲ್ಲಿ ಜನಮನ ಸೆಳೆದು ಪ್ರಸಿದ್ಧಿ ಪಡೆದ ಬಯಲಾಟಗಳೆಂದರೆ "ಪಾಂಡು ವಿಜಯ," "ರಾಮಾಂಜನೆಯ ಯುದ್ಧ," "ಬಭ್ರುವಾಹನ," "ಕುರುಕ್ಷೇತ್ರ," "ಬಸ್ಮಾಸುರ," "ಪ್ರಮಿಳೆ." ಇವು ಇವರ ನಿರ್ದೇಶನದ ಉತ್ತಮ ಆಟಗಳು.

ಅಭಿನಯದಲ್ಲಿಯೂ ಅಷ್ಟೇ ಹೆಸರುಗಳಿಸಿದ ಭರಮಪ್ಪ ಪ್ರಪ್ರಥಮ ಬಣ್ಣ ಹಚ್ಚಿದ ಪಾತ್ರ "ಚಿತ್ರ ಕೇತು" ಬಯಲಾಟದ ಆಂಗೀರಸ ಋಷಿಯ ಮಗಳಾದ ಸುಮತಿ ಪಾತ್ರದಲ್ಲಿ. ನಂತರ ಅನೇಕ ನಾಟಕಗಳಲ್ಲಿ ಸ್ತ್ರೀ ಪಾತ್ರದಲ್ಲಿ ಆಕರ್ಷಿಸಿದ್ದಾರೆ. ಬಿಸರಳ್ಳಿಯ ವೇದಮೂರ್ತಿ ವೀರಭದ್ರಯ್ಯ ಸ್ವಾಮಿಗಳ ಜೊತೆ ಅಕ್ಷೆಯಾಂಬರ ನಾಟಕದಲ್ಲಿ ಹಾಸ್ಯಪಾತ್ರದಿಂದ ಇನ್ನೂ ಪ್ರೇಕ್ಷಕರ ಮುಂದೆ ನಿಲ್ಲುತ್ತಾರೆ.

ಇಂಥ ಒಬ್ಬ ಶ್ರೇಷ್ಠ ರಂಗನಟ, ನಿರ್ದೇಶಕ ಬದುಕಿನಲ್ಲಿ ನೋವನ್ನೇ ಹೆಚ್ಚು ಅನುಭವಿಸಿದ್ದುಂಟು. ಸುಖ-ದುಃಖ, ನೋವು, ನಲಿವು ಏನೇ ಇರಲಿ ಬಯಲಾಟ ಕಲಿಯುವಾಗಾಗಲಿ, ಕಲಿಸುವಾಗಲಾಗಲಿ ರಂಗಭೂಮಿಯೇ ಬದುಕಿನ ಕೇಂದ್ರ ಬಿಂದುವಾಗಿತ್ತು. ಇವರ ಪ್ರತಿಭೆಗೆ ಕರ್ನಾಟಕ ನಾಟಕ ಅಕಾಡೆಮಿ ಜಾನಪದ ರಂಗ ಸೇವೆ ಪರಿಗಣಿಸಿ ೧೯೭೩-೭೪ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು.

ದಿ. ಭರಮಪ್ಪ

ತಾ : ಜಿ : ಕೊಪ್ಪಳ

## ಮುದಕಪ್ಪ ಹೂಗಾರ

ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರಪ್ರಜ್ಞೆ, ರಾಷ್ಟ್ರಾಭಿಮಾನ ಗುಡಿಕೈಗಾರಿಕೆ, ಖಾದಿ ಮಹತ್ವಗಳಂಥ ವಿಷಯಗಳನ್ನು ಆಗಿನ ಜಾನಪದ ಕಲಾವಿದರು ತಮ್ಮ ಲಾವಣಿ ಹಾಡುಗಳಿಂದ, ಗೀಗೀ ಪದಗಳಿಂದ ಹಾಡುತ್ತ ಜನಜಾಗೃತಿ ಮಾಡಿದ್ದು ಸಾಮಾನ್ಯ ಮಾತಾಗಿರಲಿಲ್ಲ. ಅನೇಕ ನಾಯಕರ ಕಥೆಗಳನ್ನು ಚಳವಳಿಗಳಂಥ ಸಂದರ್ಭದಲ್ಲಿ ಹಾಡಿ ನಾಡು-ನುಡಿಯ ಸೇವೆಗೈದಿದ್ದಾರೆ.

ಮುದಕಪ್ಪ ಹೂಗಾರ ಅಂಥ ಕಲಾವಿದರ ಸಾಲಿನಲ್ಲಿ ಗುರುತಿಸಿಕೊಳ್ಳುವುದರಿಂದಲೇ ವಿಶೇಷ ಉಲ್ಲೇಖಕ್ಕೆ ಬರುತ್ತಾರೆ. ಕಲಾವಿದರ ಪರಿಚಯ ಗ್ರಂಥದಲ್ಲಿ ವಿಶಿಷ್ಟವಾಗಿ ಕಾಣುತ್ತಾರೆ. ಈಗಲೂ ಅಂಥ ಹಾಡುಗಳನ್ನು ಕೇಳಿದಾಗ ಕೇಳುಗರ ಮೈ ರೋಮಾಂಚನವಾಗುತ್ತದೆ. ನಾಡು, ದೇಶ ಕಟ್ಟಿದವರ ಬಗ್ಗೆ ಗೌರವ ಮೂಡುತ್ತದೆ.

ಕೊಪ್ಪಳ ತಾಲೂಕಿನ ಇರಕಲ್ಲಗಡದ ಹೋಬಳಿಯ ಯಲಮಗೇರ ಗ್ರಾಮದ ಹೂಗಾರ ಮನೆತನದಲ್ಲಿ ಶ್ರೀ ಗ್ಯಾನಪ್ಪ ಬಾಳಮ್ಮ ದಂಪತಿಗಳ ಮಗನಾಗಿ ೧-೬-೧೯೩೦ರಲ್ಲಿ ಜನ್ಮ ಪಡೆದ ಮುದಕಪ್ಪ ಓದಿದ್ದು ಓದಲು ಬರೆಯಲು ಬರುವಷ್ಟು ಅಕ್ಷರಾಭ್ಯಾಸ. ಹೂ ಮಾರುವುದು ಉದ್ಯೋಗ. ಹೂಗಳ ಪರಿಮಳದಂತೆ ಕಲೆಯನ್ನು ಪಸರಿಸಿದ ಕೀರ್ತಿ ಮುದಕಪ್ಪನದು. ತೀರ ಬಡತನ ಕುಟುಂಬದ ತಂದೆ ತಾಯಿಗಳು ಬೇಸಾಯದಲ್ಲಿ, ಕೂಲಿ ಕೆಲಸಗಳಲ್ಲಿ ಬದುಕಿದವರು. ರೈತರು ರಾಶಿ ಮಾಡುವಾಗ ಕಾಳು-ಕಡಿ ತಂದು ಉಪಜೀವಿಸುತ್ತಿದ್ದ ಕುಟುಂಬ.

ಬಾಲ್ಯದಿಂದಲೇ ಸ್ವಾತಂತ್ರ್ಯ ಚಳವಳಿಗಳಂಥ ಸಂದರ್ಭದಲ್ಲಿ ಹಾಡುಗಳನ್ನು ಕಲಿತುಕೊಂಡು ಮಹಾತ್ಮ ಗಾಂಧೀಜಿ ಅವರ ತತ್ವ ಸಿದ್ಧಾಂತ, ದೇಶಭಕ್ತಿಯನ್ನು ಅನುಸರಿಸಿಕೊಂಡು ಬಂದ ಮುದಕಪ್ಪ ಗಾಂಧೀಜಿಯ ಅಭಿಮಾನಿಯಾದ,

ಅನುಯಾಯಿಯಾದ. ಆವಾಗಲೇ ಹಾಡುಗಳನ್ನು ಕಲಿತು ಊರು ಊರು ಅಲೆದು ಗಾಂಧೀಜಿಯ ಬದುಕನ್ನು, ಸಿದ್ಧಾಂತವನ್ನು, ಚಳುವಳಿಗಳನ್ನು ಹಾಡಿ ಕ್ರಾಂತಿ ಮೊಳಗಿಸಿದ. ಒಂದು ದೀರ್ಘ ಹಾಡಿನಲ್ಲಿ ಗಾಂಧೀಜಿಯ ಓದು, ಕಾಂಗ್ರೆಸ್ ಸೇರಿದ್ದು, ಹೋರಾಟ ಮಾಡಿದ್ದು, ಶಾಂತಿ ಸಂದೇಶ ಸಾರಿದ್ದು ಎಲ್ಲ ಚಿತ್ರಣ ಚಿತ್ರಗೊಳ್ಳುತ್ತದೆ.

ಸ್ವಾತಂತ್ರ್ಯ ನಂತರ ಲಾವಣಿ, ಗೀಗೀಪದ ಮೋಹರಂ ಪದ, ತತ್ವಪದ ಹಾಡುಗಳ ಪ್ರಮುಖವಾಗಿ ಕೇಳಿಬಂದಿವೆ. ಹಾಡುಗಳ ಸಂಗ್ರಹ ಅಪಾರ. ಈ ಕಲಾವಿದನ ಬದುಕಿನಲ್ಲಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಾಡುಗಳು ಒಂದು ತೂಕವಾದರೆ ಉಳಿದೆಲ್ಲ ಬಗೆಯ ಹಾಡುಗಳೊಂದು ತೂಕವಾಗುತ್ತವೆ.

"ಅನ್ನವು ನಿನ್ನಲ್ಲಿರುವ ತನಕ
ನನ್ನವರು ತನ್ನವರು ಎನುವರು
ಅನ್ನವು ನಿನ್ನಲಿ ತೀರಿದ ಮರುದಿನ
ನಿನ್ನ ಯಾರೆನ್ನುವರು"
ಇದು ಮುದಕಪ್ಪನವರ ಬಹಳ ಜನಪ್ರಿಯ ಹಾಡಾಗಿದೆ.
"ಗಂಡನ ಮೇಲೆ ಕಪಟ ಮಾಡಿದ
ಹೆಣ್ಣಿನ ಚರಿತ್ರವ ಹೇಳ್ತೀನಿ ಕೇಳಿರಿ"

ಇಂಥ ಅನೇಕ ಕೌಟುಂಬಿಕ, ಲೌಕಿಕ ಬದುಕಿನ ಘಟನೆಗಳ ಹಾಡುಗಳು ಜನರ ಮೋಸ, ವಂಚನೆಗಳಂಥ ಬದುಕನ್ನು ಚಿತ್ರಿಸುತ್ತವೆ. ಮುದಕಪ್ಪನವರು ಮೋಹರಂ ಹಾಡುಗಳಿಂದಲೂ ಜನಮನ ಸೆಳೆದವರು. ಗೀಗೀ ಪದಗಳಲ್ಲಿ ಸುತ್ತಮುತ್ತಲು ಯಾರೂ ಮೀರಿಸುವಂತಿಲ್ಲ.

ಕೊಪ್ಪಳ ಜಿಲ್ಲೆ, ಬಳ್ಳಾರಿ ಜಿಲ್ಲೆ, ಧಾರವಾಡ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಹಾಡಿನ ಕಾರ್ಯಕ್ರಮ ಕೊಟ್ಟಿದುಂಟು ಗಂಗಾವತಿ, ಹೊಸಪೇಟೆ, ಹಿರೇನೆರೇಗಲ್, ಗದಗ, ತಳಕಲ್, ವಡ್ಡರ ಹಟ್ಟಿ, ಹನುಮನ ಹಟ್ಟಿ, ಹಿರೇ ತಾವರಗೇರಿ, ರೋಣ, ಹುನಗುಂದ ಹೀಗೆ ನಾಡಿನ ನಾನಾ ಭಾಗದಲ್ಲಿ, ಊರಿನ ಉತ್ಸವಗಳಲ್ಲಿ, ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಕಲಾಪ್ರದರ್ಶನ ನೀಡಿದ್ದುಂಟು.

ಇವರ ಸೇವೆಯನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೦ ರಲ್ಲಿ "ಜನಪದ ಹಾಡುಗಾರಿಕೆ ಕ್ಷೇತ್ರದಲ್ಲಿ ಸಾಧಿಸಿ ಸಾಧನೆಗೆಂದು ಪ್ರಶಸ್ತಿ ನೀಡಿ ಗೌರವಿಸಿದೆ. ಕೊಪ್ಪಳ ಭಾಗದ ಅನೇಕ ಶಾಲೆಗಳಲ್ಲಿ ಇವರನ್ನು ಸನ್ಮಾನಿಸಲಾಗಿದೆ. ನಾಡಿನ ಪ್ರಮುಖ ಪತ್ರಿಕೆಗಳು ಈ ಕಲಾವಿದ ಬದುಕು-ಕಲೆ ಕುರಿತು ಪ್ರಕಟಿಸಿವೆ.

ಜಾನಪದ ಹಾಡಿನ ಜೀವಾಳವಾಗಿರುವ ಮುದಕಪ್ಪ ಹೂಗಾರ ಅವರಿಗೆ ಈಗ ಧ್ವನಿ ಸಾಲುತ್ತಿಲ್ಲ, ಶಕ್ತಿ ಕುಗ್ಗುತ್ತಿದೆ. ಈ ಭಾಗದ ಜಾನಪದ ಕಲೆಗೆ ತನ್ನದೇ ಆದ ಕಾಣಿಕೆ ಸಲ್ಲಿಸಿ ಕಲೆಯ ಋಣ ತೀರಿಸಿದ್ದಾನೆ. ಆದರೆ ಸಮಾಜ, ಸರಕಾರ ಕಲಾವಿದರ ಋಣ ತೀರಿಸಬೇಕಿದೆ.

ಮುದಕಪ್ಪ ಹೂಗಾರ
ಯಲಿಮಗೇರ, ಇರಕಲ್ಲಗಡಾ
ತಾ : ಜಿ : ಕೊಪ್ಪಳ

# ಏಕನಾಥಪ್ಪ ಜಂಬಣ್ಣ

ಕೊಪ್ಪಳ ಜಿಲ್ಲೆಯ ಭಾಗ್ಯನಗರದ ಏಕನಾಥಪ್ಪನವರು ಬಯಲಾಟ ಕಲಾವಿದರು. ಕಲೆಯಿಂದ, ಸಂಘಟನೆಯಿಂದ, ಸಂಘ ಸಂಸ್ಥೆಗಳ ಬೆಳವಣಿಗೆಗಳಿಂದ ಪರಿಚಯಗೊಂಡಿರುವ ಇವರು ಈ ಭಾಗದ ಉತ್ತಮ ಕಲಾವಿದರೂ ಹೌದು. ಇವರ ವಿಶೇಷತೆಯೆಂದರೆ ತಾವು ಬೆಳೆಯುವುದರ ಜೊತೆ ಹತ್ತಾರು ಕಲಾವಿದರನ್ನು ಬೆಳೆಸುವುದು.

"ದೇವಿ ಬಯಲಾಟ ಸಂಘ"ದ ಕಾರ್ಯದರ್ಶಿಗಳಾಗಿ ಸಂಘವನ್ನು ವರ್ಷ ವರ್ಷವೂ ಬೆಳೆಸುತ್ತ ಉತ್ತಮ ಬಯಲಾಟ ಸಂಘವೆನ್ನುವ ಕೀರ್ತಿ ತಂದವರು. ಒಂದು ಸಂಘವನ್ನು ಹುಟ್ಟುಹಾಕಿ ನಿರಂತರ ಉಳಿಸಿಕೊಂಡು, ಬೆಳೆಸಿಕೊಂಡು ಬರುವುದು ಸಣ್ಣಮಾತಲ್ಲ. ತಾಳ್ಮೆ, ಧೈರ್ಯ, ಛಲ, ಶ್ರಮ, ಶ್ರದ್ಧೆಯಿಂದ ಸಂಘ ಬೆಳೆದು ಜನಪ್ರಿಯವಾಗಿದೆ. ಕೊಪ್ಪಳ ಜಿಲ್ಲೆಯ ಬಯಲಾಟ ಸ್ಪರ್ಧೆಯಲ್ಲಿ ಈ ತಂಡ ಬಹಳಷ್ಟು ಆಕರ್ಷಿಸಿತ್ತು.

ಏಕನಾಥಪ್ಪನವರಿಗೆ ಅಭಿನಯ ಕಲೆ ತಂದೆ ಹಾಗೂ ಸಹೋದರ ಲಕ್ಷ್ಮಣ ಅವರ ಪ್ರಭಾವದಿಂದ ಬಂದುದಾಗಿದೆ. ತಂದೆಯ "ಗಜಗೌರಿ" ಬಯಲಾಟದಲ್ಲಿ ಗಾಂಧಾರಿ ಪಾತ್ರ ನೋಡಿ ಖುಷಿಪಟ್ಟು ತಾವೂ ಹಾಗೆ ಮೆಚ್ಚುಗೆ ಪಡೆಯುವಂತಹ ಕಲಾವಿದನಾಗಬೇಕೆನ್ನುವ ಕನಸು ಕಂಡರು. ಮೊದಮೊದಲು ಈ ಕಲಾವಿದರು ರಂಗದಲ್ಲಿ ಕಾಣಿಸಿಕೊಂಡುದುದು ನಾಟಕಗಳಿಂದ ೧೯೮೦ರಲ್ಲಿ ಭಸ್ಮೆ ಅವರ "ಬಲೆ ಬೀಸಿದ ಹೆಣ್ಣು" ನಾಟಕದಲ್ಲಿ ಶಿವಣ್ಣನ ಪಾತ್ರ. ನಂತರ ಭಾಗ್ಯನಗರದ ಸ್ನೇಹಿತರ ಅಭಿಲಾಷೆಯಿಂದ "ಶ್ರೀ ರಾಮಾಯಣ" ಬಯಲಾಟದಲ್ಲಿ ಇಂದ್ರಜಿತ್ ಪಾತ್ರದಿಂದ ಜಾನಪದ ರಂಗಭೂಮಿ ಪ್ರವೇಶವಾಯಿತು. ಅಂದಿನಿಂದ ಇಂದಿನವರೆಗೆ ಪ್ರತಿ ವರ್ಷ ಊರ ಜಾತ್ರೆಯಲ್ಲಿ ಯಾವುದೇ ಬಯಲಾಟ ಪ್ರಯೋಗಗೊಳ್ಳಲಿ ಏಕನಾಥಪ್ಪನಿಗೊಂದು ಪಾತ್ರವಿದ್ದೇವಿರುತ್ತೆ.

ಶ್ರೀ ಪಂಚಣ್ಣ ಬೆಟಗೇರಿ ಮಾಸ್ತರ ಮಾರ್ಗದರ್ಶನ ನೀಡಿ ಅಭಿನಯ ಹೇಳಿಕೊಟ್ಟ ಗುರುಗಳೆಂದು ಈಗಲೂ ಸ್ಮರಿಸುತ್ತಾರೆ.

ಎರಡು ದಶಕಗಳಿಂದ ನಿರಂತರ ಊರ ಜಾತ್ರೆಯಲ್ಲಿ ಅಭಿನಯಿಸುತ್ತ ಬಂದ ಏಕನಾಥಪ್ಪ "ರಾಮಾಯಣ"ದಲ್ಲಿ ಯಾವುದೇ ಪಾತ್ರ ಕೊಟ್ಟರೂ ಸಮರ್ಥವಾಗಿ ಅಭಿನಯಿಸುತ್ತೇನೆನ್ನುವ ಆತ್ಮವಿಶ್ವಾಸ ಅವರದು. ಇಡೀ ಬಯಲಾಟದ ಸಾಹಿತ್ಯ ಅವರಿಗೆ ಕಂಠಪಾಠ. ಹೆಚ್ಚಾಗಿ ಇತ್ತೀಚಿಗೆ ನಿಶುಂಭನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತ ಜನಮನ ಸೆಳೆದಿದ್ದಾರೆ.

೨೦೦೪ರಲ್ಲಿ ಗದಗ-ಬೆಟಗೇರಿಯಲ್ಲಿ ದಿ. ಬಣ್ಣದ ಅವರ ಸ್ಮರಣಾರ್ಥ ಬಯಲಾಟ ಉತ್ಸವ, ಸ್ಥಳೀಯ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಜರುಗಿದಾಗ ಭಾಗ್ಯನಗರದ ಏಕನಾಥಪ್ಪನವರ ತಂಡ ಕೂಡ ಪಾಲ್ಗೊಂಡು ಯಶಸ್ವಿಯಾಗಿ ದೇವಿ ಮಹಾತ್ಮೆಯನ್ನು ಪ್ರದರ್ಶಿಸಿ ಅಲ್ಲಿಯ ಪ್ರೇಕ್ಷಕರ ಮೆಚ್ಚಿಕೆ ಗಳಿಸಿದ್ದುಂಟು.

ಏಕನಾಥಪ್ಪನವರು ಜಾನಪದ ರಂಗಭೂಮಿಯ ಬಗ್ಗೆ ಬಹಳಷ್ಟು ಕಳಕಳಿ ಹೊಂದಿದವರು. ಇತ್ತೀಚಿಗೆ ಇವರನ್ನು ಸಂದರ್ಶಿಸಿದಾಗ ಹೇಳಿದ ಮಾತುಗಳು "ಗುರುಗಳೆ ಈ ಕಲೆ ಈಗ ಮೊದಲಿನಂತೆ ಉಳಿದಿಲ್ಲ. ಹಳ್ಳಿಗಳಲ್ಲಿಯೂ ಟಿ. ವಿ. ಚಾನಲ್‌ಗಳು ಬಂದು ಪ್ರೇಕ್ಷಕರೆಲ್ಲ ಆ ಕಡನೇ ವಾಲುತ್ತಿದ್ದಾರೆ. ಮೊದಲಿನಂತೆ ಕಲಾವಿದರೂ ಆಸಕ್ತಿಯಲ್ಲಿ ಬರುತ್ತಿಲ್ಲ. ಪ್ರದರ್ಶನ ವೆಚ್ಚನೂ ಈಗ ಹೆಚ್ಚಾಗುತ್ತಿದೆ. ಆದರೂ ನಮ್ಮೂರಲ್ಲಿ ಮಾತ್ರ ಇನ್ನೂ ಪ್ರಯೋಗಿಸುತ್ತಲೇ ಇದ್ದೇವೆ" ಎಂದಾಗ ಇಂಥ ದಿನಗಳಲ್ಲಿಯೂ ಬಯಲಾಟ ಕಲೆಯನ್ನು ಪೋಷಿಸಿಕೊಂಡು ಪ್ರಯೋಗಿಸುತ್ತಿರುವುದು ಸಂತೋಷವನ್ನುಂಟು ಮಾಡಿದೆ.

ಏಕನಾಥಪ್ಪನ ಹಿರಿಯರು ಮೂಲತಃ ಕೊಪ್ಪಳ ತಾಲೂಕಿನ ಕಾತರಕಿ ನಿವಾಸಿಗಳು. ತುಂಗಭದ್ರ ಆಣೆಕಟ್ಟಿಗೆ ಹೊಲ-ಮನೆ ಹೋದಾಗ ಕೊಪ್ಪಳ ಹತ್ತಿರದ ಭಾಗ್ಯನಗರಕ್ಕೆ ಬಂದು ಸೇರಿದವರು, ತುಂಬ ಬಡತನಕ್ಕೆ ಕಷ್ಟಕ್ಕೀಡಾದ ತಂದೆ-ತಾಯಿಗಳು ಕೂಲಿ ಕೆಲಸ ಮಾಡಿಕೊಂಡು ದೊಡ್ಡ ಕುಟುಂಬವನ್ನು ನಿಭಾಯಿಸುತ್ತಿದ್ದರು. ತಂದೆ ಜಂಬಣ್ಣ ತಾಯಿ ಬುದ್ಧಿವಂತಮ್ಮನವರ ಕಾಲದ ಬಡತನ ಈಗಿಲ್ಲ. ತಂದೆ ಮನೆಯಲ್ಲಿ ಹೇಳಿಕೊಟ್ಟ ಅಕ್ಷರಾಭ್ಯಸವಷ್ಟೇ ಶಾಲೆ. ಆದರೂ ಏಕನಾಥಪ್ಪ ರಾಮಾಯಣ, ಮಹಾಭಾರತ, ಭಗವದ್ಗೀತೆ ಓದಿ ಪಠಣ ಮಾಡಿಕೊಂಡಿರುವುದು ಆಶ್ಚರ್ಯಪಡುವಂತಹದ್ದು.

ಶ್ರೀ ಜಂಬಣ್ಣ ಶ್ರೀಮತಿ ಬುದ್ಧಿವಂತಮ್ಮನವರ ೬ನೇ ಮಗನಾಗಿ ಜನ್ಮ ಪಡೆದ ಏಕನಾಥಪ್ಪ ಏಳು ಜನ ಸಹೋದರರನ್ನು ಇಬ್ಬರು ಸಹೋದರಿಯರನ್ನು ಪಡೆದು ಬೆಳೆದಿದ್ದಾರೆ. ಏಕನಾಥಪ್ಪನವರು ಶ್ರಮ-ಶ್ರದ್ಧೆಯಿಂದ ಬೆಳೆಯುತ್ತ

ಇದೀಗ ವಿದ್ಯುತ್ತಿನ ನಾಲ್ಕು ಕೈಮಗ್ಗಗಳನ್ನು ಹೊಂದಿ ನೆಮ್ಮದಿಯ ಬದುಕು ಪಡೆದಿದ್ದಾನೆ.

ಏಕನಾಥಪ್ಪನವರಿಗೆ ಮೊದಲಿನ ಪತ್ನಿ ಅಗಲಿದ ಮೇಲೆ ಸರೋಜಮ್ಮನನ್ನು ಎರಡನೇ ಪತ್ನಿಯನ್ನಾಗಿ ಸ್ವೀಕರಿಸಿದರು. ಇವರಿಗೆ ಒಟ್ಟಿಗೆ ಐದು ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು. ಮಕ್ಕಳೆಲ್ಲ ವಿದ್ಯಾವಂತರು. ಅವರಾರೂ ರಂಗಭೂಮಿ ಪ್ರವೇಶಿಸಲಿಲ್ಲ. ಏಕನಾಥಪ್ಪನವರು ಮಾತ್ರ ತಮ್ಮ ಬಯಲಾಟ ಪಾತ್ರಗಳ ಅಭಿನಯದಿಂದ ; ಬಯಲಾಟ ತಂಡದ ಸಂಘಟನೆಯಿಂದ ಊರ ಜನರ ಮೆಚ್ಚಿಗೆಗೆ ಪಾತ್ರರಾಗಿ ಗೌರವಾದರತೆಗಳನ್ನು ಪಡೆದವರಾಗಿದ್ದಾರೆ.

ಏಕನಾಥಪ್ಪ ಜಂಬಣ್ಣ<br>ಭಾಗ್ಯನಗರ<br>ತಾ : ಜಿ : ಕೊಪ್ಪಳ

# ಲಕ್ಷ್ಮಣ ಮಾಸ್ತರ ಬಿಸರಳ್ಳಿ

"ಕುಂತ ಸಭಾದಾಗ ನಿಂತ ನಾ ಹೇಳ್ತೀನಿ
ಎಂತಿದ್ರು ಎನಗಂಡ ಸರದಾರ
ನಾಕು ಮಂದ್ಯಾಗ ಬಲು ಪಾಸು ಬಹದ್ದೂರ
ನನಮೇಲೆಷ್ಟು ಅವನ ಶಡಗರ
ಬಂತು ಬಾರದೆ ಇಲ್ಲ ಕಂತು ಕಾರಣವಿಲ್ಲ
ಚಿಂತೆಯ ಬಿಡಿಸ್ಯಾನ ನೂರಾರ
ಎಂತು ಹೇಳಲವ್ವ ಅವನುಪಕಾರ"

ಈ ಹಾಡಿನ ಮೂಲಕ ಇಡೀ ಸಭೆಯು ಶ್ರೋತೃಗಳ ಮನಸ್ಸನ್ನು ಸೆರೆಹಿಡಿದುಕೊಳ್ಳುವ ಲಕ್ಷ್ಮಣ ಮಾಸ್ತರ ಹಳ್ಳಿಯ ಜನರೊಳಗೆ ಬೆಳೆದು ಜನರಿಂದಲೇ ಕಲಿತು ಜನರನ್ನು ಖುಷಿಪಡಿಸುತ್ತ ಬಂದವರು. ವೃತ್ತಿಯಿಂದ ಶಿಕ್ಷಕರಾಗಿ ಪ್ರವೃತ್ತಿಯಿಂದ ಹಾಡುಗಾರರಾಗಿ ಜಾನಪದ ಕ್ಷೇತ್ರಕ್ಕೆ ತಮ್ಮ ಅಳಿಲು ಸೇವೆ ಸಲ್ಲಿಸಿದವರು.

ಹಾಡುಗಾರಿಕೆ ಬಾಲ್ಯದಿಂದಲೇ ಬಂದಿದೆ. ಮಧುರ ಕಂಠದಿಂದ ಬಾಲ್ಯದಲ್ಲಿ ಭಜನೆ ಹಾಡು ಹಾಡುತ್ತಿದ್ದಾಗ ಎಲ್ಲರ ಗಮನ ಅವರತ್ತನೆ ಇರುತ್ತಿತ್ತು. ಶ್ರಾವಣ ಮಾಸದಲ್ಲಿ ಬೆಳಗು ಮುಂಜಾನೆ ಊರೆಲ್ಲ ಸುತ್ತುವ ಭಜನಾ ತಂಡದ ಮುಂದಾಳಾಗಿ ಹಾಡುತ್ತ ಸಾಗಿದಾಗ ಪ್ರಶಾಂತ ವಾತಾವರಣದಲ್ಲಿ ಬೀಸುವ ಗಾಳಿಯಿಂದ ಹಾಡಿನ ಅಲೆಗಳು ತೇಲಿಬಂದು ನಿದ್ದೆಯ ಜೊಂಪಿನಲ್ಲಿದ್ದ ಜನರಿಗೆ ಜಾಗ್ರತಗೊಳಿಸುತ್ತ ಭಕ್ತಿಯಲಿ ತೇಲಿಸಿದಂತೆ. ಕೇಳಬೇಕು ಮತ್ತೆ ಮತ್ತೆ ಕೇಳಬೇಕೆನ್ನುವ ಸುಮಧುರ ತತ್ವಪದಗಳು. "ಮೊದಲು ತೋರುತಿದೆ ಮಧುರ ವಿಷಯ ಸುಖ ಕೊನೆಗೆ ದುಃಖ ಅನಂತ ನೋಡಾ" ಎನ್ನುವ ಹಾಡು ಅರ್ಥಗರ್ಭಿತವಾಗಿದ್ದು ಪರಿಣಾಮಕಾರಿಯಾಗಿತ್ತು.

ಲಕ್ಷ್ಮಣ ಮಾಸ್ತರರ ಸಂಗೀತಾಸಕ್ತಿ, ಹಾಡುಗಾರಿಕೆ ಮನೆಯಿಂದಲೇ ಬಂದುದು ತಂದೆ ತಾಯಿ ಸಂಗೀತ ಹಾಗೂ ರಂಗಭೂಮಿ ಕಲೆಯ ಹಿನ್ನಲೆಯುಳ್ಳವರು. ಆ ಕಾಲದಲ್ಲಿಯೇ ತಾಯಿ ಚಂದ್ರವ್ವ ರಂಗಭೂಮಿಯನ್ನೇರಿದವರು. ಆ ಹಿನ್ನಲೆ, ಆ ಪ್ರಭಾವ ಸಹಜವಾಗಿ ಲಕ್ಷ್ಮಣ ಮಾಸ್ತರರಲ್ಲಿ ಮೂಡಿ ಬಂದಿದೆ. ಬಾಲ್ಯದಲ್ಲಿ ಹಿರೇಮಠದ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾಗ ಮಹಾನವಮಿ ಹಬ್ಬ ಬಂದಿತೆಂದರೆ ಲಕ್ಷ್ಮಣ ಅವರ ಮಹಾನವಮಿ ಹಾಡುಗಳು ಸಿದ್ಧವಾಗಿರುತ್ತಿದ್ದವು. ಶಾಲೆಯಲ್ಲಿ ದಾಸರ ಶರಣರ ಹಾಡು. ಇವರಿಂದಲೇ ನಿತ್ಯ ಶಾಲೆಯ ಪ್ರಾರ್ಥನಾ ಹಾಡುಕೂಡ.

ಲಕ್ಷ್ಮಣ ಮಾಸ್ತರರನ್ನು ಊರಿನ ನಾಟಕಗಳಲ್ಲಿ ಹಾಡಿಗಾಗಿಯೇ ಪ್ರಾತಿನಿಧ್ಯ ನೀಡಿ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಸಂಗೀತ ಪ್ರಧಾನ ನಾಟಕಗಳಲ್ಲಿ ಮಾಸ್ತರರು ಹಾಡುತ್ತ ನಿಂತರೆ ಪ್ರೇಕ್ಷಕರು ಸ್ಥಬ್ಧರಾಗಿ ಕುಳಿತು ಕೇಳುತ್ತ ಸಂತೋಷ ಪಡುತ್ತಿದ್ದರು.

ಗೀಗಿ ಪದ, ಲಾವಣಿ, ಭಜನೆ ಹಾಡುಗಳಿಂದ ಆಗ ನೆಹರು ಯುವಕ ಕೇಂದ್ರದಿಂದ ಪ್ರಶಸ್ತಿ ಪಡೆದ ಮಾಸ್ತರರು ಕೊಪ್ಪಳ, ರಾಯಚೂರು, ಬೀದರ, ಗುಲಬರ್ಗಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾನ್ಯ ಎಂ. ಪಿ. ಪ್ರಕಾಶ ಅವರಿಂದ ಪ್ರಶಸ್ತಿ ಪಡೆದ ಮಾಸ್ತರರನ್ನು ನಾಡಿನ ಜನ ಗೌರವಿಸಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ (೨೦೦೭ರಲ್ಲಿ) ಸನ್ಮಾನಿಸಲಾಗಿದೆ. ಕೊಪ್ಪಳದಲ್ಲಿ ಜರುಗಿದ ಜಾನಪದ ಮೇಳ ೨೦೦೫, ಸಂದರ್ಭದಲ್ಲಿ ನಾಡಿನ ಶ್ರೇಷ್ಠ ಹಿರಿಯ ಯಕ್ಷಗಾನ ಕಲಾವಿದರು, ಜಾನಪದ ಅಕಾಡೆಮಿ ಅಧ್ಯಕ್ಷರೂ ಆದ ಕೆರೆಮನೆ ಶಂಭು ಹೆಗಡೆಯವರು ಸನ್ಮಾನಿಸಿ ಗೌರವಿಸಿದ್ದಾರೆ. ಬೆಂಗಳೂರಿನಲ್ಲಿ ಜಾನಪದ ಅಕಾಡೆಮಿಯ ಬೆಳ್ಳಿಹಬ್ಬದ ಸಂದರ್ಭದಲ್ಲಿ (೨೦೦೮ ರಲ್ಲಿ) ಸನ್ಮಾನಿಸಲಾಗಿದೆ.

ಲಕ್ಷ್ಮಣ ಮಾಸ್ತರ ತಮ್ಮ ದೀರ್ಘ ಬದುಕಿನಲಿ, ಸುಖ-ದುಃಖಗಳಲಿ ಮಾನ-ಅಪಮಾನಗಳಲಿ, ನೋವು-ನಲಿವುಗಳಲಿ ಹಾಡುತ್ತಲೇ ಬಂದಿದ್ದಾರೆ. ಜನರ ಸ್ಫೂರ್ತಿ ಅವರನ್ನು ಬೆಳೆಸುತ್ತ ಸದಾ ಹಾಡುವಂತೆ ಮಾಡಿದೆ. ಈಗಲೂ ಹಾಡುತ್ತಿದ್ದಾರೆ. ಅವರಲ್ಲಿ ಹಾಡಿನ ಸಂಗ್ರಹ ಹೆಚ್ಚು ಇರಲಿಕ್ಕಿಲ್ಲ. ಇದ್ದ ಹಾಡುಗಳು ಯಾವುದಕ್ಕೂ ಕಡಿಮೆ ಇಲ್ಲ. ಅವರ ಹಾಡಿನ ಒರತಿ ಬತ್ತಿಲ್ಲ. ಒರತೆಯ ನೀರಿನ ಝುರಿಯಂತೆ ಸಣ್ಣಗೆ ಹರಿಯುತ್ತಿದೆ.

ಲಕ್ಷ್ಮಣ ಮಾಸ್ತರರು ಜನ್ಮ ಪಡೆದುದು ಕೊಪ್ಪಳ ಜಿಲ್ಲೆಯ ಬಿಸರಳ್ಳಿ ಗ್ರಾಮದ ರಾಮಪ್ಪ ಚಂದ್ರವ್ವ ದಂಪತಿಗಳ ಮಗನಾಗಿ ೪-೬-೧೯೪೨ರಲ್ಲಿ. ಪ್ರಾರಂಭದಲ್ಲಿ ಊರಿನ ವೇದಮೂರ್ತಿ ಶ್ರೀ ವೀರಭದ್ರಯ್ಯ ಹಿರೇಮಠ ಅವರ ಖಾನಗಿ ಶಾಲೆಯಲ್ಲಿ ೪ನೇ ತರಗತಿಯವರೆಗೆ ಓದಿ ನಂತರ ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಹೈಸ್ಕೂಲಿನಲ್ಲಿ ೫ನೇ ತರಗತಿಗೆ ಸೇರಿ HSC ಪಾಸಾಗಿ ಮುಂದೆ ಶಿಕ್ಷಕ ತರಬೇತಿ ಕೇಂದ್ರದಿಂದ TCH ಮುಗಿಸಿ ಶಿಕ್ಷಕ ಹುದ್ದೆಗೆ ಸೇರಿಕೊಂಡರು. ಅಂದಿನಿಂದ ಲಕ್ಷ್ಮಣ ವಾಲ್ಮೀಕಿ ಅವರು ಲಕ್ಷ್ಮಣ

ಮಾಸ್ತರರಾದರು. ಕಲಿಸುವುದು, ಕಲಿಯುವುದು ಸಾಗಿತು. ಹಂತ ಹಂತವಾಗಿ ಬಿ.ಎ. ಬಿ.ಈಡಿ ಮುಗಿಸಿಕೊಂಡು ಹೈಸ್ಕೂಲ ಮೇಷ್ಟ ಆದರು. ಇದೀಗ ನಿವೃತ್ತಿ ಹೊಂದಿ ಕೊಪ್ಪಳ ಜಿಲ್ಲೆಯ ಬಟಗೇರಿಯಲ್ಲಿ ವಾಸಿಸುತ್ತಿದ್ದಾರೆ.

ಲಕ್ಷ್ಮಣ ಅವರ ಬದುಕು ಬಾಲ್ಯದಿಂದ ಕಷ್ಟದಲ್ಲಿಯೇ ಸಾಗಿ ಬಂದಿದೆ. ಬಡತನ, ಮನೆಯ ಹಲವಾರು ಸಮಸ್ಯೆಗಳು ಅವರನ್ನು ಪರೀಕ್ಷಿಸುತ್ತಲೇ ಬಂದಿವೆ. ಅವೆಲ್ಲವುಗಳನ್ನು ಎದುರಿಸುತ್ತ ಅವರು ಬೆಳೆದಿದ್ದಾರೆ. ಕಷ್ಟಕಾರ್ಪಣ್ಯಗಳ ಕುಲುಮೆಯಲ್ಲಿ ಬೆಂದ ಲಕ್ಷ್ಮಣ ಅವರಿಗೆ ಬಡತನ, ಯಾತನೆ, ಕಷ್ಟದ ಅರಿವಿದೆ. ಅವರ ಬದುಕಿನ ಯಶಸ್ಸು ಜನರನ್ನು ಪ್ರೀತಿಸುವುದು, ಗೌರವಿಸುವುದಾಗಿದೆ. ಇಂದಿಗೂ ಅದೇ ವಿನಯ, ಸೌಜನ್ಯ, ಉಪಕಾರ ಮಾಡಿದವರನ್ನೆಂದೂ ಮರೆತಿಲ್ಲ. ಅಕ್ಷರ ಕಲಿಸಿದ ಗುರುಗಳನ್ನು ಸ್ಮರಿಸದ ದಿನವಿಲ್ಲ. ಈ ಎಲ್ಲ ಗುಣಗಳು ಅವರ ಈಗಿನ ನೆಮ್ಮದಿಯ ಬದುಕಿಗೆ ಕಾರಣವಾಗಿವೆ.

ಲಕ್ಷ್ಮಣ ಮಾಸ್ತರ ಬಟಗೇರಿಯ ಲಲಿತಾ ಅವರನ್ನು ಪತ್ನಿಯನ್ನಾಗಿ ಸ್ವೀಕರಿಸಿ ಬಟಗೇರಿಯಲ್ಲಿಯೇ ನೆಲೆನಿಂತರು. ಈ ದಂಪತಿಗಳಿಗೆ ೮ ಜನ ಮಕ್ಕಳು. (೫ ಜನ ಹೆಣ್ಣು, ೩ ಜನ ಗಂಡು) ಮಕ್ಕಳೆಲ್ಲ ವಿದ್ಯಾವಂತರು, ಪದವೀಧರರು. ಅವರೆಲ್ಲರು ತಮ್ಮ ತಮ್ಮ ದುಡಿಮೆಯಲ್ಲಿ ನೆಮ್ಮದಿಯಾಗಿದ್ದಾರೆ.

ನಿವೃತ್ತಿಯ ಲಕ್ಷ್ಮಣ ಮಾಸ್ತರ ತಮ್ಮ ದೀರ್ಘ ಬದುಕಿನ ಪುಟಗಳನ್ನು ತಿರುಗಿಸುತ್ತ ಸುಖ-ದುಃಖ ಮೆಲುಕು ಹಾಕುತ್ತ ಕಟ್ಟೆಯಲಿ ಕುಳಿತ ಅಲ್ಲೇ ಗುನುಗುಡುತ್ತಿದ್ದಾಗ ಅವರಿಗೆ ಗೊತ್ತಾಗದಂತೆ ಹಾಡುಹೊರಹೊಮ್ಮಿರುತ್ತದೆ. ಈ ಹಳ್ಳಿಯ ಹಕ್ಕಿ ಈಗಲೂ ಹಾಡುತ್ತಲೇ ಇದೆ.

**ಲಕ್ಷ್ಮಣ ಮಾಸ್ತರ ಬಿಸರಳ್ಳಿ**
**ಅಂಚೆ : ಬಟಗೇರಿ**
**ತಾ : ಜಿ : ಕೊಪ್ಪಳ**

## ಈಶ್ವರಪ್ಪ ಹಡಪದ

ಕೊಪ್ಪಳ ಜಿಲ್ಲೆಯ ಬಟಗೇರಿ ಗ್ರಾಮದ ದೊಡ್ಡಬಸಪ್ಪ ಹಡಪದ ಶ್ರೀಮತಿ ಮಲ್ಲಮ್ಮ ದಂಪತಿಗಳ ಎರಡನೇ ಮಗನಾಗಿ ೧-೧-೧೯೩೭ರಲ್ಲಿ ಜನ್ಮ ಪಡೆದ ಈಶ್ವರಪ್ಪ ಓದಿದ್ದು ನಾಲ್ಕನೇ ತರಗತಿಯವರೆಗೆ, ಓದಿನ ಜೊತೆ ಜೊತೆನೇ ಹಾಡುವ ಕಲೆ ರೂಢಿಸಿಕೊಂಡ ಈಶ್ವರಪ್ಪ ಮಧುರ ಕಂಠ ಪಡೆದಿದ್ದರು. ಬಾಲ್ಯದಲ್ಲಿಯೇ ಶರಣರ, ದಾಸರ ಹಾಡುಗಳನ್ನು ಹಾಡಿ ಹಿರಿಯರ ಮೆಚ್ಚಿಗೆ ಪಡೆದ ಈಶ್ವರಪ್ಪನನ್ನು ಸಂಗೀತಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟವರು ಊರಿನ ಗುರು ಹಿರಿಯರು. ಗುರುಬಸವ ಬನ್ನಿಮಠ ಹಾಗೂ ನಾಗಪ್ಪ ಮಾಸ್ತರ ಸಂಗೀತ ಗುರುಗಳಾಗಿ ಮಾರ್ಗದರ್ಶನ ಮಾಡಿದರು. ಹಾರ್ಮೋನಿಯಂ ಅಭ್ಯಾಸ ಮುಗಿದ ಮೇಲೆ ಊರಿನ ಅನೇಕ ಉತ್ಸವಗಳಲ್ಲಿ, ಮಠ ಮಂದಿರಗಳಲ್ಲಿ ಸಂಗೀತ ಸೇವೆ ಸಾಗಿ ಬಂದಿತು.

ಊರಿನ ಭಜನಾ ಮಂಡಳಿಯ ಮುಂದಾಳತ್ವ ಈಶ್ವರಪ್ಪನವರದೇ ಆಗಿರುತ್ತಿತ್ತು. ಶ್ರಾವಣ ಮಾಸದಲ್ಲಿ ಜಾತ್ರಾ ಉತ್ಸವಗಳಲ್ಲಾಗಲಿ ಇವರ ಭಜನಾ ತಂಡದ ಸೇವೆ ಇರಲೇ ಬೇಕು. ಕೊಪ್ಪಳ ಗವಿಸಿದ್ಧೇಶ್ವರ, ಅನ್ನದಾನೇಶ್ವರ ದೇವಸ್ಥಾನ ಮುಂಡರಗಿ, ವೀರಭದ್ರ ದೇವಸ್ಥಾನಗಳ ಜಾತ್ರಾ ಉತ್ಸವಗಳಲ್ಲಿ ಈಶ್ವರಪ್ಪನವರ ಭಜನಾ ತಂಡ ಪ್ರಮುಖವಾಗಿರುತ್ತಿತ್ತು. ಈಶ್ವರಪ್ಪನವರ ಭಜನಾ ಹಾಡಿನ ಸಂಗ್ರಹಕ್ಕೆ ಲೆಕ್ಕವಿಲ್ಲ. ಅನೇಕ ತತ್ವಪದಕಾರರ ಅರ್ಥಗರ್ಭಿತ ಹಾಡುಗಳನ್ನು ಭಜನೆಗಳವಡಿಸಿಕೊಂಡು ಜನ ತಲೆದೂಗುವಂತೆ ಈಶ್ವರಪ್ಪ ಹಾಡುತ್ತಿದ್ದರು.

ಈಶ್ವರಪ್ಪ ಬಯಲಾಟದ ಉತ್ತಮ ಕಲಾವಿದರೂ ಹೌದು. ಕೆಲವು ಸಲ ಇಡೀ ಬಯಲಾಟದ ಜವಾಬ್ದಾರಿ ನಿಭಾಯಿಸುತ್ತ ನಿರ್ದೇಶಕರಾಗಿ ಬಯಲಾಟಗಳನ್ನು ಪ್ರದರ್ಶಿಸಿದ್ದುಂಟು. ಸತ್ಯಹರಿಶ್ಚಂದ್ರ, ಗಿರಿಜಾಕಲ್ಯಾಣ, ಚಂದ್ರಹಾಸ, ರತಿಕಲ್ಯಾಣ ಸತ್ಯವಾನ ಸಾವಿತ್ರಿ, ಬಾಲಚಂದ್ರ ಮುಂತಾದ ಬಯಲಾಟಗಳಲ್ಲಿ ಅಭಿನಯಿಸಿದ್ದಲ್ಲದೆ ರಾಮಸಾಗರ, ಶಿವಪುರ, ಅಳವಂಡಿ, ಮತ್ತೂರ ಹೀಗೆ ಸುತ್ತಲಿನ ಹಳ್ಳಿಗಳಲ್ಲಿ ಬಯಲಾಟದಲ್ಲಿ ಅಭಿನಯಿಸಿ ಸೈ ಅನಿಸಿಕೊಂಡುಬಂದ ಕಲಾವಿದರು.

೭೧ರ ಹರೆಯದ ಈಶ್ವರಪ್ಪ ಹಡಪದ ಇಂದಿಗೂ ದಣಿವರಿಯದಂತೆ ಆಸಕ್ತಿಯಲ್ಲಿ ರಂಗಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಊರಲ್ಲಿ ಬಯಲಾಟ, ಭಜನೆ, ಸಂಗೀತ ಯಾವುದೇ ಕಾರ್ಯಕ್ರಮ ಜರುಗಿದರೂ ಹಡಪದ ಅವರು ಅಲ್ಲಿ ಇದ್ದೇ ಇರುತ್ತಾರೆ. ಊರಿನ ಜನಮನ ಸೆಳೆದ ಜನಪದ ಈ ಕಲಾವಿದ ಅನೇಕ ತರುಣರನ್ನು ಕಲಾವಿದರನ್ನಾಗಿ ತಯಾರಿಸಿದ್ದಾರೆ.

ಸುತ್ತಲು ಹಳ್ಳಿಗಳಲ್ಲಿ ಬಯಲಾಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಸನ್ಮಾನ ಪಡೆದ ಈಶ್ವರಪ್ಪ ಹಡಪದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಾನಪದ ಹಾಡುಗಾರಿಕೆಯಲ್ಲಿ ಭಾಗವಹಿಸಿದ್ದುಂಟು. ಆನೆಗೊಂದೆ ಉತ್ಸವ, ಹೂವಿನಹಡಗಲಿ ರಂಗ ಮಲ್ಲಿಗೆ, ಇಟಗಿ ಉತ್ಸವಗಳಲ್ಲಿ ಭಾಗವಹಿಸಿದ್ದುಂಟು. ಲಾವಣಿ ಹಾಡುಗಳಲ್ಲಿಯೂ ಈಶ್ವರಪ್ಪ ಆಕರ್ಷಿಸುತ್ತಾರೆ. ಒಟ್ಟಾರೆ ಬಟಗೇರಿಯ ಜನಮನ ಗಳಿಸಿದ ಜನಪದ ಕಲಾವಿದ ಊರಿನ ಸಾಂಸ್ಕೃತಿಕ ಚೇತನ.

ಈಶ್ವರಪ್ಪ ಹಡಪದ ಜಾನಪದ ರಂಗಭೂಮಿಗಾಗಿ ದುಡಿದರು ಜಾನಪದ ಹಾಡುಗಳನ್ನು ವಿಶೇಷವಾಗಿ ತತ್ವಪದಗಳನ್ನು ಹಾಡಿ ಅನೇಕ ಸಹೃದಯಗಳ ಮೇಲೆ ಬೆಳಕು ಹರಡಿದರು. ಅವರ ಕಲಾಪ್ರವೃತ್ತಿ, ಅವರ ಅಭಿರುಚಿ, ಅವರ ಆಸಕ್ತಿ ಇಂದಿಗೂ ಹಾಗೇ ಇದೆ. ಊರಿನಲ್ಲಿ ಜರುಗುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಕಲಾ ಸಂಸ್ಕೃತಿಯನ್ನು ಹರಡುತ್ತ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ಬದುಕಿನುದ್ದಕ್ಕೂ ಅವರ ಕಲಾ ಕ್ಷೇತ್ರ ವಿಸ್ತರಿಸಿ ಕೊಳ್ಳುತ್ತ ಬಂದಿದೆ.

ಶ್ರೀಮತಿ ಅನಸೂಯಾ ಅವರನ್ನು ಪತ್ನಿಯನ್ನಾಗಿ ಸ್ವೀಕರಿಸಿ ನೆಮ್ಮದಿಯ ಬದುಕಿನೊಂದಿಗೆ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಹಿರಿಯಮಗ ನೀಲಪ್ಪ ತಂದೆಯಂತೆ ಸಂಗೀತದಲ್ಲಿ ಆಸಕ್ತಿ ಹೊಂದಿ ಬಯಲಾಟಗಳಲ್ಲಿ ಮೃದಂಗ ನುಡಿಸುತ್ತಿದ್ದಾನೆ. ಈಶ್ವರಪ್ಪನವರಿಗೆ ಖುಷಿ ತನ್ನ ಮನೆತನದಲ್ಲಿ ಒಬ್ಬರಿಲ್ಲ ಒಬ್ಬರು ಸಂಗೀತ, ಕಲೆ ಸಾಹಿತ್ಯ ಆಸಕ್ತಿಯುಳ್ಳವರು ಬರುತ್ತಿದ್ದಾರೆಂದು. ಈ ವಿಷಯದಲ್ಲಿ ಅವರನ್ನು ಮಾತನಾಡಿಸಿದಾಗ "ಗುರುಗಳೆ ನಮ್ಮ ಮನೆತನಕ್ಕೆ ಕಲೆ ದೈವದತ್ತವಾಗಿ ಬಂದಿದೆ ಯಾರಾದರೊಬ್ಬರು ಅದರಲ್ಲಿ ತೊಡಗಿಸಿಕೊಂಡಿರುವುದು ನನಗೆ ಸಂತೋಷವನ್ನುಂಟು ಮಾಡಿದೆ" ಎಂದು ಅಭಿಮಾನದಿಂದ, ಸಂತಸದಿಂದ ನುಡಿಯುತ್ತಾರೆ. ಹಾಗೆ ಹೇಳುವಾಗ ಅವರ ಮುಖದಲ್ಲಿ ಆನಂದದ ಛಾಯೆ, ತೃಪ್ತಿ ಹೊಂದಿದ ಮನಸ್ಸಿನ ಭಾವನೆಗಳು ಕಾಣಿಸಿಕೊಳ್ಳುತ್ತವೆ. ವೃತ್ತಿಯಿಂದ ಹಡಪದ ಕೆಲಸ ಮಾಡುತ್ತ ಇಷ್ಟೊಂದು ಜಾನಪದ ಕಲೆಯಲ್ಲಿ ಸಾಧಿಸಿದ್ದು, ಬೆಳೆದಿದ್ದು ಕಡಿಮೆ ಏನಲ್ಲ.

ಈಶ್ವರಪ್ಪ ಹಡಪದ
ಅಂಚೆ : ಬಟಗೇರಿ ತಾ : ಜಿ : ಕೊಪ್ಪಳ

## ಹನುಮಂತಪ್ಪ ಗೊಂದಲಿಗ

ಹಳ್ಳಿಯ ಚಾವಡಿಯಲ್ಲೊ, ಗುಡಿಗುಂಡಾರದ ಆವರಣದಲ್ಲೊ ಇಲ್ಲವೆ ಯಾರದೋ ಮನೆಯ ಬಯಲಿನಲ್ಲಿಯೋ ರಾಜಮಹಾರಜರ ವೀರ ಕಥೆಯನ್ನೋ ಅಥವಾ ರೇಣುಕಾ ಎಲ್ಲಮ್ಮನಂಥ ಪುರಾಣ ಕಥಯನ್ನೋ ತಾಳ ತುಂತಿಣ ಸಾಂಬಾಳದೊಂದಿಗೆ ಈ ಗೊಂದಲಿಗ ಕಲಾವಿದರು ಹಾಡುತ್ತ ನಿಂತರೆ ಕೇಳುಗರೆಲ್ಲ ಆ ಕಥಾಲೋಕದಲ್ಲಿ ತೇಲುತ್ತಿರುತ್ತಾರೆ. ಇಡೀ ಕಥೆ ಕಲಾವಿದನ ನುಡಿಯಲ್ಲಿ ಅನಾವರಣಗೊಳ್ಳುತ್ತ ಸಾಗಿದಾಗ ಕೇಳುಗರು ಮೈಮರೆತು ಗಂಟೆಗಟ್ಟಲೆ ನಿಲ್ಲುತ್ತಾರೆ.

ಬಿಳಿ ಅಂಗಿ ಶುಭ್ರ ಬಿಳಿಧೋತರ ಮೇಲೊಂದು ಕರಿಕೋಟು ಹಣಗೆ ಭಸ್ಮ ಕುಂಕುಮ ಕೊರಳಲ್ಲಿ ಕವಡೆ ಸರ ಹಾಕಿಕೊಂಡು ಹಳ್ಳಿಗಳಿಗೆ ಬರುವ ಈ ಕಲಾವಿದರಲ್ಲಿ ಒಬ್ಬ ಸಾಂಬಾಳ ಮತ್ತೊಬ್ಬ ತುಂತಣಿ ಮಗದೊಬ್ಬ ತ್ಳಾಳ. ಹಿರಿಯ ಕಲಾವಿದರಬ್ಬರು ತಾಳ ಹಾಕುತ್ತ ಹಾಡಿನಲ್ಲಿ ಕಥೆ ಪ್ರಾರಂಭಿಸಿದರೆ ಉಳಿದಿಬ್ಬರು ಲಯಬದ್ಧವಾಗಿ ತಾಳವಾದ್ಯ ನುಡಿಸುತ್ತ ದನಿಗೂಡಿ ಹಿಮ್ಮೇಳದಲ್ಲಿ ಹಾಡುತ್ತಾರೆ. . ಕೇಳಬೇಕು ಕಥೆ ಮುಗಿಯುವವರೆಗೂ ಕೇಳಬೇಕೆನಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇವರು ಜಾನಪದ ಲೋಕದ ಕಣ್ಮಣಿಗಳು.

ಇಂದು ಈ ಕಲಾವಿದರ ಸಂಖ್ಯೆ ತೀರ ಕಡಿಮೆಯಾಗುತ್ತ ಈ ಜನಾಂಗ ಬೇರೆ ಬೇರೆ ಉದ್ಯೋಗ ಅರಸಿಕೊಂಡು ಹೊರಟಿದ್ದಾರೆ. ಈ ಆಧುನಿಕ ಜಗತ್ತಿನಲ್ಲಿ ಟಿ. ವಿ. ಚಾನಲ್‌ಗಳ ಹಾವಳಿಯಲ್ಲಿ ಈ ಕಲಾವಿದರು ನಲುಗಿದ್ದಾರೆ. ಕಾಲ ಎಲ್ಲವನ್ನೂ ತಳ್ಳಿಕೊಂಡು ಸಾಗುತ್ತಿದೆ. ಜಾಗತೀಕರಣದ ಪ್ರಭಾವದಲ್ಲಿ ನಮ್ಮ ಕಲೆ, ಸಂಸ್ಕೃತಿ, ಪರಂಪರೆ ಮಾಯವಾಗುತ್ತಿವೆ. ಇಂಥ ಸಮಯದಲ್ಲಿ ನಮ್ಮ ಗೊಂದಲಿಗರು ಅನಿವಾರ್ಯವಾಗಿ ಬೇರೆ ಉದ್ಯೋಗ ಹುಡಿಕಿಕೊಂಡು ಸಾಗಿದ್ದಾರೆ.

ಕೊಪ್ಪಳ ಜಿಲ್ಲೆಯ ಚಿಕ್ಕ ಸಿಂದೋಗಿ ಗ್ರಾಮದಲ್ಲಿ ಗೊಂದಲಿಗರ ಕುಟುಂಬಗಳು ಇವೆ. ವಲಸೆಬಂದ ಈ ಕಲಾವಿದರು ಬಹಳ ವರ್ಷಗಳಿಂದ ಇಲ್ಲಿ ನೆಲೆ ನಿಂತಿದ್ದಾರೆ. ಅಂಥ ಕುಟುಂಬದ ಹನುಮಪ್ಪ ಗೊಂದಲಿಗ ಒಳ್ಳೆಯ ಕಲಾವಿದ. ತನ್ನ ೧೨ನೇ ವಯಸ್ಸಿನಲ್ಲಿಯೇ ಈ ಕಲೆಯಲ್ಲಿ ತೊಡಗಿಸಿಕೊಂಡು ಅದನ್ನೇ ಉದ್ಯೋಗ ಮಾಡಿಕೊಂಡು ಬಂದಿದ್ದಾನೆ. ಇತ್ತೀಚಿಗೆ ಹಳ್ಳಿ ತೊರೆದು ಕೊಪ್ಪಳಕ್ಕೆ ಬಂದು ಊರ ಹೊರಗೆ ಜನತಾ ಮನೆಯೊಂದನ್ನು ಪಡೆದುಕೊಂಡು ವಾಸವಾಗಿದ್ದಾನೆ.

ಮೈಲಾರಪ್ಪ, ನಾಗಮ್ಮ ದಂಪತಿಗಳ ಎರಡನೇ ಮಗನಾಗಿ ಜನ್ಮ ಪಡೆದ ಹನುಮಂತಪ್ಪನಿಗೆ ಶಾಲೆ ಬಲುದೂರ. ನಾಲ್ಕು ಜನ ಸಹೋದರರು, ಇಬ್ಬರು ಸಹೋದರಿಯರು. ಸಹೋದರರೆಲ್ಲರಿಗೂ ಇದೇ ಉದ್ಯೋಗವಾಗಿದ್ದರೂ ಈಗೀಗ ಅದರಿಂದ ದೂರಾಗುತ್ತ ಬೇರೆ ಬೇರೆ ಉದ್ಯೋಗ ಹುಡಿಕಿಕೊಳ್ಳುತ್ತಿದ್ದಾರೆ. ಈ ಕಲೆಯಿಂದ ತಮ್ಮ ಜನರು ದೂರಾಗುತ್ತಿರುವುದು ತನಗೂ ಬೇಸರ ತಂದಿದೆ ಎನ್ನುತ್ತಾನೆ ಹನುಮಪ್ಪ.

ಹನುಮಪ್ಪನಿಗೆ ಈ ಕಲೆಯಲ್ಲಿ ತಂದೆಯೇ ಗುರು. ಅಕ್ಷರ ಅಭ್ಯಾಸವಿಲ್ಲದಿದ್ದರೂ ಹಾಡಿನ ಸಂಗ್ರಹ ಅಪಾರ. ಒಂದೊಂದು ನೀಳ್ಗತೆಯ ಹಾಡು ಗಂಟೆಗಟ್ಟಲೆ ಸಾಗುತ್ತದೆ. ಇಡೀ ಕಥನ ಕಾವ್ಯ ಬಾಯಿಪಾಠ ಮಾಡುವುದು, ಅಂಥ ಅನೇಕ ಹಾಡುಗಳನ್ನು ನೆನಪಿನಾಳದಲ್ಲಿ ಹುದುಗಿರಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಹಳ್ಳಿ ಹಳ್ಳಿಗೆ ಹೋಗಿ ಬಿಕ್ಷಾಟನೆ ಮಾಡಿಕೊಂಡು ಬರುತ್ತಿದ್ದ ಹನುಮಪ್ಪನಿಗೆ ಇದೊಂದು ಕಲೆ ಎಂದರ್ಥವಾದ ಮೇಲೆ ಅದನ್ನು ಕ್ರಮಬದ್ಧವಾಗಿ ಅಳವಡಿಸಿಕೊಂಡು ತಮ್ಮಂದಿರಿಗೆ ತರಬೇತಿ ನೀಡಿ ಜನಪ್ರಿಯ ಕಲಾವಿದನಾಗಿದ್ದಾನೆ.

೬೦ರ ಹರೆಯದ ಹನುಮಪ್ಪ ಈಗಲೂ ಹಾಡಿನಲ್ಲಿ ಆಸಕ್ತಿ ಕಳೆದುಕೊಂಡಿಲ್ಲ. ಆತನ ಹಾಡುಗಳು ವೈವಿಧ್ಯಮಯ ಕಥೆಗಳಿಂದ ಜನರನ್ನು ಆಕರ್ಷಿಸುತ್ತವೆ. ಅವು ಧಾರ್ಮಿಕವಾಗಿರಬಹುದು, ಐತಿಹಾಸಿಕವಾಗಿರಬಹುದು ಅವೆಲ್ಲ ಸಾಂಸ್ಕೃತಿ ಪರಂಪರೆ ಯನ್ನು ಸೂಚಿಸುತ್ತವೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮುಂತಾದವರ ಮನೆಗಳಲ್ಲಿ, ಸಂಪ್ರದಾಯದ ಮದುವೆ, ಮುಂಜವಿ, ಸೀಮಂತ ಮೊದಲಾದ ಶುಭ ಕಾರ್ಯಗಳಲ್ಲಿ ದೇವಿಯ ಗೊಂದಲ ಹಾಕುವ ಪದ್ಧತಿ ಇದ್ದಾಗ ಹನುಮಪ್ಪನಿಗೆ ಆಮಂತ್ರಣ ಬರುತ್ತದೆ. ಮನೆಮಂದಿ ಭಯ ಭಕ್ತಿಯಿಂದ ಮನೆಯ ಮುಂದೆ ಮಂಟಪ ಹಾಕಿ, ತಳಿರು, ತೋರಣ ಕಟ್ಟಿ ರಂಗ ಹೊಯ್ದು ದೇವಿಯ ಕಲಶವನ್ನು ಪ್ರತಿಷ್ಠಾಪನೆ ಮಾಡಿ ಸಾಂಬಾಳ ತುಂತಣಿಗಳಿಗೆ ಪೂಜೆ ಸಲ್ಲಿಸಿ ಅತ್ಯಂತ ಶ್ರದ್ಧೆ ತೋರುತ್ತಾರೆ. ಆಚರಣೆಯಲ್ಲಿ ಗೊಂದಲಿಗನ ಪಾತ್ರವೂ ಪ್ರಮುಖವಾಗಿರುತ್ತದೆ. ಬೆಳಗಾಗುವವರೆಗೆ ಹಾಡುವ ಕಥನ ಕಾವ್ಯಗಳು ವೈವಿಧ್ಯಮಯವಾಗಿರುತ್ತವೆ.

ಹನುಮಪ್ಪ ಹಾಡುಗಳನ್ನು ಕುರಿತು, ಕಲೆಯನ್ನು ಕುರಿತು ನಾಡಿನ ಪ್ರಮುಖ ಪತ್ರಿಕೆಗಳು ಬರೆದಿವೆ. ತರಂಗ, ಪ್ರಜಾವಾಣಿ ಇಡೀ ವೃತ್ತಿಯ ಬದುಕಿನ ಮೇಲೆ ಬೆಳಕು ಚೆಲ್ಲಿವೆ. ಜಾನಪದ ಜಾತ್ರೆ, ಕೊಪ್ಪಳ ಜಿಲ್ಲಾ ಜಾನಪದ ಉತ್ಸವಗಳಲ್ಲಿ ಈ ಕಲಾವಿದನಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಗಿದೆ.

ಹನುಮಪ್ಪ ತನ್ನ ತಂಡದೊಂದಿಗೆ ನಾಡಿನ ಪ್ರಮುಖ ಜಿಲ್ಲೆಗಳಲ್ಲೆಲ್ಲ ಕಾರ್ಯಕ್ರಮ ನೀಡಿದ್ದಾನೆ. ಬೆಂಗಳೂರು, ಶಿವಮೊಗ್ಗ ಶಿಕಾರಿಪುರ, ಬಳ್ಳಾರಿ, ಧಾರವಾಡ ಜಿಲ್ಲೆಯಲ್ಲೆಲ್ಲ ಸುತ್ತಿದ್ದಾನೆ. ಸಧ್ಯ ಕೊಪ್ಪಳದಲ್ಲಿ ನೆಲೆನಿಂತಿರುವ ಈ ಕಲಾವಿದ ಮರಿಯಮ್ಮನನ್ನು ಬಾಳಸಂಗಾತಿಯನ್ನಾಗಿ ಪಡೆದು ಆಕೆಯ ಸಹಾಯ, ಸಹಕಾರದಿಂದ ತನ್ನ ಕಾಯಕ ವೃತ್ತಿಯಲ್ಲಿ ಬೆಳೆದಿದ್ದಾನೆ. ಈ ದಂಪತಿಗಳಿಗೆ ೩ ಜನ ಹೆಣ್ಣು ಮಕ್ಕಳು ೩ ಜನ ಗಂಡು ಮಕ್ಕಳು. ಗಂಡು ಮಕ್ಕಳನ್ನು ತನ್ನ ಜೊತೆ ತೊಡಗಿಸಿಕೊಂಡು ಅಲೆಯುತ್ತಿದ್ದಾನೆ. ಹೆಣ್ಣುಮಕ್ಕಳು ಬಾಂಡೆ ಬುಟ್ಟಿ ಹೊತ್ತು ಊರೂರು ಅಲೆದು ಮಾರಾಟ ಮಾಡುತ್ತಾರೆ. ಒಟ್ಟಿನಲ್ಲಿ ಅಲೆಮಾರಿನ ಈ ಜನಾಂಗಕ್ಕೆ ಸರಕಾರದಿಂದ, ಸಂಘ ಸಂಸ್ಥೆಗಳಿಂದ ಸಹಾಯ-ಸಹಕಾರ ಮುಖ್ಯವಾಗಿದೆ.

ಹನುಮಂತಪ್ಪ ಗೊಂದಲಿಗ
ಭಾಗ್ಯನಗರ ರೋಡ
ಕೊಪ್ಪಳ

# ಶಿವಯ್ಯ ಮರುಳಸಿದ್ದೇಶ್ವರಮಠ

ಶಿವಯ್ಯ ಮರುಳಸಿದ್ಧೇಶ್ವರಮಠ ಇವರು ಭಜನೆ ಹಾಡುಗಳಿಂದ ಗುರುತಿಸಿಕೊಂಡ ಜನಪ್ರೀಯ ಹಾಡುಗಾರ. ಕೊಪ್ಪಳ ತಾಲೂಕಿನ ಬಿಸರಳ್ಳಿಯ ಶಿವಯ್ಯ ತನ್ನದೇ ಆದ ಭಜನಾ ತಂಡಕಟ್ಟಿಕೊಂಡು ಆ ತಂಡದಿಂದ ನಿರಂತರ ಸೇವೆ ಸಲ್ಲಿಸುತ್ತ ಮರುಳಸಿದ್ಧನ ಆರಾಧನೆಗೈಯುತ್ತ ಊರಿನ ಕೇರಿಯ ಜನರ ಮೆಚ್ಚುಗೆಗೆ ಪಾತ್ರನಾದ ಕಲಾವಿದ.

ಭಜನೆ ಹಳ್ಳಿಗರ ಜೀವನಾಡಿ. ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಕೇರಿ ಕೇರಿಗಳಲ್ಲಿ ಓಣಿ ಓಣಿಗಳಲ್ಲಿ ಭಜನಾ ತಂಡಗಳಿರುವುದನ್ನು ಗಮನಿಸುತ್ತೇವೆ. ಭಜನಾ ಹಾಡುಗಳ ಮೂಲ ವಸ್ತು ತತ್ವ, ಭಕ್ತಿ, ಆರಾಧನೆ. ಈ ತಂಡಗಳಲ್ಲಿ ಬಳಸುವ ವಾದ್ಯಗಳೆಂದರೆ ದಮಡಿ, ತಾಳ, ಏಕತಾರಿ, ಹಾರ್ಮೋನಿಯಂ. ಉತ್ತರ ಕರ್ನಾಟಕದ ಬಹುಭಾಗ ಭಜನಾ ಮಂಡಳಿಗಳ ಹಾಡು ಆ ಆ ಪ್ರದೇಶದ ಗ್ರಾಮದೇವತೆ, ಇಷ್ಟದೇವತೆ ಪ್ರಾದೇಶಿಕ ಹಿನ್ನಲೆಯ ಸ್ಥಳ ಮಹಿಮೆಗಳ ಹಾಡು. ಜೊತೆಗೆ ಕಡಕೋಳ ಮಡಿವಾಳಪ್ಪ ; ಕೂಡ್ಲಿ ಬಸವಲಿಂಗಪ್ಪ ; ರಾಮಪುರದ ಬೊಕ್ಕಪ್ಪ ; ಶರೀಫ ಸಾಹೇಬರ ತತ್ವಪದ, ಶರಣರ–ದಾಸರ ವಚನ–ಕೀರ್ತನಗಳು ಪ್ರಮುಖವಾಗಿರುತ್ತವೆ.

ಇಂಥ ಕವಿಗಳ ; ಶರಣರ ಹಾಡು, ವಚನಗಳನ್ನು ಮುಂಜೂಣೆಯಲ್ಲಿ ಹಾಡುವ ಶಿವಯ್ಯ ಹೆಚ್ಚು ಆಕರ್ಷಿಸುತ್ತಾರೆ. ಶ್ರಾವಣ ಮಾಸದ ಒಂದು ತಿಂಗಳು ಬಿಸರಳ್ಳಿಯ ಮರುಳ ಸಿದ್ಧೇಶ್ವರ ದೇವಸ್ಥಾನದಲ್ಲಿ ಪುರಾಣ ಸಂದರ್ಭ ; ಪೂಜಾ ಸಂದರ್ಭ ಬೆಳಗು ಮುಂಜಾನೆ ಭಜನಾ ಸೇವೆ ಸಲ್ಲಿಸುತ್ತಾರೆ. ಬೆಳಗು ಮುಂಜಾನೆ ಪ್ರಶಾಂತ ವಾತಾವರಣದಲ್ಲಿ ಬೀಸುವ ತಂಗಾಳಿಯ ಅಲೆಗಳಲ್ಲಿ ಶಿವಯ್ಯನ ಭಜನಾ ಹಾಡು ಕೇಳಿ ಬಂದಾಗ ಯಾವುದೋ ಲೋಕದಲ್ಲಿ ತೇಲಿದಂತೆ. ಏಳು ಏಳುತ್ತಲೇ ಕಿವಿಯ ಕರ್ಣಪಟಲಕ್ಕೆ

ಭಕ್ತಿಯ ಗೀತೆಗಳು ಹೊಕ್ಕಾಗ ತನು-ಮನ ಜಾಗೃತೆಗೊಂಡು ದೈನಂದಿನ ಬದುಕಿಗೆ ಲವಲವಿಕೆಯಿಂದ, ಪ್ರಾಂಜಲ ಮನಸ್ಸಿನಿಂದ ತೊಡಗಿಸಿಕೊಳ್ಳುವಂತೆ ಮಾಡುತ್ತವೆ. ಸಂಕೀರಣ ಯಾಂತ್ರಿಕ ಬದುಕಿನಲ್ಲಿಯೂ ಜನರ ಮಾನಸಿಕ ಒತ್ತಡದ ಸ್ಥಿತಿಯಲ್ಲಿಯೂ ಪ್ರಜ್ಞೆಯತ್ತ ಕರೆದೊಯ್ಯುವ ಈ ಭಜನಾ ಹಾಡುಗಳು ಜನರ ಜೀವನಾಡಿಗಳಾಗಿವೆ.

ಒಬ್ಬ ದಲಿತ ಕಲಾವಿದ ಬದುಕಿನಲ್ಲಿ ಹತಾಶನಾಗದೆ ತನ್ನಲ್ಲಿಯ ಕಲೆ, ಪ್ರತಿಭೆ ಗುರುತಿಸಿಕೊಂಡು ತನ್ನ ಇತಿಮಿತಿಗಳಲ್ಲಿ ತನ್ನ ಚೌಕಟ್ಟಿನಲ್ಲಿಯೂ ಸಾಧಿಸಿ ಬೆಳೆದಿದ್ದು ಪ್ರಸಂಶನೀಯ. ಅನೇಕ ಭಜನಾ ಹಾಡುಗಳನ್ನು ಸಂಗ್ರಹಿಸಿಕೊಂಡು ಮಧುರ ಕಂಠದಿಂದ ಧ್ವನಿಯ ಏರಿಳಿತಗಳಿಂದ ಸುಶ್ರಾವ್ಯವಾಗಿ ಹಾಡುವ ಶಿವಯ್ಯ ಪ್ರಭಾವಿತ ಭಜನಾ ಹಾಡುಗಾರರಾಗಿದ್ದಾರೆ. ಶಿವಯ್ಯನ ನಡೆ, ನುಡಿ, ಆಚಾರ-ವಿಚಾರ ಯಾವ ಮೇಲ ವರ್ಗದವರಿಗಿಂತ ಕಡಿಮೆಯದಲ್ಲ.

ಶಿವಯ್ಯ ಅಳವಂಡಿ, ಬಾಗೇವಾಡಿ, ಹೊಸಹಳ್ಳಿ, ಹಿರೇಹಡಗಲಿಗಳಂಥ ಸ್ಥಳಗಳಲ್ಲಿ ಭಜನಾ ಸಂಘಟನೆಗಳಿಗೆ ಚಾಲನೆ ನೀಡಿ ಹಾಡು, ರಾಗ, ತಾಳಗಳ ತರಬೇತಿ ನೀಡಿ ಬಂದಿದ್ದಾನೆ. ಇವರ ಭಜನಾ ತಂಡ ಅನೇಕ ಕಡೆ ಭಾಗವಹಿಸಿ ಜನಮನ ಸೆಳೆದು ಬಂದಿದೆ.

ಸುಮಾರು ಎಂಟು ಗಂಟೆಗಳ ಕಾಲ ನಿರಂತರ ಹಾಡುವ ಸಾಮರ್ಥ್ಯ ಹೊಂದಿದ ಶಿವಯ್ಯನವರಲ್ಲಿ ಕಡಿಮೆ ಕಡಿಮೆ ಎಂದರೂ ನೂರಾರು ಹಾಡುಗಳು ಕಂಠಪಾಠವಾಗಿವೆ. ಭಜನಾ ಹಾಡುಗಳೆಂದಾಕ್ಷಣ, ಭಜನಾ ಹಾಡುಗಾರನೆಂದಾಕ್ಷಣ ಆಲಸ್ಯ ಮಾಡುವಂತಿಲ್ಲ. ಸರಳ ಸಾಹಿತ್ಯದಲ್ಲಿ ಬದುಕಿನ ನಶ್ವರತೆಯನ್ನು ಮೋಕ್ಷದ ದಾರಿಯನ್ನು ನೀಡುವ ಹಾಡುಗಳಿಂದ ಸಂಗೀತಕ್ಕೆ, ಸಮಾಜಕ್ಕೆ ನೀಡಿದ ಕೊಡುಗೆ ಕಡಿಮೆಯಲ್ಲ. ಶಿವಯ್ಯನವರ ಅದ್ಭುತ ಕಂಠ ಭಜನಾ ಹಾಡುಗಳನ್ನು ಕೇಳುವುದು ಒಂದು ಅನುಭವ ; ಒಂದು ಸದಾವಕಾಶ.

ಶಿವಯ್ಯ ಜನ್ಮಪಡೆದುದು ಕೊಪ್ಪಳ ಜಿಲ್ಲೆಯ ಬಿಸರಳ್ಳಿ ಗ್ರಾಮದ ದಲಿತ ಕುಟುಂಬದ ಶಿವಲಿಂಗಯ್ಯ ಲಕ್ಷ್ಮವ್ವ ದಂಪತಿಗಳ ಮಗನಾಗಿ ೯-೯-೪೭ರಲ್ಲಿ. ಏಕಾಂಗಿಯಾಗಿ ಬೆಳೆದ ಶಿವಯ್ಯ ಓದಿದ್ದು ಐದನೇ ತರಗತಿಯವರೆಗೆ. ಕೂಲಿ ಕೆಲಸ ಮಾಡಿಕೊಂಡಿದ್ದ ತಂದೆ-ತಾಯಿಗಳಿಗೆ ಹೆಚ್ಚಿನ ಅಭ್ಯಾಸ ಕೊಡಿಸಲಾಗಲಿಲ್ಲ. ಬಾಲ್ಯದಲ್ಲಿಯೇ ಮರುಳಸಿದ್ಧೇಶ್ವರ ಪೂಜಾಸೇವೆ ಮಾಡಿಕೊಂಡಿದ್ದ ಶಿವಯ್ಯ ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಬಂದುದು ಅನಿವಾರ್ಯ.

ಊರಿನ ಭಜನಾ ತಂಡಗಳ ಪ್ರಭಾವಿತನಾದ ಶಿವಯ್ಯ ಸಂಗಟಿ ಕಳಕಪ್ಪ, ಉತ್ತಂಗಿ ವಿರುಪಣ್ಣನವರ ಹಾಡುಗಳಿಗೆ ಮಾರುಹೋಗಿ ಅವರ ಮಾರ್ಗದರ್ಶನದಲ್ಲಿ ತನ್ನದೇ

ಆದ ಭಜನಾ ತಂಡ ಕಟ್ಟಿಕೊಂಡು ಬೆಳೆದ ಶಿವಯ್ಯ ಇಂದು ಭಜನಾ ತಂಡದಿಂದ, ಹಾಡುಗಳಿಂದ ಸಾಕಷ್ಟು ಪ್ರಸಿದ್ಧಿ ಪಡೆದಿದ್ದಾನೆ.

ಶಿವಯ್ಯ ಮರುಳ ಸಿದ್ಧೇಶ್ವರ ಮಠ ಭಜನಾ ಹಾಡುಗಳಿಂದ ಪ್ರಸಿದ್ಧಿ ಪಡೆದಷ್ಟೇ ಬಯಲಾಟ, ನಾಟಕಗಳ ಪಾತ್ರದಲ್ಲಿಯೂ ಜನಮನ ಸೆಳೆದಿದ್ದಾನೆ. ಉತ್ತಮ ನಟ, ಬಯಲಾಟ ನಿರ್ದೇಶಕ ಕೂಡ ಹೌದು.

ಶಿವಯ್ಯ ಮರುಳಸಿದ್ಧೇಶ್ವರಮಠ
ಅಂಚೆ : ಬಿಸರಳ್ಳಿ
ತಾ : ಜಿ : ಕೊಪ್ಪಳ

# ದೇವೇಂದ್ರಪ್ಪ ಕಮ್ಮಾರ

ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ದೇವೇಂದ್ರಪ್ಪ ಬಯಲಾಟದ ಕಲಾವಿದನಾಗಿ, ಸಂಗೀತ ನಿರ್ದೇಶಕನಾಗಿ, ಮಾಸ್ತರನಾಗಿ ನಾಲ್ಕು ದಶಕಗಳಿಂದ ಸೇವೆ ಸಲ್ಲಿಸುತ್ತ ಬಂದಿರುವ ಹಿರಿಯ ರಂಗ ಸೇವಕ. ಬೈರಾಪುರ, ಕವಲೂರು, ಬೆಣಕಲ್ಲು, ಆಲೂರು. ಹೀಗೆ ಸುತ್ತಲೂ ಹಳ್ಳಿಗಳಲ್ಲಿ ಬಯಲಾಟ ಕಲಿಸುತ್ತ, ಪ್ರಯೋಗಿಸುತ್ತ ಜಾನಪದ ರಂಗಭೂಮಿ ಜೀವಂತ ಉಳಿಯುವಲ್ಲಿ ಕಾರಣರಾದವರು. ೬೫ರ ವಯಸ್ಸಿನಲ್ಲಿಯೂ ರಂಗ ಸೇವೆ ನಿಂತಿಲ್ಲ, ಈಗಲೂ ಅವರ ನಿರ್ದೇಶನ ಸಾಗಿದೆ.

ದೇವೇಂದ್ರಪ್ಪನವರಿಗೆ ಬಯಲಾಟ ಕಲೆಯ ಆಸಕ್ತಿ ಸಹಜವಾಗಿ ತಂದೆಯಿಂದ ಬಂದುದು. ತಂದೆ ಚೆನ್ನಬಸಪ್ಪ ಕಮ್ಮಾರ ಆಗಿನ ಪ್ರಸಿದ್ಧಿ ಪಡೆದ ಬಯಲಾಟ ಮಾಸ್ತರರಾಗಿದ್ದರು. ವೃತ್ತಿ ಕಮ್ಮಾರಿಕೆಯಾಗಿದ್ದರೂ ಪ್ರವೃತ್ತಿ ಜಾನಪದ ರಂಗಭೂಮಿ. ತಾಲೂಕಿನ ಸುತ್ತಲೂ ಹಳ್ಳಿಗಳಲ್ಲಿ ರಂಗಭೂಮಿ ಉಳಿಯುವಂತೆ ಜನರಲ್ಲಿ ಆಸಕ್ತಿ ಹೆಚ್ಚುವಂತೆ ಮಾಡುತ್ತ ಬಂದ ದೇವೇಂದ್ರಪ್ಪ ಅಭಿನಂದನಾರ್ಹರು. ಕೊಪ್ಪಳ ತಾಲೂಕಿನ ಜಾನಪದ ರಂಗಭೂಮಿಗೆ ಅಪಾರ ಕೊಡುಗೆ ಇವರಿಂದ ಸಲ್ಲಿದೆ.

ಅಳವಂಡಿಯ ಚೆನ್ನಬಸಪ್ಪ ದಂಪತಿಗಳ ಮೂರನೇ ಮಗನಾಗಿ ಜನ್ಮ ಪಡೆದ ದೇವೇಂದ್ರಪ್ಪ ಓದಿದ್ದು ಹೈಸ್ಕೂಲವರೆಗೆ ಮಾತ್ರ. ಬಡತನ, ಕಷ್ಟ, ಸಮಸ್ಯೆ ಬಹುಬೇಗ ಉದ್ಯೋಗದಲ್ಲಿ ತೊಡಗುವಂತೆ ಮಾಡಿದವು. ಕಮ್ಮಾರಿಕೆಯ ಜೊತೆ ಜೊತೆ ರಂಗಕಲೆಯೂ ಸಾಗಿಬಂದಿತು. ಪ್ರಾರಂಭದಲ್ಲಿ ನಾಟಕಗಳಲ್ಲಿ ಗುರುತಿಸಿಕೊಂಡ ದೇವೇಂದ್ರಪ್ಪ ಮುಂದೆ ಜಾನಪದ ರಂಗಭೂಮಿಗೆ ಸಂಪೂರ್ಣ ತಮ್ಮನ್ನು ಅರ್ಪಿಸಿಕೊಂಡರು. ಅಭಿನಯ, ಸಂಗೀತ, ನಿರ್ದೇಶನಗಳಿಂದ ಸೇವೆಸಾಗಿ ಬಂದಿತು.

ಸತಿಸಾವಿತ್ರಿ, ಸಭಾಪರ್ವ, ವಿರಾಟಪರ್ವ, ರಾಮಾಯಣ, ಕಿರಾತಾರ್ಜುನ ಕಾಳಗ, ಸುಗಂಧ ಪುಷ್ಪ ಹರಣಿ, ಯಯಾತಿ ರಾಜ, ರಾವಾಂಜನೇಯ ಯುದ್ಧ, ಜಲಾಂಧರಾಸುರ, ಲಕ್ಷ್ಮೀ ಕಲ್ಯಾಣ ಅವರ ರಂಗ ಸೇವೆಯ ಪ್ರಮುಖ ಕಥೆಗಳು, ಸತ್ಯವಾನ ಸಾವಿತ್ರಿಯಲ್ಲಿ ಸಾವಿತ್ರಿ, ಸಭಾಪರ್ವದಲ್ಲಿ ದ್ರೌಪತಿ, ವಿರಾಟಪರ್ವದಲ್ಲಿ ದ್ರೌಪತಿ, ಸುಗಂಧ ಪುಷ್ಪ ಹರಣದಲ್ಲಿ ದ್ರೌಪತಿ ಹೀಗೆ ಸ್ತ್ರೀಪಾತ್ರಗಳೇ ಹೆಚ್ಚು. ಅದರಲ್ಲೂ ಬಹುಪಾಲು ಕಥೆಗಳಲ್ಲಿ ದ್ರೌಪತಿ ಪಾತ್ರದಿಂದ ಜನಮನ ಸೆಳೆದಿದ್ದು ವಿಶೇಷ ಲೆಕ್ಕಕ್ಕೆ ಬರುತ್ತಿದೆ.

ದೇವೇಂದ್ರಪ್ಪ ಕಮ್ಮಾರ ಅವರ ಜಾನಪದ ದೀರ್ಘ ರಂಗಸೇವೆ ಪರಿಗಣಿಸಿ ರಾಜ್ಯ ಸರಕಾರ ಮಾಸಾಶನ ಮಂಜೂರಿಸಿದೆ. ಅಳವಂಡಿಯಲ್ಲಿ ಸುತ್ತಲು ಹಳ್ಳಿಗಳಲ್ಲಿ ಅಭಿಮಾನಿಗಳು, ಕಲಾವಿದರು ರಂಗಭೂಮಿಯಲ್ಲಿ, ಸಭೆ ಸಮಾರಂಭಗಳಲ್ಲಿ ಗೌರವಿಸಿ ಸನ್ಮಾನಿಸಿದ್ದಾರೆ. ಅಭಿನಯ, ಹಾಡುಗಾರಿಕೆ, ನಿರ್ದೇಶನದಿಂದ ಜನಮನ ಸೆಳೆದಿರುವ ದೇವೇಂದ್ರಪ್ಪ ಆ ಭಾಗದ ಜನಪ್ರಿಯ ಕಲಾವಿದರಾಗಿ, ನಿರ್ದೇಶಕರಾಗಿ ಅಲ್ಲಿಯ ಜಾನಪದ ರಂಗಭೂಮಿಯ ಉಳುವಿಗೆ ಕಾರಣರಾಗಿದ್ದಾರೆ. ಹಳ್ಳಿಹಳ್ಳಿಗಳಲ್ಲಿ ಯುವಕರನ್ನು ತಿದ್ದಿ-ತೀಡಿ ಉತ್ತಮ ಕಲಾವಿದರನ್ನಾಗಿ ನಿರ್ಮಾಣಮಾಡುತ್ತ ಸಾಗಿರುವ ದೇವೇಂದ್ರಪ್ಪ ಮಾಸ್ತರ ನಮ್ಮ ಜಾನಪದ ಸಂಪತ್ತಾಗಿ ಬಯಲಾಟ ಉಳಿಸಿ ಬೆಳೆಸುವಲ್ಲಿ ಕಾರಣರಾಗಿದ್ದಾರೆ.

**ದೇವೇಂದ್ರಪ್ಪ ಕಮ್ಮಾರ**
**ಅಂಚೆ : ಅಳವಂಡಿ**
**ತಾ : ಜಿ : ಕೊಪ್ಪಳ**

## ಕಲ್ಲಪ್ಪ ಎಲಿಗಾರ

ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಕಲ್ಲಪ್ಪ ಎಲಿಗಾರ ಜಾನಪದ ರಂಗಭೂಮಿ ಹಾಗೂ ಭಜನಾ ಮಂಡಳಿ ಇವೆರಡರಲ್ಲೂ ಕೃಷಿಮಾಡಿ ಪ್ರಸಿದ್ಧಿ ಪಡೆದವರು. ಭಜನೆ ಎಂದರೆ ಸಾಕು ಕಲ್ಲಪ್ಪನನ್ನು ಹುಡುಕಿ ಎನ್ನುವ ಊರವರ ಮಾತು ಕಲ್ಲಪ್ಪನ ದೀರ್ಘ ಭಜನಾಸೇವೆ ಸ್ಪಷ್ಟವಾಗುತ್ತಿದೆ. ಊರಿನ ಯಾವುದೇ ದೇವಸ್ಥಾನದಲ್ಲಿ ಭಜನೆ ಜರುಗುತ್ತಿದ್ದರೆ ಅಲ್ಲಿ ಕಲ್ಲಪ್ಪನ ಉಪಸ್ಥಿತಿ ಇರಲೇಬೇಕು. ಹಾರ್ಮೋನಿಯಂ ನುಡಿಸುತ್ತ ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡುತ್ತ ಹಾಡುತ್ತ ಲೀನವಾದರೆ ಕಲ್ಲಪ್ಪ ವಾಸ್ತು ಸ್ಥಿತಿಯನ್ನೇ ಕಳೆದುಕೊಳ್ಳುತ್ತಾನೆನ್ನುವಷ್ಟು ತಲ್ಲೀನತೆ. ತಾಲೂಕು, ಜಿಲ್ಲೆ, ರಾಜ್ಯ ಮಟ್ಟದವರೆಗೂ ಸ್ಪರ್ಧೆಯಲ್ಲಿ ಭಾಗಿಯಾಗಿ ಬಂದ ಜನಪ್ರೀಯ ಹಾಡುಗಾರ. ಭಜನಾ ತಂಡ ಕಟ್ಟಿಕೊಂಡು ೧೯೭೦ ರಿಂದ ೧೯೮೫ರ ವರೆಗೆ ೧೫ ವರ್ಷ ನಿರಂತರ ಅಳವಂಡಿಯಿಂದ ಕಲಬುರ್ಗಿಯ ಶರಣಬಸವೇಶ್ವರರ ದರ್ಶನಕೆ ಪಾದಯಾತ್ರೆಯಲ್ಲಿ ಸಾಗಿ ಭಕ್ತಿ ಸಲ್ಲಿಸಿದ ಶ್ರೇಯಸ್ಸು.

ಜಾನಪದ ರಂಗಭೂಮಿಯಲ್ಲೂ ಅವಿರತ ಸೇವೆ, ಕುರುಕ್ಷೇತ್ರ, ಮೈಲಾರಲಿಂಗೇಶ್ವರ, ರಾಮಾಯಣ, ಸುಗಂಧ ಪುಷ್ಪ, ಗಿರಿಜಾಕಲ್ಯಾಣ, ರತಿ ಕಲ್ಯಾಣ, ಬಬ್ರುವಾಹನ, ಕಿರಾತಾರ್ಜುನ ಕಾಳಗ, ಸುಭದ್ರ ಕಲ್ಯಾಣ, ಪ್ರಮಿಳಾ ದರ್ಬಾರ, ಕೃಷ್ಣಾರ್ಜುನರ ಯುದ್ಧ, ವಿರಾಟಪರ್ವ, ಅರಣ್ಯಪರ್ವ, ದೇವಿ ಮಹಾತ್ಮೆ, ಲವ-ಕುಶರ ಕಾಳಗ ಹೀಗೆ ಪ್ರಮುಖ ಬಯಲಾಟಗಳಲ್ಲೆಲ್ಲ ಪ್ರಮುಖ ಪಾತ್ರಗಳಿಂದ ಉತ್ತಮ ಅಭಿನಯ ನೀಡಿದ ಕೀರ್ತಿ ಕಲ್ಲಪ್ಪ ಎಲಿಗಾರವರದು.

ದೊಡ್ಡಾಟಗಳಲ್ಲಿ ಹೆಚ್ಚಾಗಿ ಪೌರಾಣಿಕ ಅದರಲ್ಲೂ ರಾಮಾಯಣ, ಮಹಾಭಾರತದ ಕಥೆಗಳೇ ಹೆಚ್ಚು. ಮಹಾಭಾರತದಲ್ಲಿ ಭೀಮ ; ರಾಮಾಯಣದಲ್ಲಿ

ರಾವಣ ಪಾತ್ರಗಳು ಕಲ್ಲಪ್ಪನ ವಿಶಿಷ್ಟ ಪಾತ್ರಗಳು. ಎಲ್ಲಾ ಆಟಗಳಲ್ಲಿ ಶೂರ, ಧೀರ, ಪರಾಕ್ರಮದ ಪಾತ್ರಗಳಲ್ಲಿಯೇ ಅಭಿನಯಿಸಿದ್ದುಂಟು. ಭೀಮನ ಪಾತ್ರವೇ ಆಗಲಿ, ರಾವಣನ ಪಾತ್ರವೇ ಆಗಲಿ ಭಾರೀ ವೇಷಭೂಷಣಗಳಲ್ಲಿ, ಗದೆ, ಖಡ್ಗ, ಬಿಲ್ಲು ಮೊದಲಾದ ಆಯುಧಗಳಿಂದ ಕಲ್ಲಪ್ಪ ಅಟ್ಟವೇರಿದರೆ ಅಟ್ಟ ನಡುಗುವಂತೆ ಕುಣಿತ. ವೀರ ಪರಾಕ್ರಮದ ಪಾತ್ರದಲ್ಲಿ ಅದರಲ್ಲೂ ಯುದ್ಧ ಪ್ರಸಂಗದಲ್ಲಿ ಈ ಕಲಾವಿದ ಪ್ರೇಕ್ಷಕರಿಗೆ ರೋಚಕವಾಗುವಂತೆ ಎನ್ನುವ ಮಾತು ಅವರ ಅಭಿನಯದ ಪರಾಕಷ್ಟತೆಯನ್ನೇ ಹೇಳುತ್ತಿವೆ. ದೊಡ್ಡಾಟದ ಪಾತ್ರಗಳು ಹೆಚ್ಚಾಗಿ ಅಟ್ಟದ ಹಿಂದಿನಿಂದ ರಂಗ ಪ್ರವೇಶಿಸಿದರೆ ಕಲ್ಲಪ್ಪನ ರಾಕ್ಷಸ ಪಾತ್ರ ಅಟ್ಟದ ಮುಂಭಾಗದಿಂದಲೇ ಪ್ರೇಕ್ಷಕರ ಮಧ್ಯದಿಂದ ತಮಟೆ–ಹಲಗೆ ರಣವಾದ್ಯಗಳ ಮಧ್ಯದಲ್ಲಿ ಭಯಾನಕ ವಾತಾವರಣ ಸೃಷ್ಟಿಸುತ್ತ ರಂಗ ಮಂಟಪವೇರುವುದು ವಿಶೇಷವಾಗಿರುತ್ತಿತ್ತು.

ಕಲ್ಲಪ್ಪನ ಕೆಲವು ಪ್ರಸಿದ್ಧಿ ಪಾತ್ರಗಳಿಗಾಗಿ ಸುತ್ತಲೂ ಹಳ್ಳಿಗಳಿಂದ ಆಹ್ವಾನ ಬರುತ್ತಿದ್ದವು. ಮೈನಳ್ಳಿ, ಮುಂಡರಗಿ, ನಿಲೋಗಿಪುರ, ಕವಲೂರು ಹೀಗೆ ಹಲವಾರು ಕಡೆ ಹೋಗಿ ಅಭಿನಯಿಸಿ ಮೆಚ್ಚಿಕೆ–ಪಶಂಸೆ–ಸನ್ಮಾನ ಪಡೆದು ಬಂದದ್ದುಂಟು. ನಾಡಿನ ಪ್ರಸಿದ್ಧ ಉತ್ಸವಗಳಾದ ಹಂಪಿ, ಆನೆಗೊಂದಿ, ಇಟಗಿ, ಕನಕಗಿರಿ ಉತ್ಸವಗಳಲ್ಲಿಯೂ ಭಾಗಿಯಾಗಿ ಬಂದ ಶ್ರೇಯಸ್ಸು ಈ ಕಲಾವಿದನದು.

ಅಳವಂಡಿಯ ಸಿದ್ಧೇಶ್ವರ ಜಾತ್ರೆಯ ಉತ್ಸವದಲ್ಲಿ ಕಲ್ಲಪ್ಪನ ಪಾತ್ರ ಹಿರಿದು. ಭಜನಾ ತಂಡವಾಗಲಿ, ಬಯಲಾಟ ತಂಡವಾಗಲಿ ಕಲ್ಲಪ್ಪನ ಉಪಸ್ಥಿತಿಯಲ್ಲಿಯೇ ಇರುತ್ತವೆ. ಜಾತ್ರೆಯ ಸಾಂಸ್ಕೃತಿಕ ಉತ್ಸವಗಳಲ್ಲಿ ತನ್ನನ್ನು ತೊಡಗಿಸಿಕೊಂಡು ದುಡಿಯುವ ನಿಷ್ಠಾವಂತ ಕಲಾವಿದ.

೭೦ರ ಪ್ರಾಯದ ಈ ಕಲಾವಿದ ಈಗಲೂ ಉತ್ಸುಕ. ಅಳವಂಡಿಯ ಗವಿಸಿದ್ಧಪ್ಪ ಈರಮ್ಮ ದಂಪತಿಗಳ ರೈತ ಮನೆತನದಲ್ಲಿ ಜನ್ಮ ತಾಳಿದ ಕಲ್ಲಪ್ಪ ಓದಿದ್ದು ಪ್ರಾಥಮಿಕ ಶಾಲೆಯವರೆಗೆ. ಓದುವ ಆಸಕ್ತಿ ಇದ್ದರೂ ಬಡತನ, ದಾರಿದ್ರ್ಯ, ಆರ್ಥಿಕ ಪರಿಸ್ಥಿತಿಗಳಿಂದ ಏಳನೇ ತರಗತಿಗೆ ಓದು ನಿಲ್ಲಿಸಬೇಕಾಯಿತು.

ಕೊಪ್ಪಳ ಜಿಲ್ಲೆಯ ಬಯಲಾಟ ಸ್ಪರ್ದೆ ಕನಕಗಿರಿಯಲ್ಲಿ ಎಪ್ರಿಲ್ ೨೦೦೬ರ ರಲ್ಲಿ ಜರುಗಿದಾಗ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ದಿ. ಶಂಭು ಹೆಗಡೆಯವರು ಸನ್ಮಾನಿಸಿದ್ದು ತನ್ನ ಭಾಗ್ಯವೆಂದು ಅದೊಂದು ಅವಿಸ್ಮರಣೀಯ. ಆ ದಿನವನ್ನು ಅಭಿಮಾನದಿಂದ ಹೇಳಿಕೊಳ್ಳುವ ಈ ಕಲಾವಿದ ಕೊಪ್ಪಳ ಜಿಲ್ಲೆಯ ರಂಗಸಂಪತ್ತು.

**ಕಲ್ಲಪ್ಪ ಎಲಿಗಾರ**
**ಅಂಚೆ : ಅಳವಂಡಿ, ತಾ : ಜಿ : ಕೊಪ್ಪಳ**

# ಲೋಕಪ್ಪ ಗಾಳಿ

ಲೋಕಪ್ಪ ಗಾಳಿ ಕೊಪ್ಪಳ ತಾಲೂಕಿನ ಅಳವಂಡಿ ಓಬಳಿಯ ಕಂಪ್ಲಿ ಗ್ರಾಮದ ಬಯಲಾಟದ ಕಲಾವಿದ, ನಿರ್ದೇಶಕ. ತಂದೆ ಛತ್ರಪ್ಪ, ತಾಯಿ ಚೆನ್ನಮ್ಮ. ನೇಕಾರ ಉದ್ಯೋಗ ಮಾಡಿಕೊಂಡಿದ್ದರೂ ಕೂಲಿಕೆಲಸವೇ ಆಧಾರ. ಈ ಗಂಪತಿಗಳ ಎರಡನೇ ಮಗನಾಗಿ ಜನ್ಮಪಡೆದ ಲೋಕಪ್ಪ ಓದಿದ್ದು ದಿ. ಬಾಳಪ್ಪ ಮಾಸ್ತರರ ವಿದ್ಯಾರ್ಥಿಯಾಗಿ ನಾಲ್ಕನೇ ತರಗತಿಯವರೆಗೆ ಮಾತ್ರ. ಓದುವ ಆಸಕ್ತಿ ಇದ್ದರೂ ಬಡತನ, ದೊಡ್ಡ ಸಂಸಾರ, ಹಲವಾರು ಸಮಸ್ಯೆಗಳಲ್ಲಿ ಓದು ಮೊಟಕುಗೊಳಿಸಬೇಕಾಯಿತು. ಬಹುಬೇಗ ಕೂಲಿಕೆಲಸ ಲೋಕಪ್ಪನಿಗೂ ಅನಿವಾರ್ಯವಾಗಿತ್ತು.

ಲೋಕಪ್ಪನವರಿಗೆ ಬಾಲ್ಯದಿಂದಲೇ ಹಾಡು, ಕುಣಿತದತ್ತ ಆಸಕ್ತಿ. ದೇವಸ್ಥಾನಗಳಲ್ಲಿ ಹಿರಿಯರ ಭಜನೆ ಹಾಡುಗಳಲ್ಲಿ ಭಾಗಿಯಾಗಿ ಹಾಡುತ್ತ ಹಾಡುತ್ತ ಉತ್ತಮ ಹಾಡುಗಾರನಾದ. ಬಯಲಾಟದಲ್ಲಂತೂ ವಿಪರೀತ ಹುಚ್ಚು. ೧೯೫೪ರ ರಲ್ಲಿಯೇ "ರಾಮಾಂಜನೆಯ ಯುದ್ಧ" ಕಥೆಯಲ್ಲಿ ಸೀತಾದೇವಿ ಪಾತ್ರದಿಂದ ಪ್ರಪ್ರಥಮ ಪ್ರಯೋಗದಲ್ಲಿಯೇ ಜನಮೆಚ್ಚಿಗೆ ಗಳಿಸಿದ ಕೀರ್ತಿ ಲೋಕಪ್ಪನವರದು. "ಕರ್ಣಾರ್ಜುನರ ಕಾಳಗ"ದಲ್ಲಿ ಪದ್ಮಗಂಧಿ ಹಾಗೂ ದ್ರೌಪದಿ ಪಾತ್ರ, "ಅಹಿರಾವಣ ಮಹಿರಾವಣ" ಕಥೆಯಲ್ಲಿ ಸೀತಾ ಪಾತ್ರಗಳು ಬಹಳಷ್ಟು ಆಕರ್ಷಿಸಿದವು. ಪ್ರತಿ ವರ್ಷ ಊರ ಜಾತ್ರೆ, ಉತ್ಸವಗಳಲ್ಲಿ ಬಯಲಾಟ ಪ್ರಯೋಗಗೊಂಡಾಗ ಲೋಕಪ್ಪನವರ ಪಾತ್ರವಿರಲೇಬೇಕು.

ಲೋಕಪ್ಪನವರ ಆಸಕ್ತಿ, ಪ್ರತಿಭೆ ಗುರುತಿಸಿದ ಕಿನ್ನಾಳ ಶಂಕ್ರಪ್ಪ ಮಾಸ್ತರ ಉತ್ತಮ ಕಲಾವಿದನನ್ನಾಗಿ, ಸಂಗೀತಗಾರನನ್ನಾಗಿ ಮಾಡಿದರು. ಇಂದಿಗೂ ಗುರುಗಳನ್ನು ಮನತುಂಬಿ ಹೃದಯತುಂಬಿ ನೆನೆಸುತ್ತಾರೆ ಲೋಕಪ್ಪ.

ಅಭಿನಯದ ಜೊತೆ ಜೊತೆ ವಾದ್ಯಗಳನ್ನು ನುಡಿಸುವುದನ್ನೂ ಕಲಿತ ಲೋಕಪ್ಪನವರು ಮೃದಂಗ, ಹಾರ್ಮೋನಿಯಂ, ತಬಲಾಗಳನ್ನು ಕರಗತ ಮಾಡಿಕೊಂಡು

ಕ್ರಮೇಣ ಬಯಲಾಟದ ನಿರ್ದೇಶಕರಾಗಿ ಸೇವೆಸಲ್ಲಿಸುತ್ತ ಸುತ್ತಲೂ ಹಳ್ಳಿಗಳಲ್ಲಿ ಜನಪ್ರಿಯ ಮಾಸ್ತರರೆಂದು ಗುರುತಿಸಿಕೊಂಡು ಗೌರವದ ನಿರ್ದೇಶಕರಾದರು.

ಕರ್ಣಾರ್ಜುನರ ಕಾಳಗ, ಕನಕಾಂಗಿ ಕಲ್ಯಾಣಿ, ರಾಮಾಂಜನೆಯ ಯುದ್ಧ, ಸತ್ಯಹರಿಶ್ಚಂದ್ರ, ಅಹಿರಾವಣ–ಮಹಿರಾವಣ, ಚಿತ್ರಸೇನ ಗಂಧರ್ವ, ಗಿರಿಜಾ ಕಲ್ಯಾಣ, ರತಿಕಲ್ಯಾಣ, ವಿರಾಟಪರ್ವ–ದ್ರೋಣಪರ್ವ, ಪ್ರಮೀಳಾ ದರ್ಬಾರ, ಹನುಮಂತ ಲಿಂಗಧಾರಣ, ಚಿತ್ರಾಂಗದ, ಪಾಂಡುವಿಜಯ, ಮುಲಕಾಸುರನ ಕಥೆ, ಮೈಲಾರಲಿಂಗೇಶ್ವರ ಮಹಾತ್ಮೆಗಳಂಥ ಕಥೆಗಳನ್ನು ಕಲಿಸಿ ಯಶಸ್ವಿಯಾಗಿ ಆಡಿಸಿದ ಕೀರ್ತಿ ಲೋಕಪ್ಪನವರದು.

ಕೊಪ್ಪಳ ತಾಲೂಕಿನ ಬಿಸರಳ್ಳಿ, ವೋರನಾಳ, ಬಟಗೇರಿ, ಭೈರಾಪುರ, ಹಿರೇಸಿಂದೋಗಿ, ಚಿಕ್ಕಸಿಂದೋಗಿ, ತಳಕಲ್ಲು, ವೆಂಕಟಾಪುರ, ಬನ್ನಿಗೋಳು, ನೆಲಗಿಪುರ ಹೀಗೆ ಅನೇಕ ಸುತ್ತಲು ಹಳ್ಳಿಗಳಲ್ಲಿ ಬಯಲಾಟ ಕಲಿಸಿ ಪ್ರಯೋಗಿಸಿ ಜನರಲ್ಲಿ ಜಾನಪದ ರಂಗಭೂಮಿಯ ಆಸಕ್ತಿ ಹೆಚ್ಚಿಸಿದ ಕೀರ್ತಿ ಲೋಕಪ್ಪನವರದು. ತಂಡಗಳು ಗೌರವಧನ ಕೊಡಲಿ ಬಿಡಲಿ ಅಥವಾ ಕೊಟ್ಟಾಗ ಇಷ್ಟೇ ಏಕೆ ? ಯಾವುದನ್ನೂ ಪ್ರಶ್ನಿಸಿದೆ ಪ್ರಯೋಗವನ್ನೇ ಪ್ರಮುಖವಾಗಿರಿಸಿಕೊಂಡು ಬಂದ ಕಲಾಪೋಷಕ. ಮಾಸ್ತರರಾಗಿ, ನಿರ್ದೇಶಕರಾಗಿ ಎಂದೂ ಗಳಿಸುವ, ಲಾಭ–ಹಾನಿಗಳ ಬಗ್ಗೆ ಚಿಂತಿಸದೇ ಇಡೀ ಜೀವನ ಕಲೆಗಾಗಿ ಅರ್ಪಿಸಿಕೊಂಡುಬಂದ ಲೋಕಪ್ಪ ಗೌರವಾನ್ವಿತ ವ್ಯಕ್ತಿ ಜಾನಪದ ಸಂಪತ್ತು.

ಒಂದು ಕಾಲದಲ್ಲಿ ಹಳ್ಳಿಗರಿಗೆ ಬಯಲಾಟವೇ ಬಹು ದೊಡ್ಡ ಮನರಂಜನೆಯ ಕಲೆಯಾಗಿತ್ತು. ಪ್ರೇಕ್ಷಕರು ಸಾವಿರಾರು ಸಂಖ್ಯೆಯಲ್ಲಿ ಬಯಲಾಟ ನೋಡುತ್ತಿದ್ದರು. ಕ್ರಮೇಣ ಕಾಲಸರಿದಂತೆ ಆಧುನಿಕತೆಯ ಗಾಳಿ ಹಳ್ಳಿಗಳಿಗೂ ಬೀಸಿ ಬಯಲಾಟ ಕಲೆ ಬಡವಾಯಿತು. ಇಂಥ ಸಂಕ್ರಮಣದ ಸಮಯದಲ್ಲಿಯೂ ಲೋಕಪ್ಪ ಬಯಲಾಟ ಕಲೆಗೆ ಬದ್ಧನಾಗಿದ್ದು ಅದರ ಉಳಿವಿಗೆ, ಹೋರಾಡುತ್ತ ಯುವಕರಲ್ಲಿ ಪ್ರೋತ್ಸಾಹ ತುಂಬುತ್ತ ಅದರ ಸರ್ವತೋಮುಖದ ಬೆಳವಣಿಗೆಗಾಗಿ ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ.

ಲೋಕಪ್ಪ ಗಾಳಿ ಕೊಪ್ಪಳ ತಾಲೂಕಿನ ಬಯಲಾಟದ ಮಾಸ್ತರನಾಗಿ, ೭೫ರ ಗಡಿಯಲ್ಲೂ ರಂಗಾಸಕ್ತಿ ಉಳಿಸಿಕೊಂಡು ನಾಡಿನ ಸಂಪತ್ತಾಗಿದ್ದಾರೆ. ಇವರ ಪ್ರತಿಭೆ, ಶ್ರಮ, ಶ್ರದ್ಧೆ ಗುರುತಿಸಿ ಜಿಲ್ಲೆಯ ಅನೇಕ ಕಡೆ ಕಲಾಭಿಮಾನಿಗಳು ಸನ್ಮಾನಿಸಿ ಗೌರವಿಸಿದ್ದಾರೆ. ೩–೧೧–೨೦೦೭ರಲ್ಲಿ ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ಜರುಗಿದ ಬಯಲಾಟ ಸ್ಪರ್ಧೆ ಸಂದರ್ಭದಲ್ಲಿ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕೆರೆಮನೆ ಶಂಭು ಹೆಗಡೆಯವರು ಅಕಾಡೆಮಿಯ ಪರವಾಗಿ ಸನ್ಮಾನಿಸಿ ಗೌರವಿಸಿದ್ದಾರೆ. ಕರ್ನಾಟಕ ಸರಕಾರ ಈ ಹಿರಿಯ ಕಲಾವಿದನ ಸೇವೆ ; ಆರ್ಥಿಕ ಪರಿಸ್ಥಿತಿ ಅರಿತು ಮಾಸಾಶನ ಮಂಜೂರಿಸಿದೆ.

**ಲೋಕಪ್ಪ ಗಾಳಿ**
**ಕಂಪ್ಲಿ, ಅಳವಂಡಿ, ತಾ : ಜಿ : ಕೊಪ್ಪಳ**

# ಗುರುಬಸಯ್ಯ ಬ್ರಹನ್ಮಠ

ಕೊಪ್ಪಳ ತಾಲೂಕಿನ ಬಿಸರಳ್ಳಿಯ ಬ್ರಹನ್ಮಠದ ಶ್ರೀ ಅನ್ನದಾನಯ್ಯ ಶ್ರೀಮತಿ ಗಂಗಮ್ಮ ಆದರ್ಶ ದಂಪತಿಗಳ ಮಗನಾಗಿ ಜನ್ಮಪಡೆದ ಗುರುಬಸಯ್ಯ ಓದಿದ್ದು ಎಸ್.ಎಸ್.ಎಲ್.ಸಿ. ಸಧ್ಯ ಬಟಗೇರಿ ಗ್ರಾಮದಲ್ಲಿ ವಾಸಿಸುತ್ತ ಅಲ್ಲಿಯ ನಾಗರಿಕನಾಗಿ ಬೇಸಾಯ ಉದ್ಯೋಗದಲ್ಲಿ ಸಾಗಿದ್ದಾರೆ.

ಗುರುಬಸಯ್ಯ ಬಾಲ್ಯದಿಂದಲೇ ಹಾಡಿನಲ್ಲಿ, ಸಂಗೀತದಲ್ಲಿ ಆಸಕ್ತಿಯುಳ್ಳವರು. ಹಾಡುಗಾರಿಕೆ ಮನೆಯ ಪರಂಪರೆಯಿಂದಲೇ ಬಂದದ್ದು. ತಂದೆ, ಚಿಕ್ಕಪ್ಪ, ತಾತ ಎಲ್ಲರೂ ಭಕ್ತಿಗೀತೆಗಳನ್ನು, ಭಜನಾ ಹಾಡುಗಳನ್ನು ಹಾಡಿ ಆಕರ್ಷಿಸಿದವರು. ಗುರುಬಸಯ್ಯ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಬಂದವರು. ಹಿರಿಯರ ಹಾಡು ಊರಿಗೆ ಸೀಮಿತವಾಗಿದ್ದರೆ, ಗುರುಬಸಯ್ಯನವರು ನಾಡಿನ ನಾನಾ ಕಡೆ ಭಾಗವಹಿಸಿ ಉತ್ತಮ ಕಲಾವಿದರೆನಿಸಿಕೊಂಡು ಬಹುಮಾನ ಪಡೆದಿದ್ದುಂಟು. ಭಜನಾ ಹಾಡುಗಳಲ್ಲಂತೂ ಭಾರಿ ಹೆಸರು ವಾಸಿ.

ಕನ್ನಡ ನಾಡಿನಲ್ಲಿ ಭಕ್ತಗೀತೆಗಳಿಗೆ, ಭಜನಾ ಹಾಡುಗಳಿಗೆ ಅನುಭವಿಗಳ ತತ್ವಪದಗಳಿಗೆ ಲೆಕ್ಕವಿಲ್ಲ. ರಾಶಿರಾಶಿಯಾಗಿ ಹೊರಹೊಮ್ಮಿ ನಾಡಿನಾದ್ಯಂತ ಜನಪ್ರಿಯವಾಗಿವೆ. ಅಂಥ ಅರ್ಥಗರ್ಭಿತ ಹಾಡುಗಳು ಶಿರಕಂಠದ ಕಲಾವಿದರಿಂದ ಕೇಳಿಬಂದಾಗ ಆ ಮಾಧುರ್ಯನೇ ಬೇರೆ. ಕೇಳುಗರು ಭಾವುಕರಾಗಿ, ತನ್ಮಯರಾಗಿ ಮಂತ್ರಮುಗ್ಧರನ್ನಾಗಿ ಮಾಡುವ ಶಕ್ತಿ ಕಲಾವಿದನದು.

ಭಜನಾ ಪದಗಳಾಗಲಿ, ತತ್ವಪದಗಳಾಗಲಿ ಅವುಗಳ ಉದ್ದೇಶ ಮನುಷ್ಯ ಮನುಷ್ಯನಾಗಿ ಬದುಕಬೇಕು. ನೀತಿ, ನ್ಯಾಯ ಧರ್ಮಗಳಲಿ ಉತ್ತಮ ಜೀವನ ನಡೆಸಬೇಕು.

ಜೀವನ ನಶ್ವರ, ಇರುವವರೆಗೂ ಒಳಿತನ್ನು ಮಾಡಿ ಕೃತಾರ್ಥನಾಗಬೇಕು. ಒಳ್ಳೆಯ ನಡೆ, ನುಡಿಯಿಂದ ಬದುಕನ್ನು ಸಂಸ್ಕಾರಗೊಳಿಸುವುದೇ ಈ ಹಾಡುಗಳ ಉದ್ದೇಶ.

"ಗವಿಶಿವಯೋಗಿಗೆ ಮಂಗಲ ಪಾಡಿರಿ
ಮಂಗಲ ಪಾಡಿರಿ ಶಿವಯೋಗಿಗೆ"

ಈ ಮಂಗಲ ಹಾಡನ್ನು ಅವರ ತಂದೆಯಿಂದ ನಂತರ ಇವರಿಂದ ಕೇಳುತ್ತ ಬಂದ ನನಗೆ ಈಗಲೂ ಸ್ಮರಿಸಿಕೊಂಡರೆ ಇಂದ್ರಿಯಗಳೆಲ್ಲ ಕಿವಿಯಾಗಿ ಭಕ್ತಿಯಲ್ಲಿ ಆನಂದದ ಆ ರಸನಿಮಿಷಗಳು ಮೂಡಿ ಹೇಳಲಾಗದ ಅನುಭವ.

ಸುಮಾರು ಎರಡು ದಶಕಗಳಿಂದ ಹಾಡುತ್ತ ಬಂದಿರುವ ಗುರುಬಸಯ್ಯ ಬಡತನದ ಮನೆಯಲ್ಲಿ ಹುಟ್ಟಿ ಬಡತನದಿಂದಲೇ ಸಾಗಿ ಬಂದಿದ್ದರೂ ಶಿರಿಕಂಠದಿಂದ ಶ್ರೀಮಂತ ಕಲಾವಿದ. ಸಂಗೀತದ ಅಭ್ಯಾಸ ಪಡೆದ ಈ ಕಲಾವಿದ ಹಾಡಿನ ಅರ್ಥ, ಹಾಡಿನ ರಾಗ ಏರಿಳಿತ ಬಲ್ಲವರಾಗಿದ್ದರಿಂದ ಹಾಡುಗಳು ಅರ್ಥಪಡೆದು ಮೂಡಿಬರುತ್ತವೆ. ಭಜನಾ ಹಾಡುಗಳಲ್ಲಿ, ಭಕ್ತಿಗೀತೆಗಳಲ್ಲಿ, ತತ್ವಪದಗಳಲ್ಲಿ ಇವರಿಗೆ ಆ ಊರಲ್ಲಿ ಸರಿಗಟ್ಟುವವರಿಲ್ಲವೆಂದರೆ ಅತಿಶಯೋಕ್ತಿಯಾಗದು. ಹಾರ್ಮೋನಿಯಂ ನುಡಿಸುತ್ತ ಭಕ್ತಿಯಲಿ ಹಾಡಲು ಪ್ರಾರಂಭಿಸಿದರೆ ಆ ರಾಗತರಂಗಗಳು ಸಾವಿರಾರು ಭಕ್ತರ ಕೇಳುಗರ ಮನದಲಿ ಮೂಡಿ ಆನಂದ ನೀಡುತ್ತವೆ.

ಗುರುಬಸಯ್ಯ ಭಜನಾ ಹಾಡುಗಾರಿಕೆಗೆ ಸೀಮಿತರಾಗದೆ ವಿವಿಧ ಜಾನಪದ ಕಲಾಪ್ರಕಾರಗಳಲ್ಲಿಯೂ ಸೇವೆಸಲ್ಲಿಸಿದ್ದಾರೆ. ಇವರು ಅಭಿನಯದಲ್ಲಿಯೂ ಆಕರ್ಷಿಸಿದ್ದಾರೆನ್ನುವುದಕ್ಕೆ ಇವರು ಅಭಿನಯಿಸಿದ ಗಿರಿಜಾಕಲ್ಯಾಣ, ದ್ರೋಣಪರ್ವ, ಕರ್ಣಪರ್ವ, ಲವಕುಶರ ಕಾಳಗ, ಕನಕಾಂಗಿ ಪ್ರಮುಖ ಬಯಲಾಟಗಳಾಗಿವೆ. ಹಿಮ್ಮೇಳ ಮುಮ್ಮೇಳ ಹಾಡಿನಲ್ಲಿಯೂ ಗುರುತಿಸಿಕೊಂಡಿದ್ದಾರೆ. ಹಾರ್ಮೋನಿಯಂ ನುಡಿಸುವುದರ ಜೊತೆ ಭಜನಾ ಹಾಡಿನ ವಾದ್ಯಗಳನ್ನೆಲ್ಲ ನುಡಿಸುತ್ತಾರೆ.

ಜಾನಪದ ಹಾಡುಗಳಿಂದ ಬಿಸರಳ್ಳಿ, ಕಮಲಾಪುರ, ಕನಕಾಪುರಗಳಲ್ಲಿ ಉತ್ತಮ ಹಾಡುಗಾರರೆಂದು ಗುರುತಿಸಿಕೊಂಡ ಗುರುಬಸಯ್ಯನವರು ಭಜನಾ ಹಾಡುಗಳಿಂದ ಸ್ಪರ್ಧೆಯಲ್ಲಿ ೨೦೦೨ರಲ್ಲಿ ಗಂಗಾವತಿ, ಕಾತರಕಿ, ಕೊಪ್ಪಳಗಳಲ್ಲಿ ಪ್ರಥಮ ಸ್ಥಾನ ಪಡೆದು ಗೌರವಾನ್ವಿತರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ದ್ವಾರಹಳ್ಳಿಯಲ್ಲಿ (೨೦೦೬) ಪ್ರಥಮ ಸ್ಥಾನ ಪಡೆದಿದ್ದು ವಿಶೇಷ ಉಲ್ಲೇಖಕ್ಕೆ ಬರುತ್ತಿದೆ.

ಗುರುಬಸಯ್ಯನವರ ವೈಯಕ್ತಿಕ ಬದುಕು ಹಲವಾರು ಏರಿಳಿತ ಕಂಡು ಹಲವಾರು ತಿರುವು ಪಡೆದು ಇದೀಗ ಬೆಟಗೇರಿ ಗ್ರಾಮದಲ್ಲಿ ನೆಲೆನಿಂತ ನೆಮ್ಮದಿಯ ಬದುಕು. ೧೯೮೮-೮೯ರಲ್ಲಿ ಸೈನ್ಯದಲ್ಲಿ ಸೇರಿ ಮಧ್ಯಪ್ರದೇಶದಲ್ಲಿ ತರಬೇತಿ ಪಡೆದು

ಹಲವಾರು ಕಷ್ಟ–ನೋವು ಸಹಿಸಿ ದೇಶಸೇವೆ ಗೈದು ಬಂದದ್ದು ಅವರ ಬದುಕಿನಲ್ಲಿ ಒಂದು ಮೈಲಿಗಲ್ಲು.

ಶ್ರೀಮತಿ ಶಾಂತಾ ಹಿರೇಮಠ ಅವರನ್ನು ಧರ್ಮಪತ್ನಿಯನ್ನಾಗಿ ಪಡೆದು ಉತ್ತಮ ಬದುಕಿನಿಂದ ಸಾಗಿರುವ ಈ ದಂಪತಿಗಳಿಗೆ ನವೀನ, ವಿನಯ, ವೀರೇಶ, ಮೂರು ಜನ ಮಕ್ಕಳು. ನಾಡು–ನುಡಿಯ ಸೇವೆಗೈಯುತ್ತ ಕಲೆ–ಸಾಹಿತ್ಯದಲ್ಲಿ ತಮ್ಮನ್ನು ಅರ್ಪಿಸಿಕೊಂಡು ಸಾಗಿರುವ ಗುರುಬಸಯ್ಯ ನಾಡಿನ ಹೆಮ್ಮೆಯ ಕಲಾವಿದ.

**ಗುರುಬಸಯ್ಯ ಬ್ರಹನ್ಮಠ**
**ಸಾ : ಬಟಗೇರಿ, ತಾ : ಜಿ : ಕೊಪ್ಪಳ**

## ಜಗದೀಶ ಬಸಪ್ಪ ಭಾವಿ

ಹಳ್ಳಿಗಳಲ್ಲಿ ಮೊದಲಿನಂತೆ ಉತ್ಸಾಹವಿಲ್ಲ. ಬಯಲಾಟಗಳಿಗೆ ಈಗಿನ ಯುವಕರಲ್ಲಿ ಆಸಕ್ತಿಯಿಲ್ಲ. ಆಗಿನ ದಿನಗಳೇ ಬೇರೆ, ಈಗಿನ ದಿನಗಳೇ ಬೇರೆಂದು ಹೇಳುತ್ತ ತಮ್ಮ ಕಾಲದ ಜಾನಪದ ರಂಗಭೂಮಿಯ ವೈಭವವನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತ ಖುಷಿಪಡುವ ಜಗದೀಶ ಅವರ ಮಾತಿನಲ್ಲಿ ಸತ್ಯತೆ ಇದೆ.

ಈ ದಿನಗಳಲ್ಲಿ ಎಲ್ಲಾ ದೇಸಿ ಕಲೆಗಳು ನಶಿಸುತ್ತಿವೆ. ನಮ್ಮ ಕಲೆ, ಸಂಸ್ಕೃತಿ ಮಾಯವಾಗಿ ಪಾಶ್ಚಿಮಾತ್ಯ ಕಲೆಗಳು ಹಳ್ಳಿಗಳಲ್ಲಿಯೂ ಪಸರಿಸುತ್ತಿವೆ. ನಮ್ಮ ಕಲೆ, ನಮ್ಮ ಸಂಸ್ಕೃತಿ, ನಮ್ಮ ಯುವ ಪೀಳಿಗೆಗೆ ತಿಳಿಸುವುದು, ಆಸಕ್ತಿ ಮೂಡಿಸುವುದು ಅವಶ್ಯವಿದೆ. ಆ ನಿಟ್ಟಿನಲ್ಲಿ ಜಗದೀಶ ಅವರ ಪಾತ್ರ ಪ್ರಸಂಶನೀಯ. ಮೋರನಾಳಂಥ ಚಿಕ್ಕಹಳ್ಳಿಯಲ್ಲಿ ಯುವಕರನ್ನು ಒಂದುಗೂಡಿಸಿ ಬಯಲಾಟದ ಬಗ್ಗೆ ಹಿಂದಿನ ಕಲಾ ವೈಭವದ ಬಗ್ಗೆ ತಿಳಿಸುತ್ತ ಆಸಕ್ತಿ ಹುಟ್ಟಿಸಿ ಬಯಲಾಟ ಕಲಿಸುತ್ತ ಪ್ರಯೋಗ ಗೊಳಿಸುತ್ತಿರುವುದು ಸ್ತುತ್ಯಾರ್ಹ.

ಕೊಪ್ಪಳ ತಾಲೂಕಿನ ಮೋರನಾಳ ಗ್ರಾಮದ ಬಸಪ್ಪ ಯಲ್ಲಮ್ಮ ದಂಪತಿಗಳ ಒಬ್ಬನೇ ಮಗನಾಗಿ ಜನ್ಮ ಪಡೆದ ಜಗದೀಶಪ್ಪನವರಿಗೆ ಈಗ ೬೨-೬೫ರ ಪ್ರಾಯ. ಓದಿದ್ದು ೫ನೇ ತರಗತಿ, ತಂದೆ-ತಾಯಿ ಕೂಲಿ ಉದ್ಯೋಗ ಮಾಡಿಕೊಂಡು ಬಂದವರು. ತಂದೆಗೂ ಬಯಲಾಟದ ಕಲೆ ಅಂಟಿಕೊಂಡಿತ್ತು. ಬಹುಬೇಗ ತೀರಿಹೋದರು. ತಂದೆಯ ಪಾತ್ರ ನೋಡಿ ತಾನೂ ಅಭಿನಯಿಸಬೇಕೆನ್ನುವ ಆಶೆ ಮೂಡಿದಾಗ ಸಹಜವಾಗಿ ಜಗದೀಶಪ್ಪ ಆಕಡೆ ವಾಲಿದ್ದುಂಟು.

೧೯೬-೧೯೮ರ ಹರೆಯದಲ್ಲಿ ಕನಕಾಂಗಿ ಕಥೆಯಲ್ಲಿ ಬಲರಾಮ ಪಾತ್ರದಿಂದ ಅಟ್ಟವೇರಿದ ಈ ಕಲಾವಿದ ಅಭಿನಯ ಕಲಿತದ್ದು ಬಿಸಹಳ್ಳಿಯ ಭರಮಪ್ಪ ಕಟಗಾಲಿ

ಅವರಿಂದ. ಭರಮಪ್ಪ ಕಟಗಾಲಿ ಅದ್ಭುತ ಅಪ್ರತಿಮ ಕಲಾವಿದ ; ಕಲಾ ನಿರ್ದೇಶಕ ಅಂಥವರ ಗರಡಿಯಲ್ಲಿ ತಯಾರಾದ ಜಗದೀಶ ಅವರೂ ಬಹುಬೇಗ ಗುರುತಿಸಿಕೊಂಡು ಜನಪ್ರೀಯ ಕಲಾವಿದರಾದರು.

ವಿರಾಟ ಪರ್ವದಲ್ಲಿ ಅರ್ಜುನ, ಕರ್ಣ ಪರ್ವದಲ್ಲಿ ದುಶ್ಯಾಸನ, ಲವ-ಕುಶದಲ್ಲಿ ಕುಶ, ಕಿರಾತರ್ಜುನ ಕಾಳಗದಲ್ಲಿ ಭೀಮ, ದೇವಿ ಕಥೆಯಲ್ಲಿ – ದೇವಿ, ಸುಗಂಧ ಪುಷ್ಪದಲ್ಲಿ ಅರ್ಜುನ ಇವರ ಪ್ರಮುಖ ಹಾಗೂ ಜನಮನ ಸೆಳೆದ ಪಾತ್ರಗಳು.

ಸುಮಾರು ೨೦ ವರ್ಷಗಳಿಂದ ಬಯಲಾಟ ಮಾಸ್ತರರಾಗಿ ಸುತ್ತಲೂ ಹಳ್ಳಿಗಳಲ್ಲಿ ತರಬೇತಿ ನೀಡಿ ಬಯಲಾಟ ಪ್ರದರ್ಶಿಸಿ ಬಂದ ಜಗದೀಶ ಮಾಸ್ತರರು ಪ್ರಸಿದ್ಧಿ ಪಡೆದವರು. ಇವರು ಹಾರ್ಮೋನಿಯಂ ಕಲಿತಿದ್ದು ಅಳವಂಡಿಯ ಲೋಕಪ್ಪ ಮಾಸ್ತರರಿಂದ. ವಿರಾಟ ಪರ್ವ, ಕರ್ಣ ಪರ್ವ, ದೇವಿ ಕಥೆ, ಮೈಷಾಸುರ ಮರ್ಧನಿ, ಲವಕುಶರ ಕಾಳಗ ಇವರು ಕಲಿಸಿದ ಆಟಗಳು ಕೊಪ್ಪಳ ತಾಲೂಕು, ಮುಂಡರಗಿ ತಾಲೂಕು, ರೋಣ ತಾಲೂಕಿನ ಹಳ್ಳಿಗಳಲ್ಲಿ ಬಯಲಾಟ ಕಲಿಸಿ ಬಂದವರು.

ಇವರ ದೀರ್ಘ ಜಾನಪದ ರಂಗಸೇವೆ ಗುರುತಿಸಿ ಕರ್ನಾಟಕ ಸರಕಾರ ೨೦೦೫ ರಿಂದ ಮಾಸಾಶನ ಮಂಜೂರಿಸಿದೆ. ಸುತ್ತಲು ಹಳ್ಳಿಯ ಬಯಲಾಟ ತಂಡಗಳು ಸನ್ಮಾನಿಸಿ ಗೌರವಿಸಿವೆ.

**ಜಗದೀಶ ಭಾವಿ**
**ಬಯಲಾಟ ಮಾಸ್ತರ**
**ಮೋರನಾಳ**
**ಪೊ : ಬಿಟಗೇರಿ**
**ತಾ : ಜಿ : ಕೊಪ್ಪಳ**

## ಬಡಕಪ್ಪ ಮಾಸ್ತರ ಬಳ್ಳಾರಿ

ಕೊಪ್ಪಳ ತಾಲೂಕಿನ ಕಾತರಕಿ ಚಿಕ್ಕಗ್ರಾಮ, ಆದರೂ ಅಲ್ಲಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ಅಲ್ಲಿಯ ಬಯಲಾಟ ತಂಡ ಬಹಳಷ್ಟು ಪ್ರಸಿದ್ಧಿ ಹೊಂದಿದೆ ಅನೇಕ ಕಡೆ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಸ್ಥಾನಗಳಿಸಿ ಸುತ್ತಲೂ ಹಳ್ಳಿಗಳಲ್ಲಿ ಹೆಸರು ಪಡೆದಿದೆ. ಯುವಕಲಾವಿದರು ಈ ತಂಡದಲ್ಲಿ ಬಹಳಷ್ಟು ಆಸಕ್ತಿಯಿಂದ ಕಾರ್ಯನಿರ್ವಹಿಸುತ್ತಾರೆ ಈ ತಂಡದ ಮಾಸ್ತರರೇ ಬಡಕಪ್ಪ ಬಳ್ಳಾರಿ.

ಬಡಕಪ್ಪ ಕಾತರಕಿಯ ಒಕ್ಕಲುತನ ಮನೆಯ ಮುದುಕಪ್ಪ ಯಲ್ಲಮ್ಮ ದಂಪತಿಗಳ ಎರಡನೇ ಮಗನಾಗಿ ಜನ್ಮಪಡೆದವರು. ಓದಿದ್ದು ನಾಲ್ಕನೇ ತರಗತಿ. ವಯಸ್ಸು ಸುಮಾರು ೬೦-೬೨. ತಂದೆ ಕೂಡ ಬಯಲಾಟದ ಕಲಾವಿದರಾಗಿದ್ದರಿಂದ ಬಾಲ್ಯದಿಂದಲೇ ಬಯಲಾಟದ ಹುಚ್ಚು. ಪ್ರಾಯದಲ್ಲಿ ರಂಗಭೂಮಿ ಪ್ರವೇಶ. ಪ್ರಪ್ರಥಮ "ದ್ರೋಣ ಪರ್ವ" ಕಥೆಯಲ್ಲಿ ಸುಭದ್ರೆ ಪಾತ್ರ. ಕೊಟ್ರಯ್ಯಜ್ಜ, ಅಬ್ಬಿಗೇರಿ ಹನುಮಂತಪ್ಪ ತಳವಾರ ಬಯಲಾಟದ ಗುರುಗಳು.

ಬಡಕಪ್ಪ ಕಲಾವಿದನಾಗಿ ಅಭಿನಯಿಸಿದ ಪಾತ್ರಗಳೆಂದರೆ...... ಲವಕುಶ-ಸೀತಾ, ಪ್ರಮೀಲಾ ದರ್ಬಾರ - ಪ್ರಮೀಳಾ ದ್ರೋಣ ಪರ್ವದಲ್ಲಿ ಹೆಚ್ಚು ಆಕರ್ಷಿಸಿದ್ದುಂಟು. ಪ್ರತಿವರ್ಷ ಊರ ಹನುಮಪ್ಪನ ಜಾತ್ರೆಗೆ ಬಯಲಾಟ ಪ್ರದರ್ಶನಗೊಳ್ಳುತ್ತಲೇ ಬಂದದ್ದರಿಂದ ಬಡಕಪ್ಪನ ಒಂದಿಲ್ಲ ಒಂದು ಪಾತ್ರ ಇದ್ದೇ ಇರುತ್ತಿತ್ತು. ಎಲ್ಲ ಬಲ್ಲವ ನಾಗಿದ್ದರಿಂದ ಊರಿನವರ ಪ್ರೋತ್ಸಾಹ ಬಡಕಪ್ಪನನ್ನು ಮಾಸ್ತರನನ್ನಾಗಿ ಮಾಡಿತು. ನೀಲಗಿರಿ ಹುಲಿಗೆಪ್ಪ ಭಜಂತ್ರಿ ಹಾಗೂ ಗುಡ್ಲಾನೂರು ಹನುಮಂತಪ್ಪ ಹಾರ್ಮೋನಿಯಂ ಹಾಗೂ ರಾಗ ಹೇಳಿಕೊಟ್ಟು ಮಾಸ್ತರನಾಗುವ ಸಾಮರ್ಥ್ಯ ನೀಡಿದ್ದರು.

೧೯೯೦ ರಿಂದ ಬಡಕಪ್ಪ ಮಾಸ್ತರ ನಿರ್ದೇಶಿಸಿ ಪ್ರಯೋಗಿಸಿದ ಕಥೆಗಳೆಂದರೆ..... ತ್ರಿಪುರ ಸಂಹಾರ, ಕುರುಕ್ಷೇತ್ರ, ದ್ರೋಣಪರ್ವ, ರತಿಕಲ್ಯಾಣಿ, ಪ್ರಮೀಲಿ ದರ್ಬಾರ, ಮೈಷಾಸುರ ಮರ್ಧನಿ, ಪಾರ್ವತಿ ವಿಜಯ, ದೇವಿ ಮಹಾತ್ಮೆ ಪ್ರಮುಖ ಆಟಗಳಾಗಿವೆ. ಕುಣಿತ, ಹಾಡು, ಅಭಿನಯ ಹೇಳಿ ಕೊಡುತ್ತ ಅನೇಕ ಕಲಾವಿದರನ್ನು ತಯಾರಿಸಿದ ಕೀರ್ತಿ ಬಡಕಪ್ಪ ಮಾಸ್ತರದಾಗಿದೆ. ಕೊಪ್ಪಳ ತಾಲೂಕಿನ ಬೂದಿಹಾಳ, ಬಾಹದ್ದೂರಬಂಡಿ, ಗುಡ್ಲಾನೂರು, ಬಿಸರಹಳ್ಳಿ, ಕಾಮನೂರು, ನೀರಲಗಿ ; ಪ್ರಮುಖ ಹಳ್ಳಿಗಳಾಗಿವೆ. ಇವರ ನಿರ್ದೇಶನದಲ್ಲಿ "ತಾಯಮ್ಮ ಬಯಲಾಟ ತಂಡ" ಅನೇಕ ಕಡೆ ಸ್ಪರ್ಧೆಗೆ ಹೋಗಿ ಬಂದಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ೧೪ ಬಯಲಾಟಗಳ ಸ್ಪರ್ಧೆಯಲ್ಲಿ (೨೦೦೩) ಪ್ರಥಮ ಸ್ಥಾನ ; ಗಂಗಾವತಿ ತಾಲೂಕಿನ ಕನಕಗಿರಿಯಲ್ಲಿ ಜಾನಪದ ಅಕಾಡೆಮಿಯಿಂದ ಜರುಗಿದ ಬಯಲಾಟ ಸ್ಪರ್ಧೆಯಲ್ಲಿ (೨೦೦೬) ದ್ವಿತಿಯ ಸ್ಥಾನ ಗಳಿಸಿದ ಕೀರ್ತಿ ಈ ತಂಡದ್ದು.

ಬಡಕಪ್ಪ ಮಾಸ್ತರ ಆರ್ಥಿಕವಾಗಿ ಅನೇಕ ಸಮಸ್ಯೆಗಳನ್ನೆದುರಿಸುತ್ತ ಬಂದಿದ್ದರೂ ಬಯಲಾಟ ತಂಡಗಳಿಗೆ ಇಷ್ಟೇ ಗೌರವಧನ ಬೇಕೆಂದು ಒತ್ತಾಯಿಸಿದವರಲ್ಲ. ಈಗೀಗ ಸುಮಾರು ೨೦೦೦ ರೂ. ಗಳಿಂದ ೩೦೦೦ ರೂ. ಗೌರವಧನ ಪಡೆಯುತ್ತಾರೆ. ಕರ್ನಾಟಕ ಸರಕಾರದಿಂದ ಪ್ರತಿ ತಿಂಗಳು ೧೦೦೦ ರೂ. ಗೌರವಧನ ಬರುತ್ತಿದೆ. ಸಧ್ಯ ತೃಪ್ತಿಯ ಬದುಕು ಅವರದು. ಯಾವುದೇ ಹಳ್ಳಿಗೆ ಬಯಲಾಟ ಕಲಿಸಲು ಹೋದಾಗ ಕನಿಷ್ಟ ಒಂದು ತಿಂಗಳು ಅಲ್ಲಿದ್ದು ಕಲಾವಿದರಿಗೆಲ್ಲ ಕುಣಿತ, ಹಾಡು, ಅಭಿನಯ ಹೇಳಿ ಕೊಟ್ಟು ಯಶಸ್ವಿ ಪ್ರಯೋಗ ನೀಡಿ ಬರುತ್ತಾರೆ.

ಬಡಕಪ್ಪನಿಗೆ ನಾಲ್ಕು ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು. ಗಂಡು ಮಕ್ಕಳಾರೂ ಈ ಕ್ಷೇತ್ರಕ್ಕೆ ಬಂದಿಲ್ಲ.

**ಬಡಕಪ್ಪ ಮುದಕಪ್ಪ ಬಳ್ಳಾರಿ**
**ಅಂಚೆ : ಕಾತರಕಿ**
**ಜಿ : ತಾ : ಕೊಪ್ಪಳ**

## ಶಂಕರಪ್ಪ ಹೊರಪೇಟ

ಶ್ರೀ ಶಂಕರಪ್ಪ ಬಯಲಾಟದ ಕಲಾವಿದರಾಗಿ, ಮುಮ್ಮೇಳ ಹಾಡುಗಾರರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದವರು. ೬೦ರ ಗಡಿಯಲ್ಲಿರುವ ಈ ಮಾಸ್ತರರಿಗೆ ಇನ್ನೂ ಅದೇ ಆಸಕ್ತಿ, ಅದೇ ಉತ್ಸಾಹ. ನಿರಂತರ ರಂಗ ಭೂಮಿ ಸೇವೆ ಸಾಗಿಯೇ ಇದೆ. ಜಿಲ್ಲೆಯ ಉದ್ದಗಲಕ್ಕೂ ನಡದೇ ಇದೆ. ಎಲ್ಲಿಯೇ ಕರೆಯಲಿ ಹೋಗಿ ಆಟ ಕಲಿಸಿ ಯಶಸ್ವಿಯಾಗಿ ಪ್ರಯೋಗಿಸಿ ಬರುವ ಶಂಕರಪ್ಪ ಮಾಸ್ತರ ಈ ಭಾಗದ ಜನಪ್ರಿಯ ಮಾಸ್ತರರು.

ಕೊಪ್ಪಳ ತಾಲೂಕಿನ ಮೋರನಾಳ ಗ್ರಾಮದ ಬೇಸಾಯ ಮನೆತನದ ಮಲ್ಲಪ್ಪ-ಮರಿಯಮ್ಮ ದಂಪತಿಗಳ ಹಿರಿಯ ಮಗ. ಶಂಕರಪ್ಪ ಓದಿದ್ದು ೪ನೇ ತರಗತಿ. ಹಳ್ಳಿಯ ಸಹಜ ಆಟ, ಭಜನೆ, ಹಾಡುಗಾರಿಕೆ ಬಾಲ್ಯದಲ್ಲಿಯೇ ಆಕರ್ಷಿಸಿವೆ. ಭಜನಾ ತಂಡದಲ್ಲಿ ಹಾಡುತ್ತ ಹಾಡುತ್ತ ಅಲ್ಪ-ಸ್ವಲ್ಪ ಹಾರ್ಮೋನಿಯಂ ಕಲಿತಿದ್ದುಂಟು. ಊರಲ್ಲಿ ಜಾತ್ರೆ ಉತ್ಸವಗಳಲ್ಲಿ ಪ್ರಯೋಗಗೊಳ್ಳುತ್ತಿದ್ದ ಬಯಲಾಟ ನೋಡಿದಾಗಲೆಲ್ಲ ತಾನೂ ಅಂಥ ಪಾತ್ರಗಳನ್ನು ಮಾಡಿ ಸೈ ಅನ್ನಿಸಿಕೊಳ್ಳಬೇಕೆಂಬ ಆಶೆ ಶಂಕರಪ್ಪನದಾಗಿತ್ತು.

೭೧-೭೨ರಲ್ಲಿ "ಕರ್ಣಾರ್ಜುನರ ಕಾಳಗ"ದಲ್ಲಿ ಪ್ರಪ್ರಥಮ ಬಣ್ಣ ಹಚ್ಚಿದ ಪಾತ್ರ. ನಂತರ ಅದೇ ಕಥೆಯಲ್ಲಿ ಭೀಮನ ಪಾತ್ರ, "ಲವಕುಶ"ದಲ್ಲಿ ಲವನ ಪಾತ್ರ "ರಾಮಾಂಜನೇಯ ಯುದ್ಧ"ದಲ್ಲಿ ಆಂಜನೇಯ, "ಸುಗಂಧ ಪುಷ್ಪ"ದಲ್ಲಿ ಭೀಮ, "ಲವ ಕುಶ"ದಲ್ಲಿ ಸೀತೆ ಹೀಗೆ ಊರಲ್ಲಿ ಜರುಗುವ ಬಯಲಾಟಗಳಲ್ಲಿ ಶಂಕರಪ್ಪನ ಪಾತ್ರ ಇದ್ದೇ ಇರುತ್ತಿತು. ಸ್ತ್ರೀ ಹಾಗೂ ಪುರುಷ ಪಾತ್ರಗಳಲ್ಲಿ ಅಭಿನಯಿಸುತ್ತ ಉತ್ತಮ ಕಲಾವಿದನೆನ್ನುವ ಕೀರ್ತಿ ಶಂಕ್ರಪ್ಪನದಾಯಿತು.

ಹಾಡುಗಳನ್ನು-ಹಾರ್ಮೋನಿಯಂನ್ನು ಬಿಸರಹಳ್ಳಿಯ ಭರಮಪ್ಪ ಕಟಗಾಲಿ ಮಾಸ್ತರರಲ್ಲಿ ಕಲಿತು ಕ್ರಮೇಣ ಬಯಲಾಟದ ಮಾಸ್ತರನಾಗಿ ಆಕರ್ಷಿಸಿದ. ಊರಲ್ಲಿ ಯುವಕರಿಗೆ ತರಬೇತಿ ನೀಡಿ ಆಟಗಳನ್ನು ಪ್ರದರ್ಶಿಸಿದಂತೆ ಸುತ್ತಲು ಹಳ್ಳಿಗಳಿಂದ ಆಮಂತ್ರಣ ಬರಹತ್ತಿದವು. ಭೈರಾಪುರದಲ್ಲಿ ವಿರಾಟಪರ್ವ, ಚಿಕ್ಕಸಿಂದೋಗಿಯಲ್ಲಿ ಬಬ್ರುವಾಹನ ಕಾಳಗ, ಮೋರನಾಳದಲ್ಲಿ ಲವಕುಶ ಹಾಗೂ ದೇವಿಕಥೆ ಕೊಪ್ಪಳ, ಮುಂಡರಗಿಯಲ್ಲಿ ದೇವಿ ಕಥೆ ಕಲಿಸಿ ಆಡಿಸಿ ಬಂದ ಶ್ರೇಯಸ್ಸು ಈ ಮಾಸ್ತರದು.

ಬೇಸಾಯ ಶಂಕರಪ್ಪನ ಉದ್ಯೋಗವಾಗಿದ್ದರೂ ಬಹುಪಾಲು ಸಮಯ ಜಾನಪದ ರಂಗಭೂಮಿಗನೇ ಮೀಸಲು. ಉದ್ಯೋಗಕ್ಕಿಂತ ರಂಗಭೂಮಿಯೇ ಪ್ರಧಾನವಾಗಿ ಅದೇ ಬದುಕಿಗೂ ಆಧಾರವಾಗಿ ಸಾಗಿಬಂದಿದೆ. ಒಂದೊಂದು ಕಥೆಗೆ ಕನಿಷ್ಟ ೨೦೦೦/ ೩೦೦೦ ರೂ. ಗೌರವಧನ ದೊರೆಯುತ್ತದೆ.

ಶಂಕರಪ್ಪ ಬಾಲ್ಯದಲ್ಲಿ ಕಾಣುತ್ತಿದ್ದ ಕನಸು ನನಸಾಗಿದೆ, ಬಯಲಾಟ ಹಾಡುಗಾರನಾಗಿ, ಕಲಾವಿದನಾಗಿ, ಮಾಸ್ತರನಾಗಿ ಸೇವೆ ಸಲ್ಲಿಸುತ್ತ ಜನಮನ ಸೆಳೆದು ಊರಿನ ಹಿರಿಯರ, ಅಭಿಮಾನಿಗಳ, ಕಲಾವಿದರ ಗೌರಗಳಿಗೆ ಪಾತ್ರನಾಗಿದ್ದಾನೆ. ಕೊಪ್ಪಳ ತಾಲೂಕಾರಂಗ ಕಲಾವಿದರ ಸಂಘ, ಗಂಗಾವತಿ ತಾಲೂಕಿನ ಕನಕಗಿರಿಯ ಪಂಚಾಯತಿ ಹಾಗೂ ಅಕಾಡೆಮಿ ಸಂಯುಕ್ತಾಶ್ರಯದ ಬಯಲಾಟ ಸ್ಪರ್ಧೆ ಸಂದರ್ಭದಲ್ಲಿ ಸನ್ಮಾನ ಹಾಗೂ ಗೌರವ ಪತ್ರ ಲಭಿಸಿವೆ. ಆಟ ಕಲಿಸಲು ಹೋದಾಗಂತೂ ತಂಡದಿಂದ ಎಲ್ಲಾ ಕಡೆ ಸನ್ಮಾನ ಗೌರವ ಪಡೆದದ್ದುಂಟು.

**ಶಂಕರಪ್ಪ ಹೊರಪೇಟ**
**ಬಯಲಾಟ ಮಾಸ್ತರ**
**ಮೋರನಾಳ**
**ಪೊ : ಬಟಗೆರ**
**ತಾ : ಜಿ : ಕೊಪ್ಪಳ**

## ಸಾವಿತ್ರಿ ಮುಜುಮದಾರ

ಸಾವಿತ್ರಿ ಮುಜುಮದಾರ ಕುಷ್ಟಗಿ ತಾಲೂಕಿನ ಹನುಮಸಾಗರದ ಶ್ರೀ ನಾರಾಯಣರಾವ್ ಶ್ರೀಮತಿ ವಿಜಯಲಕ್ಷ್ಮಿ ದಂಪತಿಗಳ ಮಗಳು. ಜನನ ೩೦-೪-೧೯೬೬, ವಿದ್ಯಾಭ್ಯಾಸ ಎಂ. ಎ., ಎಲ್.ಎಲ್.ಬಿ. ಸಧ್ಯ ಕೊಪ್ಪಳದ ಪತಿಯ ಮನೆಯಲ್ಲಿದ್ದು ಪತ್ರಿಕೋದ್ಯಮ ಹಾಗೂ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ಜೊತೆಗೆ ಕಲೆ, ಸಾಹಿತ್ಯ, ಸಂಗೀತದಲ್ಲಿಯೂ ಆಸಕ್ತಿ, ವಿಶೇಷವಾಗಿ ಗೊಂಬೆ ತಯಾರಿಕೆ, ಗೊಂಬೆಗಳ ಪ್ರದರ್ಶನ, ಗೊಂಬೆಗಳ ತರಬೇತಿ ಗಮನಾರ್ಹ.

ಸಾವಿತ್ರಿಯವರು ತಯಾರಿಸಿ ಪ್ರದರ್ಶಿಸುವ ಗೊಂಬೆಗಳನ್ನು ವೀಕ್ಷಿಸುವಾಗ ಬಹಳಷ್ಟು ಖುಷಿ ಯಾಗುವುದರ ಜೊತೆ ಮಂತ್ರ ಮುಗ್ಧರಾಗುತ್ತೇವೆ. ಕಣ್ಮನ ಸೆಳೆಯುವ ವೈವಿಧ್ಯಮಯ ಗೊಂಬೆಗಳು, ವೈವಿಧ್ಯಮಯ ಉಡುಗೆ ತೊಡಿಗೆಯಲ್ಲಿ ಬಹಳಷ್ಟು ಆಕರ್ಷಿಸುತ್ತವೆ. ಅವುಗಳ ತಯಾರಿಕೆಯ ಹಿಂದಿನ ಶ್ರಮ, ಶ್ರದ್ಧೆ, ತಾಳ್ಮೆ ಪ್ರತಿಭೆ ಪ್ರಸಂಶನೀಯ.

ಬೆಂಗಳೂರಿನ ಗೊಂಬೆ ಪಾರ್ವತಮ್ಮನವರಲ್ಲಿ ತರಬೇತಿ ಪಡೆದು ಬಂದಿರುವ ಸಾವಿತ್ರಿಯವರು ಗೊಂಬೆಗಳಿಗಾಗಿ ಬಳಿಸುವ ವಸ್ತಗಳೆಂದರೆ ಹತ್ತಿ, ತಂತಿ, ದಾರ ಮತ್ತು ಅಲಂಕಾರ ವಸ್ತುಗಳು. ಅರ್ಧ ಫೂಟ್ ನಿಂದ ಮೂರು ಫೀಟ್ ಎತ್ತರದ ನೂರಾರು ಗೊಂಬೆಗಳನ್ನು ತಯಾರಿಸಿದ್ದಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶದ ಹಳ್ಳಿಗರ ಬದುಕು, ಕಲೆ, ಸಂಸ್ಕೃತಿ, ಸಂಪ್ರದಾಯಗಳ ಜೊತೆಗೆ ನಿತ್ಯ ಬದುಕಿನ ವಸ್ತುಗಳನ್ನು ಅಳವಡಿಸಿ ಕೊಂಡಿರುವುದು ಗಮನಾರ್ಹ. ಕುಟ್ಟೋ-ಬೀಸೋ ಮಹಿಳೆಯರು, ಹಾಲು ಮೊಸರು ಮಾರುವ ಮಹಿಳೆ, ಕವಲೆತ್ತು, ಕರಡಿ ಕುಣಿತ, ಲಂಬಾಣಿ ಕುಣಿತ, ಬಯಲಾಟ ಮತ್ತು ಯಕ್ಷಗಾನ ಪಾತ್ರಗಳು, ಗೀಗೀ ಪದ ಹಾಡುವವರು ಹೀಗೆ ಹಳ್ಳಿಗರ ವೈವಿಧ್ಯಮಯ

ಕಲೆ, ಬದುಕು ಕುರಿತು ನಿರ್ಮಾಣಗೊಂಡ ನಿರ್ಮಾಣಗೊಳ್ಳುತ್ತಿರುವ ಗೊಂಬೆಗಳು ಪ್ರೇಕ್ಷಕರನ್ನು ಸೆರೆಹಿಡಿಯುತ್ತವೆ.

ಶ್ರೀಮತಿ ಸಾವಿತ್ರಿ ತಾವು ಕಲಿತು ಬಂದಿರುವ ಕಲೆಯನ್ನು ಸುತ್ತಲೂ ಉದ್ಯೋಗವಾಗುವಂತೆ ಮಾಡಿರುವ ಸಂಗತಿ ಗಮನಾರ್ಹ. ಕೊಪ್ಪಳ ಜಿಲ್ಲಾ ಕೈಗಾರಿಕಾ ಇಲಾಖೆಯಿಂದ ಪಿ. ಎಂ. ಆರ್. ವಾಂಹ್ ಮತ್ತು ವಿಶ್ವ ಟ್ರೈಜಿವಹ್ ಯೋಜನೆಯಡಿಯಲ್ಲಿ ಸುಮಾರು ಎಂಭತ್ತು ಮಹಿಳೆಯರಿಗೆ ತರಬೇತಿ ನೀಡಿದ್ದಾರೆ. ಭವಾನಿ ಮಹಿಳಾ ಸೇವಾ ಸಂಸ್ಥೆ ಕೊಪ್ಪಳ ಅಡಿಯಲ್ಲಿ ವರ್ಷಕ್ಕೆ ಐವತ್ತು ಮಹಿಳೆಯರಂತೆ ನಿರಂತರ ಐದು ವರ್ಷ ತರಬೇತಿ ನೀಡಿದ್ದಾಗಲಿ ಸರ್ವ ಶಿಕ್ಷಾ ಅಭಿಯಾನದ ಅಡಿಯಲ್ಲಿ ಎರಡುನೂರು ಮಕ್ಕಳಿಗೆ ಗೊಂಬೆ ತಯಾರಿಕೆ ತರಬೇತಿ ನೀಡಿರುವುದಾಗಲಿ ಸಣ್ಣ ಮಾತಲ್ಲ.

ಕೇಂದ್ರ ಸರಕಾರದ ಅಡಿಯಲ್ಲಿ ನಡೆಯುವ ಅಂತರ್ ರಾಷ್ಟ್ರೀಯ ವ್ಯಾಪಾರ ಮೇಳದಲ್ಲಿ ವಿ.ಐ.ಟಿ.ಸಿ. ಬೆಂಗಳೂರು ಇವರು ಕಳುಹಿಸಿಕೊಡುವ ವಸ್ತು ಪ್ರದರ್ಶನದಲ್ಲಿ ದೆಹಲಿಯ ಪ್ರಗತಿ ಮೈದಾನ ಮತ್ತು ದಿಲ್ಲಿ ಹಾತ್ ಗೊಂಬೆ ಪ್ರದರ್ಶನ ಮತ್ತು ಮಾರಾಟದಲ್ಲಿ ಕನಿಷ್ಟ ಐದುನೂರು ಗೊಂಬೆಗಳ ಮಾರಾಟ ಮಾಡಿಕೊಂಡು ಬರುತ್ತಾರೆ.

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಇಟಗಿ ಉತ್ಸವ, ಆನೆಗೊಂದಿ ಉತ್ಸವ, ಹಂಪಿ ಉತ್ಸವಗಳಲ್ಲಿ ಪ್ರದರ್ಶನ ನೀಡಿ ಬಂದ ಶ್ರೇಯಸ್ಸು ಈ ಕಲಾವಿದೆಯದು. ಮೈಸೂರು ದಸರಾ ಉತ್ಸವದಲ್ಲಿ ಜಿಲ್ಲಾ ಪಂಚಾಯತವತಿಯಿಂದ ಹೋಗಿ ಗೊಂಬೆಗಳ ಪ್ರದರ್ಶನ ನೀಡುತ್ತಾರೆ. ಅನೇಕ ಊರಿನ ಉತ್ಸವ ಜಾತ್ರೆಗಳಲ್ಲಿ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡುತ್ತಾರೆ. ಕೊಪ್ಪಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ನಿಮಿತ್ಯ ನಡೆಸಿದ ವಸ್ತು ಪ್ರದರ್ಶನ ಜಾನಪದ ಗೊಂಬೆಗಳ ಪ್ರದರ್ಶನಕ್ಕೆ ಮುಖ್ಯಮಂತ್ರಿ ದಿ. ಜೆ. ಹೆಚ್. ಪಟೇಲರಿಂದ ಬಹುಮಾನ ಬಂದಿದೆ. ನಾಡಿನ ಅನೇಕ ರಾಜಕೀಯ ಪ್ರಮುಖರಿಂದ, ಸಾಹಿತಿಗಳಿಂದ, ಜಾನಪದ ಅಕಾಡೆಮಿ ಅಧ್ಯಕ್ಷರಿಂದ ಸನ್ಮಾನ, ಪ್ರಶಸ್ತಿ ಪತ್ರಗಳು ಲಭಿಸಿದ್ದು ಹೆಮ್ಮೆಯ ಸಂಗತಿ.

ಶ್ರೀಮತಿ ಸಾವಿತ್ರಿಯವರ ಇನ್ನೊಂದು ಪ್ರಮುಖ ಸೇವೆಯಂದರೆ ನಾಟಿ ವೈದ್ಯೆಯಾಗಿ, ಕೊಪ್ಪಳ ಜಿಲ್ಲೆಯ ಸುಮಾರು ನೂರಾರು ಜನರಿಗೆ ಕಾಮಾಲೆ ರೋಗ ಬಂದಾಗ ಗಿಡಮೂಲಿಕೆ ಔಷಧಿ ನೀಡಿ ಗುಣಪಡಿಸಿದ್ದು. ಇಂದಿಗೂ ಹಳ್ಳಿಯ ಕಾಮಲೆ ಬಂದ ಬಡ ರೋಗಿಗಳು ಯಾವ ಶುಲ್ಕವಿಲ್ಲದೆ ಔಷಧಿ ಪಡೆದುಕೊಂಡು ಹೋಗುತ್ತಿರುತ್ತಾರೆ.

ಶ್ರೀಮತಿ ಸಾವಿತ್ರಿ ಕವಿತ್ರಿಯಾಗಿ, ಕಲಾವಿದೆಯಾಗಿ, ಪತ್ರಿಕೋದ್ಯಮಿಯಾಗಿ ಸಲ್ಲಿಸುತ್ತಿರುವ ಸೇವೆ ಅದರಲ್ಲೂ ಮಹಿಳಾಪರ ಹೋರಾಟ, ಮಹಿಳೆ ಸ್ವಾವಲಂಬಿಯಾಗಲು ನೀಡುವ ತರಬೇತಿ, ಸ್ವ-ಸಹಾಯ ಮತ್ತು ಸ್ತ್ರೀ ಶಕ್ತಿ ಮುಂತಾದ ವಿಷಯಗಳಲ್ಲಿ ಕಾರ್ಯಕ್ರಮ ನೀಡುತ್ತ ಕೊಪ್ಪಳ ಜಿಲ್ಲೆಯ ಜನಮನ ಸೆಳೆದ ಕಾರ್ಯಕರ್ತೆಯಾಗಿದ್ದಾರೆ. ಇವರ ಒಟ್ಟು ಸಾಧನೆ ಗಮನಿಸಿ ಸರಕಾರ ಕಿತ್ತೂರ ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀಮತಿ ಸಾವಿತ್ರಿಯವರ ಎಲ್ಲ ಸಾಧನೆಯ ಹಿಂದೆ ಪತಿ ಶ್ರೀ ರವೀಂದ್ರಕಾಂತನವರ ಅವರ ಸಹಕಾರವೂ ಅಷ್ಟೇ ಪರಿಗಣಿಸುವಂತಹದ್ದು. ಅವರ ಸಹಾಯ-ಸಹಕಾರವೂ ಸ್ಮರಿಸಿಯೇ ಮುನ್ನಡೆದಿರುವ ಶ್ರೀಮತಿ ಸಾವಿತ್ರಿ ತಮ್ಮ ಬದುಕಿನಲ್ಲಿ, ಸಂಸಾರದಲ್ಲಿ ಪರಸ್ಪರ ಹೊಂದಿಕೊಂಡು ಆದರ್ಶ ದಂಪತಿಗಳಗೆ ಮಾರ್ಗದರ್ಶನವಾಗಿದ್ದಾರೆ.

ಸಾವಿತ್ರಿ ಮುಜುಮದಾರ
ಸಂಪಾದಕಿ
"ಮಹಿಳಾ ಲೋಕ" ಮಾಸಪತ್ರಿಕೆ
ಜವಾಹರ ರಸ್ತೆ, ಕೊಪ್ಪಳ

## ಚೆನ್ನಪ್ಪ ಹೂಗಾರ

ಕೊಪ್ಪಳ ಸಮೀಪದ ಚುಕನಕಲ್ಲು ಚಿಕ್ಕಗ್ರಾಮ ಬಯಲಾಟ ಸೀನ್ಸಗೆ ಪ್ರಸಿದ್ಧಿ ಪಡೆದ ಹಳ್ಳಿ. ಬಯಲಾಟಕ್ಕೆ ಸಂಬಂಧಿಸಿದಂತೆ ಎಲ್ಲಾ ಸಲಕರಣೆಗಳು, ವೇಷ-ಭೂಷಣಗಳು ಇಲ್ಲಿ ಬಾಡಿಗೆ ದೊರೆಯುತ್ತವೆ. ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ ಕಥೆಗಳಿಗೆ ತಕ್ಕಂತೆ ಕಿರೀಟ, ಬಿಲ್ಲು ಬಾಣ, ಗದೆ, ಭುಜ ಕಿರೀಟಿ. ಹೀಗೆ ಕಥೆಗೆ ತಕ್ಕಂತೆ ಸಮಗ್ರ ಸಲಕರಣೆಗಳು ಇಂಥ ಚಿಕ್ಕಹಳ್ಳಿಯಲ್ಲಿ ದೊರೆಯುವುದು ಆಶ್ಚರ್ಯ ಹಾಗೂ ಸಂತಸದ ವಿಷಯ.

ಚೆನ್ನಬಸಪ್ಪ ಇಂಥ ಸಲಕರಣೆಗಳನ್ನು ಪೂರೈಸುತ್ತ ವಸ್ತ್ರಾಲಂಕಾರ, ಬಣ್ಣಲೇಪನ ಕೆಲಸಮಾಡುತ್ತ ಜೊತೆ ಜೊತೆಗೆ ಅಭಿನಯ ಕಲೆಯನ್ನೂ ರೂಢಿಸಿಕೊಂಡು ಉತ್ತಮ ಕಲಾವಿದನೆನೆನಿಸಿಕೊಂಡಿದ್ದಾನೆ. ದೇವಿಕಥೆಯಲ್ಲಿ ದೇವಿಪಾತ್ರದ ಅಭಿನಯ ಅದ್ಭುತ.

೧೯೬೩ರರಲ್ಲಿ ಚುಕನಕಲ್ಲಿನಲ್ಲಿ ಜನ್ಮತಾಳಿದ ಚೆನ್ನಪ್ಪ ಅಟ್ಟವೇರಿದ್ದು ಚಿತ್ರಸೇನಗಂಧರ್ವದಲ್ಲಿ ಚಿತ್ರಸೇನ ಪಾತ್ರದಿಂದ (೧೯೮೫)ರಲ್ಲಿ ಎರಡು ದಶಕಗಳಿಂದ ರಂಗ ಭೂಮಿಯ ಸೇವೆಸಲ್ಲಿಸುತ್ತ ಅನೇಕ ಬಯಲಾಟಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇಂದ್ರಜಿತ ಕಾಳಗ-ರಾವಣ, ಕನಕಾಂಗಿ-ಘಟೋದ್ಗಜ ಕುರುಕ್ಷೇತ್ರ-ಭೀಮ, ಪ್ರಮೀಳಾ ದರ್ಬಾರ-ಪ್ರಮೀಳೆ, ದೇವಿಕಥೆ-ದೇವಿ ಶುಂಭ ನಿಶುಂಭ-ದೇವಿ. ಇವು ಇವರ ಪ್ರಮುಖ ಪಾತ್ರಗಳು ಅಭಿನಯ ಕಲಿತಿದ್ದು ಭರಮಪ್ಪ ಕಟಗಾಲಿ ಬಿಸರಹಳ್ಳಿ, ಹಾಗೂ ಶಂಕರಪ್ಪ ಮಾಸ್ತರ ಮೋರನಾಳ.

ಇಪ್ಪತ್ತು ವರ್ಷಗಳ ಅಭಿನಯದಲ್ಲಿ ಅನೇಕ ಏರಿಳಿತ, ಅನೇಕ ಅನುಭವ ಹೊಂದಿದ ಚೆನ್ನಪ್ಪ ಹೂಗಾರ ಜಾನಪದ ರಂಗಭೂಮಿಗೆ ಬದ್ಧರಾಗಿ ನಿಷ್ಠೆಯಿಂದ ದುಡಿಯುತ್ತಿದ್ದಾರೆ. ಎಷ್ಟೊ ಕಡೆ ಸೀನ್ಸ್ ತೆಗೆದುಕೊಂಡು ಹೋದಾಗ ಅಲ್ಲಿಯ ಸ್ಥಿತಿ

ಅರಿತು ಅವರು ಕೊಟ್ಟಷ್ಟೇ ಬಾಡಿಗೆ ತೆಗೆದುಕೊಂಡು ಬಂದ ಪ್ರಸಂಗಗಳು ಹಲವಾರು. ಮಳೆ ಬಂದು ಅಥವಾ ಯಾವುದೋ ಕಾರಣದಿಂದ ಆಟ ಪ್ರಯೋಗಗೊಳ್ಳದಾಗ ಹಾಗೇ ಹಿಂದುರಿಗಿದ್ದುಂಟು. ಕೇವಲ ಹಣಗಳಿಕೆ, ವ್ಯಾಪರಿಕ ಬುದ್ಧಿ ಚೆನ್ನಪ್ಪನವರದಾಗಿಲ್ಲ. ಅವರೂ ಒಬ್ಬ ಕಲಾವಿದರಾಗಿದ್ದರಿಂದ ತಂಡದ ಸ್ಥಿತಿಗತಿ ಅರ್ಥವಾಗುವುದರಿಂದ ಹಾಗೆ ಕಟ್ಟಳೆ ಹಾಕಿದವರಲ್ಲ.

ಈ ಕಲಾವಿದರ ಅಭಿನಯ ಕಲೆ ಹಾಗೂ ಸಲಕರಣೆಗಳ ಸರಬರಾಜ, ಮೇಕಪ್ ಒಟ್ಟು ಜಾನಪದರಂಗ ಸೇವೆ ಪರಿಗಣಿಸಿ, ಊರಿನ ತಂಡಗಳಿಂದ, ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವ ಸಲ್ಲಿದ್ದುಂಟು. ಕನಕಗಿರಿಯಲ್ಲಿ ಜರುಗಿದ ಬಯಲಾಟ ಸ್ಪರ್ಧೆಯಲ್ಲಿ ಜಾನಪದ ಅಕಾಡೆಮಿ ಅಧ್ಯಕ್ಷರಿಂದ (೨೦೦೬ರಲ್ಲಿ) ಸನ್ಮಾನ. ಕೊಪ್ಪಳದ ಜಾನಪದ ಜಾತ್ರೆಯಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ (೨೦೦೭ರಲ್ಲಿ) ಸನ್ಮಾನ, ಕೊಪ್ಪಳ ತಾಲೂಕು ಮಟ್ಟದ ಯುವ ಮೇಳದಲ್ಲಿ (೨೦೦೫ರಲ್ಲಿ) ಪ್ರಶಸ್ತಿ ಪತ್ರ. ಕೊಪ್ಪಳ ತಾಲೂಕಿನ ಕಾತರಕಿ, ಗುಡ್ಲಾನೂರು ಗ್ರಾಮದಲ್ಲಿ ಸನ್ಮಾನ.

ಈಗಲೂ ಜಾನಪದ ರಂಗಭೂಮಿ ಸೇವೆಯಲ್ಲಿ ಕ್ರಿಯಾಶೀಲರಾಗಿ ದುಡಿಯುತ್ತ, ಅನೇಕ ಯುವಕರಿಗೆ ಪ್ರೋತ್ಸಾಹಿಸುತ್ತ ಉತ್ಸಾಹದಲ್ಲಿ ಕಾರ್ಯನಿರ್ವಹಿಸುತ್ತಿರುವ ಚೆನ್ನಪ್ಪ ಹೂಗಾರ ಅಂಥವರಿಂದ ಅಲ್ಲಿಯ ಜಾನಪದ ರಂಗಭೂಮಿ ಜೀವಂತವಾಗಿದೆ. ಅವರ ಸಹಕಾರದಿಂದ ಹಳ್ಳಿ ಹಳ್ಳಿಗಳಲ್ಲಿ ಬಯಲಾಟಗಳು ಪ್ರಯೋಗಗೊಳ್ಳುತ್ತಿವೆ. ಚೆನ್ನಪ್ಪ ಹೂಗಾರ ಚುಕನಕಲ್ಲು ಗ್ರಾಮದ ಕಲ್ಲಪ್ಪ-ಶಿವಗಂಗಮ್ಮ ದಂಪತಿಗಳ ಮಗನಾಗಿ ಜನಿಸಿ ಇಬ್ಬರು ಸಹೋದರರನ್ನು ಐದು ಜನ ಸಹೋದರಿಯರನ್ನು ಪಡೆದು ಬೆಳೆದಿದ್ದಾರೆ. ಓದಿದ್ದು ನಾಲ್ಕನೇ ತರಗತಿ. ತಂದೆ ಬಯಲಾಟ ಮಾಸ್ತರಾಗಿದ್ದರಿಂದ ಚೆನ್ನಪ್ಪನಿಗೆ ಸಹಜವಾಗಿ ಕಲೆ ಮೈಗೂಡಿಕೊಂಡು ಬಂದಿದೆ. ೪೬ ವಯಸ್ಸಿನ ಚೆನ್ನಪ್ಪ ನನ್ನ ಸೇವೆ ಏನಿದ್ದರೂ ಜಾನಪದ ರಂಗಭೂಮಿ, ನನ್ನ ಹವ್ಯಾಸ, ನನ್ನ ಬದುಕು, ನನ್ನ ಉದ್ಯೋಗ ಎಲ್ಲವೂ ಅದೇ ಆಗಿದ್ದರಿಂದ ಜೀವನದುದ್ದಕ್ಕೂ ರಂಗಭೂಮಿಗೆ ದುಡಿಯುತ್ತೇನೆ, ಋಣಿಯಾಗಿರುತ್ತೇನೆನ್ನುವ ಮಾತು ಅವರ ಬದುಕಿಗೆ ಸಾರ್ಥಕತೆ ತಂದಿದೆ.

ಚೆನ್ನಪ್ಪ ಹೂಗಾರ<br>ಚುಕನಕಲ್ಲ<br>ತಾ : ಜಿ : ಕೊಪ್ಪಳ

## ಪತ್ರೆಪ್ಪ ಚೆನ್ನಪ್ಪ ಹಡಪದ

ಕ್ಷೌರಿಕ ಉದ್ಯೋಗ ಮಾಡಿಕೊಂಡಿದ್ದ ಹರಿಹರೆಯದ ಹುಡುಗನೊಬ್ಬ ಜಾನಪದ ರಂಗ ಕ್ಷೇತ್ರದಲ್ಲಿ ಕಲಾವಿದನಾಗಿ, ಕಲಾನಿರ್ದೇಶಕನಾಗಿ ಜನಪ್ರೀಯನಾಗುತ್ತಾನೆಂದು ಯಾರೂ ನಿರೀಕ್ಷಿಸಿರಲಿಲ್ಲ. ಹೀಗೆನೇ ನಿರೀಕ್ಷೆಗೆ ಮೀರಿದ ಬದಲಾವಣೆಗಳು ಬದುಕಿನಲ್ಲಿ ಜರುಗಿ ಹೋಗುತ್ತವೆ ಎನ್ನುವುದಕ್ಕೆ ಪತ್ರೆಪ್ಪನ ಬದುಕೇ ನಿದರ್ಶನ.

ಕೊಪ್ಪಳ ತಾಲೂಕಿನ ಬೆಟಗೇರಿ ಗ್ರಾಮದ ಚೆನ್ನಪ್ಪ ಈಶಮ್ಮ ದಂಪತಿಗಳ ಎರಡನೇ ಮಗನಾಗಿ ಜನ್ಮತಾಳಿದ ಪತ್ರೆಪ್ಪ ಓದಿದ್ದು ಹೈಸ್ಕೂಲವರೆಗೆ, ಗಂಭೀರ ಆರ್ಥಿಕ ಪರಿಸ್ಥಿತಿಯಿಂದ ಓದು ನಿಲ್ಲಿಸುವ ಪ್ರಸಂಗ. ಓದುವ ಕಾತುರತೆ, ಪದವೀಧರನಾಗ ಬೇಕೆನ್ನುವ ಹಂಬಲ ಹಪಹಪಿ ಬಹಳಷ್ಟಿತ್ತು. ಹಿರಿಯರಿಗೆ ಓದಿಸುವ ಆ ಶಕ್ತಿ ಇಲ್ಲದಾಗ ಓದಿನಿಂದ ಹಿಂದೆ ಸರಿಯಬೇಕಾಯಿತು. ಹೀಗನೇ ಓದಿಸಲು ಹಿರಿಯರು ತಯಾರಿದ್ದಾಗ ಓದಲಾರದ ಮಕ್ಕಳು ಓದಲು ತಯಾರಿದ್ದ ಮಕ್ಕಳಿಗೆ ಓದಿಸಲಾಗದ ಹಿರಿಯರು. ಇದೇ ವಿಪರ್ಯಾಸ.

ಹದಿಹರೆಯದಲ್ಲಿ ಕುಲಕಸುಬಾದ ಕ್ಷೌರಿಕ ವೃತ್ತಿ ಪ್ರಾರಂಭಿಸಿದ ಪತ್ರೆಪ್ಪ ಬಾಲ್ಯದಿಂದಲೂ ಕಲೆ ಸಂಗೀತಗಳತ್ತ ಆಸಕ್ತಿ ಹೊಂದಿದ್ದ, ಮಧುರವಾದ ಧ್ವನಿ ಪಡೆದಿದ್ದ. ಪತ್ರೆಪ್ಪ ನಿತ್ಯ ಸಂಜೆ ದೇವಸ್ಥಾನದ ಭಜನಾ ಮಂಡಲಿಯಲ್ಲಿ ಕುಳಿತು ಅವರ ಜೊತೆ ಹಾಡುತ್ತಿದ್ದ. ಕ್ರಮೇಣ ಹಾಡಿನ ಜೊತೆಗೆ ಹಾರ್ಮೋನಿಯಂ ಹಾಗೂ ತಬಲಾ ನುಡಿಸುವುದನ್ನು ಕಲಿತು ಉದ್ಯೋಗದ ಜೊತೆ ಜೊತೆ ಈ ಕಲಾಸಕ್ತಿ ಬೆಳೆಸಿಕೊಂಡ ಪೂಜ್ಯ ಡಾ. ಪಂಚಾಕ್ಷರಿ ಗವಾಯಿಗಳ ಬಗ್ಗೆ ಅಪಾರ ಭಕ್ತಿ ಇಟ್ಟುಕೊಂಡು ಪುಣ್ಯಾಶ್ರಮಕ್ಕೆ ಪ್ರತಿವರ್ಷ ಹೋಗಿಬರುವ ಗುರಿ ಇಟ್ಟುಕೊಂಡರ. ಇಂದಿಗನೂ ತಪ್ಪದೇ ಪುಣ್ಯಾಶ್ರಮಕ್ಕೆ ಪುಣ್ಯತಿಥಿಯ ದಿನ ಹೋಗುತ್ತಿರುವುದು ಅವರ ಭಕ್ತಿ, ಆರಾಧನೆ ಸ್ಪಷ್ಟವಾಗುತ್ತಿದೆ.

ಒಮ್ಮೆ ನಾಡಿನ ಪ್ರಸಿದ್ಧ ರಂಗನಟ ದಿ. ಎಲಿವಾಳ ಸಿದ್ಧಯ್ಯನವರು ಬಟಗೇರಿಯಲ್ಲಿ ಪಂಚಾಕ್ಷರ ಗವಾಯಿಗಳ ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದಾಗ ಪತ್ರೆಪ್ಪ ಅವರನ್ನು ಭೇಟಿ ಮಾಡಿ ತನ್ನ ಕಲಾಸಕ್ತಿ, ಕಲಾಸಾಧನೆ ಪರಿಚಯಿಸಿಕೊಂಡಾಗ ಗದುಗಿಗೆ ಕರೆದುಕೊಂಡು ಹೋಗಿ ಡಾ. ಪುಟ್ಟರಾಜ್ಜವರಿಂದ ಆಶೀರ್ವಾದ ಮಾಡಿಸಿ ಸಂಗೀತ ಸೇವೆಗೆ ಪ್ರಮಾಣಪತ್ರ ಕೊಡಿಸಿದರು. ಅಂದಿನಿಂದ ಕಲಾಸೇವೆ ಇನ್ನೂ ಹೆಚ್ಚಿತು.

ದೇವೇಂದ್ರರೆಡ್ಡಿ ಸಂಗೀತ ಗುರುಗಳಿಂದ ಹೆಚ್ಚಿನ ಅಭ್ಯಾಸ ಪಡೆದ, ಪತ್ರೆಪ್ಪನವರ ಸೇವೆ ಊರಿನ ಸಂಗೀತ ಕಾರ್ಯಕ್ರಮಗಳಲ್ಲಿ ಇದ್ದೇ ಇರುತ್ತಿತ್ತು. ಕ್ರಮೇಣ ಬಯಲಾಟ ಸಂಗೀತ ಸೇವೆಯತ್ತ ಸಾಗಿದ ಪತ್ರೆಪ್ಪ ನಿರ್ದೇಶಕನಾಗಿಯೂ ಮಾರ್ಗದರ್ಶನ ನೀಡುತ್ತ ಮಾಸ್ತರರ ಪಟ್ಟವೇರಿದ. ಕನಕಾಂಗಿ ಕಲ್ಯಾಣ, ಗಿರಿಜಾಕಲ್ಯಾಣ, ಕರ್ಣಾರ್ಜುನರ ಕಾಳಗ, ದ್ರೋಣಪರ್ವ, ಇಂದ್ರಜಿತ ಕಾಳಗ, ಕುರುಕ್ಷೇತ್ರ, ರತಿಕಲ್ಯಾಣ, ಸತ್ಯಹರಿಶ್ಚಂದ್ರ, ಚಂದ್ರಹಾಸ, ಬಯಲಾಟ ಕಥೆಗಳನ್ನು ಕಲಿಸಿ ಆಡಿಸಿದ ಕೀರ್ತಿ ಈ ಸಂಗೀತ ಮಾಸ್ತರರದು. ಮುಮ್ಮೇಳ, ಹಿಮ್ಮೇಳ ಹಾಡುಗಳಲ್ಲಿ ಪ್ರಸಿದ್ಧಿ ಪಡೆದವರು.

೬೦ರ ವೃದ್ಧಾಪ್ಯ, ಬಡತನ, ಅವಕಾಶಗಳಿಂದ ವಂಚನೆ, ಈ ಎಲ್ಲಾ ಕಾರಣಗಳಿಂದ ನಿರಾಶೆಯ ಛಾಯೆ ಈ ಕಲಾವಿದರಲ್ಲಿ ಎದ್ದುಕಾಣುತ್ತಿದೆ. ದುಡಿಮೆಗೆ ದೇಹ ಪರ್ಮಿಟ್ ಮಾಡುತ್ತಿಲ್ಲ. ಆಟಗಳನ್ನು ಕಲಿಸುವ ಸ್ಥಿತಿಯಿಲ್ಲ, ಹಾಡಲು ಧ್ವನಿ ಸಾಲುತ್ತಿಲ್ಲ. ಏನೇ ಆಗಲಿ ಅವರ ಹಿಂದಿನ ಸೇವೆ, ಬಯಲಾಟ ಸಂಗೀತ ನಿರ್ದೇಶನ ಗಮನಿಸಿ ಸರಕಾರ ಮಾಸಾಶನ ಮಂಜೂರಿಸಬೇಕು, ಊರಿನ ಅಭಿಮಾನಿಗಳು, ಸಂಘ-ಸಂಸ್ಥೆಗಳು ಈ ಹಿರಿಯ ಕಲಾವಿದರನ್ನು ಗೌರವಿಸಬೇಕು, ಸಹಾಯ ಸಹಕಾರ ನೀಡಬೇಕಾದುದು ಅವಶ್ಯವಾಗಿದೆ.

**ಪತ್ರೆಪ್ಪ ಚೆನ್ನಪ್ಪ ಹಡಪದ**
**ಅಂಚೆ : ಬಟಗೇರಿ**
**ತಾ : ಜಿ : ಕೊಪ್ಪಳ**

## ದೊಡ್ಡಪರಸಪ್ಪ ದೊಡ್ಡಮನಿ

ಕೊಪ್ಪಳ ಜಿಲ್ಲೆಯ ಬಿಸರಹಳ್ಳಿ ಗ್ರಾಮದ ಪರಸಪ್ಪ ಡಂಬಳ ಬಯಲಾಟದ ಸಾರಥಿ ಪಾತ್ರದಿಂದ ಅಪಾರ ಜನಮನ ಸೆಳೆದಿದ್ದನು. ಪ್ರೇಕ್ಷಕರ ಮನರಂಜಿಸಿದ್ದನು. ಸಾರಥಿ ಪಾತ್ರದಿಂದ ರಂಗದಲ್ಲಿ ತೋರಿದ ಪ್ರತಿಭೆ ಅಪಾರವಾದುದು. ಅನುಭವ, ಶ್ರದ್ಧೆ ಚಾಣಾಕ್ಷತನ ಎಲ್ಲವೂ ಸಾಧನೆಗೆ ಸಾಕ್ಷಿಯಾಗಿದ್ದನು. ತನ್ನ ಬದುಕು, ಕಷ್ಟ-ನಷ್ಟ ನೋವಿನಲ್ಲಿದ್ದರೂ ಅವುಗಳನ್ನೆಲ್ಲ ಮರೆತು ರಂಗದಲ್ಲಿ ನಗುತ-ನಗಿಸುತ, ಸಾವಿರಾರು ಪ್ರೇಕ್ಷಕರನ್ನು ರಂಜಿಸುತ್ತಿದ್ದ ಪರಸಪ್ಪ ಡಂಬಳ ಬಿಸರಳ್ಳಿಯ ಶ್ರೀ ವೀರಭದ್ರಯ್ಯನವರ ಖಾಸಗಿ ಶಾಲೆಯಲ್ಲಿ ಓದಿದ್ದು ಎರಡನೇ ತರಗತಿ ಮಾತ್ರ. ಓದಿಗಿಂತ, ಕಲಿತದ್ದಕ್ಕಿಂತ ಎಲ್ಲವನ್ನು ಪಡೆದಿದ್ದು ಲೋಕಾನುಭವದಿಂದ.

ಬಯಲಾಟದಲ್ಲಿ ಬರುವ ಪಾತ್ರಗಳನ್ನು ಸಾರಥಿಯಾಗಿ ಮಾತನಾಡಿಸುವಾಗ ಆ ಪಾತ್ರ ನೀನಾರು ಎಂದು ಕೇಳಿದಾಗ ಒಡಪು ಕಟ್ಟಿ ಪ್ರತಿ ಮಾತಿನಲ್ಲಿ ಅರ್ಥತುಂಬಿಕೊಂಡು ಪ್ರಾಸಬದ್ಧವಾಗಿ ಹಾಸ್ಯಭರಿತವಾಗಿ ಹೇಳಿದಾಗ ಪ್ರೇಕ್ಷಕರ ಖುಷಿಗೆ ಎಣೆಯೇ ಇಲ್ಲ. ಕೇಳಬೇಕು ಮತ್ತೆ ಮತ್ತೆ ಅಂಥ ಹಾಸ್ಯ ಮಾತುಗಳನ್ನು ಕೇಳಿ ಆನಂದಿಸ ಬೇಕೆನಿಸುತಿತ್ತು.

"ಹಸನಾದ ಹಾಲವರ್ತಿ ಹುಸುನಾಳದ ಹೂವಿನಾಳ, ಭಟ್ಟರ ಬಹದ್ದೂರ ಬಂಡಿ ದಾನಕ ಡಂಬ್ರಳ್ಳಿ ಕದನಕ ಕಾತರಕಿ ನೀಟುಳ್ಳ ನೀರಲಗಿ ಮಾತುಳ್ಳ ಮತ್ತೂರ ತಿಳುವಳಿಕಿದ್ದ ತಿಗುರಿ ಬಾಳ್ವೇಕ ಬಟಗೇರಿ. ಕರುಣೆ ಇಲ್ಲದ ಕಂಪ್ಲಿ ಹಸನಾಗಿರೋ ಬಿಸರಳ್ಳಿಯ ಸಾರಥಿ ಅಂತಾರ ದೇವ ನನಗೆ ತಮ್ಮ ನಾಮಾಂಕಿತ ಪೇಳಬೇಕು ದೊರೆಯೋ ಬಂಗಾರದ ಗರಿಯೋ" ತನ್ನ ಸುತ್ತಲಿನ ಊರುಗಳ ಹೆಸರಿಗೊಂದೊಂದು ಅರ್ಥ ಕಲ್ಪಿಸಿ ಪ್ರಾಸಬದ್ಧವಾಗಿ ಹೇಳುವ ಈ ಸಾರಥಿ ಎಲ್ಲವನ್ನೂ ತನ್ನ ಬುದ್ಧಿ ಕಸರತ್ತಿನಿಂದ ಆಗಿಂದಾಗಲೇ ಜೋಡಿಸಿ ಅರ್ಥಬರುವಂತೆ ಹೇಳುತ್ತಿದ್ದುದು ಸಣ್ಣ ಮಾತಲ್ಲ.

ಸ್ತ್ರೀ ಪಾತ್ರ ಮಾತನಾಡಿಸುವಾಗಿನ ಒಂದು ಸಂದರ್ಭ "ಸಂದ ಹಿಡಕೊಂಡು ಬರತಿದ್ದೆ ಗೌಳಗೇರ ಹುಡುಗಿ ಸಣ್ಣೆಮ್ಮಿಗಿಣ್ಣ ಕಾಸೀನಿ ಉಂಡು ಹೋಗುಬಾ ತಮ್ಮ ಅಂದ್ಲು ಚಣ್ಣ ಸಡ್ಲಿಸಿ ಉಣ್ಣಾಕುಂತೆ ಪಡಸಾಲಿ ಕಂಬ ಫಟ್ ಫಟ್ ಅಂತು ಜಂತಿ ಮುರಿದ ಬಿತ್ತು ಮಾಳಗಿ ಜರಗಿತ್ತು ಏನ ಹೊಡದಲೊ ನಿನ್ನ ಬಾಯಾಗ ಹಾಟ ಬಿಸರಳ್ಳಿ ದಾಟ ನನಗ ಸಾರಥಿ ಅಂತರ ತಾಯಿ ತಮ್ಮ ನಾಮಾಂಕಿತ ಹೇಳಬೇಕು ಮಾವಿನ ಕಾಯಿ."

ಇಂಥ ಅನೇಕ ಮಾತುಗಳನ್ನು ಕೇಳಿದಾಗ ಹಳ್ಳಿಗರು ಖುಷಿಪಟ್ಟು ಕೇಕೇ ಹಾಕಿದಾಗ ಪರಸಪ್ಪನ ಬುದ್ಧಿವಂತಿಕೆ ಯಾವ ಸಾಹಿತಿಗಿಂತ ಕಡಿಮೆ ಇಲ್ಲ ಎನಿಸುತ್ತಿತ್ತು.

ಪರಸಪ್ಪನ ಕಲೆ ಕೇವಲ ಸಾರಥಿಗೆ ಸೀಮಿತವಾಗಿಲ್ಲ. ಪಂಚಮಿ ಹಬ್ಬದಲ್ಲಿ ವೇಷಹಾಕಿ ಹಳ್ಳಿಗರನ್ನು ರಂಜಿಸಿದ್ದು ಆಗ ನೋಡಿದ ಜನ ಯಾರೂ ಮರೆಯಲು ಸಾಧ್ಯವಿಲ್ಲ. ದುರಗ ಮುರಗಿರ ವೇಷ, ಮೋಡಿ ಆಟ, ಕರಡಿ ಕುಣಿಸೋರ ವೇಷ ಹೀಗೆ ಅನೇಕ ರೀತಿಯ ವೇಷ ಹಾಕಿ ಊರಿನವರನ್ನು ರಂಜಿಸಿದ್ದುಂಟು ಒಮ್ಮೆ ಭೂಮಾಪನ ಸಾರ್ವೆ ಅಧಿಕಾರಿಯ ವೇಷ ಹಾಕಿಕೊಂಡು ಬಂದು ತಮ್ಮ ತಂದೆಯಿಂದಲೇ ಹಣ ಬಿಚ್ಚಿಸಿಕೊಂಡು ಹೋದ ಚಾಣಕ್ಷತನ ಎಲ್ಲರಿಗೂ ಅಚ್ಚರಿಗೊಳಿಸಿತ್ತು.

ಪರಸಪ್ಪನ ಸಾರಥಿ ಪಾತ್ರ ಸುತ್ತಲೂ ಹಳ್ಳಿಗಷ್ಟೇ ಅಲ್ಲ ಸುತ್ತಲಿನ ಜಿಲ್ಲೆಗೂ ಜನಪ್ರೀಯವಾಗಿತ್ತು ಗದಗ, ಬಳ್ಳಾಗಿ, ರಾಯಚೂರು, ಭಾಗಗಳಲ್ಲಿಯೂ ಹೋಗಿ ಅಭಿನಯಿಸಿ ಬಂದ ಈ ಕಲಾವಿದ ಜಾನಪದ ರಂಗಭೂಮಿಗೆ ಕೊಟ್ಟಿದ್ದು ಅಪಾರ ಆತನ ಬುದ್ಧಿಯಿಂದ, ಆತನ ಪ್ರತಿಭೆಯಿಂದ, ಆತನ ಹಾಸ್ಯ ಭರಿತ ಮಾತುಗಳಿಂದ ರಂಗಭೂಮಿಗೆ ರಂಗೇರುತ್ತಿತ್ತು, ಅಟ್ಟದಲ್ಲಿದ್ದ ಹಿಮ್ಮೇಳ, ಮುಮ್ಮೇಳ, ಪಾತ್ರಗಳು ಚೇತನ ಪಡೆಯುತ್ತಿದ್ದವು.

ಇಂಥ ಒಬ್ಬ ಕಲಾವಿದ ಜನ್ಮ ಪಡೆದಿದ್ದು ಕೊಪ್ಪಳ ಜಿಲ್ಲೆ ಹಾಗೂ ತಾಲೂಕಿನ ಬಿಸರಳ್ಳಿಯ ರೈತ ಮನೆತನದಲ್ಲಿ. ಹನುಮಪ್ಪ ಲಕ್ಷ್ಮಮ್ಮ ದಂಪತಿಗಳ ಮಗನಾಗಿ ೧೨-೮-೧೯೩೩ರಲ್ಲಿ ಕುರುಬ ಸಮಾಜದಲ್ಲಿ ಜನ್ಮವೆತ್ತಿದ ಪರಸಪ್ಪ ಡೊಳ್ಳಿನ ಹಾಡು ಬೀರಪ್ಪನ ಹಾಡು ಕೇಳುವಲ್ಲಿ ಪ್ರಭಾವಿತನಾಗುತ್ತಿದ್ದ. ಹಳ್ಳಿಯ ವಾತಾವರಣದಲ್ಲಿ ಬೆಳೆದ ಪರಸಪ್ಪನಿಗೆ ಜಾನಪದ ರಂಗಭೂಮಿ ಬಾಲ್ಯದಿಂದಲೇ ಆಕರ್ಷಿಸಿತು. ಗ್ರಾಮದೇವತೆಗಳ ಜಾತ್ರೆ, ಉತ್ಸವ, ಹಬ್ಬ ಹರಿದಿನಗಳ ಸಂಪ್ರದಾಯದ ಆಟ, ಕುಣಿತ ಸಹಜವಾಗಿ ಮೈಗೂಡಿ ಕೊಂಡಿದ್ದವು.

ಹಳ್ಳಿಯ ಅನೇಕ ಜಾನಪದ ಕಲಾವಿದರಂತೆ ಪರಸಪ್ಪ ಕೂಡ ಎಲೆ ಮರೆಯ ಕಾಯೆಂತೆ ಮರೆಯಾದ. ಪ್ರತಿಭೆ ಗುರುತಿಸಿ ಗೌರವಿಸುವ ಕೆಲಸವಾಗಲಿ, ಪ್ರೋತ್ಸಾಹಿಸಿ ಬೆಳೆಸುವಂತಾಗಲಿ ಪ್ರಶಸ್ತಿ, ಪಾರಿತೋಷಕವಾಗಲಿ ಯಾವೂ ಪರಸಪ್ಪನ ಹತ್ತಿರ ಸುಳಿಯಲಿಲ್ಲ. ಅಂಥವುಗಳನ್ನು ಆತ ಬಯಸಿರಲಿಲ್ಲ. ಆದರೆ ಪ್ರಜ್ಞಾವಂತ ಸಮಾಜವಾಗಲಿ, ಸರಕಾರವಾಗಲಿ ಆತನತ್ತ ಗಮನ ಹರಿಸದಿದ್ದುದು ವಿಷಾದದ ಸಂಗತಿ.

ದಿ. ಪರಸಪ್ಪ ಡಂಬಳ
ಅಂಚೆ : ಬಿಸರಳ್ಳಿ, ತಾ : ಜಿ : ಕೊಪ್ಪಳ

# ಮಾರೆಪ್ಪ ಮಾರೆಪ್ಪ ದಾಸರ

ಉತ್ತರ ಕರ್ನಾಟಕದ ತತ್ವಪದಗಳ ಹಾಡುಗಾರಿಕೆಯಲ್ಲಿ ಜನಪ್ರಿಯ ಹೆಸರು ಮಾರೆಪ್ಪ ದಾಸರ. ಈ ಭಾಗದ ಗ್ರಾಮೀಣ ಪ್ರದೇಶದ ಮನೆ ಮಾತಾಗಿರುವ ಹೆಸರು. ಕೊಪ್ಪಳ ಜಿಲ್ಲೆಯ ಈ ಕಲಾವಿದ ನಾಡು ಕಂಡ ಅಪರೂಪದ ಹಾಡುಗಾರ. "ಕರುನಾಡ ಕೋಗಿಲೆ" ಎಂದೇ ಬಿರುದು ಪಡೆದಿರುವ ಮಾರೆಪ್ಪ ದಾಸರ ಗಾರುಡಿಗ, ಮೋಡಿಗಾರ.

ಮಾರೆಪ್ಪ ದಾಸರ ಹಾಡುತ್ತಿದ್ದರೆ ಎಲ್ಲ ಮೂಲೆಗಳಿಂದ ಜನರು ಸಾಗಿ ಬಂದು ಸೇರುತ್ತಾರೆ. ಪಿಟೀಲು ನುಡಿಸುತ್ತ ಹಾಡುತ್ತ ನಿಂತರೆ ವೇದಿಕೆಗೆ ರಂಗು ಬರುತ್ತದೆ. ತತ್ವಪದಕಾರರ ಹಾಡುಗಳು ಅರ್ಥಪೂರ್ಣವಾಗಿ ಇಂಪಾಗಿ ಕೇಳಿ ಬಂದಾಗ ಜನರು ತಲೆದೂಗುತ್ತಾರೆ. ವಿಶೇಷವಾಗಿ ಶರೀಫರ ಹಾಡು ಅದರಲ್ಲೂ "ತೂಗತದ ನೋಡೋ ಜೋಕಾಲಿ" ಎನ್ನುವ ಹಾಡು ಬೀಸುವ ಗಾಳಿಯಲಿ ತೇಲಿದಾಗ ದಾರಿಕಾರ ಕೂಡ ನಿಂತು ಮೈಮರೆಯುತ್ತಾನೆ.

ಮಾರೆಪ್ಪ ದಾಸರ ಅವರ ಮಧುರ ಕಂಠದ ಬಗ್ಗೆ ಆಕರ್ಷಕ ಹಾಡುಗಾರಿಕೆಯ ಬಗ್ಗೆ ಒಂದು ಉದಾಹರಣೆ ಸಾಕು, ದಿನಾಂಕ ೨೦ ಜುಲೈ ೨೦೦೭ರಂದು ದೆಹಲಿಯ ಕನ್ನಡ ಸಂಘದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಆಯೋಜಿಸಿದ ಕಲಾಮೇಳದಲ್ಲಿ ಹಾಡಿದಾಗ ಇಡೀ ದೆಹಲಿ ಕನ್ನಡಿಗರು ಮೆಚ್ಚಿ ಖುಷಿಪಟ್ಟರು. ಮಾರೆಪ್ಪನವರನ್ನು ಸನ್ಮಾನಿಸಿ ಗೌರವಿಸಿ ಮಾರೆಪ್ಪನವರಿಗೆ ಒಂದೆರಡು ಮಾತನಾಡಬೇಕೆಂದರು ಮಾರೆಪ್ಪ ದಾಸರ ವೇದಿಕೆಗೆ ಬಂದು ನಿಂತಾಗ ಅಂದಿನ ಮುಖ್ಯ ಅತಿಥಿಗಳಾಗಿ ಬಂದಿದ್ದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಮಾನ್ಯ ವಿಠ್ಠಲ ಮೂರ್ತಿಯವರು ಮಾರೆಪ್ಪನವರು ಮಾತನಾಡುವ

ಬದಲು ಇನ್ನೊಂದೆರಡು ಹಾಡು ಹಾಡಲಿ ಎಂದರು. ಅವರ ಹಾಡುಗಾರಿಕೆಗೆ ; ಜನ ಪ್ರೀತಿಗೆ ಇಷ್ಟು ಸಾಕಲ್ಲವೆ ?

ಮಾರೆಪ್ಪ ದಾಸರ ಅವರು ಉತ್ತರ ಕರ್ನಾಟಕದ ತತ್ವಪದಕಾರರಾದ ಬೊಬಲಾದಿ ಚಿಕ್ಕಯ್ಯ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣ ಶಿವಯೋಗಿ, ಶಿಶುನಾಳ ಶರೀಫರ ಹಾಡುಗಳನ್ನು ಹೆಚ್ಚಾಗಿ ಹಾಡುತ್ತಾರೆ. ಜನರ ಬೇಡಿಕೆಯ ಮೇಲೆ ಕೆಲವಡೆ ದಾಸರ ಹಾಡು ಶರಣರ ವಚನಗಳನ್ನೂ ಹಾಡುವುದುಂಟು. ಮಾರೆಪ್ಪನವರು ತಮ್ಮನ್ನು ಗುರುತಿಸಿ ಕೊಂಡದ್ದು ತತ್ವಪದಗಳಿಂದ ಎನ್ನುವುದರಲ್ಲಿ ಎರಡು ಮಾತಿಲ್ಲ.

ಮಾರೆಪ್ಪ ದಾಸರ ಅವರ ಬದುಕು ಇಷ್ಟೊಂದು ತಿರುವು ಪಡೆಯುತ್ತೆಯಂದು ಯಾರೂ ಭಾವಿಸಿರಲಿಲ್ಲ. ಜೀವನೋಪಾಯಕ್ಕಾಗಿ ತತ್ವಪದಗಳನ್ನು ಕಲಿತು ಊರೂರು ಅಲೆಯುತ್ತ ಹಾಡುತ್ತ ಬಿಕ್ಷಾಟನೆ ಮಾಡಿಕೊಂಡು ಬರುತ್ತಿದ್ದ ಮಾರೆಪ್ಪ ದಾಸರ ರಾಜ್ಯಪ್ರಶಸ್ತಿ ಪಡೆಯುವರೆಗೂ ಬೆಳೆದು ಬಂದರು. ಅವರ ಪ್ರತಿಭೆ, ಸಾಧನೆಗೆ ದೊರೆತ ಗೌರವ. ಮಾರೆಪ್ಪ ಅವರು ಎಂದೂ ಯಾರಿಗೂ ಪ್ರಶಸ್ತಿ-ಸನ್ಮಾನಕ್ಕೆ ಹಿಂಬಾಲಿಸಿದವರಲ್ಲ. ಎಲ್ಲವೂ ಅವರನ್ನೇ ಹಿಂಬಾಲಿಸಿಕೊಂಡು ಬಂದಿವೆ.

ಹಿಂದುಳಿದ ಪ್ರದೇಶವಾದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ತುಮರಗುದ್ದಿ ಗ್ರಾಮದಲ್ಲಿ ಮಾರೆಪ್ಪ ದುರಗಮ್ಮ ದಂಪತಿಗಳ ಮಗನಾಗಿ ಜನ್ಮ ಪಡೆದ ಮಾರೆಪ್ಪ ಹುಟ್ಟಿನಿಂದಲೇ ಹಾಡುಗಳನ್ನು ಬೆನ್ನಿಗೆ ಕಟ್ಟಿಕೊಂಡೇ ಬಂದರು. ರಕ್ತಗತವಾಗಿ ಪರಂಪರೆಯಾಗಿ ಬಂದ ಕಲೆ ಇದು. ಅಲೆಮಾರಿ ಜನಾಂಗದಲಿ ಜನ್ಮ ಪಡೆದ ಮಾರೆಪ್ಪ ಹಳ್ಳಿ ಹಳ್ಳಿಗೆ ತಿರುಗುತ್ತ ತತ್ವಪದಕಾರರ ಹಾಡುಗಳನ್ನು ಏಕತಾರಿಯಿಂದ ಹಾಡುತ್ತ ಬಿಕ್ಷಾಟನೆ ಮಾಡಿಕೊಂಡು ಬರುವುದೇ ಅವರಿಗೆ ಉದ್ಯೋಗವಾಗಿತ್ತು. ಜನರು ಬಿಕ್ಷೆ ಹಾಕಲಿ ಬಿಡಲಿ ಹಾಡುಗಳು ಮಾತ್ರ ಹಳ್ಳಿ ಹಳ್ಳಿಗೆ ಮನೆ ಮನೆಗೆ ತಲುಪುತ್ತಿದ್ದವು.

೧೯೭೦ರ ಕಾಲ ಮಾರೆಪ್ಪ ದಾಸರ ಅವರ ಬದುಕಿಗೆ ತಿರುವು ತಂದಿತು ನಾಡಿನ, ರಾಷ್ಟ್ರದ ಧೀಮಂತ ಹಿಂದುಸ್ಥಾನಿ ಸಂಗೀತ ಕಲಾವಿದರಾದ ದಿ. ಪಂಡಿತ ಮಲ್ಲಿಕಾರ್ಜುನ ಮನ್ಸೂರ ಅವರು ಈ ಕಲಾವಿದನ ಬದುಕಿಗೆ ಬೆಳಕಾದರು. ಧಾರವಾಡದ ಕೇರಿ ಕೇರಿಯಲ್ಲಿ ಹಾಡುತ್ತ ಸಾಗುತ್ತಿದ್ದ ಮಾರೆಪ್ಪನ ಧ್ವನಿ, ಹಾಡು ಮಲ್ಲಿಕಾರ್ಜುನ ಮನ್ಸೂರ ಅವರ ಕಿವಿಗೆ ಬಿದ್ದಾಗ ಆಕರ್ಷಿಸಿದ ಮಾರೆಪ್ಪನನ್ನು ಕರೆದುಕೊಂಡು ಹೋಗಿ ಆಕಾಶವಾಣಿಯ ಅಧಿಕಾರಿಗಳಿಗೆ ಪರಿಚಯಿಸಿದಾಗ ಮಾರೆಪ್ಪ ದಾಸರ ಅವರ ಹಾಡಿನ ಧ್ವನಿಯ ಅಲೆಗಳು ಬೀಸುವ ಗಾಳಿಯಲಿ ತೇಲಿ ನಾಡಿನ ಮೂಲೆ ಮೂಲೆಯಲ್ಲಿ ಪಸರಿಸಿ ಕೇಳುಗರಿಗೆ ರಸಾನಂದ ತಂದಿತು. ಅಂದಿನಿಂದ ಮಾರೆಪ್ಪ ದಾಸರ ನಾಡಿನ ಜನಪ್ರೀಯ ತತ್ವಪದಕಾರರಾಗಿ ಬೀದಿಯಿಂದ ವೇದಿಕೆಗೆ ಬಂದರು. ಕ್ರಮೇಣ ನಾಡಿನ ಸಂಘ ಸಂಸ್ಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವಕಾಶಗಳನ್ನು ಕಲ್ಪಿಸಿಕೊಟ್ಟವು. ಏಕತಾರಿಯಿಂದ

ಏಕಾಂಗಿಯಾಗಿ ಹಾಡುತ್ತಿದ್ದ ಮಾರೆಪ್ಪ ದಾಸರ ತಮ್ಮವರೇ ಆದ ರಾಮಣ್ಣ ಮಾಸ್ತರರಲ್ಲಿ ಪಿಟೀಲ ಕಲಿತು ಪೀಟಿಲಿನಿಂದ ಜೊತೆಗೆ ಮಗನನ್ನು ಕರೆದುಕೊಂಡು ಹಾಡ ಹತ್ತಿದರು. ಪಿಟೀಲ ಜಾನಪದ ವಾದ್ಯವಾಗಿರದಿದ್ದರೂ ನುಡಿಸುವ ಹಾಡು ಹೊರಡಿಸುವ ಧ್ವನಿ ಜಾನಪದಕ್ಕೆ ಸಂಬಂಧಿಸಿದ್ದೇಯಾಗಿರುತ್ತದೆ.

ಮಾರೆಪ್ಪ ದಾಸರ ಅವರ ಪ್ರಯತ್ನ, ಪರಿಶ್ರಮ, ಪ್ರತಿಭೆಗೆ ನಾಡಿನ ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ೧೯೮೫ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ೧೯೯೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ೨೦ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಪ್ರಶಸ್ತಿ ಪತ್ರ ಹಾಗೂ ಗೌರವಾರ್ಪಣೆ, ೧೯೮೫ರಲ್ಲಿ ಯಲಬುರ್ಗಾದ ಸಿದ್ಧರಾಮೇಶ್ವರ ಸಂಸ್ಥಾನದಿಂದ "ಕರುನಾಡು ಕೋಗಿಲೆ" ಬಿರುದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ತಿಂಗಳಿಗೊಂದು ಜಾನಪದ ಕಾರ್ಯಕ್ರಮದಲ್ಲಿ ಸನ್ಮಾನ ೧೯೮೭ರಲ್ಲಿ ಜಾನಪದ ಟ್ರಸ್ಟಿನಿಂದ ಸನ್ಮಾನ, ರಾಜ್ಯಪ್ರಶಸ್ತಿ ಲಭಿಸಿವೆ. ೧೯೯೯ರಲ್ಲಿ ಜಾನಪದ ವಿದ್ವಾಂಸರಾದ ದಿ. ನಾಗೇಗೌಡರು ಇವರ ಏಕತಾರಿ ಹಾಡುಗಳನ್ನು ಸಂಗ್ರಹಿಸಿ ಧ್ವನಿಮುದ್ರಣ ಮಾಡಿದ್ದಾರೆ.

ಕಲೆಯಿಂದ ಶ್ರೀಮಂತಗೊಂಡಿರುವ ಮಾರೆಪ್ಪ ದಾಸರ ಆರ್ಥಿಕವಾಗಿ ತೀರ ಬಡವರಾಗಿಯೇ ಇದ್ದಾರೆ. ವಾಸಿಸಲು ಒಂದು ಮನೆಯಿಲ್ಲ. ಇಂದಿಗೂ ಯಲಬುರ್ಗಾದ ಬಸ್‌ನಿಲ್ದಾಣದ ಬೀದಿಯ ಪಕ್ಕದ ಗುಡಿಸಲಿನಲ್ಲಿಯೇ ಬದುಕುತ್ತಿರುವುದು ವಿಷಾದದ ಸಂಗತಿ. ಪತ್ನಿ...................... ಅವರು ಪತಿಯ ಕಲೆಯ ಬಗ್ಗೆ ಅಭಿಮಾನ ಪಡುತ್ತ ಕಷ್ಟ ಕಾರ್ಪಣ್ಯದ ದಿನಗಳಲ್ಲಿಯೂ ನಗು ನಗುತ ಬಾಳಿದವರು ಆರು ಜನ ಗಂಡುಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗ ಸಣ್ಣಯಂಕಪ್ಪ ಇವರ ಜೊತೆ ಕಲೆಯ ಆರಾಧಕನಾಗಿದ್ದಾನೆ. ೬೦ರ ಪ್ರಾಯದ ಈ ಕಲಾವಿದ ನಾಡಿನ ದೇಶದ ಕಲೆ ಸಂಸ್ಕೃತಿ ಶ್ರೀಮಂತಗೊಳಿಸಿ ತನ್ನದೇ ಆದ ಕೊಡುಗೆ ಕೊಟ್ಟು ಜಾನಪದ ಇತಿಹಾಸ ಪುಟಗಳಲ್ಲಿ ಉಳಿದು ಬಂದಿದ್ದಾನೆ.

**ಮಾರೆಪ್ಪ ದಾಸರ**
**ಬಸ್ ನಿಲ್ದಾಣದ ಹತ್ತಿರ**
**ತಾ : ಯಲಬುರ್ಗಾ, ಜಿ : ಕೊಪ್ಪಳ**
**ಮೊ : ೯೮೪೫೫೬೫೬೧೮**

# ಸುಟ್ಟವ್ವ ಹರಿಜನ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮಸಬ ಹಂಚಿನಾಳ ಗ್ರಾಮದ ಹರಿಜನ ಕೇರಿಯಲ್ಲಿ ದುರ್ಗವ್ವನ ಏಕೈಕ ಮಗಳಾಗಿ ಜನ್ಮ ಪಡೆದ ಸುಟ್ಟವ್ವ ಹಾಡುಗಾರಿಕೆಯಿಂದ ಕೇರಿಗೆ, ಊರಿಗೆ, ನಾಡಿಗೆ ಕೀರ್ತಿ ತರುತ್ತಾಳೆಂದು ಯಾರೂ ನಿರೀಕ್ಷಿಸಿರಲಿಲ್ಲ. ಬಡತನ, ದಾರಿದ್ರ ಕಷ್ಟ ನೋವುಗಳ ಮನೆಯಿಂದ ಕಲಾ ಪ್ರತಿಭೆ ಹೊರ ಹೊಮ್ಮುತ್ತದೆಯಂದು ಯಾರಿಗೂ ಅನಿಸಿರಲಿಲ್ಲ.

ಅಂಧಶ್ರದ್ಧೆಯ ಮನೆಯಲ್ಲಿ ದೇವದಾಸಿಯ ಮಗಳಾಗಿ ತಾನೂ ಅದಕ್ಕೆ ಬಲಿಯಾಗಿ ಕತ್ತಲ ಬದುಕಿನಲ್ಲಿದ್ದಾಗ ಹಾಡುಗಾರಿಕೆಯ ಕಲೆ ಬೆಳಕು ತಂದಿತು. ದಾರಿನೇ ಕಾಣದ ದಿನಗಳಲ್ಲಿ ಹಾಡುವ ಕಲೆ ರೂಢಿಸಿಕೊಂಡು ಬದುಕನ್ನು ಸಾರ್ಥಕ ಮಾಡಿಕೊಂಡಳು. ಕಲೆಗೆ, ಬಡತನ, ಶ್ರೀಮಂತಿಕೆ ಜಾತಿ, ಮತ, ಕುಲ ಗೋತ್ರ ಯಾವುದೂ ಕಾರಣವಾಗುವುದಿಲ್ಲ ವೆನ್ನುವುದಕ್ಕೆ ಸುಟ್ಟವ್ವನ ಬದುಕೇ ನಿದರ್ಶನ.

ಸುಟ್ಟವ್ವನಿಗೆ ಬಾಲ್ಯದಿಂದಲೇ ಸಮಸ್ಯೆಗಳು, ಕಷ್ಟ ನೋವು, ಯಾತನೆಗಳು ಕಾಡುತ್ತಲೇ ಬಂದಿವೆ. ಅವುಗಳನ್ನು ತೋರಗೊಡದೆ ಯಾರಿಗೂ ಹೇಳಿಕೊಳ್ಳದೆ ಅವುಗಳ ಮಧ್ಯದಲ್ಲಿಯೇ ತನ್ನ ಹಾಡುವ ಕಲೆಯನ್ನು ಬೆಳೆಸಿಕೊಂಡು ಬಂದುದು ಆಶ್ಚರ್ಯದ ಸಂಗತಿ. ಇದಕ್ಕೆಲ್ಲ ಕಾರಣ ಅವಳಲ್ಲಿಯ ಇಚ್ಛಾಶಕ್ತಿ ಹಾಡು ಕಲಿತು ಹಾಡಬೇಕೆನ್ನುವ ಅದಮ್ಯ ಆಶೆ, ಛಲ, ಶ್ರಮ ಶ್ರದ್ದೆಯೇ ಕಾರಣ.

ಸುಟ್ಟವ್ವ ಹಾಡಲು ಕುಳಿತರೆ ಗಂಟೆಗಟ್ಟಲೆ ಸಮಯದ ಪ್ರಜ್ಞೆ ಇಲ್ಲದಂತೆ ಹಾಡುತ್ತಾಳೆ. ಹಾಡುತ್ತ ಹಾಡುತ್ತ ತನ್ನದೇ ಲೋಕದಲ್ಲಿ ಪ್ರವೇಶಿಸಿ ಭಾವಪರವಶಳಾಗುತ್ತಾಳೆ. ಗಂಟೆಗಟ್ಟಲೆ ಹಾಡುವ ಸಾಮರ್ಥ್ಯ. ನೂರಾರು ಹಾಡುಗಳು ಕಂಠಪಾಠ ಈ ಅನಕ್ಷರತೆ ಸುಟ್ಟವಳಿಗೆ ಹೇಗೆ ಸಾಧ್ಯವಾಯಿತೋ? ಈಗಲೂ ಈ ವೃದ್ಧಾಪ್ಯದಲ್ಲಿಯೂ ಶಕ್ತಿ

ಸಾಲದಿದ್ದರೂ ನಿರಂತರ ಹಾಡು ನಿಂತಿಲ್ಲ. ಈಕೆಯ ಹಾಡುಗಳು ಬಹಳಷ್ಟು ಜನಪ್ರಿಯ. ಸುಟ್ಟವ್ವ ತತ್ವಪದ, ಭಜನೆ ಪದ, ಸೋಬಾನದ ಹಾಡು ಹೀಗೆ ವೈವಿಧ್ಯಮಯ ಹಾಡುಗಳಿಂದ ಜನಮನ ಸೆಳೆದಿದ್ದಾಳೆ. ಹಾಡುಗಳಲ್ಲಿಯ ಸಾಹಿತ್ಯ, ಭಾವದ ಬಿಗಿ, ಅರ್ಥದ ಸತ್ವ ಕೇಳುಗರಲ್ಲಿ ಪರಿಣಾಮ ಬೀರಿದಾಗ ಸುಟ್ಟವ್ವ ಹೆಚ್ಚು ಆಕರ್ಷಿಸುತ್ತಾಳೆ. ತೀರ ಹತ್ತಿರವಾಗುತ್ತಾಳೆ. ವಿಶೇಷವಾಗಿ ಹಾಡಿನಲ್ಲಿಯ ತಾತ್ವಿಕ ಭಾವ, ಲೋಕಾನುಭಾವ ಪರಿಣಾಮವನ್ನುಂಟು ಮಾಡುತ್ತವೆ.

ಕೊಪ್ಪಳ ಜಿಲ್ಲೆಯ ಸುತ್ತಲೂ ಹಳ್ಳಿಗಳಿಗೆ ಸುಟ್ಟವ್ವ ತನ್ನ ಹಾಡುಗಳಿಂದ ಪರಿಚಿತ. ರಾಯಚೂರು, ಬೆಳಗಾಂವ ಜಿಲ್ಲೆಗಳಲ್ಲಿಯೂ ಕಾರ್ಯಕ್ರಮ ನೀಡಿದ್ದುಂಟು ರಾಯಚೂರು ಆಕಾಶವಾಣಿ ಕೇಂದ್ರ ಸುಟ್ಟವ್ವನ ಹಾಡುಗಳನ್ನು ಬಿತ್ತರಿಸಿದೆ. ಸುಮಾರು ನಲವತ್ತು-ಐವತ್ತು ವರ್ಷಗಳಿಂದ ಹಾಡುತ್ತ ಬಂದಿರುವ ಸುಟ್ಟವ್ವ ಹತ್ತು ಹನ್ನೆರಡರ ಬಾಲಿಕೆಯಿದ್ದಾಗಲೇ ಹಾಡುಗಳನ್ನು ಕೇಳುತ್ತ ಆ ಕಡೆ ಆಕರ್ಷಿಸಿದ್ದುಂಟು. ಕ್ರಮೇಣ ಹಾಡು ಹಾಡುತ್ತಿದ್ದಲೆಲ್ಲ ಹೋಗಿ ಕೇಳಿ ಬಾಯಿಪಾಠ ಮಾಡಿಕೊಂಡು ಬಂದ ಸುಟ್ಟವ್ವನ ಸಂಗ್ರಹ ಈಗೊಂದು ಗಣಿ.

ಸುಟ್ಟವ್ವನ ಹಾಡುಗಾರಿಕೆಯನ್ನು ; ಪ್ರತಿಭೆಯನ್ನು ಗುರುತಿಸಿ ನಾಡಿನ ಅನೇಕ ಸಂಘ ಸಂಸ್ಥೆಗಳು, ಸರಕಾರ ಸನ್ಮಾನಿಸಿ ಗೌರವಿಸಿವೆ. ಕೊಪ್ಪಳದಲ್ಲಿ ಜರುಗಿದ ಅಖಿಲ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನ, ೫೪ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಸರಕಾರದ ವತಿಯಿಂದ ಆಗಿನ ಸಂಸತ ಸದಸ್ಯರು ಸನ್ಮಾನಿಸಿದ್ದಾರೆ. ಜಿಲ್ಲಾಡಳಿತ ಕಛೇರಿಯಲ್ಲಿ ಡಾ. ಅಂಬೇಡಕರ್ ಶಿಕ್ಷಣ ಸಂಸ್ಥೆ (ರಿ) ಕೊಪ್ಪಳ, ಬೆನಕನಾಳ ಬಸಮ್ಮ ಗುಂಡಪ್ಪ ವಿಶ್ವ ಚೇತನ ಹಿರಿಯ ಪ್ರಾಥಮಿಕ ಶಾಲೆ ಗಂಗಾವತಿ, ಯಲಬುರ್ಗಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೨ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜ್ಞಾನ-ವಿಜ್ಞಾನ ಪ್ರಶಸ್ತಿ ನೀಡಿ ಸನ್ಮಾನಿಸಿವೆ.

ನೊಂದು ಬೆಂದು ಬಳಲಿದ ಸುಟ್ಟವ ಹರಿಜನ ಅವರಿಗೆ ಈಗ ಬೇಕಾಗಿರುವುದು ಸನ್ಮಾನ, ಪ್ರಶಸ್ತಿ ಬಿರುದುಗಳಿಗಿಂತ ಮುಖ್ಯವಾಗಿ ಆರ್ಥಿಕ ಸಹಾಯ. ಇತ್ತೀಚೆಗೆ ಚಕ್ಕಡಿಯಿಂದ ಬಿದ್ದು ನಡೆಯಲು ಕಷ್ಟಪಡುತ್ತಿರುವ ಸುಟ್ಟವ್ವನಿಗೆ ಇದ್ದ ಏಕೈಕ ಮಗ ರಾಮಪ್ಪ ಅಂಗವಿಕಲನಾಗಿ ಮೂಲೆ ಹಿಡಿದಿದ್ದಾನೆ. ಅವನ ೬ ಜನ ಹೆಣ್ಣುಮಕ್ಕಳಲ್ಲಿ ಇನ್ನಿಬ್ಬರ ಮದುವೆಯಾಗಬೇಕು. ಇಡೀ ಮನೆಯ ಭಾರ ಈ ೭೦ರ ವೃದ್ಧೆಯ ಮೇಲೆ. ಸರಕಾರ ಸಂಘ ಸಂಸ್ಥೆಗಳು ಆ ನಿಟ್ಟಿನಲ್ಲಿ ಚಿಂತಿಸುವುದು ಸೂಕ್ತ. ಕಲಾವಿದ ಉಳಿದು ಬೆಳೆದಾಗ ಕಲೆ ಉಳಿದು ಬೆಳೆದು ಬಂದೀತಲ್ಲವೆ ?

**ಸುಟ್ಟವ್ವ ಹರಿಜನ**

**ಅಂಚೆ : ಮಸಬಹಂಚಿನಾಳ ತಾ : ಯಲಬುರ್ಗಾ ಜಿ : ಕೊಪ್ಪಳ**

# ರೇಚಪ್ಪ ಮಾಸ್ತರ ಮಡಿವಾಳ

೨೦೦೬ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ರೇಚಪ್ಪ ಸಿದ್ಧಲಿಂಗಪ್ಪ ಮಡಿವಾಳ ಯಲಬುರ್ಗಾ ತಾಲೂಕಿನ ಪ್ರಸಿದ್ಧ ಬಯಲಾಟ ಮಾಸ್ತರ. ೮೦ರ ಹಿರಿಯಜೀವಿ. ಹರೆಯದ ಯುವಕರನ್ನು ಮಿರಿಸುವಷ್ಟು ಚೈತನ್ಯದಾಯಕ. ಇಂದಿಗೂ ಹಳ್ಳಿ ಹಳ್ಳಿಗಳಲ್ಲಿ ಬಯಲಾಟ ಕಲಿಸಲು ಹೋಗುತ್ತಿರುವ ರೇಚಪ್ಪ ಮಾಸ್ತರರಿಗೆ ಆಸಕ್ತಿ ಕಡಿಮೆಯಾಗಿಲ್ಲ. ಹಳ್ಳಿಯ ಜನ ಕೊಟ್ಟಿದ್ದೆಷ್ಟೋ ಬಿಟ್ಟಿದ್ದೆಷ್ಟೋ ಆದರೆ ತಿಂಗಳುಗಟ್ಟಲೆ ಬಹಳಷ್ಟು ಉತ್ಸುಕತೆಯಿಂದ ಈ ಮಾಸ್ತರ ಬಯಲಾಟ ಕಲಿಸುತ್ತಾರೆ. ಬಯಲಾಟ ಪ್ರಯೋಗಗೊಳ್ಳುವವರೆಗೂ ಜವಾಬ್ದಾರಿ ನಿಭಾಯಿಸುತ್ತಾರೆ.

ರೇಚಪ್ಪ ಮಾಸ್ತರರಿಗೆ ಈ ಮಾಸ್ತರಕಿ ಪದವಿ ಮನೆತನದಿಂದಲೇ ಬಂದುದು. ತಂದೆ, ಅಜ್ಜ ಕೂಡ ಬಯಲಾಟ ಮಾಸ್ತರರಾಗಿದ್ದರು. ಆ ಪರಂಪರೆಯಲ್ಲಿ ಬಂದವರು ರೇಚಪ್ಪ. ಮೂಲತಃ ಕೊಪ್ಪಳ ತಾಲೂಕಿನ ಬನಾಪೂರ ಹತ್ತಿರದ ತಳಬಾಳ ಗ್ರಾಮದ ಮಡಿವಾಳ ಮನೆತನದ ರೇಚಪ್ಪ ಈಗ ವಾಸಿಸುತ್ತಿರುವುದು ಕೊಪ್ಪಳ-ಗದಗ ರೋಡಿನ ಮಧ್ಯದ ತಳಕಲ್ ಗ್ರಾಮದಲ್ಲಿ. ಬಹುಬೇಗ ಪತ್ನಿಯನ್ನು ಕಳೆದುಕೊಂಡ ಮಾಸ್ತರ ಇಡೀ ಕುಟುಂಬದ ಒಳಹೊರಗಿನ ಜವಾಬ್ದಾರಿ ನಿಭಾಯಿಸುತ್ತ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಬಾಲ್ಯದಲ್ಲಿಯೇ ನಾಟಕ, ಬಯಲಾಟದಲ್ಲಿ ಅಭಿನಯಿಸುತ್ತ ಬಂದ ರೇಚಪ್ಪ ಮಾಸ್ತರರಿಗೆ ಕಂಠವೂ ಸಾಥಿಕೊಟ್ಟಿದೆ. ಅಭಿನಯ, ಹಾಡುಗಾರಿಕೆಯ ಪ್ರೌಢಮಿಯಿಂದ ಆಕರ್ಷಿಸಿದ ರೇಚಪ್ಪನವರಿಗೆ ಸಂಗೀತ ಕಲಿಯುವ ಆಸಕ್ತಿ ಮೂಡಿದಾಗ ಆಕಸ್ಮಿಕ ಕಮಲಾಪುರದಲ್ಲಿ ಅಕ್ಷೆಯಾಂಬರ ನಾಟಕದ ಪಾತ್ರದ ಅಭಿನಯಕ್ಕೆ ಹೋದಾಗ ಅಲ್ಲಿ

ವಿರಾಟಪರ್ವ ಪ್ರಾಕ್ಟೀಸ ಹಚ್ಚಿದ್ದರು. ಅದನ್ನು ಕಲಿಸುತ್ತಿದ್ದ ಬಸಯ್ಯ ಮಾಸ್ತರರಿಗೆ ವಯಸ್ಸಾಗಿತ್ತು. ಧ್ವನಿಸಾಲುತ್ತಿದ್ದಿಲ್ಲ. ರೇಚಪ್ಪ ಮಡಿವಾಳ ಅವರಿಗೆ ಆ ಸ್ಥಾನ ನೀಡಿ ಅಲ್ಲೇ ಇರಿಸಿಕೊಂಡು ಎಲ್ಲ ಹೇಳಿಕೊಟ್ಟು ಅಭಿನಯಕ್ಕೆ ಇವರಿಂದಲೇ ಸಿದ್ಧಗೊಳಿಸಿದರು. ವಾದ್ಯಗಳನ್ನು ನುಡಿಸುವುದು, ಹಾಡುವುದು, ಹಾರ್ಮೋನಿಯಂ, ಮದ್ದಳೆ, ತಾಳ ಎಲ್ಲವುಗಳಿಂದ ಪಳಗಿ ರೇಚಪ್ಪ ಸ್ವತಂತ್ರವಾಗಿ ಬಯಲಾಟಗಳನ್ನು ಕಲಿಸುವಷ್ಟು ಮಾಸ್ತರರಾದರು. ಬಸಯ್ಯಸ್ವಾಮಿ ಗುರುಗಳನ್ನು ಮಾತ್ರ ಈಗಲೂ ಸ್ಮರಿಸುತ್ತಾರೆ.

ದ್ರೋಣಪರ್ವ, ಕರ್ಣಪರ್ವ, ಪ್ರಮಿಳಾ ದರ್ಬಾರ, ಬಬ್ರುವಾಹನ ಕಾಳಗ, ಇಂದ್ರಜಿತ ಕಾಳಗ, ಕಿರಾತರ್ಜುನ ಕಾಳಗ, ಕುರುಕ್ಷೇತ್ರ ಇವರು ಕಲಿಸಿದ ಪ್ರಸಿದ್ಧ ಬಯಲಾಟಗಳು. ನಾಲ್ಕಾರು ದಶಕಗಳಿಂದ ರೇಚಪ್ಪನವರು ಬಯಲಾಟಗಳಿಗೆ ತಮ್ಮನ್ನು ಅರ್ಪಿಸಿಕೊಂಡು ದುಡಿದುದರಿಂದಲೇ ಇಂದು ಎಲ್ಲರ ಬಾಯಿಯಲ್ಲಿ ರೇಚಪ್ಪ ಮಾಸ್ತರರ ಹೆಸರು ವಿರಾಜಿಸುತ್ತಿದೆ. ಬಯಲಾಟಗಳ ನಿರ್ದೇಶನದಿಂದ ನಾಡಿನಾದ್ಯಂತ ಹೆಸರು ಮಾಡಿದ್ದಾರೆ. ಕೊಪ್ಪಳ ಜಿಲ್ಲಾ ಬಯಲಾಟ ಸ್ಪರ್ಧೆಯಲ್ಲಿ (ಕರ್ನಾಟಕ ಜಾನಪದ ಅಕಾಡೆಮಿ ೨೦೦೭ರಲ್ಲಿ ಏರ್ಪಡಿಸಿದ್ದ ಸ್ಪರ್ಧೆ) ಇವರಿಗೆ ಉತ್ತಮ ನಿರ್ದೇಶಕ ಪ್ರಶಸ್ತಿ ಕೂಡ ಲಭಿಸಿದೆ. ಯಲಬುರ್ಗಾ, ಕೊಪ್ಪಳ, ಕುಷ್ಟಗಿ, ಗಂಗಾವತಿ ತಾಲೂಕಿನ ಹಳ್ಳಿಗಳಲ್ಲಿ ಅಲ್ಲದೆ ಬಳ್ಳಾರಿ, ಗದಗ ರಾಯಚೂರು ಜಿಲ್ಲೆಗಳಲ್ಲಿಯೂ ಬಯಲಾಟ ಕಲಿಸಿದ ಹೆಗ್ಗಳಿಕೆ ಇವರದು.

ರೇಚಪ್ಪ ಮಾಸ್ತರರ ವೈಯಕ್ತಿಕ ಬದುಕು ಬಹಳ ಕಷ್ಟದಲ್ಲಿ ಸಾಗಿ ಬಂದಿದೆ. ೨೫ ವರ್ಷಗಳ ಹಿಂದೆಯೇ ಪತ್ನಿ ಅಗಲಿದಾಗ ನಾಲ್ಕು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳನ್ನು ಬೆಳೆಸಿ ಜವಾಬ್ದಾರಿ ನಿಭಾಯಿಸಿದ್ದಾರೆ. ಮನೆಯಲ್ಲಿ ಸದಾ ಬಡತನ ಕಾಡುತ್ತಿದ್ದರೂ ಅದನ್ನು ತೋರಗೊಡದೆ, ಕಲೆಯಲ್ಲಿ ತೊಡಗಿಸಿಕೊಂಡು ನಿಷ್ಠೆಯಿಂದ ದುಡಿದಿದ್ದಾರೆ. ಆ ದುಡಿಮೆಯ ಫಲದಿಂದ ಇಂದು ನಾಡು-ಸರಕಾರ ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ಸರಕಾರದಿಂದ ಒಂದು ಸಾವಿರ ರೂಪಾಯಿ ಮಾಸಾಶನ ಬರುತ್ತಿದೆ. ಮಕ್ಕಳೆಲ್ಲ ದುಡಿಯುತ್ತಿದ್ದಾರೆ. ಈಗ ತೃಪ್ತಿಯ ಬದುಕಿದೆ.

ಇಂದಿಗೂ ರಂಗಾಸಕ್ತಿ ಕಳೆದುಕೊಳ್ಳದ ರೇಚಪ್ಪ ಮಾಸ್ತರ ಬಿಡುವಿಲ್ಲದಂತೆ ದುಡಿಯುತ್ತಿದ್ದಾರೆ. ಜಾತ್ರೆ, ಉತ್ಸವ, ಉರುಸುಗಳಲ್ಲಿ ರೇಚಪ್ಪ ಮಾಸ್ತರರ ಬಯಲಾಟ ಗಳಿರಲೇಬೇಕು. ಬಯಲಾಟಗಳಲ್ಲಿ ರೇಚಪ್ಪನವರ ಕಂಚಿನ ಕಂಠದ ಹಾಡುಗಳು ಕೇಳಲೇಬೇಕು.

ರೇಚಪ್ಪ ಮಾಸ್ತರರ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಲೇಖನಗಳು ಬಂದಿವೆ. ಅನೇಕ ಸಂಘ ಸಂಸ್ಥೆಗಳಲ್ಲಿ ಸನ್ಮಾನ ಪ್ರಶಸ್ತಿ ಪತ್ರ ದೊರೆತಿವೆ. ಇತ್ತೀಚಿಗೆ ಸಂದರ್ಶಿಸಲು ತಳಕಲ್ಲಿಗೆ

ಹೋದಾಗ ಊರ ಹೊರಗಿನ ಚಿಕ್ಕ ಜನತಾ ಮನೆಯೊಂದರ ಅಂಗಳದಲ್ಲಿ ಹೊರಸಿನ ಮೇಲೆ ಕುಳಿತು ಯಾವುದೋ ರಾಗದಿಂದ ಗುನುಗುಡುತ್ತಿದ್ದರು. ನಾನು ಸಂದರ್ಶಿಸಲು ಬಂದಿರುವುದಾಗಿ ತಿಳಿಸಿದಾಗ ಬಹಳ ಖುಷಿಪಟ್ಟು ತನ್ನ ಕಥೆ–ವ್ಯಥೆಯನ್ನೆಲ್ಲ ಹೇಳಿದರು.

. ರೇಚಪ್ಪ ಮಾಸ್ತರ ಬಡವಾಗಿ ಜಾನಪದ ರಂಗವನ್ನು ಶ್ರೀಮತಗೊಳಿಸಿದ್ದಾರೆ. ಇಡೀ ಆವಿಷ್ಯ–ಆಯಸ್ಸು ಅದಕ್ಕಾಗಿ ಕಳೆದುಕೊಂಡಿದ್ದರಿಂದಲೇ ಆ ಭಾಗದಲ್ಲಿ ಇಂದಿಗೂ ಬಯಲಾಟಗಳು ಪ್ರದರ್ಶನಗೊಳ್ಳುತ್ತಿವೆ.

ರೇಚಪ್ಪ ಮಾಸ್ತರ
ಅಂಚೆ : ತಳಕಲ್ಲ
ತಾ : ಯಲಬುರ್ಗಾ
ಜಿ ಕೊಪ್ಪಳ

## ಬೀರಪ್ಪ ಯಡಿಯಾಪುರ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕುನೂರು ಗ್ರಾಮದ ಬೀರಪ್ಪ ಯಡಿಯಾಪೂರ ಉತ್ತಮ ಜಾನಪದ ಹಾಡುಗಾರ ಡೊಳ್ಳಿನ ಹಾಡು, ಮೋಹರಂ ಹಾಡು, ಹಂತಿ ಹಾಡು, ಗೀಗೀಪದ ಹೀಗೆ ವೈವಿಧ್ಯಮಯ ಹಾಡಿನ ಭಾಂಡಾರವೇ ಬೀರಪ್ಪನವರಲ್ಲಿದೆ. ಹಾಡುಗಳ ಸಂಗ್ರಹದ ಸಂಖ್ಯೆ ಗುರುತಿಸಲಾಗದು. ಹಾಡಲು ಕೂಡಿಸಿದರೆ ಕೇಳುಗರೇ ಸಾಕೆಂದು ನಿಲ್ಲಿಸಬೇಕು. ಎಲ್ಲ ಬಗೆಯ ಹಾಡುಗಾರರಾದ ಬೀರಪ್ಪ ಹೆಚ್ಚು ಗುರುತಿಸಿಕೊಂಡದ್ದು ಗೀಗೀ ಪದಗಳಿಂದ. ಗೀಗೀ ಪದಗಳಿಂದ ಬೀರಪ್ಪ ಮಕ್ಕಳಿಂದ ಮುದುಕರವರೆಗೂ ಚಿರಪರಿಚಿತ.

ಗೀಗೀ ಪದಗಳಲ್ಲಿ ದೇಶ ಭಕ್ತಿಗೀತೆ, ತತ್ವಪದ, ಪ್ರಧಾನಗಳಾಗಿವೆ. "ನಮ್ಮನ್ನು ಬಿಟ್ಟು ಹೋದೆಯಲ್ಲೊ ಮಹಾತ್ಮಾ ಗಾಂಧೀ", "ಕಂಡೀರೇನೆ ಶರಫಿನ", "ಭಕ್ತಿಯಲಿ ಬೇಡರ ಕಣ್ಣಪ್ಪ", "ಹೋಗೋನ ನಡಿ ಮೈಲಾರಕ" ಇವು ಇವರ ಪ್ರಸಿದ್ಧ ಹಾಗೂ ಜನಮನ್ನಣೆ ಗಳಿಸಿದ ಗೀಗೀ ಪದಗಳು. ಈ ಹಾಡುಗಳು ಸುತ್ತಲೂ ಹಳ್ಳಿಗರನ್ನು ಬಹಳಷ್ಟು ಆಕರ್ಷಿಸಿವೆ. ಅದ್ಭುತವಾದ ಕಂಠದಿಂದ ತಂಡದ ಮುಂದಾಳಾಗಿ ಹಾಡಲು ಪ್ರಾರಂಭಿಸಿದರೆ ಕೇಳುಗರು ಮಂತ್ರ ಮುಗ್ಧರಾಗುತ್ತಾರೆ. ಬೀರಪ್ಪನ ಗೀಗೀ ಪದ ಕೇಳುವುದೇ ಒಂದುಭಾಗ್ಯ ಒಂದು ಅನುಭವ.

ಬೀರಪ್ಪನಿಗೆ ಹಾಡು ಸಹಜವಾಗಿ ಬಂದದು. ಎಲ್ಲರಂತೆ ಬಾಲ್ಯದಲ್ಲಿ ಭಜನೆ ಪದಗಳಲ್ಲಿ ಹಾಡುತ್ತ ತನ್ನ ತಾ ಬೆಳೆಸಿಕೊಂಡ. ರೇಣುಕಮ್ಮ ಎನ್ನುವ ಮಹಿಳೆಯ ಭಜನಾ ತಂಡ ಈತನಿಗೆ ಸ್ಪೂರ್ತಿಯಾಯಿತು. ಹಾಡುಗಳ ಜೊತೆ ಚರ್ಮವಾದ್ಯಗಳಾದ ತಪ್ಪಡಿ, ಡಪ್ಪು ಡೊಳ್ಳು, ಕರಡಿ ಬಾರಿಸುವುದನ್ನೂ ಕಲಿತ ಬೀರಪ್ಪ ಈಗ ಈ ಭಾಗದ ಜಾನಪದ ಪ್ರಸಿದ್ಧ ಕಲಾವಿದ, ೭೦ರ ಈ ವಯಸ್ಸಿನಲ್ಲಿಯೂ ಆಸಕ್ತಿ ಕಳೆದುಕೊಂಡಿಲ್ಲ. ಈಗಲೂ ಅದೇ ಹುಮ್ಮಸ್ಸು, ಅದೇ ಕಂಠ, ಅದೇ ಆಕರ್ಷಕ ಹಾಡುಗಾರಿಕೆ.

ಉತ್ತರ ಕರ್ನಾಟಕದಲ್ಲಿ ಡೊಳ್ಳಿನ ಹಾಡು ಬಹಳಷ್ಟು ಜನಪ್ರಿಯ ವಾಗೂ ಪ್ರಸಿದ್ಧಿ. ಕುರುಬ ಸಮುದಾಯದೊಂದಿಗೆ ನೇರ ಸಂಬಂಧ ಹೊಂದಿದ ಡೊಳ್ಳಿನ ಹಾಡುಗಳು. ಭಕ್ತಿಯ ಹಾಗೂ ದೇವರ ಸ್ತುತಿಸುವ ಹಾಡುಗಳಾಗಿವೆ. ಬೀರಪ್ಪನಿಗೆ ಈ ಡೊಳ್ಳಿನ ಹಾಡುಗಳು ಕೂಡ ಬಹಳಷ್ಟು ಆಕರ್ಷಿಸುತ್ತವೆ. ಬೀರಪ್ಪ ಈ ಡೊಳ್ಳಿನ ಹಾಡುಗಳನ್ನು ಹಾಡಲು ಪ್ರಾರಂಭಿಸಿದರೆ ಬೀರದೇವರ ಇಡೀ ಚಿತ್ರಣವನ್ನು ಚಿತ್ರಿಸುತ್ತ ಕೇಳುಗರನು ಭಕ್ತಿಯ ಆವರಣದಲ್ಲಿ ತಂದು ಬಿಡುತ್ತಾನೆ.

ಕೊಪ್ಪಳದಲ್ಲಿ ಜರುಗಿದ ಅಖಿಲಭಾರತ ಸಾಹಿತ್ಯ ಸಮ್ಮೇಳನದಿಂದ ಈತನ ಪ್ರಾರಂಭವಾದ ಕಾರ್ಯಕ್ರಮ ಈಗ ನಾಡಿನುದ್ದಕ್ಕೂ ಆಕ್ರಮಿಸಿದೆ. ಕೊಪ್ಪಳ, ಯಲಬುರ್ಗಾ, ರಾಯಚೂರು, ಮೈಸೂರು ದಸರಾ ಹೀಗೆ ನಾಡಿನ ಅನೇಕ ಕಡೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮ ನೀಡಿದ್ದುಂಟು. ಮೋಹರಂ ಹಬ್ಬದಲ್ಲಿ ಬೀರಪ್ಪನವರಿಗೆ ಅನೇಕ ಕಡೆ ಆಮಂತ್ರಣ. ಒಟ್ಟಿನಲ್ಲಿ ಬೀರಪ್ಪ ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಜಾನಪದ ಕಲಾವಿದ. ಸುತ್ತಲೂ ಹಳ್ಳಿಗರಿಗೆ ಪರಿಚಿತ.

೧೯೯೩ರಲ್ಲಿ ಅಖಿಲ ಕರ್ನಾಟಕ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪತ್ರ, ೨೦೦೨ರಲ್ಲಿ ಇಟಗಿ ಉತ್ಸವದಲ್ಲಿ ಪ್ರಶಸ್ತಿ ಪತ್ರ, ೨೦೦೪ರಲ್ಲಿ ಹೂವಿನ ಹಡಗಲಿಯಲ್ಲಿ ಗ್ರಾಮದೇವತಾ ಮಹೋತ್ಸವ ಸಮಿತಿ ಪ್ರಶಸ್ತಿ ಪತ್ರ. ಬೀರಪ್ಪನ ಕಲೆ ಗುರುತಿಸಿ ಸುತ್ತಲೂ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಕೊಪ್ಪಳ ಜಿಲ್ಲಾ ಬಯಲಾಟ ಕಮ್ಮಟ ಸಂದರ್ಭದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರು ಸನ್ಮಾನಿಸಿದ್ದಾರೆ. ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಪ್ರೌಢಶಾಲೆ, ನೃಪತುಂಗ ಯುವಕ ಮಂಡಳ, ಯಲಬುರ್ಗಾ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿ ಗೌರವಿಸಿವೆ. ಕರ್ನಾಟಕ ಸರಕಾರ ಮಾಸಾಶನ ನೀಡಿ ಆರ್ಥಿಕ ನೆರವಾಗಿದೆ. ಇದೀಗ ೨೦೦೯ರ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಕೂಡ ಪ್ರಕಟಿಸಿದೆ.

ಕುಕನೂರಿನ ಬೇಸಾಯ ಮನೆತನದ ಕುರುಬ ಜನಾಂಗದ ದೂಳಪ್ಪ ಬಾಳವ್ವ ದಂಪತಿಗಳ ಮೊದಲನೇ ಮಗನಾಗಿ ಜನ್ಮಪಡೆದ ಬೀರಪ್ಪ ಓದಿದ್ದು ೩ನೇ ತರಗತಿ. ಐದು ಜನ ಸಹೋದರರು ಇಬ್ಬರು ಸಹೋದರಿಯರು. ಬೇಸಾಯವೇ ಪ್ರಮುಖವಾದ ಕುಟುಂಬದಲ್ಲಿ ಹಗಲಿರುಗಳು ದುಡಿಯುವುದೊಂದೇ ದಾರಿ. ದುಡಿಮೆಯಲ್ಲಿ ದಣಿವಾರಿಸಿಕೊಳ್ಳಲು ತನ್ನಷ್ಟಕ್ಕೆ ತಾನು ಹಾಡಿಕೊಂಡು ಖುಷಿ ಪಡುತ್ತಿದ್ದ ಬೀರಪ್ಪನನ್ನು ಊರ ಜನರು ಪ್ರೋತ್ಸಾಹಿಸಿ ಕಲಾವಿದನ್ನಾಗಿ ಮಾಡಿದರು. ಏಕಾಂತದಲ್ಲಿ ಹಾಡಿಕೊಳ್ಳುತ್ತಿದ್ದ ಬೀರಪ್ಪ ಜನ ಸಮೂಹದಲ್ಲಿ ಹಾಡುತ್ತ ಹಾಡುತ್ತ ಜಿಲ್ಲೆಯಾಚೆಗೂ ಹೋಗಿ ಹಾಡುವಂತಾಗಿದೆ. ನಾಡಿನಲ್ಲೆಲ್ಲ ಆತನ ಹಾಡು ಅನೇಕ ಕಡೆ ವಿಸ್ತರಿಸಿಕೊಂಡಿದೆ.

ಬೀರಪ್ಪನ ಪತ್ನಿ ಬೀರವ್ವ ಕೂಡ ಕಲಾವಿದೆ ಬೀಸೋ ಹಾಡು, ಸೋಬಾನ ಹಾಡು ಹಾಡುತ್ತಾಳೆ. ಈ ಕಲಾದಂಪತಿಗಳಿಗೆ ಒಬ್ಬ ಮಗಳು.

ಬೀರಪ್ಪ ಯಡಿಯಾಪೂರ ಕೊಪ್ಪಳ ಜಿಲ್ಲೆಯ ಜಾನಪದ ಹಾಡಿನ ಉತ್ತಮ ಕಲಾವಿದರಾಗಿ ಈ ಭಾಗದ ಜಾನಪದ ಕಲೆಯ ಸಂಪತ್ತಾಗಿ ಜನಮನ ಸೆಳೆದವರಾಗಿದ್ದಾರೆ.

**ಬೀರಪ್ಪ ಯಡಿಯಾಪುರ**
**ಅಂಚೆ : ಕುಕನೂರು**
**ತಾ : ಯಲಬುರ್ಗಾ ಜಿ : ಕೊಪ್ಪಳ**

# ಲಕ್ಷ್ಮೀಬಾಯಿ ಚೆಲುವಾದಿ

ಯಲಬುರ್ಗಾ ತಾಲೂಕಿನ ಆಡೂರು ಗ್ರಾಮದ ಲಕ್ಷ್ಮೀಬಾಯಿ ಗೀಗೀ ಪದಗಳ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದ ಕಲಾವಿದೆ. ಇಡೀ ಜಿಲ್ಲೆಯಲ್ಲಿಯೇ ಹೆಸರುವಾಸಿ. ಡಪ್ಪು ಅಥವಾ ತಮಟೆ ಹಿಡಿದು ಹಾಡಲು ಪ್ರಾರಂಭಿಸಿದರೆ ಸಮಸ್ತ ಜನಸಮೂಹ ನಿಶಬ್ದವಾಗಿ ಏಕಚಿತ್ತದಲ್ಲಿ ಕೇಳಬೇಕು ಅಂಥ ಆಕರ್ಷಣೆ ಆಕೆಯ ಹಾಡುಗಾರಿಕೆ ಪಡೆದಿದೆ. ಕಥನ ಗೀತೆಗಳೇ ಆಗಲಿ ಭಕ್ತಿ ಗೀತೆಗಳೇ ಆಗಲಿ, ಶೃಂಗಾರ ಹಾಡುಗಳೇ ಆಗಲಿ ಇಲ್ಲವೆ ಸವಾಲು–ಜವಾಬು ಸ್ಪರ್ಧೆಯ ಹಾಡುಗಳೇ ಇರಲಿ ಲಕ್ಷ್ಮೀಬಾಯಿಯನ್ನು ಆ ಭಾಗದಲ್ಲಿ ಸರಿಗಟ್ಟುವವರಿಲ್ಲ. ಗಂಡು ಹೆಚ್ಚು, ಹೆಣ್ಣು ಹೆಚ್ಚು ಎನ್ನುವ ವಾದದ ಎರಡು ಗುಂಪುಗಳ ಸ್ಪರ್ಧಾತ್ಮಕ ಹಾಡು ಕೇಳುಗರಿಗೆ ಬಹು ಆಕರ್ಷಕ. ಕೊನೆಗೆ ಹೆಣ್ಣು–ಗಂಡು ಎರಡೂ ಸಮ ಎನ್ನುವ ತಾತ್ವಿಕ ಒಪ್ಪಂದಕ್ಕೆ ಬರುವ ರೀತಿ ಕೇಳುಗರಿಗೆ ಖುಷಿ ಕೊಡುತ್ತದೆ.

ಲಕ್ಷ್ಮೀಬಾಯಿ ಹಾಡುವ ಕಡ್ಲಿಮಟ್ಟಿ ಕಾಶಿಬಾಯಿ ಕಥೆಯಾಗಲಿ, ಕೋಳೂರು ಕೊಡುಗೂಸು ಕಥೆಯಾಗಲಿ ಕೇಳುಗರನ್ನು ಕಥೆಯಲ್ಲಿ ಮುಳಿಗಿಸಿ ಹೊರ ಜಗತ್ತಿನ ಪರಿವಿಲ್ಲದಂತೆ ಮಾಡುವ ಹಾಡಿನ ಶಕ್ತಿ ಈ ಕಲಾವಿದೆಯದು. ಆದರೂ ತಾನು ಅವಿದ್ಯಾವಂತೆ, ತಾನು ತಿಳಿದವಳಲ್ಲ ಎಂದು ಹೇಳಿಕೊಂಡೇ ಹಾಡಿಗೆ ಪ್ರಾರಂಭಿಸುತ್ತಾಳೆ.

"ಕೂಡಿದ ಸಭಾದಾಗ ಹಾಡೋದು ಬಾಳ ಜಡಾ
ಕುಂತು ಕೇಳೋರಿಗೆ ದರ್ಜಿಲ್ಲ
ಕೇಳಿದ ಪ್ರಶ್ನೆಗೆ ಉತ್ತರಿಸಲಿಕ್ಕೆ ನಾನಂಥ ಶ್ಯಾಣ್ಯಾಳಲ್ಲ
ಸಾಲಿಗೆ ಹೋಗಿಲ್ಲ ಬರಿಲಿಕ್ಕೆ ಕಲಿತಿಲ್ಲ
ಪಾಟೀಗೆ ನನಗೆ ಬೆಟ್ಟಿಯಾಗಿಲ್ಲ
ಸಣ್ಣಾಕಿ ಇರೋತನಕ ತಂದಿ ತಾಯಿ ಎಮ್ಮಿಕಾಯೋದು

ಬಿಡಿಸಿಲ್ಲ
ಸುಮ್ಮನೆ ಕೇಳಿರಿ ಜನರೆಲ್ಲ
ತಾಳದಾಗ ಹಾಡೋದಿಲ್ಲ ನಾನು
ನಾದದ ಜ್ಞಾನ ಆಗಿಲ್ಲ ಪೂರ್ಣ
ತಪ್ಪತದಿ ಬಾಯಾಗ ವ್ಯಾಕರಣ"

ಹೀಗೆ ತನ್ನನ್ನು ತಾನು ಸಣ್ಣವಳೆಂದು, ಅಜ್ಞಾನಿಯಂದು ಹೇಳಿಕೊಂಡು ಹಾಡುತ್ತ ಸಾಗುವ ಲಕ್ಷ್ಮವ್ವ ತನ್ನ ಎದುರು ಪಾರ್ಟಿಯ ಹಾಡುಗಾರರಿಗೆ ಸವಾಲು ಹಾಕಿದಾಗ ತಂಡ ತತ್ತರಿಸಿ ಹೋಗುತ್ತದೆ. ಅವಳಲ್ಲಿಯ ಬುದ್ಧಿವಂತಿಕೆ, ಅನುಭವ ಹಿರಿದೆನ್ನುವುದರಲ್ಲಿ ಎರಡು ಮಾತಿಲ್ಲ.

"ಹೋರಿ ಹೊಟ್ಟಿಲ ಕರಹುಟ್ಟಿತು
ಹೋರಿ ಮ್ಯಾಲೆ ಆಕಳು ಹತ್ತಿತು
ಸ್ವತಃ ನೋಡೀನಿ ನಿಂತು
ಹೋರಿ ಹೊಟ್ಟೆಯಲ್ಲಿ ಕರನೋಡೀರಿ ಹೊಕ್ಕಳದಲ್ಲಿ ಕುಂತು
ಮಲಿಯ ಕುಡಿಯುವುದು ಮಾಹಿತಿಯಾಗಿಲ್ಲ
ರೈತರಿಗೆ ಚಿಂತೆ ಬಿತ್ತು
ಕುಂತ ಸಭಾದಾಗ ನಿಂತ ಲಕ್ಷ್ಮೀಬಾಯಿ
ಸವಾಲು ಕೇಳ್ತಾಳ ಮತ್ತ"

ಇಂಥ ನಿಗೂಢ ಅರ್ಥಗರ್ಭಿತ ಪದಗಳು ಆಕೆಯಿಂದ ಹೊರಬಂದಾಗ ಅವುಗಳಿಗೆ ಅರ್ಥ ಹೊಳೆಯದಾಗ, ಸೋಲೊಪ್ಪಿ ಕೊಂಡಾಗ ಒಂದೊಂದು ಪದಕ್ಕೂ ಅರ್ಥಹೇಳಿ ಮೆರೆಯುತ್ತಾಳೆ.

ಲಕ್ಷ್ಮೀಬಾಯಿ ಹಾಡಿಗೆ ಮಾರು ಹೋದ ಸುತ್ತಲೂ ಹಳ್ಳಿಯ ಜನರು ಜಾತ್ರೆ, ಉರುಸು, ಉತ್ಸವ ಬಂದಿತೆಂದರೆ ಆಮಂತ್ರಿಸುತ್ತಾರೆ ಆಕೆಯ ಹಾಡುಗಳಿಂದ ಖುಷಿಪಡುತ್ತಾರೆ. ಆಕೆಯ ತಂಡ ನಾಡಿನ ಬಹುಭಾಗದಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿದೆ. ಮುಂಚೂಣಿಯಲ್ಲಿ ಹಾಡುವ ಲಕ್ಷ್ಮಿಬಾಯಿ ತಂಡದ ಪ್ರಧಾನ ಪಾತ್ರವಹಿಸಿ ಪ್ರಮುಖ ಹಾಡುಗಾರ್ತಿಯಾಗುತ್ತಾಳೆ. ಹಿಂದಿನವರು ಆಕೆಯ ಹಾಡಿಗೆ ಜೀ ಜೀ ಅಥವಾ ಗೀಗೀ ಗಾ ಗೀಗೀ ಅನ್ನುತ್ತಾರೆ.

ಲಕ್ಷ್ಮೀಬಾಯಿ ಜನ್ಮ ತಾಳಿದ್ದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಆಡೂರು ಗ್ರಾಮದ ಚೆಲುವಾದಿ ಜನಾಂಗದ ಹನುಮಪ್ಪ-ಹನುಮವ್ವ ದಂಪತಿಗಳ ಮೂರನೇ ಮಗಳು. ಇಬ್ಬರು ಅಣ್ಣಂದಿರು, ಶಾಲೆಯಿಲ್ಲ. ಹದಿಹರೆಯದಲ್ಲಿಯೇ ಬದುಕು

ದೇವರ ಹೆಸರಿನಲ್ಲಿ ಡೋಲಾಯಮಾನ. ಬದುಕಿನ ನೂರಾರು ಕನಸುಗಳಿಂದ ಆಶೆ ಆಕಾಂಕ್ಷೆಗಳಿಂದ ವಂಚಿತಳಾಗಿ ಆದದ್ದು ದೇವದಾಸಿ.

ಲಕ್ಷ್ಮೀಬಾಯಿ ಬಗ್ಗೆ ಯೋಚಿಸುತ್ತಿದ್ದಂತೆ ಹೃದಯ ಮಿಡಿಯುತ್ತದೆ. ದೀನ ದಲಿತೆ, ಅನಾಥ ಏಕಾಂಕ ಬದುಕು ಕಂಡು ವ್ಯಥೆ ಎನಿಸುತ್ತದೆ. ೬೦ರ ಅಂಚಿನಲ್ಲಿರುವ ಈ ವೃದ್ಧ ಕಲಾವಿದೆ ಹಾಡಿದಾಗ ಮಾತ್ರ ಎಲ್ಲವೂ ಮರೆತು ಈಗಲೂ ಮಧುರ ಕಂಠದ ಕೋಗಿಲೆಯ ಧ್ವನಿ ಕೇಳಿದಂತೆ ಈ ಕಲಾವಿದೆಗೆ ಮಕ್ಕಳಿಲ್ಲ. ಅಣ್ಣನ ಮಕ್ಕಳೇ ಆಗಾಗ ಯೋಚಿಸಿಕೊಳ್ಳುತ್ತಾರೆ.

ಇಂಥ ಪ್ರತಿಭಾನ್ವಿತೆಗೆ ಪ್ರಶಸ್ತಿಗಳಿಲ್ಲ, ಮಾಸಾಶನವಿಲ್ಲ, ಸರಕಾರದ ಯಾವ ಸವಲತ್ತುಗಳಿಲ್ಲ ಇಂಥ ಪ್ರತಿಭಾನ್ವಿತರು ಮೂಲೆಗುಂಪಾಗಿ ಏನೂ ಸಾಧನೆ ಇಲ್ಲದ, ಪ್ರತಿಭೆ ಇಲ್ಲದ ಎಂತೆಂಥವರಿಗನೋ ಜಾನಪದ ಅಕಾಡೆಮಿ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ಮಾಸಾಶನ ದೊರೆಯುತ್ತಿರುವುದು ವಿಪರ್ಯಾಸ.

**ಲಕ್ಷ್ಮೀಬಾಯಿ ಚೆಲುವಾದಿ**
**ಆಡೂರ**
**ತಾ : ಯಲಬುರ್ಗಾ**

# ದುರಗಪ್ಪ ಜಗ್ಗಲ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಹಿರೇ ಅರಳಹಳ್ಳಿ ಗ್ರಾಮದ ಹನುಮಂತಪ್ಪ ಗ್ಯಾನವ್ವ ದಂಪತಿಗಳ ಐದನೇ ಮಗನಾಗಿ ದುರಗಪ್ಪ ೧೯೧೦ರಲ್ಲಿ ಜನ್ಮಪಡೆದರು. ಇಬ್ಬರು ಸಹೋದರರನ್ನು ಇಬ್ಬರು ಸಹೋದರಿಯರನ್ನು ಪಡೆದು ಬೆಳೆದ ದುರುಗಪ್ಪನವರ ಶಿಕ್ಷಣ ಓದಲು ಬರೆಯಲು ಬರುವಷ್ಟು ಅಕ್ಷರಾಭ್ಯಾಸ. ಶಾಲೆ ಆಗಿನ ದಿನಗಳಲ್ಲಿ ಸರಳ ಸಾಧ್ಯವಾಗದ ಮಾತಾಗಿತ್ತು.

ಹಳ್ಳಿಯ ಆಟಪಾಠ ಬಾಲ್ಯದಲ್ಲಿಯೇ ಸಹಜವಾಗಿ ಮೈಗೂಡಿಕೊಂಡವು. ಕ್ರಮೇಣ ಬಯಲಾಟಗಳಲ್ಲಿ ಪಾತ್ರ ಮಾಡುವ ಹುಚ್ಚು. ಆ ಆಸಕ್ತಿಯೇ ಅವರನ್ನು ಒಬ್ಬ ಉತ್ತಮ ಜಾನಪದ ರಂಗಭೂಮಿ ಕಲಾವಿದನನ್ನಾಗಿ ಮಾಡಿತು. ಊರಲ್ಲಿ ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ಪ್ರಯೋಗಕ್ಕೆ ಸಿದ್ಧವಾಗುತ್ತಿದ್ದ ಬಯಲಾಟಗಳಲ್ಲಿ ದುರಗಪ್ಪನವರ ಪಾತ್ರ ಪ್ರಮುಖವಾಗಿರುತ್ತಿತ್ತು. ಪಾತ್ರ ಮಾಡುವವರ ಜೊತೆಯಲ್ಲಿ ಹಿಮ್ಮೇಳ ಹಾಡಿನಲ್ಲಿಯೂ ಗುರುತಿಸಿಕೊಂಡರು.

ಪ್ರಾಯಕ್ಕೆ ಬಂದಾಗ ಹಾರ್ಮೋನಿಯಂ ಕಲಿಯುವ ಆಸಕ್ತಿ ಬೆಳೆಯಿತು. ಗದುಗಿನ ಶ್ರೀ ಪಂಚಾಕ್ಷರಿ ಗವಾಯಿಗಳ ದರ್ಶನ ಪಡೆದುಕೊಂಡು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಪಂಡಿತ ಪಂಚಾಕ್ಷರಿ ಗವಾಯಿಗಳು "ಒಂದು ಹಾಡು ಹೇಳು" ಎಂದಾಗ ದುರಗಪ್ಪ ಬಯಲಾಟದ ಹಾಡೊಂದನ್ನು ಹಾಡಿದಾಗ ಗವಾಯಿಗಳು ಆಶೀರ್ವದಿಸಿ ನಿನ್ನ ಧ್ವನಿ ಬಯಲಾಟಕ್ಕೆ ಹೇಳಿಮಾಡಿಸಿದಂತಿದೆ. ನೀನು ಆ ಕ್ಷೇತ್ರದಲ್ಲಿ ಯಶಸ್ಸು ಪಡೆಯುವೆ ಎಂದು ಆಶೀರ್ವದಿಸಿದಾಗ ದುರಗಪ್ಪ ಪೂಜ್ಯರ ಆಶೀರ್ವಾದ ಹೊತ್ತು ಬಂದು ಬಯಲಾಟದ ಹಾಡು ಹಾಡುವುದರಲ್ಲಿ ತೊಡಗಿಸಿಕೊಂಡು ಕಲಾಸೇವೆಯನ್ನೇ ಪ್ರಧಾನವಾಗಿರಿಸಿಕೊಂಡು ಸಾಗಿದ.

ಆ ದಿನಗಳಲ್ಲಿ ಶ್ರೀ ಕೃಷ್ಣಪಾರಿಜಾತ ಬಹಳಷ್ಟು ಪ್ರಚಲಿತವಿತ್ತು. ಇಂಗಳಿಗಿ ಹಸನಸಾಬ ರಚಿಸಿದ "ಶ್ರೀ ಕೃಷ್ಣ ಪಾರಿಜಾತ" ಕಲಿಯುವ ಆಸಕ್ತಿ ಹುಟ್ಟಿಕೊಂಡಾಗ ಹುನಗುಂದ ತಾಲೂಕಿನ ಅಲ್ಲಿವಟಗೆ ಹನುಮಪ್ಪ ಎಂಬುವವರನ್ನು ಗುರುವೆಂದು ಸ್ವೀಕರಿಸಿ ಅವರನ್ನು ತಮ್ಮೂರಿಗೆ ಕರೆದುಕೊಂಡು ಬಂದ ದುರುಗಪ್ಪ ಜಗ್ಗಲ ಅನೇಕ ತಿಂಗಳುಗಳ ಕಾಲ ಅವರಲ್ಲಿ ಕ್ರಮಬದ್ಧವಾಗಿ ಕಲಿತರು. ರಾಗ, ತಾಳ, ಲಯ ಎಲ್ಲವುಗಳಲ್ಲಿ ನಿಷ್ಠೆಯಿಂದ ಅಭ್ಯಾಸಿಸಿ ಪ್ರದರ್ಶನಕ್ಕೆ ಸಿದ್ಧರಾದ ದುರಗಪ್ಪ ಅಂದಿನಿಂದ ನಿರಂತರ ಪ್ರದರ್ಶನಗಳನ್ನು ನೀಡುತ್ತ ಸುತ್ತಲು ಹಳ್ಳಿಗಳಿಗೆ ಪ್ರಸಿದ್ಧಿ ಪಡೆದರು.

ದುರಗಪ್ಪನವರ ಪಾರಿಜಾತ ತಂಡದಲ್ಲಿ ಮರಿಯಪ್ಪ ತಳವಾರ, ಬಸಪ್ಪ ಅಮರಗೋಳ, ಜ್ಯೋತೆಪ್ಪ ಪ್ರಮುಖರು, ಈ ನಾಲ್ಕಾರು ಸ್ನೇಹಿತರಲ್ಲ ಅನೇಕ ವರ್ಷಗಳ ವರೆಗೆ ರಂಗ ಭೂಮಿ ಸೇವೆ ಸಲ್ಲಿಸುತ್ತ ಮೊದ ಮೊದಲು ತಮ್ಮೂರಲ್ಲಿ (ಅರಳಹಳ್ಳಿ) ನಂತರ ಸುತ್ತು ಮುತ್ತಲು ಹಳ್ಳಿಗಳಲ್ಲಿ, ಜಾತ್ರೆ ಉತ್ಸವ ಬಂದಿತೆಂದರೆ ದುರಗಪ್ಪನ "ಕೃಷ್ಣ ಪಾರಿಜಾತ" ಪ್ರದರ್ಶನಗೊಳ್ಳಲೇಬೇಕು. ಇವರ ಪ್ರದರ್ಶನಕ್ಕೆ ಪ್ರೇಕ್ಷಕರ ಪ್ರೋತ್ಸಾಹನೂ ಪ್ರಮುಖವಾಗಿತ್ತು. ಎಷ್ಟೋಸಲ ಜಾತ್ರೆಗಳಲ್ಲಿ ನಾಟಕ ಕಂಪನಿಗಳು ಇವರ ಡಪ್ಪಿನಾಟದೆದುರು ನಿಂತ ಉದಾಹರಣೆಗಳಿವೆ. ಒಂದು ಉದಾಹರಣೆ ಗುಡುದೂರು (ಕುಷ್ಟಗಿ ತಾಲೂಕ) ಜಾತ್ರೆಯಲ್ಲಿ ನಾಟಕ ಥೇಟರ್ ಪ್ರೇಕ್ಷಕರಿಂದ ತುಂಬಿ ತುಳುಕುತ್ತಿತ್ತು. ತಡವಾಗಿ ದುರಗಪ್ಪನ ಡಪ್ಪಿನಾಟ ಪ್ರಾರಂಭವಾಯಿತು. ತಂಡದ ಜೊತೆಪ್ಪ ಡಪ್ಪು ಬಾರಿಸುತ್ತ "ಬಂದೆನವ್ವ ಭವ ಎಂಬ ಬಜಾರಕ" ಎನ್ನುವ ಹಾಡಿನ ಕೋಚೆತ್ತಿದಾಗ ನಾಟಕ ಥೇಟರ ಖಾಲಿಯಾಗಿತ್ತು ಎನ್ನುವ ಮಾತು ಕೇಳಿದಾಗ ಪ್ರೇಕ್ಷಕವರ್ಗ ದುರಗಪ್ಪನ ಡಪ್ಪಿನಾಟ ತಂಡಕ್ಕೆ ಎಷ್ಟೊಂದು ಮಾರುಹೋಗಿತ್ತು ಎಂಬುದು ಸ್ಪಷ್ಟವಾಗುತ್ತಿದೆ. ದುರಗಪ್ಪನ ಪಾತ್ರ ಕೂಡ ಅಷ್ಟೇ ಆಕರ್ಷಕ ಜೊತೆಗೆ ಹಾಡುಗಾರಿಕೆ ಕೂಡ. ಕಂಚಿನ ಕಂಠ ಅವರದಾಗಿತ್ತು. "ಪರಹೆಣ್ಣಿನ ಮೋಹಕ್ಕೆ ಮನಸೋತು "ರಾಧೆಯ ಕೃಷ್ಣ ನಿನಗೂ ಆಣೆ ನನಗೂ ಆಣೆ ನನಗೂ ನಿನಗೂ ಭಕ್ತರಾಣೆ" ಹೀಗೆ ಅನೇಕ ತಾತ್ವಿಕ ಹಿನ್ನೆಲೆಯ ಹಾಡುಗಳು ಅರ್ಥಗರ್ಭಿತವಾಗಿದ್ದು ಪರಿಣಾಮಕಾರಿಯಾಗಿರುತ್ತಿದ್ದವು.

ಆಟ ಪ್ರಾರಂಭವಾದಾಗಿನಿಂದ ಕೊನೆಯವರೆಗೂ ನಿತ್ಯ ಜೀವನದ ಹಲವಾರು ಘಟನೆಗಳು, ಜೀವನದ ಅನೇಕ ಸನ್ನಿವೇಶಗಳು, ಸಂದರ್ಭಾನುಸಾರ ಕಲಾವಿದ ಅಳವಡಿಸಿಕೊಂಡು ಹೇಳಿದಾಗ, ಹಾಡಿದಾಗ ಜನರಿಗೆ ಮನೋರಂಜನೆಯ ಜೊತೆ ಪಾಠವಾಗಿರುತ್ತಿದ್ದವು. ಸಂದೇಶವಾಗಿರುತ್ತಿದ್ದವು. ಸುತ್ತಮುತ್ತಲಿನ ಹಳ್ಳಿಗಳಾದ ಸಾಲಭಾವಿ, ಮಂಡಲಮರಿ, ಲಿಂಗನ ಬಂಡಿ, ಹೊಸೂರು, ಕೊರಡ ಕೇರಿ, ದೋಟಿಹಾಳ ಪ್ರೇಕ್ಷಕರು ಈಗಲೂ ದುರಗಪ್ಪನ ಅಭಿನಯದ ಬಗ್ಗೆ ; ತಂಡದ ಬಗ್ಗೆ ಅಭಿಮಾನದಿಂದ ಹೇಳುತ್ತಾರೆ.

ಒಂದು ತಂಡ ಕಟ್ಟಿಕೊಂಡು ಸುತ್ತಲೂ ಹಳ್ಳಿಗಳ ಮನೆಮನೆಗೆ ಕೃಷ್ಣ ಪಾರಿಜಾತ ಕಥೆ ಪರಿಚಯಿಸಿ ಹಾಡುಗಾರಿಕೆ, ಸಂಗೀತದಿಂದಲೂ ದುರಗಪ್ಪ ಪ್ರೇಕ್ಷಕರಿಗೆ ಖುಷಿಕೊಟ್ಟರು ಪಾರಿಜಾತ ಆಟಕ್ಕಾಗಿಯೇ ಜೀವನವನ್ನು ಮುಡುಪಾಗಿಟ್ಟಿದ್ದ ದುರಗಪ್ಪ "ಕಲೆಗಾಗಿಯೇ ಕಲೆ" ಎಂದು ತಿಳಿದು ಏನನ್ನೂ ಅಪೇಕ್ಷಿಸದೇ ದುಡಿದವರು. ಹಾಗಂತಲೇ ಊರಿನ ಜನರ ಬಾಯಿಯಲ್ಲಿ ದುರಗಪ್ಪ ಉಳಿದಿದ್ದಾನೆ ಬೆಳೆದಿದ್ದಾನೆ.

ದುರಗಪ್ಪನವರ ಈ ಕಲಾ ಬೆಳವಣಿಗೆಯಲ್ಲಿ, ಸೇವೆಯಲ್ಲಿ, ಪತ್ನಿ ಶ್ರೀಮತಿ ಪಾರ್ವತಮ್ಮನ ಸಹಕಾರ ದೊಡ್ಡದು. ದುರಗಪ್ಪ ಕಲೆ, ಆಟ, ಪ್ರದರ್ಶನವೆಂದು ಊರೂರು ತಿರುಗುವಾಗ ಪಾರ್ವತಮ್ಮ ಏಳು ಜನ ಮಕ್ಕಳನ್ನು ಕಟ್ಟಿಕೊಂಡು ಸಹನೆಯಿಂದ ಸಂಸಾರ ನಿಭಾಯಿಸಿಕೊಂಡು ಹೋಗಿದ್ದಾರೆ. ಎಂದೂ ಪತಿಯ ಜೊತೆ ಜಗಳ ಕಾಯಲಿಲ್ಲ. ಹೀಗೆ ಊರೂರು ತಿರುಗಿದರೆ ಮನೆ-ಮಕ್ಕಳಗತಿ ಏನು ಎಂದು ಪ್ರಶ್ನಿಸಿಲಿಲ್ಲ.

ದುರಗಪ್ಪ ಜಾನಪದ ರಂಗಭೂಮಿಯಲ್ಲಿ ಸಾಧಿಸಬೇಕು, ಬೆಳೆಯಬೇಕೆನ್ನುವ ಮಹತ್ವಾಕಾಂಕ್ಷಿಯಾಗಿದ್ದರು. ಅನೇಕ ಆಶೆ ಆಶೋತ್ತರಗಳನ್ನು ಕಟ್ಟಿಕೊಂಡು ಬೆಳೆದು ಸಾಧಿಸಿ ಗುರಿತಲುಪಿದ ನಿಷ್ಠಾವಂತ ಕಲಾವಿದ. ಪ್ರಶಸ್ತಿಗೆ ಏನೆಲ್ಲ ಅರ್ಹತೆ ಪರಿಣಿತಿಗಳಿದ್ದರೂ ಅವುಗಳಿಗಾಗಿ ಹಪಹಪಿ ಪಡಲಿಲ್ಲ ಹೀರೆ ಅರಳಿಹಳ್ಳಿಯ ಕಲಾಚೇತನ.

ದಿ. ದುರಗಪ್ಪ ಜಗ್ಗಲ
C/o ಯಲ್ಲಪ್ಪ ಜಗ್ಗಲ
ಹಿರೇ ಅರಳಹಳ್ಳಿ
ತಾ : ಯಲಬುರ್ಗಾ ಜಿ : ಕೊಪ್ಪಳ

# ಹನುಮವ್ವ ಕುರುಬರ

ಜಾಗತೀಕರಣದ ಈ ದಿನಗಳಲ್ಲಿ ಹಳ್ಳಿಯ ಕಲೆ, ಹಾಡು ಮಾಯವಾಗುತ್ತಿವೆ ಎಂದು ಭಯಪಡುವಾಗ ಕುಷ್ಟಗಿಯ ಹನುಮವ್ವನನ್ನು ನೋಡಿದಾಗ ಆಕೆಯ ನಿರಂತರ ಹಾಡು ಕೇಳಿದಾಗ ಇನ್ನೂ ನಮ್ಮ ಸಂಪ್ರದಾಯದ ಹಾಡುಗಳು ಜೀವಂತ ಇವೆ ಎನ್ನುವ ಸಮಾಧಾನ.

ಹೆಣ್ಣು ಋತುಮತಿಯಾಗಿ ಗಂಡನ ಮನೆಗೆ ಹೋಗುವವರೆಗೂ ಮನೆಯಲ್ಲಿ ಜರುಗುವ ಕಾರ್ಯಕ್ರಮಗಳು ಮದುವೆಯ ಹಾಡು, ಸೋಬಾನದ ಹಾಡು ಎಲ್ಲವನ್ನೂ ಕೇಳಿದಾಗ ನಮ್ಮ ನಾಡಿನ ಆಚಾರ ವಿಚಾರ, ನಂಬಿಕೆ, ಜೀವನ ವಿಧಾನ ಸ್ಪಷ್ಟವಾಗುತ್ತಿದೆ.

ಹನುಮವ್ವನ ಬೀಸುವ ಹಾಡು, ಜೋಗುಳ ಹಾಡು ; ತತ್ವಪದ ಕೇಳಿದಾಗ ಆ ಹಾಡುಗಳೆಷ್ಟು ಅರ್ಥ ಪಡೆದುಕೊಂಡಿವೆ. ಇಂದಿನ ಯಾವ ಶ್ರೇಷ್ಠ ಕವಿಗೂ ಕಡಿಮೆಯಾಗಿಲ್ಲವೆನಿಸುತ್ತಿವೆ. ಅರ್ಥಗರ್ಭಿತ ಹಾಡುಗಳನ್ನು ಭಾವ ತುಂಬಿ ; ಮನತುಂಬಿ ಮಧುರ ಧ್ವನಿಯಲ್ಲಿ ತನ್ನದೇ ಧಾಟಿಯಲ್ಲಿ ಹನುಮವ್ವ ಹಾಡಿದಾಗ ಖುಷಿ ಎನಿಸುತ್ತೆ. ಅದ್ಭುತವೆನಿಸುತ್ತೆ.

ಆಕೆಯ ಹಾಡುಗಳಲ್ಲಿ ಪ್ರೀತಿ, ಭಕ್ತಿ, ಆದರ್ಶ, ಆರಾಧನೆ ಬದುಕಿನ ಏರಿಳಿತ ವಿಜೃಂಬಿಸುತ್ತಿವೆ. ಗರತಿಯ ಹಾಡುಗಳಲ್ಲಿ ಮಹಿಳೆಯ ಸುಖ, ದುಃಖ ನೋವು, ನಲಿವು ಆಶೆ ನಿರಾಶೆಗಳ ಜೊತೆ ಹೇಳುವ ತಾತ್ವಿಕತೆ, ಅದರಲ್ಲಿ ಬರುವ ಸಂದೇಶ ಸರ್ವಕಾಲಕ್ಕೂ ಸರ್ವಜನಕ್ಕೂ ಸರಿಹೊಂದುವಂತದ್ದು

ಈ ಆಧುನಿಕ ಯುಗದಲ್ಲಿ ಟಿ. ವ್ಹಿ., ಸಿನಿಮಾ, ಧಾರಾವಾಹಿಗಳ ಹಾವಳಿಯಲ್ಲಿ ನಾವು ನಮ್ಮ ಪರಂಪರೆ, ನಮ್ಮ ಸಂಸ್ಕೃತಿ ನಮ್ಮ ಸಂಪ್ರದಾಯದ ಹಾಡುಗಳು ಮುಳಿಗಿ

ಹೋದವೆಂದು ವ್ಯಥೆ ಪಡುವ ಈ ದಿನಗಳಲ್ಲಿ ಹನುಮವ್ವ ಕುರುಬರಂಥ ಹಾಡುಗಾರರು ಅಲ್ಲಲ್ಲಿ ಸಿಕ್ಕುತ್ತಿರುವವರೆಗೆ ಇನ್ನೂ ಆಶಾವಾದಿಯಾಗಿರಬಹುದು. ಹನುಮವ್ವ ಈ ನಾಡಿನ ಸಂಸ್ಕೃತಿ ಈ ನಾಡಿನ ಸಂಪತ್ತೆನ್ನುವುದರಲ್ಲಿ ಎರಡು ಮಾತಿಲ್ಲ.

"ನೋಡು ನೋಡು ಲಿಂಗವೆ
ನೋಡು ಬಸವ ಮಾಡಿದಾಟ"

ಎನ್ನುವ ಹಾಡು ತಾತ್ವಿಕ ಹಿನ್ನಲೆಯಲ್ಲಿ ಕೇಳಿಬಂದರೆ

"ಏನೂ ಬೇಡ ಗುರುವೆ
ಜ್ಞಾನ ಭಕ್ತಿ ಮುಕ್ತಿ ಕೊಡು
ಇದೇ ದೊಡ್ಡದು"

ಇಂಥ ಅನೇಕ ಹುಡುಗರನ್ನು ಹನುಮವ್ವನಿಂದಲೇ ಕೇಳ ಬೇಕು ಕೇಳಿದಷ್ಟು ಕೇಳಬೇಕೆನ್ನುವ ಖುಷಿ ಅರ್ಥವತ್ತಾದ ಹಾಡುಗಳು.

ಹನುಮವ್ವ ೧೦-೧೨ರ ಬಾಲ್ಯದಲ್ಲಿಯೇ ಹಾಡುವುದನ್ನು ಕಲಿತವಳು ಯಾರೂ ಕಲಿಸಲಿಲ್ಲ, ಯಾರೂ ಕಂಠ ಪಾಠ ಮಾಡಿಸಲಿಲ್ಲ. ಹಾಡುವುದನ್ನು ಕೇಳುತ್ತ ಕೇಳುತ್ತ ಕಲಿತವಳು. ಹಾಡುವವರ ಜೊತೆ ಹಾಡುತ್ತ ಹಾಡುತ್ತ ಇಂದು ಹಾಡಿನ ಕಣಜವೇ ಹನುವ್ವನಲ್ಲಿ.

ಊರಿನ ಯಾವುದೇ ಮನೆಯಲ್ಲಿ ಮದುವೆ, ಉತ್ಸವ ಮಂಗಲಕಾರ್ಯದಲ್ಲಿ ಹನುಮವ್ವನ ಹಾಡು ಇರಲೇಬೇಕು ಆಕೆಯದೇ ಮುಂಚೂಣಿಯ ಧ್ವನಿ. ಗುಡಿಗಳಲಿ ಉತ್ಸವಗಳಲಿ ಅಷ್ಟೇ ಏಕೆ ಸಾವಿನ ಮನೆಯಲ್ಲಿಯೂ ಭಕ್ತಿಯ ಭಜನೆಯ ಹಾಡುಗಳು ಇಂದಿನವರೆಗೂ ಸಾಗಿ ಬಂದಿವೆ.

ಹನುಮವ್ವ ಜನ್ಮ ಪಡೆದುದು ಯಲಬುರ್ಗಾ ತಾಲೂಕಿನ ಸಂಗನಾಳ ಗ್ರಾಮದ ಮಲ್ಲಪ್ಪ-ಸಂಗಮ್ಮ ದಂಪತಿಗಳ ಮಗಳಾಗಿ. ಮನೆಯೇ ಪಾಠಶಾಲೆ, ಹಳ್ಳಿಯಲ್ಲಿ ಸಹಜವಾಗಿ ಕಲಿತ ಹಾಡುಗಳು. ಕುಷ್ಟಗಿ ತಾಲೂಕಿನ ಕಂದಕೂರು ಗ್ರಾಮದ ಮಲ್ಲಪ್ಪ ಅವರನ್ನು ಮದುವೆಯಾಗಿ ಬಂದ ನಂತರವೂ ಹಾಡಿನ ಹವ್ಯಾಸ ಕಡಿಮೆ ಯಾಗಲಿಲ್ಲ. ಗಂಡ ಮಲ್ಲಪ್ಪ "ಹೋಗು ಅವರು ಮನೆಯ ಬಾಗಿಲಿಗೆ ಬಂದು ಕರೆಯುತ್ತಾರೆಂದಾಗ ಒಲ್ಲೆ ಎನ್ನಬಾರದು ಹಾಡು ಕಲಿತಿದ್ದಿಯಾ ಕರೆಯುತ್ತಾರೆ ಹೋಗಿ ಹಾಡಿ ಬಾ" ಎಂದು ಪ್ರೋತ್ಸಾಹಿಸುವ ಗಂಡನನ್ನು ಹನುಮವ್ವ ಕೃತಜ್ಞತೆಯಿಂದ ನೆನೆಯುತ್ತಾಳೆ.

ಈ ದಂಪತಿಗಳಿಗೆ ಮಕ್ಕಳಾಗಲಿಲ್ಲ ಪತಿಯನ್ನು ಕಳೆದುಕೊಂಡು ಏಕಾಂಗಿಯಾಗಿರುವ ಹನುಮವ್ವನಿಗೆ ಹಾಡೇ ಮಕ್ಕಳು ಅವುಗಳನ್ನು ಉಳಿಸಿಕೊಂಡು

ಬೆಳೆಸಿಕೊಂಡು ಅವುಗಳ ಜೊತೆ ತನ್ನ ಒಂಟಿತನ ತನ್ನ ನೋವುಗಳನ್ನು ಮರೆಯುತ್ತ ಕಾಲ ಕಳೆಯುತ್ತಾಳೆ. ೬೫-೭೦ರ ಈ ವೃದ್ಧೆಗೆ ಈಗ ನಿರಂತರ ಹಾಡಲು ಧ್ವನಿ ಸಾಲುತ್ತಿಲ್ಲ, ನೆನಪಿನ ಶಕ್ತಿ ಕುಂದಿದೆ. ಊರಿನ ಜನರು ಮಾತ್ರ ಹನುಮವ್ವನನ್ನು ಹಾಡಿನಿಂದ ಗುರುತಿಸಿ ಗೌರವಿಸಿದ್ದಾರೆ.

ಇಡೀ ಊರಿಗೆ ಹನುಮವ್ವ ಇಂದಿಗೂ ಬೇಕು ಹುಟ್ಟಿನಿಂದ ಸಾವಿನವರೆಗೂ ಹನುಮವ್ವ ಇರುತ್ತಾಳೆ, ಹುಟ್ಟಿನಲ್ಲಿ ಜೋಗಳ ಹಾಡಿ ಬಂದರೆ ಸಾವಿನ ಮನೆಯಲ್ಲಿ ದೇವರ ಭಜನೆ ಹಾಡು, ಹೀಗೆ ಹನುಮವ್ವ ಊರಿನ ಅಷ್ಟೇ ಅಲ್ಲ ಸುತ್ತಲು ಹಳ್ಳಿಯ ಜನರ ಪ್ರೀತಿಗೆ ಪಾತ್ರಳಾಗಿದ್ದಾಳೆ, ಜನಪದ ಶಿರಿಯಾಗಿದ್ದಾಳೆ.

**ಹನುಮವ್ವ ಕುರುಬರ**
**ಅಂಚೆ : ಕಂದಕೂರು**
**ತಾ : ಕುಷ್ಟಗಿ ಜಿ : ಕೊಪ್ಪಳ**

## ಭೀಮಪ್ಪ ಬಿಂಗಿ

"ಮೋಡವಿಲ್ಲದೆ, ಮುಗಿಲು ಇಲ್ಲದೆ
ಮಳೆಯು ಬರತೈತಿ,
ಹೊಳೆದಂಡೆ ತುಂಬಿ ಪರಿತೈತಿ"

ಎನ್ನುವ ತತ್ವಪದ ಹಾಡಿನಿಂದ ಜನಪ್ರಿಯವಾಗಿದ್ದ ಭೀಮಪ್ಪ ಬಿಂಗಿ ತನ್ನ ಹಾಡುಗಾರಿಕೆಯಿಂದ, ತನ್ನ ಕಲೆ, ಸಂಸ್ಕೃತಿಯಿಂದ ಯಲಬುರ್ಗಾ ತಾಲೂಕಿನ ಅರಳಿಹಳ್ಳಿ ಗ್ರಾಮದ ಜನರ ಮನದಲ್ಲಿ-ಹೃದಯದಲ್ಲಿ ಉಳಿದು ಇಂದಿಗೂ ಜೀವಂತ ಇರುವ ಕಲಾವಿದ. ಶ್ರೀಮಂತ ಕಂಠದಿಂದ ತತ್ವಪದಗಳಿಂದ ಊರಿನ ಅಭಿಮಾನಿಗಳ ಪ್ರಸಂಶೆಗೆ ಪಾತ್ರವಾದ ಕಲಾವಿದ.

ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಮನರಂಜನೆಯ ಮಾಧ್ಯಮಗಳೂ ಇಲ್ಲದ ಕಾಲದಲ್ಲಿ ಜಾನಪದ ಕಲಾವಿದರೇ ಜನರ ಮನರಂಜನೆಗೆ ಕಾರಣರಾಗಿದ್ದರು. ಜಾನಪದ ಹಾಡುಗಳಿಂದ, ಕುಣಿತಗಳಿಂದ ರಂಜಿಸುವುದರ ಜೊತೆ ತತ್ವಪದಗಳಂಥ ಅನುಭಾವದ ತಾತ್ವಿಕ ಹಿನ್ನಲೆಯ ಹಾಡುಗಳಿಂದ ಜನಸಾಮಾನ್ಯರನ್ನೂ ಚಿಂತನಗೆ ಒಳಪಡಿಸಿ ಉತ್ತಮ ಬದುಕಿಗೆ ಕಾರಣರಾದ ಇಂಥ ಕಲಾವಿದರು ಎಲೆಮರೆಯ ಕಾಯಿಯಂತೆ ಆಗಿ ಹೋಗಿದ್ದಾರೆ. ಅಂಥ ಕಲಾವಿದರಲ್ಲಿ ಭೀಮಪ್ಪ ಬಿಂಗಿ ಒಬ್ಬರು.

ಭೀಮಪ್ಪ ಬಿಂಗಿ ಕಲಾವಿದರಾಗಿ, ಹಾಡುಗಾರರಾಗಿ, ಭಾವೈಕ್ಯತೆಯ ಬದುಕಿಗೆ ಶ್ರಮಿಸಿದವರು. ಕೋಲಾಟಪದ, ತತ್ವಪದ, ಭಜನೆಪದ, ಮೋಹರಂ ಹಾಡುಗಳ ಸಂಗ್ರಹಕ್ಕೆ ಲೆಕ್ಕವಿಲ್ಲ. ದಣಿವಿಲ್ಲದಂತೆ ಹಾಡುವ ಈ ಕಲಾವಿದ ಮೋಹರಂ ಹಬ್ಬದಲ್ಲಿ ಭಾಗಿಯಾಗಿ ಹಾಡಿ ರಂಜಿಸಿದವರು, "ಇದೊಂದು ರಾತ್ರಿ ಶರಣರ ಜಾತ್ರೆ" ಎನ್ನುವಂಥ ಭಾವೈಕ್ಯತೆಯ ಹಾಡಿನಿಂದ ಹೆಜ್ಜೆಹಾಕುತ್ತ ಸಮಸ್ತ ಜನರ ಪ್ರೀತಿ, ವಿಶ್ವಾಸಕ್ಕೆ ಕಾರಣರಾದ ಈ ಕಲಾವಿದರು

ಡಪ್ಪಿನ ಹಾಡುಗಳಿಂದ ಸ್ವಾತಂತ್ರ್ಯದ ಜಾಗ್ರತೆ ಮೂಡಿಸುವಲ್ಲಿಯೂ ಕಾರಣರಾಗಿ ವಿಶಿಷ್ಟವಾಗಿ ಗೋಚರಿಸುತ್ತಾರೆ. ಸ್ವಾತಂತ್ರ್ಯಬಂದ ರಾತ್ರಿ ಬೆಳಗಾಗುವವರೆಗೆ ಹಾಡಿ ಕುಣಿದು ಕುಪ್ಪಳಸಿ ಸಂಭ್ರಮಿಸಿದ್ದುಂಟು.

"ಏನು ಬಲ್ಲೆ ಗುರುವೆ ಶಿವನೆ ಜಗವೆಂಬುದು" ಎನ್ನುವ ಇವರ ಹಾಡು ಅತ್ಯಂತ ಜನಪ್ರಿಯ ಹಾಡಾಗಿತ್ತೆಂದು ಆಗ ಕೇಳಿದ ಹಿರಿಯರು ನೆನಪಿಸಿಕೊಂಡು ಖುಷಿಪಡುತ್ತಾರೆ ಭಜನೆ, ತತ್ವಪದಗಳಷ್ಟೇ ಲೌಕಿಕ ಬದುಕಿನ ಸರಸ-ವಿರಸದ ಹಾಡುಗಳೂ ಅಷ್ಟೇ ಜನಪ್ರಿಯವಾಗಿದ್ದವು.

"ಗೆಳತಿ ಗೆಳೆಯರಿಬ್ಬರು ಕೂಡಿ
ಕಾಲಕಾಲಂತರ ಜೋಡಿ"

ಹೀಗೆ ಅನೇಕ ಹಾಡುಗಳ ಕಣಜವಾಗಿದ್ದ ಭೀಮಪ್ಪ ಸುತ್ತಲೂ ಗ್ರಾಮದ ಜನರ ಮನರಂಜನೆಯ ಶ್ರೇಷ್ಠಕಲಾವಿದ. ವೈಯಕ್ತಿಕ ಬದುಕಿಗಿಂತ ಕಲೆಗನೇ ಹೆಚ್ಚು ಒತ್ತುಕೊಟ್ಟು ನಾಡು-ನುಡಿ ಸಂಸ್ಕೃತಿಗೆ ತನ್ನದೇ ಆದ ಅಳಿಲು ಸೇವೆ ಸಲ್ಲಿಸಿದವರು. ಹಾಗಂದಕ್ಷಣ ಮನೆ-ಮಕ್ಕಳು-ಸಂಸಾರ ಮರೆತು ಹೋದವರಲ್ಲ.

ಶಿಕ್ಷಣದ ಸೌಲಭ್ಯಗಳಿಲ್ಲದ ಕಾಲದಲ್ಲಿಯೂ ಮಕ್ಕಳನ್ನು ಓದಿಸುವ ವಿದ್ಯಾವಂತರನ್ನಾಗಿ ಮಾಡುವ ಮನೋಭಾವನೆಯುಳ್ಳವರಾಗಿದ್ದರು. ಮಕ್ಕಳೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಾಗದೇ ಹೋದರೂ ಕಿರಿಯ ಮಗನನ್ನು ಅದೇ ಆಗ ಪ್ರಾರಂಭಗೊಂಡ ಸರಕಾರಿ ಸ್ಕೂಲಿಗೆ ಸೇರಿಸಿ ತಮ್ಮ ಕುಟುಂಬದ ಮೊದಲ ಸಾಲಿ ಹುಡುಗ ಎಂದು ಹೆಮ್ಮೆ ಪಟ್ಟುಕೊಂಡ ಈ ತಂದೆಗೆ ಇನ್ನೊಂದು ಖುಷಿ ಆ ಮಗ ತಮ್ಮ ಕುಟುಂಬದ ಮೊದಲ ಪದವೀಧರನಾದ ಎನ್ನುವುದು.

ಭೀಮಪ್ಪ ಬಿಂಗಿ ಯಲಬುರ್ಗಾ ತಾಲೂಕಿನ ಅರಳೀಹಳ್ಳಿ ಗ್ರಾಮದ ಶ್ರೀ ಗುಂಡಪ್ಪ ಶ್ರೀಮತಿ.......... ದಂಪತಿಗಳ ಮಗನಾಗಿ ಸುಮಾರು ೧೯೧೦ ಅಥವಾ ೧೯೧೨ರಲ್ಲಿ ಜನಿಸಿದವರು. ಬಾಲ್ಯದಲ್ಲಿಯೇ ಹಾಡು, ಕುಣಿತಗಳತ್ತ ಒಲವುಳ್ಳವರಾಗಿ ಕ್ರಮೇಣ ಸಮಕಾಲೀನ ಗೆಳೆಯರೊಂದಿಗೆ ಭಜನೆ ಹಾಡುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರಮೇಣ ಹಾಡುಗಾರರಲ್ಲಿ ಗುರುತಿಸಿಕೊಂಡು ಬೆಳೆಯುತ್ತ ಬೆಳೆಯುತ್ತ ಜಾನಪದ ಕಲೆಗಳನ್ನು ಮೈಗೂಡಿಸಿಕೊಂಡು ಗ್ರಾಮದ ಜನಮನ ಸೆಳೆಯುವಂತಹ ಕಲಾವಿದರಾದರು.

ಭೀಮಪ್ಪನವರ ಪತ್ನಿ ಅವರ ಕಲೆಯ ಬೆಳವಣಿಗೆ ಕಂಡು ಖುಷಿಪಟ್ಟವರು. ಈ ದಂಪತಿಗಳಿಗೆ ನಾಲ್ಕು ಜನ ಗಂಡುಮಕ್ಕಳು, ಒಬ್ಬ ಹೆಣ್ಣು ಮಗಳು. ಈ ಮಕ್ಕಳಲ್ಲಿ ಕಿರಿಯಮಗ ಸೋಮಶೇಖರ ಶಿಕ್ಷಣ ಪಡೆದು ಪದವೀಧರನಾಗುವ ಜೊತೆಗೆ

ತಂದೆಯ ಕಲೆಯನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದವರು. ತಂದೆ ಹಾಡುತ್ತಿದ್ದ ಕೋಲಾಟ ಪದಗಳ ಹಾಡುಗಾರಿಕೆಯಿಂದ ಕುಣಿತದಿಂದ ಯುವ ಜನ ಮೇಳದ ಪ್ರಥಮ ಪ್ರಶಸ್ತಿ ಪಡೆದು (೧೯೭೮, ೧೯೮೨) ತಂದೆಯ ಹೆಸರಿಗೆ ಕೀರ್ತಿ ತಂದವರು. ನನಗೆ ದೊರೆತ ಪ್ರಶಸ್ತಿ, ಸನ್ಮಾನ ಎಲ್ಲವೂ ನಮ್ಮ ತಂದೆಯವರ ಪಾದಕ್ಕೆ ಅರ್ಪಿತ ಎನ್ನುವ ಮಾತುಗಳಿಂದ ತಂದೆಯ ಬಗ್ಗೆ ಇದ್ದ ಪೂಜ್ಯತೆ, ಗೌರವದ ಜೊತೆಗೆ ಅವರ ಕಲಾ ಜೀವನ ಸ್ಪಷ್ಟ ಪಡಿಸುತ್ತಿವೆ.

ಭೀಮಪ್ಪ
ಯಲಬುರ್ಗಾ

# ಸಿದ್ಧಲಿಂಗಯ್ಯ ಮೃತ್ಯುಂಜಯ ಚೌಡಿ

ಕೊಪ್ಪಳ ಜಿಲ್ಲೆಯ ಗೊರ್ಲೆಕೊಪ್ಪ, ಇಟಗಿ ಗ್ರಾಮಗಳು ಕರಡಿಮಜಲು ಕಲೆಗೆ ಪ್ರಸಿದ್ಧಿ ಪಡೆದ ಗ್ರಾಮಗಳು. ಇಟಗಿಯ "ಶ್ರೀ ಪ್ಯಾಟಿ ಬಸವೇಶ್ವರ ಜಾನಪದ ಕಲಾಸಂಘ (ರಿ) ಕರಡಿಮಜಲು ತಂಡ ರಚಿಸಿಕೊಂಡು ಬಹಳಷ್ಟು ಪ್ರಸಿದ್ಧಿ ಪಡೆದಿದೆ. ಹತ್ತು ಜನರ ಈ ತಂಡದ ಸಂಚಾಲಕ, ಪ್ರಮುಖ ಕಲಾವಿದ ಶ್ರೀ ಸಿದ್ಧಲಿಂಗಯ್ಯ ಮೃತ್ಯುಂಜಯ ಚೌಡಿ. ಈ ತಂಡ ಸುಮಾರು ೩೦ ವರ್ಷಗಳಿಂದ ನಡೆದು ಬಂದಿದೆ. ಹಿರಿಯ ಕಲಾವಿದರು ಸರಿಯುತ್ತಿದ್ದಂತೆ ಹೊಸ ಕಲಾವಿದರು ಸೇರ್ಪಡೆಯಾಗುತ್ತ ನಿರಂತರ ಸಾಗಿಬಂದು ವರ್ಷ ವರ್ಷ ಸಶಕ್ತವಾಗುತ್ತ ಹೆಚ್ಚು ಹೆಚ್ಚು ಪ್ರಸಿದ್ಧಿ ಪಡೆಯುತ್ತ ಇಡೀ ಜಿಲ್ಲೆಗೆ ಹೆಸರು ಪಡೆದಿದೆ.

ಕೊಪ್ಪಳ ತಾಲೂಕಿನ ಇಟಗಿ ಗ್ರಾಮದ ಶ್ರೀ ಮೃತ್ಯುಂಜಯ ಹುಚ್ಚೀರಮ್ಮ ಜಂಗಮ ದಂಪತಿಗಳ ಆರನೇ ಮಗ ೧-೬-೧೯೭೩ರಲ್ಲಿ ಜನ್ಮ ಪಡೆದರು. ಓದಿದ್ದು ಬಿ.ಎ. ಇಟಗಿಯಲ್ಲಿ ಹೈಸ್ಕೂಲ ಹಾಗೂ ಪಿ.ಯು.ಸಿ. ಯಲಬುರ್ಗಾದಲ್ಲಿ ಕಾಲೇಜು ಶಿಕ್ಷಣ. ಬಾಲ್ಯದಿಂದಲೇ ಊರಿನ ಕರಡಿಮಜಲು ಕಲಾತಂಡ ಗಮನಿಸುತ್ತ ಅವರೊಂದಿಗಿನ ಒಡನಾಟವೇ ಆಸಕ್ತಿ ಹುಟ್ಟುವಲ್ಲಿ ಕಾರಣವಾಯಿತು. ರುದ್ರಪ್ಪ ಹೂಗಾರ ಇವರ ಆಸಕ್ತಿ ಗಮನಿಸಿ ಗುರುಗಳಾಗಿ, ಮಾರ್ಗದರ್ಶಕರಾಗಿ ಈ ಕಲಾಕ್ಷೇತ್ರದಲ್ಲಿ ಬೆಳೆಯುವಂತೆ ಮಾಡಿದರು. ವೆಂಕಪ್ಪ ಮಲಿ ಕೂಡ ಪ್ರೋತ್ಸಾಹಿಸಿ ಕಲೆಯ ಬಗ್ಗೆ ತಿಳಿಸಿದರು.

ತಂದೆ ಬುಲ್ಡೋಜರ ಡ್ರೈವರ ಆಗಿ ಕಾರ್ಯನಿರ್ವಹಿಸುತ್ತಿದ್ದರೂ ಮಗನನ್ನು ಪದವೀಧರನನ್ನಾಗಿ ಮಾಡಿದ್ದು ಸಾಹಸದ ಮಾತು. ಮಗನ ಕಲೆಗೂ ಕೂಡ ಅವರ ಪ್ರೋತ್ಸಾಹವಿತ್ತು. ಹಾಗಂತಲೇ ಎರಡು ದಶಕಗಳಿಂದ ಕಲಾಸೇವೆ ಸಾಗಿಬಂದಿದೆ.

ನಾಡಿನ ಉದ್ದಗಲಕ್ಕೂ ಸಂಚರಿಸಿ ಕಾರ್ಯಕ್ರಮ ಕೊಟ್ಟುಬಂದ ಶ್ರೇಯಸ್ಸು ಈ ಕಲಾವಿದರ ತಂಡದ್ದು.

ದಿಮ್ಮು, ಚಾಗಡ, ತಾಳ ನುಡಿಸುವ ಕಲೆ ಸಿದ್ಧಲಿಂಗಯ್ಯನವರಿಗೆ ಕರಗತವಾಗಿದೆ. ಹಂಪಿ ಉತ್ಸವ. ಇಟಗಿ ಉತ್ಸವ, ಆನೆಗೊಂದಿ ಉತ್ಸವ ಸುವರ್ಣ ಕರ್ನಾಟಕ ಉದ್ಘಾಟನಾ ಸಮಾರಂಭ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನೇಕ ಕಡೆ ಕಾರ್ಯಕ್ರಮ ನೀಡಿ ಬಂದಿದ್ದಾರೆ.

ಈ ಕರಡಿಮಜಲು ತಂಡದಲ್ಲಿ ಮಲ್ಲಿಕಾರ್ಜುನ ಶಿವಪ್ಪ ಗುಳಗಣ್ಣನವರ, ನಿಂಗಪ್ಪ ಮಲ್ಲಪ್ಪ ಹಡಪದ, ಮಹೇಶ ಕಳಕಪ್ಪ ಬಿರದೂರ, ಮಹೇಶ ನಿಂಗಪ್ಪ ಹಳ್ಳಿ, ಮಹೇಶ ವೀರಪ್ಪ ಕ್ಯಾದಗುಂಪಿ, ಮಹೇಶ ಹನುಮರೆಡ್ಡಪ್ಪ ಹಳ್ಯಾಳ, ಹನುಮಪ್ಪ ಕರಿಯಪ್ಪ ಭಜಂತ್ರಿ, ಶರಣಪ್ಪ ಭಜಂತ್ರಿ ಪದಾಧಿಕಾರಿಗಳಾಗಿದ್ದು ಕಲಾವಿದರೂ ಆಗಿದ್ದಾರೆ.

ಈ ತಂಡದ ಅಧ್ಯಕ್ಷರಾಗಿ, ತಂಡದ ಕಲಾವಿದರಾಗಿ ಸೇವೆಸಲ್ಲಿಸುತ್ತಿರುವ ಸಿದ್ಧಲಿಂಗಯ್ಯನವರ ಕಾರ್ಯವೈಖರಿ, ಸಂಘಟನೆ ವಿಶೇಷ ಲೆಕ್ಕಕ್ಕೆ ಬರುತ್ತದೆ. ತಾವು ಬೆಳೆಯುವುದರ ಜೊತೆ ಸಮಸ್ತ ತಂಡದ ಕಲಾವಿದರ ಬೆಳವಣಿಗೆ ಬಯಸುವ ಹಿರಿಯ ಗುಣ ಈ ಕಲಾವಿದರದು. ತನ್ನೆಲ್ಲ ಕಲಾವಿದರನ್ನು ಒಗ್ಗಟ್ಟಿನಿಂದ ಕಲೆಹಾಕಿಕೊಂಡು ಅವರಿಗೆ ಪ್ರೋತ್ಸಾಹಿಸುತ್ತ ಉತ್ಸಾಹ ತುಂಬುತ್ತ ಯಶಸ್ವಿಯಾಗಿ ಕಾರ್ಯಕ್ರಮ ನೀಡುತ್ತ ಬರುವಲ್ಲಿ ಸಿದ್ಧಲಿಂಗಯ್ಯನ ಪಾತ್ರ ಹಿರಿದು.

ಸಿದ್ಧಲಿಂಗಯ್ಯನ ತಂಡಕ್ಕೆ ಅನೇಕ ಪ್ರಶಸ್ತಿ ಪತ್ರಗಳು, ಪುರಸ್ಕಾರಗಳು, ಸನ್ಮಾನಗಳು ಲಭಿಸಿವೆ. ಅವೆಲ್ಲ ನೋಡಿದಾಗ ಈ ಸಂಘಟನಾಕಾರರ ನಿಷ್ಠೆ ಶ್ರಮ ಸ್ಪಷ್ಟವಾಗುತ್ತಿದೆ. ತಂಡದ ಪ್ರತಿಯಶಸ್ಸಿನ ಹಿಂದೆ ಸಿದ್ಧಲಿಂಗಯ್ಯನ ಪ್ರಯತ್ನ ಶ್ರಮ, ಶ್ರದ್ಧೆ ಸ್ಪಷ್ಟವಾಗುತ್ತಿದೆ. ಸಿದ್ಧಲಿಂಗಯ್ಯನವರು ಕಲಾವಿದರಾಗಿ ಆಕರ್ಷಿಸುವಷ್ಟೇ ಸಂಘಟಕರಾಗಿ ಆಕರ್ಷಿಸುತ್ತಾರೆ.


ಸಿದ್ಧಲಿಂಗಯ್ಯ ಎಂ. ಚೌಡಿ
ಅಂಚೆ : ಇಟಗಿ
ತಾ : ಯಲಬುರ್ಗಾ, ಜಿ : ಕೊಪ್ಪಳ

## ಶೇಖರಗೌಡ ಕಲ್ಲನಗೌಡ ಮಾಲಿಪಾಟೀಲ

ಯಲಬುರ್ಗಾ ತಾಲೂಕಿನ ಸಂಕನೂರ ಗ್ರಾಮದ ಕಲ್ಲನಗೌಡ-ಬಸಮ್ಮ ದಂಪತಿಗಳ ಮಗನಾಗಿ ಜನ್ಮಪಡೆದ ಶೇಖರ ಗೌಡ ಬಾಲ್ಯದಿಂದಲೇ ಬೆಳೆದಿದ್ದು ಗೊರ್ಲೆಕೊಪ್ಪದಲ್ಲಿ, ಓದಿದ್ದು ಎಸ್.ಎಸ್.ಎಲ್.ಸಿ. ಇವರಿಗೆ ಆರು ಮಂದಿ ಸಹೋದರರು, ಒಬ್ಬ ಸಹೋದರಿ. ರೈತ ಮನೆತನದಲ್ಲಿ ಜನ್ಮಪಡೆದ ಶೇಖರಗೌಡ ಕೂಡ ಬೇಸಾಯವನ್ನೇ ಪ್ರಮುಖ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ.

ಕರಡಿಮಜಲು ಕಲೆಯಲ್ಲಿ ಬಾಲ್ಯದಿಂದಲೇ ಆಸಕ್ತಿ. ಅದರಲ್ಲೂ ಗೊರ್ಲೆ ಕೊಪ್ಪದಲ್ಲಿ ಬೆಳೆದಿದ್ದರಿಂದ ಸಹಜವಾಗಿ ಕಲಾಸಕ್ತಿಗೆ ಕಾರಣ ಗೊರ್ಲೆಕೊಪ್ಪದಲ್ಲಿ ಮನೆಗೊಬ್ಬರು ಕಲಾವಿದರೆನ್ನುವಷ್ಟು ಅಲ್ಲಿ ಕಲಾವಿದರ ಸಂಖ್ಯೆ ಬೆಳೆದಿದೆ. ಬಹಳ ವರ್ಷಗಳಿಂದ ಕರಡಿಮಜಲು ಕಲೆ ಬೆಳೆದು ಬಂದಿದೆ. ಇಂದಿಗೂ ಅದೇ ಉತ್ಸಾಹ ಅದೇ ಪರಂಪರೆಯಲ್ಲಿ ಕಲಾವಿದರು ಸಾಗಿಬಂದಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ಗೊರ್ಲೆಕೊಪ್ಪ ಅಪರೂಪದ ಗ್ರಾಮ. ಬಹು ಉತ್ಸಾಹದಲ್ಲಿ ಕಲೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಂತಹ ಗ್ರಾಮ.

"ಶ್ರೀ ಕಟ್ಟಿ ಬಸಲಿಂಗೇಶ್ವರ ಕರಡಿಮಜಲು ಸೇವಾಮೇಳ" (ರಿ) ಗೊರ್ಲೆಕೊಪ್ಪ ಈ ಸಂಘದ ಸೇವೆ ಪ್ರಸಂಶನೀಯ. ನಾಡು ಹೊರನಾಡಿನಲ್ಲಿ ಕಾರ್ಯಕ್ರಮ ನೀಡಿದ ಹೆಗ್ಗಳಿಕೆ ಈ ಸಂಘಕ್ಕಿದೆ. ಮುಂಬೈ, ಮೈಸೂರು, ಬೆಂಗಳೂರು, ಹಂಪಿ, ಆನೆಗೊಂದಿ ಉತ್ಸವಗಳಲ್ಲಿ, ಆಕಾಶವಾಣಿ, ದೂರದರ್ಶನಗಳಲ್ಲಿಯೂ ಪ್ರಸಾರವಾದ ಈ ಕಲಾವಿದರ ಕಲೆ ಆಕರ್ಷಕವಾದುದು. ಅನೇಕ ಸ್ಪರ್ಧಾ ತಂಡಗಳಲ್ಲಿಯೂ ಭಾಗವಹಿಸಿ ಪ್ರಶಸ್ತಿ ಗೌರವ ಪಡೆದ ಈ ತಂಡ ಉತ್ತರ ಕರ್ನಾಟಕದ ಪ್ರಮುಖ ಕಲಾಮೇಳ.

ಈ ತಂಡದ ಸದಸ್ಯರಲ್ಲೊಬ್ಬರಾದ ಶೇಖರ ಗೌಡರು ದಿಮ್ಮು ಹಾಗೂ ಕರಡಿ ವಾದಕರು. ಹೆಚ್ಚಾಗಿ ದಿಮ್ಮನ್ನೇ ನುಡಿಸುವ ಇವರು ಅದರಲ್ಲಿಯೇ ಹೆಚ್ಚು ಪಳಗಿ ಆಕರ್ಷಿಸಿದವರು. ಸುಮಾರು ನಾಲ್ಕು ದಶಕಗಳಿಂದ ನಿರಂತರ ಈ ಕರಡಿಮಜಲಿನ ತಂಡದಲ್ಲಿ ಸೇವೆಸಲ್ಲಿಸುತ್ತ ನಾಡು, ಹೊರನಾಡು ಜಿಲ್ಲೆ, ರಾಜ್ಯ, ರಾಷ್ಟ ಮಟ್ಟದವರೆಗೂ ಪ್ರದರ್ಶನದಲ್ಲಿ ಜನಮನ ಸೆಳೆದಿದ್ದಾರೆ.

ಚಿಕ್ಕಂದಿನಿಂದಲೇ ಈ ಕಲೆಯಲ್ಲಿ ಗುರುತಿಸಿಕೊಂಡ ಶೇಖರಗೌಡರಿಗೆ ಗುರು ರಾಮಣ್ಣ ಭಜಂತ್ರಿ. ಇವರೇ ಮಾರ್ಗದರ್ಶಕರು, ಇವರೇ ಸಮಗ್ರ ಬೆಳವಣಿಗೆಗೆ ಕಾರಣರು. ರಾಮಣ್ಣ ಭಜಂತ್ರಿಯನ್ನು ಬಹಳಷ್ಟು ಕೃತಜ್ಞತೆಯಿಂದ ನೆನೆಯುವ ಶೇಖರಗೌಡರು ಗುರುವಿನಂತೆ ತಾವು ಅನೇಕ ಹೊಸಕಲಾವಿದರನ್ನು ಹುಟ್ಟು ಹಾಕಿದ್ದಾರೆ. ಇವರ ಚಿರಂಜೀವಿ ಕೂಡ ಉತ್ತಮ ಕಲಾವಿದ.

ಶೇಖರಗೌಡ ಗೊರ್ಕಿಕೊಪ್ಪದ ಕರಡಿಮಜಲು ತಂಡದ ಹಿರಿಯ ಹಾಗೂ ಅನುಭವಿ ಕಲಾವಿದ. ಎಂದೂ ಅವರು ತಮ್ಮ ಸಾಧನೆಯ ಬಗ್ಗೆ ಹೇಳಿಕೊಂಡವರಲ್ಲ. ಒಂದು ಮಾತು ಮಾತ್ರ ಸತ್ಯ ದಿಮ್ಮು ಬಾರಿಸುವುದರಲ್ಲಿ ದಾಖಲೆ ಮಾಡಿದ್ದಾರೆ. ಅವರ ಸ್ಫೂರ್ತಿಯಿಂದ ಇಡೀ ತಂಡ ರಂಗು ಪಡೆದು ಉತ್ಸಾಹದಲ್ಲಿ ತಮ್ಮ ತಮ್ಮ ವಾದ್ಯಗಳನ್ನು ನುಡಿಸುತ್ತಾರೆ. ಇವರೊಬ್ಬ ಅಪೂರ್ವ ಕಲಾವಿದರು. ರಾಗ, ತಾಳ ಎಲ್ಲವನ್ನೂ ಬಲ್ಲ ಶೇಖರಗೌಡರು ಜನ ಮನ ಸೆಳೆದು ನಾಡಿನಾದ್ಯಂತ ಆಕರ್ಷಿಸಿದ್ದಾರೆ.

ಇವರ ಕಲೆ ಇವರ ದೀರ್ಘ ಸೇವೆ ಮನಗಂಡ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಕೊಪ್ಪಳ ಜಾನಪದ ಕಾರ್ಯಕ್ರಮವೊಂದರಲ್ಲಿ ಆಗಿನ ಜಾನಪದ ಅಧ್ಯಕ್ಷರಾದ ದಿ. ಕೆರೆಮನೆ ಶಂಭು ಹೆಗಡೆ ಸನ್ಮಾನಿಸಿ ಗೌರವಿಸಿದ್ದಾರೆ. ಕುಕನೂರು ಪಂಚಾಯತಿಯಿಂದ ಸನ್ಮಾನಿಸಲಾಗಿದೆ. ಶೇಖರಗೌಡರು ಕೊಪ್ಪಳ ಜಿಲ್ಲೆಯ ಗೌರವಾನ್ವಿತ ಹಾಗೂ ಅಪರೂಪದ ಕಲಾವಿದರು.

**ಶೇಖರಗೌಡ ಕಲ್ಲನಗೌಡ ಮಾಲೀಪಾಟೀಲ**
**ಮು : ಗೊರ್ಲೆಕೊಪ್ಪ, ಪೊ : ಮಸಬ ಹಂಚಿನಾಳ**
**ತಾ : ಯಲಬುರ್ಗಾ, ಜಿ : ಕೊಪ್ಪಳ**

# ರೇವಣಪ್ಪ ನಿಂಗಪ್ಪ ಹಿರೇಕುರುಬರ

ನಾಡಿನ ಜನಾಂಗದಲ್ಲಿ ಕುರುಬರು ಪ್ರಮುಖ ಸ್ಥಾನ ಪಡೆಯುತ್ತಾರೆ. ಕರ್ನಾಟಕದ ಕುರುಬ ಜನಾಂಗ ಶಿವನನ್ನೇ ಆರಾಧ್ಯ ದೇವರನ್ನಾಗಿ ಮಾಡಿಕೊಂಡಿದೆ. ಬೀರದೇವರು ಕುರುಬರ ಕುಲದೇವರು. ಬೀರದೇವರನ್ನು ಪೂಜಿಸುವುದರ ಜೊತೆ ಇನ್ನೂ ಅನೇಕ ದೇವರನ್ನೂ ಪೂಜಿಸುವುದುಂಟು. ಕುರುಬರು ಸತ್ಯಕ್ಕೆ, ಸದಾಚಾರಕ್ಕೆ, ಸದ್ಗುಣಕ್ಕೆ ಪರಿಶುದ್ಧ ಭಕ್ತಿಗೆ ಹೆಸರಾದವರು. ಈ ಜನರು ಗುಡ್ಡದ ಮೇಲೆ ನಿಂತು ಕಂಬಳಿ ಬೀಸಿದರೆ ಮಳೆಯಾಗುತ್ತಿತ್ತು ಎನ್ನುವ ಮಾತಿದೆ.

ಈ ಜನಾಂಗದವರು ಡೊಳ್ಳು ಬಾರಿಸುವಾಗ ಹಾಡುವ ಹಾಡುಗಳು ಅದ್ಭುತ. ಡೊಳ್ಳು ಕುರುಬರ ವಿಶೇಷ ವಾದ್ಯ. ಜಾತ್ರೆ, ಉತ್ಸವ ಸಮಾರಂಭಗಳಲ್ಲಿ ಡೊಳ್ಳು ಬಾರಿಸುತ್ತ ಹಾಡು ಹೇಳುತ್ತ ಕುಣಿಯುತ್ತ ಕಲಾ ಪ್ರದರ್ಶನ ನೀಡುವುದನ್ನು ಇಂದಿಗೂ ನೋಡುತ್ತೇವೆ. ಕಾಲಲ್ಲಿ ಗೆಜ್ಜೆಕಟ್ಟಿಕೊಂಡು ಟೊಂಕಕ್ಕೆ ಡೊಳ್ಳು ಬಿಗಿದು ಹೆಗಲ ಮೇಲೆ ಕಂಬಳಿ ಹಾಕಿ ಒಂದು ಕೈಯಿಂದ ಕಟ್ಟಿಗೆ ಗುಣಿ ಮತ್ತೊಂದು ಕೈಯಿಂದ ಡೊಳ್ಳು ಬಾರಿಸಿದಾಗ ಒಂದುರೀತಿಯ ರೋಮಾಂಚನ. ೮-೧೦ ಜನರು ಇರುವ ಈ ತಂಡ ತಾಳ ಬದ್ಧವಾಗಿ ಕುಣಿಯುತ್ತ, ಕುಪ್ಪಳಿಸುತ್ತ ಕಲಾಪ್ರದರ್ಶನ ನೀಡಿದಾಗ 'ಅದ್ಭುತ'ವೆನಿಸುತ್ತೆ.

ಇಂಥ ಕಲಾವಿದರಲ್ಲಿ ರೇವಣ ಸಿದ್ಧಪ್ಪ ನಿಂಗಪ್ಪ ಹಿರೇಕುರುಬರ ಒಬ್ಬರು. ಇವರು ಜನ್ಮ ಪಡೆದಿದ್ದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ. ತಂದೆ ನಿಂಗಪ್ಪ ತಾಯಿ ಬಾಳಮ್ಮ ಬೇಸಾಯ ಮಾಡಿಕೊಂಡಿದ್ದವರು. ಈ ಕಲಾವಿದ ಒಬ್ಬ ಅಣ್ಣ ಮೂರು ಜನ ಅಕ್ಕಂದಿರ ಜೊತೆ ಬೆಳೆದವನು. ಡೊಳ್ಳು ಕುಣಿತ ಸಹಜವಾಗಿ ಪರಂಪರೆಯಾಗಿ ಬಂದುದು.

"ಬೀರದೇವರ ಡೊಳ್ಳಿನ ಸಂಘ" ಯಲಬುರ್ಗಾ ಈ ತಂಡದಿಂದ ೧೯೭೬ರರಲ್ಲಿ ರಾಯಚೂರು ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ ಡೊಳ್ಳು ಕುಣಿತದಿಂದ ಪ್ರಥಮ ಬಹುಮಾನ ಪಡೆದು ಆಕರ್ಷಿಸಿದ್ದುಂಟು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆನೆಗೊಂದಿ ಉತ್ಸವ, ಇಟಗಿ ಉತ್ಸವ, ಕೊಪ್ಪಳ ಜಿಲ್ಲಾ ಮಟ್ಟದ ಕಾರ್ಯಕ್ರಮ ಇವುಗಳಲ್ಲದೆ ಜಿಲ್ಲೆಯ ಸುತ್ತಮುತ್ತಲು ಹಳ್ಳಿಗಳಲ್ಲಿ ಜಾತ್ರೆ, ಉತ್ಸವ, ಮಂಗಲಕಾರ್ಯಗಳಲ್ಲಿ ರೇವಣಪ್ಪ ತನ್ನ ತಂಡದಿಂದ ಡೊಳ್ಳುಕಲಾ ಪ್ರದರ್ಶನ ನೀಡಿದ್ದುಂಟು.

ಹದಿನೆಂಟರ ಹರೆಯದಲ್ಲಿಯೇ ಡೊಳ್ಳು ಕಲೆಯಲ್ಲಿ ಭಾಗಿಯಾಗಿ ಇದುವರೆಗೂ ಪ್ರದರ್ಶನ ನೀಡುತ್ತಲೇ ಇರುವ ಈ ಕಲಾವಿದ ಈ ಭಾಗದ ಡೊಳ್ಳಿನ ಪ್ರಸಿದ್ಧ ಕಲಾವಿದ. ಡೊಳ್ಳು ಕಲೆಯೊಂದಿಗೆ ಕರಡಿ ಮಜಲು ಕಲಾವಿದನೂ ಹೌದು. ಕರಡಿ, ದಿಮ್ಮು, ತಾಳ ನುಡಿಸುವ ಕಲೆ ಈ ಕಲಾವಿದನಿಗೆ ಕರಗತ. ಆದರೂ ಡೊಳ್ಳಿನಲ್ಲಿಯೇ ಹೆಚ್ಚು ಗುರುತಿಸಿಕೊಂಡು ಹೆಚ್ಚು ಆಕರ್ಷಿಸಿದ್ದುಂಟು.

ರೇವಣಪ್ಪನ ಡೊಳ್ಳಿನ ತಂಡದ ಕಲಾವಿದರೂ ಅಷ್ಟೇ ಆಕರ್ಷಿಸುತ್ತಾರೆ. ಈ ತಂಡದವರು ಡೊಳ್ಳು ಬಾರಿಸುತ್ತ ಕುಣಿಯುತ್ತಾರೆ. ಡೊಳ್ಳಿನ ನಾದಕ್ಕೂ ಅವರ ಕುಣಿತದ ಹೆಜ್ಜೆಗೂ ತಾಳ ಮೇಳವಿರುತ್ತದೆ. ಪ್ರತಿಯೊಬ್ಬ ಡೋಳ್ಳಗಾರ ಬಲಗಾಲು ಕಿತ್ತು ಇಡುತ್ತಲೇ ಮುಂದೆ ಜಿಗಿಯುತ್ತಾನೆ. ಎಡಗಾಲು ಹಾರಿಸಿ ಒಮ್ಮೆ ತಿರುಗುತ್ತಾನೆ ಒಂದೊಂದು ಸಲ ಎದುರು ಬದುರು ನಿಂತು ನುಡಿಸುತ್ತಾರೆ. ಒಟ್ಟಿನಲ್ಲಿ ಎಲ್ಲವೂ ಆಕರ್ಷಕ. ಡೊಳ್ಳಿನ ಹಾಡುಗಳಲ್ಲಿ ಬೀರದೇವರ ಸ್ಮರಣಿಯ ಹಾಡು ಅವಿಸ್ಮರಣೀಯ.

೫೮-೬೦ರ ಗಡಿಯಲ್ಲಿರುವ ಯಲಬುರ್ಗಾದ ಈ ಡೊಳ್ಳಿನ ಕಲಾವಿದ ಚಿತ್ರದುರ್ಗದಲ್ಲಿ ಜರುಗಿದ ಅಖಿಲಭಾರತ ೭೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೆರವಣಿಗೆ ಹಾಗೂ ವೇದಿಕೆಯಲ್ಲಿಯೂ ತನ್ನ ಕಲಾ ಪ್ರದರ್ಶನ ಪ್ರದರ್ಶಿಸಿ ಜನಮನ ಸೆಳೆದಿದ್ದುಂಟು.

ಶ್ರೀ ರೇವಣಪ್ಪನನ್ನು ಯಲಬುರ್ಗಾದ ಸಂಘ ಸಂಸ್ಥೆಗಳು, ದೇವಸ್ಥಾನದ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

ರೇವಣಪ್ಪ-ಬಸಮ್ಮ ದಂಪತಿಗಳಿಗೆ ಮೂರು ಜನ ಹೆಣ್ಣು ಮಕ್ಕಳು. ಅವರೆಲ್ಲ ರೇವಣಪ್ಪನ ಕಲಾ ಪ್ರದರ್ಶನಕ್ಕೆ ಪೂರಕವಾಗಿ, ಪ್ರೇರಕವಾಗಿದ್ದಾರೆ.

**ರೇವಣಪ್ಪ ಹಿರೇಕುರುಬರ**
**ಯಲಬುರ್ಗಾ, ಜಿ :ಕೊಪ್ಪಳ**

## ನೀಲಮ್ಮ ಹಳ್ಳಿಗುಡಿ

ಯಲಬುರ್ಗಾದ ನೀಲಮ್ಮ ಹಳ್ಳಿಗುಡಿ ಸಂಪ್ರದಾಯದ ಹಾಡುಗಳಿಂದ ಹೆಸರುವಾಸಿ. ಸೋಬಾನ ಹಾಡುಗಳ ಸರದಾರಿಣಿ. ಸ್ವತಃ ಹಾಡು ಕಟ್ಟಿ ಹಾಡುವ ಕವಿತ್ರಿ. ಈ ಇಳಿವಯಸ್ಸಿನಲ್ಲಿಯೂ ಕಂಠದ ಏರುಪೇರಿಲ್ಲ. ಹಾಡುವಾಗ ಸ್ವಲ್ಪ ಆಯಾಸವೆನಿಸಿದರೂ ಹಾಡಿನ ಆಕರ್ಷಕ ಧ್ವನಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಒಂದು ಕಾಲದಲ್ಲಿ ದಣಿವರಿಯದಂತೆ ನಿರಂತರ ಗಂಟೆಗಟ್ಟಲೆ ಹಾಡಿದ ಕೀರ್ತಿ ಇವರದು. ತತ್ವಪದ, ಸೋಬಾನಪದ, ಬೀಸುವ, ಕುಟ್ಟುವ ಪದ, ಹೆಣ್ಣು ಋತುಮತಿಯಾದಾಗ, ಮದುವೆ, ಮಂಗಲ ಕಾರ್ಯಗಳಲ್ಲಿ ನೀಲಮ್ಮನ ಹಾಡುಗಳು ಹರಿದು ಬರಲೇಬೇಕು.

ಗರತಿಗೆ ಮಂಗಲ ಸೂತ್ರವೊಂದಿದ್ದರೆ ಸಾಕು ಚಿನ್ನದ ಒಡವೆಗಳ್ಯಾಕೆ ಎನ್ನುವ ಅವರು ಹಾಡಿದ ಹಾಡಿನ ಒಂದು ನುಡಿ –

"ರನ್ನ ಚಿನ್ನ ವಸ್ತು ವಡವಿಗಳ್ಯಾಕ
ಮಂಗಳ ಸೂತ್ರ ಕೊರಳೊಳಗಿದ್ದರೆ ಸಾಕ
ನಡಿಯಮ್ಮ ತಂಗಿ ಮುಕ್ತಿ ಪಡಿ"

ಇಂಥ ಅನೇಕ ಹಾಡುಗಳ ಸಂಗ್ರಹ ನೀಲಮ್ಮನಲ್ಲಿವೆ. ಊರಿನಲ್ಲಿ ಯಾರೇ ಕರೆಯಲಿ ಯಾವ ಜನಾಂಗದವರೇ ಇರಲಿ ಹೋಗಿ ಹಾಡುವ ಶ್ರೀಮಂತ ಮನಸ್ಸು ನೀಲಮ್ಮನದು. ಪ್ರತಿಫಲ ನಿರೀಕ್ಷಿಸದೆ ಖುಷಿಯಿಂದ ರಾತ್ರಿ ಇಡೀ ಹಾಡಿದ್ದುಂಟು. ಮದುವೆ ಮನೆಯಲ್ಲಂತೂ ಒಂದೊಂದು ಕಾರ್ಯಕ್ಕೆ ಒಂದೊಂದು ಹಾಡು. ಮುಂದೆ ಹಾಡುವ ಈಕೆಯ ಹಾಡನ್ನೇ ಪಲ್ಲವಿಯಾಗಿ ಎರಡು ಸಾಲು ಹಿಂದಿನ ಇಬ್ಬರು ಕಲಾವಿದೆಯರು ಪುನಾವರ್ತಿಯಾಗಿ ಹಾಡುತ್ತಾರೆ. ಬಹುಶಃ ಅದು ಮುಂದೆ ಹಾಡುವವರಿಗೆ ಸ್ವಲ್ಪು ಸಮಯಾವಕಾಶ ವಿರಾಮ ಇರಬೇಕು.

ಸಂಪ್ರದಾಯದ ಹಾಡುಗಳ ಭಂಡಾರವೇ ನೀಲಮ್ಮನಲ್ಲಿದೆ. ಇಡೀ ಜೀವನವನ್ನೇ ಅರ್ಪಿಸಿಕೊಂಡು ಬಂದ ಹಿರಿಯ ಕಲಾವಿದೆ. ತನ್ನ ಹದಿನೆಂಟನೇ ವಯಸ್ಸಿನಿಂದಲೇ ಹಾಡುತ್ತ ಬಂದ ನೀಲಮ್ಮ ಸುಮಾರು ಎಪ್ಪತ್ತೈದರ ಗಡಿಯಲ್ಲಿಯೂ ಹಾಡುತ್ತಿರುವುದು ಸಾಮಾನ್ಯ ಮಾತಲ್ಲ. ಈ ಕಲಾವಿದೆ ನಿರಂತರವಾಗಿ ಹಾಡಿದ್ದು; ಸಾಧಿಸಿದ್ದು ಕಡಿಮೆಯೇನಲ್ಲ. ಈ ತಲೆಮಾರಿನ ಕಲಾವಿದೆಯರು ಹೋದರೆ ಬಹುಶಃ ನಮ್ಮ ಸಂಪ್ರದಾಯದ ಹಾಡುಗಳೂ ಹೋದಂತೆ. ಅದಕ್ಕಾಗಿ ಇಂತಹ ಕಲಾವಿದೆಯರಲ್ಲಿ ಅಡಗಿದ್ದ ಹಾಡುಗಳನ್ನು ಸಂಗ್ರಹಿಸುವ ಅವಶ್ಯಕತೆ ಇದೆ.

ಜನಮೆಚ್ಚುವಂತೆ, ಆಕರ್ಷಿಸುವಂತೆ ಹಾಡುವ ನೀಲಮ್ಮ ಎಂದೂ ಹಣಕ್ಕಾಗಿ ಆಶಿಸಲಿಲ್ಲ. ಕಷ್ಟದಲ್ಲಿ-ನಷ್ಟದಲ್ಲಿ ಯಾವ ಕಾಲದಲ್ಲಿಯೂ ಹಣ ಅಪೇಕ್ಷಿಸಲಿಲ್ಲ. ಮಾಸಾಶನಕ್ಕಾಗಿ ಅರ್ಜಿ ಹಾಕಿಕೊಳ್ಳಲಿಲ್ಲ. ಈಕೆಯ ಹಾಡುಗಳು ಯಲಬುರ್ಗಾ ಹಾಗೂ ಸುತ್ತಲೂ ಹಳ್ಳಿಗಳಲ್ಲಿ ಪ್ರಸಿದ್ಧಿ ಪಡೆದಿವೆ. ಏನೇ ಆದರೂ ಸರಕಾರ ಸಮಾಜ ಈ ಕಲಾವಿದೆಯ ಬಗ್ಗೆ ಚಿಂತಿಸದಿದ್ದುದು, ಗೌರವ-ಸನ್ಮಾನ ನೀಡದಿದ್ದುದು ವಿಷಾದನೀಯ.

ನೀಲಮ್ಮನ ಇನ್ನೊಂದು ಪ್ರಮುಖ ಸೇವೆ. ಹಲವಾರು ವರ್ಷಗಳಿಂದ ಸೂಲಗಿತ್ತಿಯಾಗಿ ಹೆರಿಗೆ ಮಾಡಿಸುವುದು. ಇಂದಿನ ದಿನಮಾನಗಳಲ್ಲಿ ಬಸುರಿ ಹೆಣ್ಣು ಆಸ್ಪತ್ರೆಗೆ ಹೋದರೆ ಸಾಕು ಆಪರೇಶನ್ ಎನ್ನುತ್ತಾರೆ. ಬಡವರ, ದೀನದಲಿತರ ಪಾಲಿಗಂತೂ ಈ ಸೂಲಗಿತ್ತಿ ಒಂದು ವೈದ್ಯೆ. ಅನೇಕ ಗಂಭೀರ ಸ್ಥಿತಿಯಲ್ಲಿಯೂ ತನ್ನ ಬುದ್ಧಿವಂತಿಕೆಯಿಂದ, ಕೈ ಚಳಕದಿಂದ ಸಲೀಸಾಗಿ ಹೆರಿಗೆ ಮಾಡಿಸಿದ್ದಾಳೆ.

ಇಂಥ ಒಬ್ಬ ಕಲಾವಿದೆ, ಒಬ್ಬ ಜಾನಪದ ಕವಿತ್ರಿ, ಸೂಸುತ್ರ ಹೆರಿಗೆ ಮಾಡಿಸುವ ಸೂಲಗಿತ್ತಿ ಜನ್ಮ ತಾಳಿದ್ದು ತೊಂಡಿಹಾಳ ಗ್ರಾಮದ ಗುರುಬಸಪ್ಪ-ಶಿವಮ್ಮ ದಂಪತಿಗಳ ನಾಲ್ಕನೇ ಮಗಳಾಗಿ ರೈತ ಮನೆಯಲ್ಲಿ. ಶಾಲೆಯಿಲ್ಲ. ತಂದೆಯ ಮನೆಯಲ್ಲಿಯೇ ಹಾಡಿನ ಆಸಕ್ತಿ ಹೊಂದಿದ್ದ ನೀಲಮ್ಮ ಯಲಬುರ್ಗಾದ ಫಕೀರಗೌಡ ಅವರನ್ನು ಪತಿಯನ್ನಾಗಿ ಸ್ವೀಕರಿಸಿ ಬಂದಮೇಲೆ ಹಾಡುವ ಕಲೆ ಬೆಳೆಸಿಕೊಂಡಳು. ಗಂಡ ಕೂಡ ಪ್ರೋತ್ಸಾಹ ಕೊಡುತ್ತ ಬಂದದ್ದರಿಂದ ಹೆಚ್ಚಿನ ಬೆಳವಣಿಗೆ, ಸಾಧನೆ ಸಾಧ್ಯವಾಯಿತು.

ಪತಿ ತೀರಿದ ಮೇಲೆ ಕಾಳು-ಕಡಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿರುವ ನೀಲಮ್ಮನಿಗೆ ಮೂರು ಜನ ಹೆಣ್ಣುಮಕ್ಕಳು. ಅವರೆಲ್ಲ ಈಗ ಗಂಡನ ಮನೆಯಲ್ಲಿದ್ದಾರೆ. ಏಕಾಂಗಿಯಾಗಿರುವ ನೀಲಮ್ಮನಿಗೆ ಹಾಡುಗಳೇ ಸಂಗಾತಿ, ಬೇಜಾರಾದಾಗಲೆಲ್ಲ ಹಾಡು ಹಾಡುತ್ತ ತನ್ನ ತಾನು ಮರೆಯುವ ಈ ಕಲಾವಿದೆ ನಮ್ಮ ನಾಡಿನ ಸಂಪತ್ತು.

**ನೀಲಮ್ಮ ಹಳ್ಳಿಗುಡಿ**
**ಯಲಬುರ್ಗಾ, ಜಿ : ಕೊಪ್ಪಳ**

# ಸಿದ್ಧಪ್ಪ ನರಸಪ್ಪ ಗೊಂಡಬಾಳ

ಸಿದ್ಧಪ್ಪ ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದ ಕೋಲಾಟ ಕಲಾವಿದ. ನರಸಪ್ಪ–ನಿಂಗಮ್ಮ ದಂಪತಿಗಳ ಚಿರಂಜೀವಿ. ಐದು ಜನ ಸಹೋದರರು, ಐದು ಜನ ಸಹೋದರಿಯರು ಈತನಿಗೆ. ಓದಿದ್ದು ಎಸ್.ಎಸ್.ಎಲ್.ಸಿ. ಮನೆಯಲ್ಲಿ ತಂದೆ ಹಾಗೂ ಚಿಕ್ಕಪ್ಪ ಕೂಡ ಕೋಲಾಟದ ಕಲಾವಿದರು. ಸಿದ್ಧಪ್ಪನಿಗೆ ಕುಣಿಯುವುದು, ಹಾಡುವುದು ಹೀಗೆ ಕೋಲಾಟದ ಎಲ್ಲ ಮುಖಗಳಲ್ಲಿ ಪ್ರಾವೀಣ್ಯತೆ ಇದೆ.

ಕೋಲಾಟವೊಂದು ಗುಂಪು ಕುಣಿತ ಕನಿಷ್ಠ ೫–೬ ಜನರಿಂದ ೧೦–೧೨ ಜನರು ಈ ಆಟದಲ್ಲಿ ಅಥವಾ ಈ ಮೇಳದಲ್ಲಿರುತ್ತಾರೆ. ಎರಡು ಸಾಲಿನಲ್ಲಿ ಎದುರು ಬದರು ನಿಂತು ಕೋಲು ಹಿಡಿದು ಕ್ರಮಬದ್ಧವಾಗಿ ಪರಸ್ಪರ ಕೋಲುಗಳನ್ನು ಬಡಿಯುತ್ತ ಹಿತವಾದ ನಾದವನ್ನುಂಟು ಮಾಡುತ್ತ ಆ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಹಾಡುತ್ತ ಕುಣಿಯುತ್ತ ಸಾಗಿದಾಗ ನೋಡುವವರಿಗೆ ಖುಷಿಯ ಜೊತೆ ಆಕರ್ಷಿಸುತ್ತದೆ. ನೃತ್ಯ–ಹಾಡು–ಕೋಲಗಳ ನಾದದ ಈ ಮೇಳ ಪ್ರತಿಹಳ್ಳಿ ಹಳ್ಳಿಗೂ ಇರಲು ಸಾಧ್ಯ. ಹಳ್ಳಿಗಳಲ್ಲಿ ಅತ್ಯಂತ ಜನಪ್ರೀಯ ಆಟವಿದು. ಹೆಚ್ಚಿನ ಖರ್ಚಿಲ್ಲದೆ, ವೇದಿಕೆಯಿಲ್ಲದೆ ಭಾರೀ ಉಡುಗೆ–ತೊಡಿಗೆ ಇಲ್ಲದೆ ಇರುವುದರಿಂದ ಹೆಚ್ಚು ಹೆಚ್ಚು ಇಂಥ ಮೇಳಗಳಿರಲು ಸಾಧ್ಯ.

ಇಟಗಿ ಗ್ರಾಮದಲ್ಲಿಯೂ ಇಂಥದೊಂದು ತಂಡವಿದ್ದು ಅದರಲ್ಲಿ ಬಹುಬೇಗ ಗುರುತಿಸಿ ಕೊಳ್ಳುವ ಕಲಾವಿದ ಸಿದ್ದಪ್ಪ. ಸಿದ್ದಪ್ಪನನ್ನು ಆ ಹಳ್ಳಿಯಲ್ಲಿ ಗುರುತಿಸವುದೆ ಕೋಲಾಟ ಹಾಡುಗಾರನೆಂದು.

"ಒಕ್ಕಲಿಗನಿಂದ ಅನ್ನ ಆಹಾರ
ನಿತ್ಯ ಜೀವ ಬದುಕು ಸಲಹುನ
ಇವನ ಹೊರತಿಲ್ಲ ಯಾರ್‍ಯಾರ
ಒಕ್ಕಲಿಗನ ಪರಮೇಶ್ವರ"

ಕೋಲಾಟದಲ್ಲಿ ಹಾಡು ಕುಣಿತ ಹೆಚ್ಚು ಆಕರ್ಷಕ. ಸಮ ಸಮ ಸಂಖ್ಯೆಯಲ್ಲಿರುವ ಈ ಗುಂಪಿನಲ್ಲಿ ಮೈ ಕೈ ಬಳುಕಿಸಿ ಕುಂತು ಎದ್ದು ತಿರುಗಿ ಪರಸ್ಪರ ಕೋಲು ಬಾರಿಸಿದಾಗ ಕುಣಿತಕ್ಕೆ ತಕ್ಕಂತೆ ಹಲಗೆ (ತಮಟೆ) ಬಾರಿಸುತ್ತ ಹುರಿದುಂಬಿಸಿದಾಗ ಹೆಜ್ಜೆಗಳ ಗೆಜ್ಜೆಗಳ ಕೋಲುಗಳ ಸಪ್ಪಳ ತೀವ್ರಗೊಂಡಾಗ ನೋಡುಗರಿಗೆ ಖುಷಿಕೊಡುತ್ತದೆ. ತಂಡದ ನಾಯಕ ಇಲ್ಲವೆ ತಂಡದಲ್ಲೊಬ್ಬ ಪ್ರತಿಭಾವಂತ ಹಾಡುಗಾರ. ಮುಮ್ಮೇಳದಲ್ಲಿ ಹಾಡಿ ಆಕರ್ಷಿಸುತ್ತಾನೆ. ಅಂಥ ಆಕರ್ಷಕ ಹಾಡುಗಾರ ಸಿದ್ಧಪ್ಪ ಗೊಂಡಬಾಳ.

ಎಲ್ಲ ಕಲೆಗಳಂತೆ, ಎಲ್ಲ ಆಟಗಳಂತೆ ಇದೂ ಕೂಡ. ಹೆಚ್ಚಾಗಿ ಕೃಷಿಕೆಲಸ ಮುಗಿದು ಸುಗ್ಗಿಯ ಸಂದರ್ಭದಲ್ಲಿ, ಊರ ಹಬ್ಬ–ಹುಣ್ಣಿಮೆ, ಜಾತ್ರೆ, ಉತ್ಸವ, ಕ್ರೀಡಾ ಸ್ಪರ್ದೆಗಳ ಸಂದರ್ಭದಲ್ಲಿ ಜರುಗುವುದುಂಟು. ಬೆಳದಿಂಗಳ ರಾತ್ರಿಯಲ್ಲಿ ಊಟವಾದ ಮೇಲೆ ತಂಡ ಊರ ಬಯಲಿನಲ್ಲಿಯೋ, ವಿಶಾಲ ಕಟ್ಟೆಯಲ್ಲೋ ತರಬೇತಿ ಪಡೆಯುವುದು ಕೂಡ ಆಕರ್ಷಕ. ಸಿದ್ದಪ್ಪ ಗೊಂಡಬಾಳ ಅವರನ್ನು ಇತ್ತೀಚೆಗೆ ಗ್ರಾಮದಲ್ಲಿ ಸಂಪರ್ಕಿಸಿ ಸಂದರ್ಶಿಸಿದಾಗ ಹಾಡಿದ್ದು, ವಿವರ ನೀಡಿದ್ದು ಸಂತಸ ತಂದಿತು. ಸಿದ್ದಪ್ಪ ೧೫–೧೬ನೇ ವಯಸ್ಸಿನಿಂದ ಊರ ಕೋಲಾಟ ತಂಡದಲ್ಲಿ ಭಾಗಿಯಾಗಿ ಇದುವರೆಗೂ ತಂಡದಲ್ಲಿ ಪ್ರಮುಖ ಹಾಡುಗಾರನಾಗಿ ಆಕರ್ಷಿಸುತ್ತಿರುವುದು ಹೆಮ್ಮೆಯ ಸಂಗತಿ. ೫೫ರ ಪ್ರಾಯದ ಸಿದ್ಧಪ್ಪ ಉತ್ಸಾಹ ಹಾಡುಗಾರಿಕೆ, ಕುಣಿತ ಯುವಕರನ್ನು ನಾಚಿಸುತ್ತಿವೆ.

ಕೃಷ್ಣಪ್ಪ ನೀಲಣ್ಣನವರ, ರಮೇಶ ಹಿರೇ ನಿಂಗಣ್ಣನವರ, ಮಲ್ಲಪ್ಪ ಗೊಂಡಬಾಳ, ಹನುಮಂತ ಕಾಳಣ್ಣವರ, ಭರಮಪ್ಪ ಹಿರೇನಿಂಗಣ್ಣನವರ, ಶೇಖರಪ್ಪ, ನಾಗಪ್ಪ ಹಿರಿಯಪ್ಪ ಹೀಗೆ ಹತ್ತು–ಹನ್ನೆರಡು ಜನರ ಈ ತಂಡ ಜಿಲ್ಲೆಯ ಸುತ್ತಲೂ ಹಳ್ಳಿಗಳಲ್ಲಿ ಕಾರ್ಯಕ್ರಮ ನೀಡಿದ್ದಲ್ಲದೆ ಕರಾವಳಿ ಉತ್ಸವ, ಇಟಗಿ ಉತ್ಸವ, ಹಂಪಿ ಉತ್ಸವ, ಆನೆಗೊಂದಿ ಉತ್ಸವ, ಲಕ್ಕುಂಡಿ ಉತ್ಸವ, ಗುಲಬರ್ಗಾ, ಧಾರವಾಡ ಹಾಗೂ ಉತ್ತರ ಪ್ರದೇಶದ ಛತ್ತಿಸಗಡ ಪ್ರಮುಖ ಸ್ಥಳಗಳಲ್ಲಿ ಸಿದ್ಧಪ್ಪನ ತಂಡ ಹೋಗಿ ಬಂದುದುಂಟು.

ಸಿದ್ಧಪ್ಪ ನರಸಪ್ಪ ಗೊಂಡಬಾಳ, ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಕೋಲಾಟ ಕಲಾವಿದರೊಬ್ಬರು. ಯಲಬುರ್ಗಾ ತಾಲೂಕಿನ ಜನಪ್ರೀಯ ಕೋಲಾಟ ಕಲಾವಿದನೆಂದು ಗುರುತಿಸಿಕೊಂಡಿರುವ ಈ ಕಲಾವಿದ ಜಿಲ್ಲೆಯಲ್ಲಿ ಆ ಭಾಗದ ಜನಮನ ಸೆಳೆದ ಕಲಾವಿದ.

ಸಿದ್ಧಪ್ಪ ನರಸಪ್ಪ ಗೊಂಡಬಾಳ<br>ಇಟಗಿ<br>ತಾ : ಯಲಬುರ್ಗಾ, ಜಿ : ಕೊಪ್ಪಳ

# ಈರಮ್ಮ ನಾಗಪ್ಪ ಉಂಡಿ

ಯಲಬುರ್ಗಾ ತಾಲೂಕಿನ ಮುಧೋಳ ಗ್ರಾಮದ ಈರಮ್ಮ ಉಂಡಿ ಅಪರೂಪದ ಕಲಾವಿದೆ. ಸಾಮಾನ್ಯವಾಗಿ ಕಲಾವಿದರು ಎಲ್ಲಿಯೇ ಕಾರ್ಯಕ್ರಮ ಕೊಡಲಿ ಗೌರವ ಧನ ನಿರೀಕ್ಷಿಸುತ್ತಾರೆ. ತಂದ ಗೌರವಧನ ಮನೆಯ ಖರ್ಚಿಗೆ ವೆಚ್ಚಕ್ಕೆ ಉಪಯೋಗಿಸುತ್ತಾರೆ. ಈರಮ್ಮ ಇದಕ್ಕೆ ಅಪವಾದ. ಮನೆಯಲ್ಲಿ ಬಡತನವಿದ್ದರೂ, ಸಮಸ್ಯೆಗಳಿದ್ದರೂ ತನ್ನ ಗೌರವಧನವನ್ನು ಮಾತ್ರ ಎಷ್ಟೇ ಬರಲಿ ಊರಿನಲ್ಲಿದ್ದ ಶರಣ ಬಸವೇಶ್ವರ ದೇವಸ್ಥಾನಕ್ಕೆ ಅರ್ಪಿಸುತ್ತಾಳೆ. ಕೊಡುವುದರಲ್ಲಿರುವ ಸಂತೋಷ, ಆನಂದ ಮತ್ತಾವುದರಿಂದಲೂ ಸಿಗದು ಎನ್ನುವ ಈರಮ್ಮ ವಿಶೇಷ ಉಲ್ಲೇಖಕ್ಕೆ ಬರುತ್ತಾಳೆ.

ಮುಧೋಳ ಗ್ರಾಮದ ಮಲ್ಲಪ್ಪ ಶಿವಗಂಗಮ್ಮ ಒಕ್ಕಲು ಮನೆತನದಲ್ಲಿ ಜನ್ಮಪಡೆದು ಅದೇ ಊರಿನ ನಾಗಪ್ಪ ಉಂಡಿ ಎನ್ನುವವರನ್ನು ಮದುವೆಯಾಗಿ ಬಂದವರು. ಬಾಲ್ಯದಿಂದಲೇ ಹಾಡುವುದರಲ್ಲಿ ಆಸಕ್ತಿ ಹೊಂದಿದ್ದ ಈರಮ್ಮ ಹಿರಿಯರ ಜೊತೆ ಹಾಡುತ್ತ ಅದರಲ್ಲೂ ಸುಗ್ಗಿಯ ದಿನಗಳಲ್ಲಿ ಹೊಲಕ್ಕೆ ಹೋದಾಗ ಅಲ್ಲಿ ಹಾಡುವವರನ್ನು ಕಂಡು ಅವರಿಂದ ಪ್ರಭಾವಿತಳಾಗಿ ತಾನೂ ಹಾಡಬೇಕೆನ್ನುವ ಮಹತ್ವಾಕಾಂಕ್ಷೆಯಲ್ಲಿ ಪ್ರಯತ್ನಿಸಿ ಇದೀಗ ತಮ್ಮ ಗುರಿ ತಲುಪಿದ್ದಾಳೆ. ಊರಿನ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಹಾಡುಗಾರ್ತಿಯೆಂದು ಗುರುತಿಸಿಕೊಂಡಿದ್ದಾಳೆ.

ಸುಮಾರು ಇಪ್ಪತ್ತು ವರ್ಷಗಳಿಂದ ಹಾಡುತ್ತ ಬಂದಿರುವ ಈರಮ್ಮ ಈಗ ೪೫-೪೬ರ ಪ್ರಾಯ. ತವರು ಮನೆಯಲ್ಲಿ ತಂಗಿಂದಿರೂ ಹಾಡುತ್ತಾರೆ. ಈರಮ್ಮ ಮೂರನೇ ಮಗಳು. ನಾಲ್ಕು ಜನ ಸಹೋದರಿಯರು ಇಬ್ಬರು ಸಹೋದರರು. ತವರು ಮನೆಯಿಂದಲೇ ಹಾಡಲು ಪ್ರಾರಂಭಿಸಿದ್ದು.

ಸಂಪ್ರದಾಯದ ಹಾಡುಗಳೆಲ್ಲ ಈರಮ್ಮನಿಗೆ ಕಂಠಪಾಠ ಜಾನಪದ ಎಲ್ಲ ಬಗೆಯ ಹಾಡುಗಳ ಸಂಗ್ರಹ. ಇಡೀ ಒಂದು ರಾತ್ರಿ, ಒಂದು ಹಗಲು ಹಾಡುವಷ್ಟು ಹಾಡುಗಳುಂಟು. ತತ್ವಪದಗಳ ಸಂಗ್ರಹವೂ ಸಾಕಷ್ಟು.

"ಸಿದ್ಧಾರೂಢ ಸ್ವಾಮಿ ಧ್ಯಾನ ಮಾಡಬೇಕಮ್ಮ
ಶುದ್ಧವಾಗಿ ಸಂಸಾರವ ಸಾಗಿಸಬೇಕಮ್ಮ
ಮನೆಯ ಕೆಲಸ ಮಾಡುವಾಗ ಮಕ್ಕಳ ಜೊತೆ ಆಡುವಾಗ
ಮನಸಿನಿಂದ ಅವನ ನಾಮ ನೆನೆಯ ಬೇಕಮ್ಮ"

ಭಯ-ಭಕ್ತಿಯಲ್ಲಿ ಈ ಹಾಡು ಹಾಡಿದಾಗ ಹಾಡಿನ ದಾಟಿ, ಮಧುರ ಧ್ವನಿ, ಭಕ್ತಿಯ ಭಾವ ಎಲ್ಲವೂ ಕೇಳುಗರಿಗೆ ಪರಿಣಾಮ ಬೀರಿ ಪ್ರಭಾವಿತರನ್ನಾಗಿ ಮಾಡುತ್ತದೆ.

ಮಗಳ ಮದುವೆ ಮಾಡಿ ಗಂಡನ ಮನೆಗೆ ಮಗಳನ್ನು ಕಳುಹಿಸುವಾಗಿನ ಹಾಡು ಬಹು ಪರಿಣಾಮಕಾರಿ.

"ಮಗಳ ಮದುವೆಯ ಮಾಡಿ ಮುತ್ತೊಂದು ಕಳಕೊಂಡೆ ।
ಜಗದೊಳಗ ಹೆಣ್ಣು ಹಡೆದು ಕಷ್ಟವ ತಿಳಕೊಂಡೆ ॥

ಹೀಗೆ ಗಂಟೆಗಟ್ಟಲೆ ಹಾಡಿದರೂ ಕೇಳುಗರಿಗೆ ಬೇಸರವೆನಿಸದು. ಕೇಳಬೇಕು ಇನ್ನೂ ಕೇಳಬೇಕೆನ್ನುವ ಮಧುರ ಧ್ವನಿ, ಅರ್ಥ ಗರ್ಭಿತ ಹಾಡುಗಳು. ಎಲ್ಲೇ ಹಾಡಲು ಹೋಗಲಿ ಈರಮ್ಮ ಪ್ರಮುಖ ಕಲಾವಿದೆಯಾಗಿ ಮುಂದೆ ಹಾಡಿದಾಗ ಅವರ ಗುಂಪಿನ ಶಾಂತವ್ವ ಉಂಡಿ, ಶರಣವ್ವ ಜಿಗಳೂರು, ಯಲ್ಲವ್ವ ಮಾಸ್ತಿ ಇವರು ಹಿನ್ನಲೆಯಾಗಿ ಹಾಡುವವರು. ಊರಿನ ಎಲ್ಲಾ ಉತ್ಸವಗಳಲ್ಲಿ, ಮಂಗಲ ಕಾರ್ಯಗಳಲ್ಲಿ ಈರಮ್ಮನ ಹಾಡಿನ ತಂಡವಿದ್ದೇವಿರುತ್ತದೆ. ಚಿಕೇನಕೊಪ್ಪದ ಶರಣರ ಮಠದಲ್ಲಿ, ನಿಡಗುಂದಿ ಕೊಪ್ಪದ ಮಠದಲ್ಲಿ, ಮಾನ್ವಿ ದೇವಸ್ಥಾನದಲ್ಲಿ ಹಾಡಲು ಈ ಕಲಾವಿದೆಗೆ ಆಮಂತ್ರಣ ಇರುತ್ತದೆ.

ಈರಮ್ಮನ ಸಾಧನೆಗೆ ತಂದೆಯ ಮನೆಯಲ್ಲಿ, ಗಂಡನ ಮನೆಯಲ್ಲಿ ಪ್ರೋತ್ಸಾಹ ದೊರೆತಿದೆ. ಹಾಡಲು ಎಲ್ಲೇ ಹೋದರೂ ಅವರ ಅನುಮತಿ ಇರುತ್ತದೆ. ಹಾಡು ಕಲಿತಿದ್ದಾಳೆ. ಕರೆಯಲು ಬರುತ್ತಾರೆ. ಹೋಗಿ ಹಾಡಿ ಬರಲಿ ಎನ್ನುವ ಗಂಡನ ಮನೆಯವರ ಮಾತು ಪ್ರೋತ್ಸಾಹದ ಮಾತುಗಳೇ ಆಗಿವೆ.

ಈರಮ್ಮ ನಾಗಪ್ಪ ದಂಪತಿಗಳಿಗೆ ಒಂದು ಗಂಡು, ಒಂದು ಹೆಣ್ಣು ಮಗು. ಚಿಕ್ಕ ಚೊಕ್ಕ ಸಂಸಾರ. ಸುಂದರ ಹಾಡಿನಷ್ಟೇ ಸುಂದರ ಸಾರ್ಥಕ ಬದುಕು.

**ಈರಮ್ಮ ನಾಗಪ್ಪ ಉಂಡಿ**
**ಜನತಾ ಕಾಲೋನಿ, ಸಾ : ಮುಧೋಳ**
**ತಾ : ಯಲಬುರ್ಗಾ, ಜಿ : ಕೊಪ್ಪಳ**

## ಹನುಮಪ್ಪ ಕೌದಿ

"ಎಲ್ಲಿ ನೆಲೆಯು ಪತ್ತಲಿಲ್ಲ
ಎಲ್ಲಿ ಮುಳಗಿತೋ ಈ ಹಡಗ
ಆರು ಮಂದಿ ಕಳ್ಳರಿವರು
ಎಲ್ಲಿ ಒಯ್ದು ಇಟ್ಟರೋ ಈಡಗ"

*

"ನನ್ನೊಳಗೆ ನಾ ತಿಳಕೊಂಡೆ
ನನಗೆ ಬೇಕಾದ ಗಂಡನ್ನ ಪಡಕೊಂಡೆ
ಆಜ್ಞೆ ಪ್ರಕಾರ ನಡಕೊಂಡೆ
ಎಲ್ಲರ ಹಂಗನ್ನು ಹರಕೊಂಡೆ"

ಈ ಹಾಡುಗಳಿಂದ ಜನಮನ ಸೆಳೆಯುವ ಹನುಮಪ್ಪ ಕೌದಿ ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದ ತತ್ವಪದಕಾರ. ಇಟಗಿ ಗ್ರಾಮದ ಸಿದ್ಧಲಿಂಗಪ್ಪ ಪಾರ್ವತಮ್ಮ ದಂಪತಿಗಳ ಮೂರನೇ ಮಗ. ಮೂರು ಜನ ಸಹೋದರರು ಒಬ್ಬ ಸಹೋದರಿಯನ್ನು ಪಡೆದು ಬೆಳೆದವರು. ಓದಿದ್ದು ೫ನೇ ತರಗತಿ. ೫೩-೫೪ರ ಪ್ರಾಯದ ಈ ಕಲಾವಿದ ಅದ್ಭುತ ಹಾಡುಗಾರ. ಪ್ರಾರಂಭದಲ್ಲಿ ಭಜನೆ ಸಂಘದಲ್ಲಿ ಹಾಡುತ್ತ ಹಾಡುತ್ತ ಸಾಧನೆ ಪಡೆದು ಈಗ ನಾಡಿನ ಪ್ರಮುಖ ತತ್ವಪದಕಾರರ ಪದಗಳನ್ನು ಕಂಚಿನಕಂಠದಿಂದ ಏಕತಾರಿಯೊಂದಿಗೆ ಗ್ರಾಮದ ಸಿದ್ಧಾರೂಢ ಮಠದಲ್ಲಿ ತನ್ಮಯನಾಗಿ ಹಾಡುತ್ತ ಕುಳಿತರೆ ವಾಸ್ತವದ ಪರಿವೇ ಇರುವುದಿಲ್ಲ.

ಕನ್ನಡ ಸಾಹಿತ್ಯದಲ್ಲಿ ಕಾವ್ಯ ಕೃಷಿಯಲ್ಲಿ ತತ್ವಪದಕಾರರ ಹಾಡುಗಳು ಗಮನಾರ್ಹ ಕೊಡುಗೆ. ಶರೀಫ ಸಾಹೇಬರ, ಕಡಕೋಳ ಮಡಿವಾಳಪ್ಪನವರ ಪದಗಳೆಂದರೆ ಈ

ಕಲಾವಿದರಿಗೆ ಬಹಳಷ್ಟು ಪ್ರೀತಿ, ಹಗಲೆಲ್ಲ ಹೊಲದಲ್ಲಿ ದುಡಿದು ರಾತ್ರಿಯಾದೊಡೆ ಊರಿನ ಸಿದ್ಧಾರೂಡ ಮಠದಲ್ಲಿ ಜರುಗುತ್ತಿರುವ ಭಜನೆಯಲ್ಲಿ ಭಾಗಿಯಾಗಿ ನಂತರ ತಾವೊಬ್ಬರೇ ತಂಬೂರಿ ಹಿಡಿದು ಹಾಡುತ್ತ ಕುಳಿತರೆ ಜನಸ್ತಬ್ಧವಾಗಿ ಆಲಿಸುತ್ತದೆ. ಅನುಭಾವಿಕರ ಹಾಡುಗಳನ್ನು ಅನುಭವಿಸಿ ಹಾಡಿದಾಗ ಸುತ್ತಲಿನ ಜನರು ತಮ್ಮ ತಮ್ಮ ಕೆಲಸಗಳಲ್ಲಿಯೇ ಹಾಡಿನತ್ತ ವಾಲುತ್ತಾರೆ.

ಹನುಮಪ್ಪ ಹಾಡುವ ಹಾಡುಗಳೆಲ್ಲ ಅರ್ಥಪೂರ್ಣವಾಗಿ ಉನ್ನತ ಬದುಕಿಗೆ ಕಾರಣವಾಗುವಂತಹು. ಜಾತಿ, ಮತ, ಪಂಥ ಮೀರಿ ರಚಿತಗೊಂಡಂತಹ ಅನುಭಾವದ ಹಾಡುಗಳು. ಅವುಗಳಲ್ಲಿ ಜೀವನದ ಮೌಲ್ಯಗಳಿವೆ. ನೀತಿಪಾಠಗಳಿವೆ. ಬದುಕಿನ ವಿಡಂಬನೆ ಇದೆ. "ಆಧ್ಯಾತ್ಮವೆಂದರೆ ಜೀವನಕ್ಕೆ ಹೊರತಾದ ಯಾವುದೋ ಒಂದು ನಿರಾಕಾರದ ಅನುಸಂಧಾನವೆಂದರ್ಥವಲ್ಲ. ಇಹದ ಜೀವನದಲ್ಲಿ ಪರಮ ಅರ್ಥವನ್ನು ಕಂಡು ತನಗೂ ಪರರಿಗೂ ಸುಖವಾಗುವಂತೆ ಉನ್ನತ ಜೀವನ ಸಾಕ್ಷಾತ್ಕಾರವನ್ನು ಸಾಧಿಸುವುದೇ ಹಾಡುಗಾರರ ಗುರಿಯಾಗಿದೆ". ಅಂಥ ಅರ್ಥಗರ್ಭಿತ ಅದ್ಭುತ ಹಾಡುಗಳನ್ನು ಇಂಥ ಕಲಾವಿದರಿಂದ ಕೇಳಿದಾಗ ನಿಜಕ್ಕೂ ಆ ಕ್ಷಣಕ್ಕಾದರೂ ಮನುಷ್ಯ ಮನುಷ್ಯತ್ವದ ಕಡೆ ಯೋಚಿಸುತ್ತಾನೆ ಚಿಂತಿಸುತ್ತಾನೆ.

ಹನುಮಪ್ಪ ಕೌದಿ ತಮ್ಮ ೨೦-೨೨ರ ಪ್ರಾಯದಲ್ಲಿಯೇ ಹಾಡಲು ಪ್ರಾರಂಭಿಸಿದವರು. ಸುಮಾರು ಮುವತ್ತು ವರ್ಷಗಳಿಂದ ಹಾಡುತ್ತ ಬಂದಿರುವ ಈ ಹಾಡುಗಾರ ಬಯಲಾಟದ ಮುಮ್ಮೇಳ ಹಾಡುಗಾರನೂ ಹೌದು. "ಹೇ ದೇವೋ" ಎಂದು ಮೃದಂಗ ಬಾರಿಸುತ್ತ ಹೈ ಪಿಚ್ಚಿನಲ್ಲಿ ಹಾಡಿದಾಗಂತೂ ಬಯಲಾಟ ನಮ್ಮೆದುರು ನಡೆದಂತೆ ಭಾಸವಾಗುತ್ತದೆ. ಕಂಚಿನ ಕಂಠವದು ಹಾಡಿನಷ್ಟೆ ವಾದ್ಯಗಳ ನುಡಿಸುವಿಕೆ. ತಾಳ ತಂಬೂರಿ, ಮೃದಂಗ ವಾದ್ಯಗಳು ಕರಗತ. ಕಿನ್ನಾಳ ಶಂಕ್ರಪ್ಪ ವಾದ್ಯಗಳ ಗುರುಗಳು. ಚಿಕೇನಕೊಪ್ಪ, ತಳಕಲ್ಲ, ಕುಕನೂರು, ಬೇಣಕಲ್ ಹೀಗೆ ಅನೇಕ ಕಡೆ ಭಜನಾ ಕಾರ್ಯಕ್ರಮ ನೀಡಿದ್ದಾರೆ.

ಹನುಮಪ್ಪ ಉತ್ತಮ ಕಲಾವಿದರಿದ್ದಂತೆ ಉತ್ತಮ ಬದುಕು ಪಡೆದಿದ್ದಾರೆ. ಸರಳ ಸಹೃದಯಿ, ಸಂಘ ಜೀವಿ. ಸಾಮಾಜಿಕ ಕಳಕಳಿಯುಳ್ಳವರು.

**ಹನುಮಪ್ಪ ಕೌದಿ**<br>
**ಇಟಗಿ**<br>
**ತಾ : ಯಲಬುರ್ಗಾ**<br>
**ಜಿ : ಕೊಪ್ಪಳ**

# ಭರಮಪ್ಪ ಹರಿಜನ

ಯಲಬುರ್ಗಾ ತಾಲೂಕಿನ ಮಾಟಲದಿನ್ನಿ ಗ್ರಾಮದ ಭರಮಪ್ಪ ಹರಿಜನ ಡಪ್ಪಿನಾಟದ ಕಲಾವಿದರಾಗಿ, ಮಾಸ್ತರರಾಗಿ ಸೇವೆಸಲ್ಲಿಸುತ್ತ ಜನಮನ ಸೆಳೆದವರು.

ಬಯಲಾಟಗಳೇ ಆಗಲಿ, ಸಣ್ಣಾಟ ಅಥವಾ ಡಪ್ಪಿನಾಟಗಳೇ ಆಗಲಿ ಮೂಲ ಉದ್ದೇಶ ಹಳ್ಳಿಗರ ಮನರಂಜನೆ ಜೊತೆಗೆ ನೀತಿಬೋಧನೆ ಬಡವರ, ನಿರಕ್ಷಿಗಳ, ಮುಗ್ಧರ, ದೀನ-ದಲಿತರ ಕಲಾ ಶಾಲೆ ಈ ಬಯಲಾಟ ಅಥವಾ ಡಪ್ಪಿನಾಟಗಳು. ಕಲೆ-ಕಲಾವಿದರು ಕೂಡ ಸಾಮಾನ್ಯರು ವಿಶೇಷವಾಗಿ ಜಾನಪದ ರಂಗಭೂಮಿ, ಜಾನಪದ ಹಾಡುಗಳು ಉಳಿದಿರುವುದೇ ದಲಿತ ಜನರಲ್ಲಿ. ಅಂಥ ಜನರಿಂದ ಬಂದ ಭರಮಪ್ಪ ಜಾನಪದ ರಂಗಭೂಮಿಯ ಸಂಪತ್ತು.

ಯಲಬುರ್ಗಾ ತಾಲೂಕಿನ ಮಾಟಲದಿನ್ನಿ ಗ್ರಾಮದ ಸಣ್ಣಹನುಮಪ್ಪ-ಹನುಮವ್ವ ಹರಿಜನ ದಂಪತಿಗಳ ನಾಲ್ಕನೇ ಮಗನಾಗಿ ಜನ್ಮಪಡೆದ ಭರಮಪ್ಪ ಓದಿದ್ದು ಮೂರನೇ ತರಗತಿ. ಇಬ್ಬರು ಸಹೋದರರು ನಾಲ್ಕು ಜನ ಸಹೋದರಿಯರನ್ನು ಪಡೆದು ಬೆಳೆದವರು. ಬಾಲ್ಯದಿಂದಲೇ ಭಜನೆ, ಹಾಡು, ಬಯಲಾಟ, ಡಪ್ಪಿನಾಟಗಳತ್ತ ಒಲವು. ಆಸಕ್ತಿ ಹೆಚ್ಚಿದಂತೆ; ಅಭಿನಯಿಸಬೇಕೆನ್ನುವ ಆತುರತೆ ಬಲವಾದಂತೆ ಆಗ ಪ್ರಸಿದ್ಧಿ ಪಡೆದು ಇಡೀ ಜಿಲ್ಲೆಗೆನೇ ಹೆಸರುವಾಸಿಯಾಗಿದ್ದ ದಿ. ಬಸರಿಗಿಡದ ಶಿವಪ್ಪನವರಲ್ಲಿ ಹೋಗಿ ತನ್ನ ಆಸಕ್ತಿಯನ್ನು ತಿಳಿಸಿ ಮಾರ್ಗದರ್ಶನ ನೀಡಿ ಅಭಿನಯಕ್ಕೆ ಅವಕಾಶ ನೀಡಬೇಕೆಂದಾಗ ಗುರು ಶಿವಪ್ಪನವರು ಅಭಿನಯ, ವಾದ್ಯಗಳ ನುಡಿಸುವಿಕೆ ಹೇಳಿಕೊಟ್ಟರು.

"ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ" ಡಪ್ಪಿನಾಟದಲ್ಲಿ ಗಂಗಾನ ಸ್ತ್ರೀ ಪಾತ್ರದಿಂದ ಭರಮಪ್ಪ ಬಣ್ಣಹಚ್ಚಿಕೊಂಡ. ನಂತರ "ಬಾಲಬಿಕ್ಷುರಾಜ" "ಬಸವಂತ-ಬಲವಂತ"ಗಳಲ್ಲಿ ಅಭಿನಯಿಸಿ ಜನಪ್ರೀಯ ಕಲಾವಿದನಾದ. ಡಪ್ಪು, ತಾಳ

ಹಾರ್ಮೋನಿಯಂ ವಾದ್ಯ ನುಡಿಸುವುದರಲ್ಲಿ, ಹಾಡುವುದರಲ್ಲಿ ಅನುಭವ ಹೆಚ್ಚಿದಂತೆ ಗುರು ಶಿವಪ್ಪ ತೀರಿದ ಮೇಲೆ ಮಾಸ್ತರನ ಸ್ಥಾನ ಭರಮಪ್ಪನದಾಯಿತು. ಬಸರಿಗಿಡದ ಶಿವಪ್ಪನವರಿಂದ ಅನೇಕ ಪ್ರತಿಭಾನ್ವಿತರು ಹೊರ ಬಂದರೂ ಭರಮಪ್ಪನ ರಂಗಸೇವೆ ವಿಶೇಷ ಪರಿಗಣಿಸುವಂತಹದ್ದು.

೬೫-೭೭ರ ಹರೆಯದ ಭರಮಪ್ಪ ಹರಿಜನ ೩೦ ವರ್ಷದ ದೀರ್ಘ ಸೇವೆ ಗಮನಾರ್ಹ. ಸುತ್ತಲೂ ಹಳ್ಳಿಗಳಲ್ಲಿ ಅಷ್ಟೇ ಏಕೆ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಅಭಿನಯಿಸಿದ್ದುಂಟು. ಆಟ ಕಲಿಸಿ ಪ್ರಯೋಗಿಸಿದ್ದುಂಟು. ಇವರು ಕಲಿಸಿದ ಆಟಗಳಲ್ಲಿ "ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ" ಹೆಚ್ಚು ಆಕರ್ಷಿಸುತ್ತಿದೆ. ಕುಷ್ಟಗಿ ಮುರುಡಿ, ತಾಳಗೇರಿ, ಹುನಗುಂದ, ಬೆಟಗೇರಿ, ಕೃಷ್ಣಾಪುರ, ಬೂದುಗುಂಪಿ, ಕೊರಡಕೇರಿ ಜೂಲಕಟ್ಟಿ, ಮಾಟ್ರಂಗಿ, ತರಲಗಟ್ಟಿ, ನೆಲೋಗಲ್ಲ ಇವರು ಡಪ್ಪಿನಾಟ ಕಲಿಸಿ ಪ್ರಯೋಗಿಸಿದ ಪ್ರಮುಖ ಹಳ್ಳಿಗಳು.

ಭರಮಪ್ಪ ಹರಿಜನ ಇಷ್ಟೊಂದು ದೀರ್ಘ ಸೇವೆ ಸಲ್ಲಿಸಿದರೂ ಸರಕಾರದ ಮಾಸಾಶನವಾಗಲಿ, ಪ್ರಶಸ್ತಿಯಾಗಲಿ ಬಾರದಿದ್ದುದು ನಿರಾಶೆಯನ್ನುಂಟು ಮಾಡಿದೆ. ಹಾಗಂತ ಈ ಕ್ಷೇತ್ರದಿಂದ ಹಿಂದೆ ಸರಿದಿಲ್ಲ. ಕಷ್ಟನೋ ಸುಖನೋ ಬಂದುದನ್ನು ಸ್ವೀಕರಿಸುವ ನಿಷ್ಠೆ ಅವರದು. ಈಸಬೇಕು ಇದ್ದು ಜಯಿಸಬೇಕೆನ್ನುವ ತತ್ವ ಅವರದು. ಎಂಥ ಕಷ್ಟಕ್ಕೂ ಅವರಲ್ಲಿ ಸಹನೆ ಇದೆ. ಅಭಿನಯವನ್ನು ಕಲಿಸುವ ಅವಕಾಶ ಒಂದು ಭಾಗ್ಯವೆಂದುಕೊಂಡವರು, ಬಡತನವಿದ್ದರೂ ಅದರಿಂದ ತೃಪ್ತಿ ಇದೆ ಎನ್ನುವ ಭರಮಪ್ಪನ ವಿಚಾರಗಳು ಆದರ್ಶ.

ಸಂಘ ಸಂಸ್ಥೆಗಳು, ಅಕಾಡೆಮಿ, ಸರಕಾರ ಇಂಥ ಕಲಾವಿದರನ್ನು ಗುರುತಿಸಿ ಗೌರವಿಸಿದರೆ ಅದಕ್ಕೊಂದು ಅರ್ಥ ಬರುತ್ತದೆ. ಆರ್ಥಿಕವಾಗಿ ಸಹಕರಿಸಿದರೆ ಇನ್ನೂ ಹೆಚ್ಚಿನ ಸೇವೆ ಇಂಥ ಕಲಾವಿದರಿಂದ ದೊರೆಯುತ್ತದೆ.

**ಭರಮಪ್ಪ ಹರಿಜನ**
**ಮಾಟಲದಿನ್ನಿ**
**ತಾ : ಯಲಬುರ್ಗಾ**
**ಜಿ : ಕೊಪ್ಪಳ**

# ಶರಣಪ್ಪ ವಡಗೇರಿ

"ಎಲ್ಲೆಲ್ಲಾಡಿ ಬಂದೆ ನಮ್ಮಪ್ಪ
ನಿನ್ನ ಕಾಲೆಲ್ಲ ಕೆಂದೂಳವೋ ನಿನ್ನ
ಮೈಯಲ್ಲಾ ಸಿರಿಗಂಧವೋ"

ಶರಣಪ್ಪನವರಿಂದ ಈ ಡೊಳ್ಳಿನ ಹಾಡನ್ನು ಯಾವ ಸಂಗೀತ ವಾದ್ಯಗಳಿಲ್ಲದೆ ತಮಟೆ ಬಾರಿಸುತ್ತ ತನ್ನದೇ ಆದ ಶೈಲಿಯಲ್ಲಿ ಹಾಡಿದಾಗ ಕೇಳುಗರು ಮೈ ಮರೆಯುತ್ತಾರೆ. ಮಧುರ ಕಂಠದ ನೀನಾದಕ್ಕೆ ತೇಲುತ್ತಾರೆ. ಮಾಧುರ್ಯ ತುಂಬಿದ ಅರ್ಥಗರ್ಭಿತ ಕಲ್ಪನಾ ಶಕ್ತಿಯ ಅವಿಸ್ಮರಣೀಯ ಹಾಡದು. ಜನಪದ ಹಾಡುಗಳೇ ಹಾಗೆ. ಶೈಲಿ ಎಷ್ಟು ಸಹಜವೋ ಅಷ್ಟೇ ಸಹಜ ಭಾವದ ಅಭಿವ್ಯಕ್ತಿ. ಒಂದಡೆ ಕವಿಯ ಕಲ್ಪನೆ ಅದ್ಭುತವೆನಿಸಿದರೆ ಮತ್ತೊಂದಡೆ ಹಾಡಿನ ಮಾಧುರ್ಯ ಕೇಳುಗರನು ವಿಸ್ಮಯಗೊಳಿಸಿ ಮೂಕರನ್ನಾಗಿ ಮಾಡುತ್ತದೆ. ಕೇಳುಗರ ಮನದಲ್ಲಿ ಬಹುಕಾಲ ಉಳಿಯುವಂಥ ಹಾಡಿದು.

ಕೊಪ್ಪಳ ಜಿಲ್ಲೆಯಲ್ಲಿ ಕೇಳಿ ಬರುವ ಜಾನಪದ ಪ್ರಸಿದ್ಧ ಕಲಾವಿದರಲ್ಲಿ ಶರಣಪ್ಪ ವಡಿಗೇರಿಯೊಬ್ಬರು. ಬಹುಮುಖ ಪ್ರತಿಭೆ ಇವರದು.

ಬಾಲ್ಯದಿಂದಲೇ ಹಾಡಿನಲ್ಲಿ ಆಸಕ್ತಿ, ಭಜನೆ ತಂಡದಲ್ಲಿ ಹೋಗಿ ಕುಳಿತು ಅವರೊಂದಿಗೆ ಹಾಡುತ್ತ ಹಾಡುತ್ತ ಹಾಡಿನಲ್ಲಿ ಆಸಕ್ತಿ ಹೆಚ್ಚಿಸಿಕೊಂಡು ಜೀವನದುದ್ದಕ್ಕೂ ಶ್ರಮವಹಿಸಿ ಸಾಧಿಸಿಕೊಂಡು ಬಂದಿದ್ದಾರೆ. ಈಗ ಜೀವನದ ಮಿಡಿತವೇ ಹಾಡಾಗಿದೆ. ಹಾಡೇ ಜೀವನದುಸಿರಾಗಿದೆ. ಶರಣಪ್ಪನ ಸಂಪತ್ತೆಂದರೆ ಜಾನಪದ ಹಾಡುಗಳು.

ಶರಣಪ್ಪ ವಡಿಗೇರಿ ಅವರು ನಾಡು, ಹೊರನಾಡುಗಳಲ್ಲಿ ನೀಡಿದ ಕಾರ್ಯಕ್ರಮಗಳಿಗೆ ಲೆಕ್ಕವಿಲ್ಲ. ಕೆಲವು ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ....

ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಮೂಡುಬಿದರೆ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಶಿವಮೊಗ್ಗ, ಮೈಸೂರು ದಸರಾ ಉತ್ಸವ (೨೦೦೭) ವಿಶ್ವಮಾನ್ಯ ಶ್ರೀಕನಕದಾಸರ ಜಯಂತಿ ರೋಣ, ಕರ್ನಾಟಕ ಸಾಹಿತ್ಯ ಅಕಾಡೆಮಿ "ಕನ್ನಡ ಕಾವ್ಯ ಪರಂಪರೆ" ಕಮ್ಮಟ ಮಂಗಳೂರು, ರಾಜ್ಯಮಟ್ಟದ ಎಂಟನೇ ಬಂಡಾಯ ಸಾಹಿತ್ಯ ಸಮ್ಮೇಳನ ಗಾಣಗಾಪುರ, ಬೆಂಗಳೂರು ದೂರದರ್ಶನ ಕೇಂದ್ರ, ಆಕಾಶವಾಣಿ ಗುಲಬರ್ಗಾ, ರಾಜ್ಯ ಮಟ್ಟದ ಯುವಜನ ಮೇಳ ಯಲ್ಲಾಪುರ, ರಾಜ್ಯ ಮಟ್ಟದ ಜಾನಪದ ಸಮಾವೇಶ ಹೂವಿನ ಹಡಗಲಿ, ನೆಹರು ಯುವಕೇಂದ್ರ ರಾಯಚೂರು ಇವರು ಆಯೋಜಿಸಿದ ಲಕನೊ (ಉತ್ತರ ಪ್ರದೇಶ)ದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ, ಸೂಗೂರೇಶ್ವರ ಜಾತ್ರಾ ಸಮಿತಿ ದೇವಸೂಗೂರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಯೋಜಿಸಿದ ಕೊಪ್ಪಳ ಜಿಲ್ಲಾ ಜಾನಪದ ಮೇಳ ಕೊಪ್ಪಳ, ಆನೆಗುಂದಿ ಉತ್ಸವ ಹೀಗೆ ಇನ್ನೂ ಅನೇಕ ಕಡೆ ಕಾರ್ಯಕ್ರಮ ನೀಡಿ ಜನಮನ ರಂಜಿಸಿದ ಶರಣಪ್ಪ ವಡಿಗೇರಿ ನಾಡಿನ ಜನಕ್ಕೆ ಚಿರಪರಿಚಿತ ಕಲಾವಿದ.

ದೂರದರ್ಶನ "ಬೆಳಗು" ಕಾರ್ಯಕ್ರಮದಲ್ಲಿ ಇವರನ್ನು ಪರಿಚಯಿಸುತ್ತ "ಹೈದರಾಬಾದ ಕರ್ನಾಟಕ ಜಾನಪದ ಕಲಾವಿದರಲ್ಲಿ ಎದ್ದು ಕಾಣುವ ಹೆಸರು ಕೊಪ್ಪಳ ಜಿಲ್ಲೆಯು ಶರಣಪ್ಪ ವಡಗೇರಿಯವರದು. ಇವರು ವೃತ್ತಿಯಲ್ಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಮೇಲ್ವಿಚಾರಕನಾಗಿದ್ದರೂ ಪ್ರವೃತ್ತಿಯಲ್ಲಿ ಜಾನಪದ ಕಲಾವಿದ, ಕಥೆಗಾರ, ಕವಿ, ನಟ, ನಿರ್ದೇಶಕರಾಗಿದ್ದಾರೆ. ಇವರ ಹಾಡನ್ನು ಕೇಳಿದವರು ಒಂದಿಲ್ಲ ಒಂದು ಹೊಸ ಅನುಭವಕ್ಕೆ ಪಾತ್ರರಾಗುತ್ತಾರೆ." ಡಾ. ಎಚ್. ಎಲ್. ನಾಗೇಗೌಡರು ಇವರ ಹಾಡನ್ನು ಕೇಳಿ ಮನಸಾರೆ ಮೆಚ್ಚಿ ಆಗ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ "ಸಿರಿಗಂಧ" ಕಾರ್ಯಕ್ರಮಕ್ಕೆ ಅವಕಾಶಕಲ್ಪಿಸಿ ಕೊಟ್ಟಿದ್ದಾರೆ.

ಶರಣಪ್ಪ ವಡಿಗೇರಿಯವರು ಬಾಲ್ಯದಿಂದಲೇ ಜಾನಪದ ಕಲೆಯತ್ತ ವಾಲಿದರು. ತಮ್ಮ ಕಂಚಿನ ಕಂಠದಿಂದ ಸುಂದರವಾಗಿ ಹಾಡನ್ನು ಹೇಳುವ, ಕೈಯಲ್ಲಿ ಡಪ್ಪು, ಚಿಟಿಗಿ ಏಕಕಾಲದಲ್ಲಿ ಬಳಸಿಕೊಂಡು ಹಾಡಿದರೆ ಯಾರು ತಾನೇ ಮರಳಾಗದಿದ್ದಾರು ? ಸಾವಿರಾರು ಶ್ರೋತೃಗಳ ಮನ ಸೂರೆಗೊಂಡ ಶರಣಪ್ಪನವರು ಹಂತಿ ಹಾಡು, ಗೀಗೀ ಹಾಡು, ಡೊಳ್ಳಿನ ಹಾಡು, ಲಾವಣಿ ಹಾಡು, ಭಜನೆ ಕೋಲಾಟ ಹೀಗೆ ಎಲ್ಲಾ ಬಗೆಯ ಹಾಡುಗಳ ಕಣಜವೇ ಅವರಲ್ಲಿದೆ.

ಶರಣಪ್ಪ ಅವರ ಕಲೆಯನ್ನು ಕುರಿತು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಗೊಂಡಿವೆ. ನಾಡಿನ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಬಿರುದು ಬಂದಿವೆ. ಕರ್ನಾಟಕ ಸರಕಾರ ೧೯೯೧ರಲ್ಲಿ "ರಾಜ್ಯ ಯುವ ಪ್ರಶಸ್ತಿ" ನೀಡಿ ಗೌರವಿಸಿದೆ. ೧೯೯೪ರಲ್ಲಿ ಬದಾಮಿಯ "ಕಲಾಕುಂಜ" ಸಂಸ್ಥೆಯಿಂದ ದಿ. ಶಿವರಾಮ ಕಾರಂತರು

"ಜಾನಪದ ಗಾರುಡಿಗ ಪ್ರಶಸ್ತಿ" ನೀಡಿ ಸನ್ಮಾನಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ೨೦೦೭ರ ಸಾಲಿನ ವಾರ್ಷಿಕ ಪ್ರಶಸ್ತಿ ನೀಡಿದೆ.

ಶರಣಪ್ಪ ವಡಗೇರಿ ಜನ್ಮ ತಾಳಿದ್ದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ವಡಗೇರಿಯಲ್ಲಿ ಶ್ರೀ ತಿಮ್ಮಪ್ಪ ಶ್ರೀಮತಿ ಮುದುಕವ್ವ ದಂಪತಿಗಳ ಮಗನಾಗಿ ೧-೬-೧೯೬೫ರಲ್ಲಿ ಜನಿಸಿದ್ದಾರೆ. ಬಿ. ಎ. ಪದವೀಧರರಾದ ಶರಣಪ್ಪನವರ ಕಲಾಪ್ರತಿಭೆ. ಬಹುಮುಖವಾಗಿ ಸಾಗಿ ಬಂದಿದೆ. ಆದರೂ ಹಾಡುಗಾರಿಕೆಯಿಂದಲೇ ಜನ ಇವರನ್ನು ಹೆಚ್ಚು ಗುರುತಿಸುತ್ತಾರೆ.

ಶರಣಪ್ಪ ವಡಗೇರಿ ನಾಡು ಕಂಡ ಉತ್ತಮ ಯುವ ಜಾನಪದ ಹಾಡುಗಾರ.

ಶರಣಪ್ಪ ವಡಿಗೇರಿ
ಕುರುಬರ ಓಣಿ
ಕುಷ್ಟಗಿ
ಜಿ : ಕೊಪ್ಪಳ
ಮೊ : ೯೪೪೮೨೧೨೧೭೧

## ಬಸಪ್ಪ ಚೌಡಕಿ

"ರಘುರಾಮ ತಾಯಿಯ ಸೆರಗು ಹಿಡಿದು ಕೇಳಿದಾಗ
ತಾಯಿ ಹಂದರದಾಗ ಕುಂತಿಲ್ಲ, ಮದುವೆಯಾಗಿಲ್ಲ
ನಿನ್ನ ತಂದೆ ನನಗೆ ಗೊತ್ತಿಲ್ಲ."

ಈ ಹಾಡನ್ನು ಭಯಭಕ್ತಿಯಿಂದ ಚೌಡಕಿ ಹಿಡಿದು ಬಸಪ್ಪ ಹಾಡುವಾಗ ತನ್ಮಯನಾಗುತ್ತಾನೆ. ಹಾಡಿನ ಏರಿಳಿತ ಹಾಡಿನ ಸಂವಾದ ಅದ್ಭುತವಾಗಿರುತ್ತದೆ. ಪರಶುರಾಮನಿಗೂ ಎಲ್ಲಮ್ಮನಿಗೂ ನಡೆಯುವ ಅನೇಕ ಸಂವಾದ ಹಾಡುಗಳ ಸಂಗ್ರಹ ಬಸಪ್ಪನಲ್ಲಿವೆ. ಭಾಷೆ, ದಾಟಿ ಅಲ್ಲಿಯ ಭಕ್ತಿ ಭಾವದ ಹಾಡುಗಳು ಪರಿಣಾಮಕಾರಿ.

ಉತ್ತರ ಕರ್ನಾಟಕದಲ್ಲಿ ಸವದತ್ತಿ ಎಲ್ಲಮ್ಮ ಪ್ರಸಿದ್ಧ ಪಡೆದ ದೇವತೆ. ಎಲ್ಲಮ ದೇವಿಯು ಬೆಳ್ಳಿ ಮುಖದ ಕೊಡ ಹೊತ್ತು ಹಾಡಿ ಕುಣಿಯುವ ಗಂಡು ಹೆಣ್ಣು ಜೋಗತಿಯರು ಬಹಳಷ್ಟು ಜನರು. ಕೊರಳಲ್ಲಿ ಕವಡೆ ತಲೆಯಲ್ಲಿ ಜಡೆ, ಕಾಲಲ್ಲಿ ಗೆಜ್ಜೆ ಕೈಯಲ್ಲಿ ಚೌಡಕಿ ಇರುವ ಇವರೆಲ್ಲ ಎಲ್ಲಮ್ಮ ಭಕ್ತರು (ಜೋಗಿಣಿಯರು).

ಬಸಪ್ಪ ಈ ಎಲ್ಲ ಸಂಪ್ರದಾಯದಿಂದ ನಿತ್ಯ ಹಳ್ಳಿಹಳ್ಳಿಗೆ ಹಾಡುತ್ತ (ಮಗನೊಂದಿಗೆ) ಬಿಕ್ಷಾಟನೆ ಮಾಡಿಕೊಂಡು ಬರುವುದು ಸಂಪ್ರದಾಯ. ಹಳ್ಳಿಯಲ್ಲಿ ಒಂದು ಚಿಕ್ಕಮನೆ ; ಸ್ವಲ್ಪ ಹೊಲವಿದ್ದರೂ ದೇವಿಯ ಭಕ್ತಿಸೇವೆ ಎಂದು ಬಿಕ್ಷಾಟನೆ ನಡೆಸಿಕೊಂಡು ಬಂದಿದ್ದಾನೆ. ಬಸಪ್ಪನ ಕೈಯಲ್ಲಿ ಚೌಡಕಿ ಇದ್ದರೆ ಮಗನ ಕೈಯಲ್ಲಿ ತುಂತುನಿ ಇರುತ್ತದೆ. ಇವರ ಹಾಡುಗಳು ಬಹುಪಾಲು ಎಲ್ಲಮ್ಮನ ಮಹಾತ್ಮೆಯನ್ನೇ ಸಾರುತ್ತವೆ. ಅವಳಿಗೆ ಆದಿಶಕ್ತಿ, ಮಹಾಮಾಯೆ ಎಂದು ಕೊಂಡಾಡುತ್ತಾರೆ. ಚೌಡಕಿಯೊಂದಿಗೆ ಬೇರೆ ಬೇರೆ

ಕಥನಗಳ ಹಾಡನ್ನೂ ಬಸಪ್ಪ ಹಾಡುತ್ತಾನೆ. ಚೌಡಕಿ ಬಸಪ್ಪನ ಸರಳ ಹಾಗೂ ಪ್ರಮುಖ ವಾದ್ಯ. ಇದನ್ನು ನುಡಿಸುತ್ತ ಊರೂರು ಅಲೆಯುವ ಬಸಪ್ಪ ದೇವಿಯ ಆರಾಧನೆ ಗೈಯುತ್ತ ತಾಸುಗಟ್ಟಲೆ ಹಾಡುತ್ತಾನೆ. ಎಲ್ಲಮ್ಮನ ಅನೇಕ ಪ್ರಸಂಗಗಳ ಹಾಡಿನೊಂದಿಗೆ ಬಸಪ್ಪ ಭಕ್ತಿಯ ಆಧ್ಯಾತ್ಮದ ಹಾಡುಗಳನ್ನು ಹಾಡುತ್ತ ತನ್ನ ವೃತ್ತಿಯ ಜೊತೆ ಚೌಡಕಿ ಹಾಡುಗಳನ್ನು ಕಲೆಯನ್ನಾಗಿ ಮಾಡಿ ಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದುಂಟು.

ಬಸಪ್ಪನಿಗೆ ಈ ಕಾಯಕ ಪರಂಪರೆಯಿಂದ ಬಂದುದು. ತಂದೆ, ಅಜ್ಜ ಇದೇ ಉದ್ಯೋಗದಲ್ಲಿ ಬಂದವರು. ಚೌಡಕಿ ನುಡಿಸುವದನ್ನು ತಂದೆಯಿಂದಲೇ ಕಲಿತಿದ್ದು ಈಗ ಮಗನಿಗೆ ಕಲಿಸಿದ್ದು. ೧೦-೧೨ರ ಬಾಲ್ಯದಲ್ಲಿಯೇ ತಂದೆಯಿಂದ ಬಂದ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿರುವ ಬಸಪ್ಪನಿಗೀಗ ೬೦ರ.ಹರೆಯ. ಆದರೂ ಹಾಡಿನಲ್ಲಾಗಲಿ, ದೇವಿಯ ಆರಾಧನೆಯಲ್ಲಾಗಲಿ ಉತ್ಸಾಹ, ಆಸಕ್ತಿ ಕಳೆದುಕೊಂಡಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆನೆಗುಂದಿ ಉತ್ಸವ, ಹನುಮ ಸಾಗರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನ, ಕೊಪ್ಪಳದಲ್ಲಿ ಜರುಗಿದ ಜಾನಪದ ಉತ್ಸವಗಳಲ್ಲಿ ಬಸಪ್ಪ ಚೌಡಕಿ ಅವರಿಗೆ ವೇದಿಕೆ ದೊರೆತಿದೆ. ಈ ವೇದಿಕೆಗಳಿಗಿಂತ ಎಲ್ಲಮ್ಮನ ಗುಡ್ಡಕ್ಕೆ ಹೋಗಿ ಮುನಿರಾಬಾದ ಹತ್ತಿರದ ಹುಲಿಗೆಮ್ಮನ ದೇವಸ್ಥಾನಕ್ಕೆ ಹೋಗಿ ಸಲ್ಲಿಸುವ ಭಕ್ತಿಸೇವೆಯೇ ಬಸಪ್ಪನಿಗೆ ಖುಷಿಕೊಡುತ್ತಿದೆ, ತೃಪ್ತಿ ನೀಡುತ್ತಿದೆ. ಬಸಪ್ಪನಲ್ಲಿ ಚೌಡಕಿ ಪದಗಳು ರಾತ್ರಿ-ಹಗಲು ನಿರಂತರ ಹಾಡುವಷ್ಟು ಸಂಗ್ರಹಗಳಿವೆ.

ಬಸಪ್ಪ ಜನ್ಮಪಡೆದಿದ್ದು ಕುಷ್ಟಗಿ ತಾಲೂಕಿನ ತೆಗ್ಗಿನಹಾಳ ಗ್ರಾಮದ ಭರಮಪ್ಪ ಬುಡ್ಡಮ್ಮ ದಂಪತಿಗಳ ಮಗನಾಗಿ. ಶಿಕ್ಷಣವಿಲ್ಲ ಒಬ್ಬ ಸಹೋದರ ಇಬ್ಬರು ಸಹೋದರಿಯರು. ಬೇಸಾಯ ಮನೆತನ. ಜೊತೆಗೆ ಚೌಡಕಿ ಸಂಪ್ರದಾಯ, ದೇವಿಯ ಆರಾಧನೆ. ಕುಷ್ಟಗಿಯ ವಡಗೇರಿ ಶರಣಪ್ಪ ಬಸಪ್ಪನಿಗೆ ಮಾರ್ಗದರ್ಶಕರಾಗಿ ಅನೇಕ ಸರಕಾರಿ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

ಬಸಪ್ಪನ ಪತ್ನಿ ಹನುಮವ್ವ ಕೂಡ ದೇವಿಯ ಆರಾಧಕಳು ಈ ದಂಪತಿಗಳ ಹೆಣ್ಣುಮಕ್ಕಳ ಮದುವೆಯಾಗಿದೆ. ಗಂಡು ಮಕ್ಕಳು ಬೇಸಾಯ ಮಾಡಿಕೊಂಡು ಸಾಗಿದ್ದಾರೆ. ಚಿಕ್ಕಮಗ ತಂದೆಯೊಂದಿಗೆ ಬಿಕ್ಷಾಟನೆಗೆ ಹೋಗುತ್ತಾನೆ.

ವಡಗೇರಿ ಶರಣಪ್ಪನ ಜೊತೆ ತೆಗ್ಗಿನಹಾಳ ಗ್ರಾಮಕ್ಕೆ ಹೋಗಿ ಬಸಪ್ಪನ ಮನೆ ಹುಡುಕಿಕೊಂಡು ಹೋದಾಗ ಬಸಪ್ಪ ತೋರಿದ ಆದರಾತಿಥ್ಯ ಮರೆಯಲಾಗದು. ಒಬ್ಬ ಕಲಾವಿದನಿಗೆ ತನ್ನ ಕಲೆಯ ಬಗ್ಗೆ ಗೌರವವಿಟ್ಟುಕೊಂಡು ಮನೆಯವರೆಗೂ ಬಂದಾಗ ಸಂತೋಷವಾಗದಿದ್ದೀತೆ ? ನಾವು ಆತನಿಗೆ ಹಾಡಲು ಹೇಳಿದಾಗ ಕೈಕಾಲು ಮುಖ

ತೊಳೆದುಕೊಂಡು ಭಂಡಾರ ಹಚ್ಚಿಕೊಂಡು ದೇವಿಯ ಮೂರ್ತಿಗೆ ನಮಿಸಿ ಚೌಡಕಿ ಕೈಗೆತ್ತಿಕೊಂಡು ಶೃತಿಗೊಳಿಸಿದ್ದು ನೋಡಿದಾಗ ದೇವಿಯ ಮೇಲಿನ ಅಪಾರ ಭಕ್ತಿ, ನಂಬಿಗೆ, ಶ್ರದ್ಧೆ ಸ್ಪಷ್ಟವಾಗುತ್ತಿತ್ತು.

"ನಾಡಿನೊಳಗ ನಿನ್ನ ಮಹಿಮೆ ತಿಳಿಯ ಬಂದೇನ
ಶಕ್ತಿ ಅವತಾರ ನೀನು, ಜಗದಂಬೆ ನೀನು"

ಎನ್ನುವ ದೇವಿಯ ಹುಟ್ಟು, ಮಹಿಮೆ ಹಾಡಿನೊಂದಿಗೆ ಭಕ್ತಿಸೇವೆ ಮುಗಿಸಿದಾಗ ನಾವು ಕೂಡ ಆಕ್ಷಣ ದೇವಿಯ ಆರಾಧನೆಯ ಹಾಡು ಕೇಳುತ್ತ ಭಾವಪರವಶರಾಗಿದ್ದೆವು. ಆ ಪ್ರಸಂಗ ಆನಂದವನ್ನುಂಟು ಮಾಡಿತ್ತು.

**ಬಸಪ್ಪ ಚೌಡಕಿ**
**ಅಂಚೆ : ಬಳೂಟಗಿ**
**ತಾ : ಕುಷ್ಟಗಿ ಜಿ : ಕೊಪ್ಪಳ**

## ಭಾಷಾಸಾಬ ಇಮಾಮಸಾಬ ಚೌದರಿ

ಕುಷ್ಟಗಿಯ ಭಾಷಾಸಾಬ ಡಪ್ಪಿನಾಟದ ನಟ, ನಿರ್ದೇಶಕ ಹಾಡುಗಾರ. ಸುತ್ತಲು ಹಳ್ಳಿಗಳಲ್ಲಿ ಅನೇಕ ಡಪ್ಪಿನಾಟಗಳಲ್ಲಿ ಅಭಿನಯಿಸಿ ನಂತರ ನಿರ್ದೇಶಕನಾಗಿ ಅನೇಕ ಆಟಗಳನ್ನು ಕಲಿಸಿ ಆಡಿಸಿದ ಕೀರ್ತಿ ಭಾಷಾಸಾಬನದಾಗಿದೆ. ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಡಪ್ಪಿನಾಟ ಕಲಿಸಿ ಪ್ರಯೋಗಿಸಿ ಬಂದಿರುವ ಭಾಷಾಸಾಬ ಈಗ ೭೬ರ ಪ್ರಾಯದ ಡಪ್ಪಿನಾಟದ ಮಾಸ್ತರ.

ಬಯಲಾಟ–ಡಪ್ಪಿನಾಟಗಳಲ್ಲಿ ಬಹಳ ವ್ಯತ್ಯಾಸವಿಲ್ಲದಿದ್ದರೂ ಈ ಸಣ್ಣಾಟಗಳು ಜನಪ್ರಿಯವಾಗಲು ಮುಖ್ಯಕಾರಣ ಬಯಲಾಟಗಳಷ್ಟು ಆಡಂಬರವಿಲ್ಲ. ಕಡಿಮೆ ಪರಿಶ್ರಮದಿಂದ ಕೂಡಿದ ಆಟವಿದು. ಇದಕ್ಕೆ ಮೂಲ ಕಾರಣ ಕಥಾವಸ್ತು. ಕಥೆ ಜನರ ಮಧ್ಯದಲ್ಲಿ ನಡೆದ ಸಂಗತಿಗಳಾಗಿರುತ್ತವೆ. ಉದಾಹರಣೆಗೆ ಸಂಗ್ಯಾ–ಬಾಳ್ಯಾ, ಸೋಮಪ್ಪಾಯ–ಭೀಮರಾಯ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ, ಬಸವಂತ–ಬಲವಂತ.

ಇಲ್ಲಿಯ ವಾದ್ಯಗಳು ಕೂಡ ಕಡಿಮೆ. ಡಪ್ಪು, ಜಾಂಗಟೆ, ಜಾಂಗಟೆ ಬದಲಿಗೆ ಈಗ ತಾಳ ಈಗೀಗ ಹಾರ್ಮೋನಿಯಂ, ದಮಡಿ ವಾಯಲಿನ್ ಕೂಡ ಉಪಯೋಗಿಸುತ್ತಾರೆ. ಇದೇ ಆಟದಲ್ಲಿ ಬಯಲಾಟಗಳಂತೆ ಹಿಮ್ಮೇಳ ಮುಮ್ಮೇಳ ಇರುತ್ತೆ. ಮೂಲ ಹಾಡುಗಾರ ಡಪ್ಪು ಬಾರಿಸುತ್ತ ಹಾಡು ಹೇಳಿದರೆ ಹಿಮ್ಮೇಳದ ನಾಲ್ಕಾರು ಜನ ತಾಳ ಹಾಕುತ್ತ ಮುಮ್ಮೇಳನದವ ಹಾಡಿದ್ದನ್ನೇ ಸ್ವರವೆತ್ತಿ ಹಾಡುತ್ತರೆ. ಇಲ್ಲಿಯೂ ಮಾತು ಹಾಡು ಹಾಡು ಮಾತು ಹೀಗೆಯೇ ಸಾಗುತ್ತದೆ.

ದೊಡ್ಡಾಟಗಳಿಗಿಂತ ಎಲ್ಲ ರೀತಿಯಿಂದ ಸರಳವಿದು. ಒಂದು ಕಟ್ಟೆಯ ಮೇಲೆ ಕೂಡ ಸರಳವಾಗಿ ಬೀದಿ ಆಟಗಳಂತೆ ಪ್ರದರ್ಶಿಸಬಹುದು. ಬಯಲಾಟಗಳಂತೆ ಇದು

ಕೂಡ ಅನಕ್ಷರಸ್ಥ ಜನರಿಗೆ ಮನೋರಂಜನೆಯ ಜೊತೆ ಬೋಧನೆ ನೀಡುವುದು. ಕಥೆ ಹಳ್ಳಿಯ ಸಾಮಾಜಿಕವಾಗಿದ್ದರೂ ಪ್ರೀತಿ, ಪ್ರೇಮ, ತ್ಯಾಗ, ಹೋರಾಟಗಳ ಜೀವನ ಮೌಲ್ಯಗಳ ಆಧಾರದಲ್ಲಿರುತ್ತವೆ.

ಭಾಷಾಸಾಬ ಈ ಎಲ್ಲ ವಿಚಾರಗಳನ್ನು ತಿಳಿದ ಡಪ್ಪಿನಾಟದ ವಿಶೇಷ ಅನುಭವಿ. ಆತ ಕಲಿತಿದ್ದು ಬಸಪ್ಪ ವಾಲ್ಮೀಕಿ ಹಾಗೂ ಮಹ್ಮದ ಹುಸೇನಸಾಬ ಇವರಿಂದ ಬಾಲ್ಯದಿಂದಲೇ ಬಯಲಾಟ, ಸಣ್ಣಾಟಗಳಲ್ಲಿ ಆಸಕ್ತಿ ಹೊಂದಿದ್ದ ಭಾಷಾಸಾಬ ಹಿರಿಯರು ಹೊಲದಲ್ಲಿ ಮಲಗಿಸಿ ಬಂದಾಗ ಮಧ್ಯರಾತ್ರಿ ಎದ್ದುಬಂದು ಪಾತ್ರದ ಅಭಿನಯ ತಾಲೀಮ್ ಮನೆಯಲ್ಲಿ ಹೇಳಿಸಿಕೊಂಡು ಹೋಗುತ್ತಿದ್ದುದು ಅವರ ಆಸಕ್ತಿಯನ್ನೇ ಸೂಚಿಸುತ್ತದೆ.

ಡಪ್ಪಿನಾಟಗಳ ಪ್ರದರ್ಶನಗಳಲ್ಲಿ ಭಾಷಾಸಾಬ ಅನೇಕ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕಲಿಸಿದ ಡಪ್ಪಿನಾಟಗಳೆಂದರೆ ಬಸವಂತ-ಬಲವಂತ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ, ಬಾಲಬಿಕ್ಷರಾಜನ ಕಥೆ, ರಾಮು-ಲಿಂಗ್ಯಾ ಪ್ರಮುಖವಾಗಿವೆ, ಡಪ್ಪು ಹಾರ್ಮೋನಿಯಂ ತಾಳಗಳ ವಾದ್ಯಬಲ್ಲ. ಭಾಷಸಾಬ ರಾಯಚೂರು ಜಿಲ್ಲೆಯ ಕಪಗಲ್ಲ, ಸೈದಾಪುರ ಅಲ್ಲದೆ ಮಾನ್ವಿ, ಕುಷ್ಟಗಿ, ಯಲಬುರ್ಗಾ ತಾಲೂಕಿನ ಸುತ್ತಲು ಹಳ್ಳಿಗಳಲ್ಲಿ ಡಪ್ಪಿನಾಟ ಕಲಿಸಿ ಪ್ರದರ್ಶಿಸಿದ್ದಾರೆ. ಸುಮಾರು ನಾಲ್ಕು ದಶಕಗಳಿಂದ ಜಾನಪದ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿಯುತ್ತಿರುವ ಭಾಷಾಸಾಬ ಅವರ ಸೇವೆ ಗುರುತಿಸಿ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಕರ್ನಾಟಕ ಸರಕಾರ ಮಾಸಾಶನ ನೀಡಿ ಗೌರವಿಸಿದೆ.

ಕುಷ್ಟಗಿಯ ಚೌದರಿ ಮನೆತನದ ಇಮಾಮಸಾಬ-ದಾದಿಬಿ ದಂಪತಿಗಳ ಬೇಸಾಯ ಮನೆತನದಲ್ಲಿ ಜನ್ಮಪಡೆದ ಈ ಕಲಾವಿದ ಓದಿದ್ದು ೩ನೇ ತರಗತಿ. ಮನೆಯಲ್ಲಿ ವಿರೋಧ ಕಟ್ಟಿಕೊಂಡು ಈ ಕಲಾಕ್ಷೇತ್ರಕ್ಕೆ ಬಂದು ಅದರಲ್ಲಿ ಸಾಧಿಸಿದ ಭಾಷಾಸಾಬರಿಗೆ ತೃಪ್ತಿ ಇದೆ. ಜಾನಪದ ರಂಗಭೂಮಿಯ ಬಗ್ಗೆ ಗೌರವ ಪ್ರೀತಿ ಅಪಾರ.

ಭಾಷಾಸಾಬರನ್ನು ಸಂದರ್ಶಿಸಿ ಪ್ರಶ್ನಿಸಿದಾಗ ತಮ್ಮದೇ ಆದ ಅನುಭವದ ಮಾತುಗಳಲ್ಲಿ ಉತ್ತರಿಸಿದ್ದುಂಟು.

ಜಾನಪದ ರಂಗಭೂಮಿ ಬಡವಾಗಲು ಕಾರಣವೇನು ಎಂದಾಗ ನೋಡಿ ಸರ್ ಕಾಲಕ್ಕೆ ತಕ್ಕಂತೆ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆ ನಡೆದಿದೆ. ಇಂದು ಟಿ. ವಿ. ಚಾನಲ್‌ಗಳ ಪ್ರಭಾವದಲ್ಲಿ ನಮ್ಮ ಯುವ ಪೀಳಿಗೆ ಆ ಕಡೆ ಹೆಚ್ಚು ವಾಲಿದೆ. ಮೊದಲಿನಂತೆ ಸುಖ-ಸಮೃದ್ಧಿಯ ಕಾಲನೂ ಇದಲ್ಲ. ಈಗ ಬದುಕೋದೇ ಕಷ್ಟವಾಗಿದೆ. ಒಂದು ಬಯಲಾಟ ಪ್ರಯೋಗಿಸಬೇಕಾದರೆ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡ

ಬೇಕಾಗುತ್ತೆ. ಹಳ್ಳಿಯ ರೈತರಿಗೆ, ಕೂಲಿಕಾರರಿಗೆ ಇದು ಕಷ್ಟವಾಗುತ್ತೆ. ಎಲ್ಲದಕ್ಕೂ ಮುಖ್ಯ ಜನರಲ್ಲಿ ಆಸಕ್ತಿ ಉಳಿದಿಲ್ಲ.

ಹೀಗೆ ಅನೇಕ ಪ್ರಶ್ನೆಗಳಿಗೆ ತನ್ನದೇ ಆದ ವಿಚಾರಗಳಲ್ಲಿ ಉತ್ತರಿಸಿದ ಭಾಷಾಸಾಬ ಹಿಂದಿನ ದಿನಗಳನ್ನು ಹಿಂದಿನ ಕಲಾವಿದರನ್ನು ಸ್ಮರಿಸುತ್ತ ದೀರ್ಘ ನಿಟ್ಟುಸಿರುಬಿಟ್ಟ. ಆ ಉಸಿರಿನ ಹಿಂದೆ ನೋವಿತ್ತು, ವೇದನೆಯಿತ್ತು, ಚಿಂತನೆಯಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ.

ಭಾಷಾಸಾಬ ಚೌದರಿ
ಕಟಗರ ಓಣಿ
ತಾ : ಕುಷ್ಟಗಿ ಜಿ : ಕೊಪ್ಪಳ

# ಶಿವಪ್ಪ ಬೀರಪ್ಪ ಡೊಳ್ಳಿನ

ಡೊಳ್ಳಿನ ಹಾಡು ಜಾನಪದ ಸಾಹಿತ್ಯದಲ್ಲಿ ಬಹಳಷ್ಟು ವಿಶಿಷ್ಟತೆ ಪಡೆಯುತ್ತೆ ಡೊಳ್ಳು ವಾದ್ಯ ಕುಣಿತ ಕರ್ನಾಟಕದ ಪ್ರಾಚೀನ ಕಲೆ. ಹಳ್ಳಿಗಳಲ್ಲಿ ಜಾತ್ರೆ, ಉತ್ಸವ, ಮೆರವಣಿಗೆಗಳಲ್ಲಿ ಇದು ಇದ್ದೇ ಇರುತ್ತದೆ. ಕುರುಬರ ವಿಶಿಷ್ಟ ಈ ಕಲೆಯನ್ನು ಈಗೀಗ ಬೇರೆ ಜನಾಂಗದವರೂ ಕಲಿಯುತ್ತಿದ್ದಾರೆ. ಮಾಳಿಂಗರಾಯನ ಭಕ್ತರಾದ ಕುರುಬರು ಡೊಳ್ಳಿನ ವಾದ್ಯದೊಂದಿಗೆ ಹಾಡು ಹಾಡುತ್ತ ಕೊಂಡಾಡುತ್ತಾರೆ ಬೀರಪ್ಪನ ಹಾಡಿನ ಜೊತೆ ದೇವರ ಸ್ತುತಿ ರಾಮಾಯಣ ಮಹಾಭಾರತದ ಕಥೆಗಳನ್ನೂ ಡೊಳ್ಳು ಚಳ್ಳಮ್ಮ ಜೊತೆ ಹಾಡುತ್ತಾರೆ. ಭಕ್ತಿಯ ಆಧ್ಯಾತ್ಮ ಹಾಡುಗಳೇ ಇವರ ಕೇಂದ್ರ ಬಿಂದು.

ಕರ್ನಾಟಕದ ಎಲ್ಲಾ ಭಾಗದಲ್ಲಿಯೂ ಈ ಕಲೆ ವ್ಯಾಪಿಸಿದೆ. ಈಗಾಗಲೇ ಈ ಕಲೆ ರಾಷ್ಟ್ರ ಅಂತರಾಷ್ಟ್ರಮಟ್ಟದವರೆಗೂ ಬೆಳೆದ ಕಲೆಯಾಗಿದೆ. ಕುರುಬ ಸಮಾಜದ ಜನ ಕೇವಲ ದೇವರ ಆರಾಧನೆಗಾಗಿ ಹುಟ್ಟಿಕೊಂಡು ಬೀರದೇವರನ್ನು ಸ್ತುತಿಸುತ್ತಿದ್ದುದು ಸಂಪ್ರದಾಯವಾಗಿತ್ತು. ಈಗಿದು ಕಲೆಯಾಗಿ ಪರಿವರ್ತನೆಗೊಂಡು ಕುಣಿತ ಕಸರತ್ತು ಕೂಡ ಸಾಗಿಬರುತ್ತದೆ.

ಶಿವಪ್ಪ ಕುರುಬ ಸಮುದಾಯದಲ್ಲಿ ಹುಟ್ಟಿ ಬೆಳೆದುದರಿಂದ ಈ ಹಾಡು, ಈ ವಾದ್ಯ, ಈ ಕುಣಿತ ರಕ್ತಗತವಾಗಿ ಬಂದಿದೆ. ಶಿವಪ್ಪ ಡೊಳ್ಳನ್ನು ಸೊಂಟಕ್ಕೆ ಕಟ್ಟಿಕೊಂಡು ಒಂದು ಕೈಯಿಂದ ಪೆಟ್ಟು ಹಾಕಿ ಮತ್ತೊಂದು ಕೈಯಲ್ಲಿಯ ಗುಣಕ (ಕಟ್ಟಿಗೆಯ ದಪ್ಪನೆಯ ತುಂಡು) ದಿಂದ ಬಾರಿಸಿದಾಗ ಅದರ ನಾದನೇ ಬೇರೆ. ತಲೆಮಾರುಗಳಿಂದ ಬಂದ ಈ ಕಲೆ ಶಿವಪ್ಪನಿಗೆ ಭಕ್ತಿಯ ಹಾಡು, ಸಂಪ್ರದಾಯದ ಪರಂಪರೆಗಳ ಜೊತೆ ಆಧುನಿಕ ಲೌಕಿಕ ಉತ್ಸವಗಳಲ್ಲಿ, ಸರಕಾರಿ ಕಾರ್ಯಕ್ರಮಗಳಲ್ಲಿಯೂ ಬಾರಿಸಿದ್ದುಂಟು.

"ದೇವರು ಬಂದಾನೋ ನಮ್ಮ ಬೀರಪ್ಪ ಬಂದಾನೋ" ಎನ್ನುವ ಹಾಡಿನೊಂದಿಗೆ ಅನೇಕ ಭಕ್ತಿಯ ದೇವರ ಆರಾಧನೆಯ ಹಾಡುಗಳ ಸಂಗ್ರಹ ಶಿವಪ್ಪನಲ್ಲಿವೆ. ಇಡೀ ನಾಡಿನಲ್ಲಿರುವ ಡೊಳ್ಳಿನ ಪದಗಳನ್ನು ಸಂಗ್ರಹಿಸಿದರೆ ಒಂದು ಬೃಹತ್ ಗ್ರಂಥವೇ ಆಗುತ್ತೆ ಎನ್ನುತ್ತಾನೆ ಶಿವಪ್ಪ.

೫೦ರ ಶಿವಪ್ಪ ೨೫ರಲ್ಲಿ ತನ್ನನು ತಾನು ಈ ಕಲೆಗಾಗಿ ತೊಡಗಿಸಿಕೊಂಡು ಸೇವೆಸಲ್ಲಿಸುತ್ತಾ ಬಂದಿದ್ದಾನೆ. ಗುಲಬರ್ಗಾ, ಬೀದರ, ರಾಯಚೂರು, ಬೆಂಗಳೂರುಗಳಲ್ಲಿ ತನ್ನ "ಬೀರಲಿಂಗೇಶ್ವರ ತಂಡ" ದಿಂದ ಕಾರ್ಯಕ್ರಮ ಕೊಟ್ಟಿರುವ ಶಿವಪ್ಪ ತಂಡದ ಮುಖ್ಯಸ್ಥನಾಗಿಯೂ ಕಾರ್ಯನಿರ್ವಹಿಸುತ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಎಲ್ಲ ಕಡೆ ಭಾಗವಹಿಸುತ್ತ ಪ್ರಮಾಣ ಪತ್ರ, ಪ್ರಶಸ್ತಿ ಪತ್ರ. ೨೦೦೭ರಲ್ಲಿ ಆನೆಗೊಂದಿ ಉತ್ಸವದಲ್ಲಿ ಪ್ರಮಾಣಪತ್ರ, ೨೦೦೬ರಲ್ಲಿ ದೆಹಲಿಯ "ಭಾರತೀಯ ದಲಿತ ಸೇವಾ ಅಕಾಡೆಮಿ ಪ್ರಶಸ್ತಿ" ಪಡೆದಿದ್ದಾನೆ.

ಶಿವಪ್ಪನನ್ನು ಸಂದರ್ಶಿಸಿ ನಿಮ್ಮ ಅನಿಸಿಕೆ, ಅಭಿಪ್ರಾಯ ಈ ಕಲೆ, ಕಲಾವಿದರ ಬಗ್ಗೆ ಏನು ಎಂದಾಗ.....

"ಈ ಕಲೆ ಸಂಪ್ರದಾಯ ಬಿಟ್ಟು ಹೋಗಬಾರದು ನಮ್ಮ ಉತ್ತರ ಕರ್ನಾಟಕದಲ್ಲಿ ಇನ್ನೂ ಈ ಕಲಾವಿದರಲ್ಲಿ ಭಯ, ಭಕ್ತಿ ಪರಂಪರೆಯ ಬಗ್ಗೆ ಗೌರವವಿದೆ. ಕೆಲವಡೆ ಪಾದರಕ್ಷೆ ಹಾಕಿಕೊಂಡೇ ಡೊಳ್ಳು ಬಾರಿಸಿದ್ದನ್ನು ನಾನು ನೋಡಿದ್ದೇನೆ. ಹಾಗಾಗ ಬಾರದು ನಾವಿದನ್ನು ಒಂದು ಕಲೆಯಾಗಿ ಆಯ್ಕೆ ಮಾಡಿಕೊಂಡಾಗಲೂ ಕಲೆಗೆ, ಕುಣಿತಕ್ಕೆ ಹೊಸ ಹೊಸ ಆಯಾಮಕ್ಕೆ ತಂದು ಕೊಂಡರೂ ಭಕ್ತಿ, ಭಾವ ಕಡಿಮೆಯಾಗಬಾರದು."

ಶಿವಪ್ಪನ ಈ ಮಾತುಗಳಲ್ಲಿ ಸತ್ಯಾಂಶವಿದೆ. ಯಾವುದೇ ಕಲೆ ಬದಲಾವಣೆ ಹೊಂದಿದರೂ ಅದರ ಮೂಲ ಉದ್ದೇಶ ಮರೆಯಾಗಬಾರದು.

ಶಿವಪ್ಪನನ್ನು ಹಾಡಲು ಕೇಳಿಕೊಂಡಾಗ ಅನೇಕ ಹಾಡುಗಳನ್ನು ಹಾಡಿ ತೋರಿಸಿದ.

"ಗುರುವೆ ನಿಮ್ಮ ಪಾದದರಿವಿನಲಿ
ನಾ ಮರೆತು ಬಿಟ್ಟೆ ಜನ್ಮದ ಬೇರ
ಮರೆತು ಬಿಟ್ಟೆ ಜನ್ಮದ ಬೇರ
ಶಿವಶರಣರ ಅಡಿಗೆ ಬಾಗುವೆ"

ಶಿವಪ್ಪ ಡೊಳ್ಳಿನ ಕುಷ್ಟಗಿ ತಾಲೂಕಿನ ಬೆಂಚಮಟ್ಟಿ ಗ್ರಾಮದ ಬೀರಪ್ಪ ನಿಂಗಮ್ಮ ದಂಪತಿಗಳ ಮಗನಾಗಿ ಜನ್ಮ ಪಡೆದ. ಸುಮಾರು ೫೦ರ ಪ್ರಾಯ. ೩ ಜನ

ಸಹೋದರಿಯರು ಒಬ್ಬ ಸಹೋದರ. ಬೇಸಾಯವನ್ನೇ ಪ್ರಮುಖ ಉದ್ಯೋಗವನ್ನಾಗಿಸಿ ಕೊಂಡು ಸಾಗಿರುವ ಶಿವಪ್ಪ ಡೊಳ್ಳಿನ ಹಾಡುಗಳನ್ನು ತಂದೆಯಿಂದಲೇ ಕಲಿತಿದ್ದಾನೆ. ತಂದೆಯವರಲ್ಲಿಯೂ ಹಾಡಿನ ಕಣಜವೇ ಇತ್ತು. ರೇವಣಪ್ಪ ಹಿರೇ ಕುರುಬರ ಇವರು ಮಾರ್ಗದರ್ಶಕರೆಂದು ಅವರಿಂದಲೇ ಹೆಚ್ಚು ಕಲಿತಿದ್ದೆಂದು ಶಿವಪ್ಪ ಅವರನ್ನು ಸ್ಮರಿಸುತ್ತಾನೆ.

ಪತ್ನಿ ಬಸವಮ್ಮ ಪತಿಯ ಡೊಳ್ಳಿನ ಹಾಡಿಗೆ, ನುಡಿಸುವ ವಾದ್ಯಕ್ಕೆ ಮಾರುಹೋಗಿದ್ದಾಳೆ. ಈ ದಂಪತಿಗಳಿಗೆ ಒಬ್ಬ ಮಗ, ಇಬ್ಬರು ಹೆಣ್ಣು ಮಕ್ಕಳು. ಮಗ ಶರಣಪ್ಪ ಬೇಸಾಯವನ್ನೇ ಅನುಸರಿಸಿದರೂ ತಂದೆ, ಅಜ್ಜನವರಂತೆ ಹಾಡು, ಕುಣಿತ ಡೊಳ್ಳು ಬಾರಿಸುವ ಕಲೆ ಕರಗತ ಮಾಡಿಕೊಂಡಿದ್ದಾನೆ.

**ಶಿವಪ್ಪ ಡೊಳ್ಳಿನ**<br>
**ಬೆಂಚಮಟ್ಟಿ, ಅಂಚೆ : ಕೊರಡಕೇರಿ**<br>
**ತಾ : ಕೊಪ್ಪ ಜಿ: ಕೊಪ್ಪಳ**

# ದಾವಲಸಾಬ ಅತ್ತಾರ

ದಾವಲಸಾಬ ಕುಷ್ಟಗಿ ತಾಲೂಕಿನ ಹಾಬಲಕಟ್ಟಿ ಗ್ರಾಮದ ಗೀಗೀ ಪದ ಹಾಡುಗಾರ. ೫೫ರ ಪ್ರಾಯದ ಈ ಹಾಡುಗಾರ ಈಗಲೂ ಆಸಕ್ತಿಯಲ್ಲಿ ಕಾರ್ಯಕ್ರಮ ಕೊಡುತ್ತಾನೆ. ಮನೆತನದಲ್ಲಿ ಜಾನಪದ ಕಲೆ ಮೈಗೂಡಿಕೊಂಡು ಬಂದಿದೆ. ತಂದೆ, ಅಜ್ಜ ಜಾನಪದ ಕಲಾವಿದರು. ತಂದೆ ಮೋಹರಂ ಹಾಡಿನಲ್ಲಿ ಪ್ರಸಿದ್ಧಿ ಪಡೆದಿದ್ದರೆ ಅಜ್ಜ ಬಯಲಾಟ ಕಲಾವಿದನಾಗಿದ್ದ. ಈಗ ಮೊಮ್ಮಗ ಗೀಗೀ ಪದಗಾರ.

ಗೀಗೀ ಪದಗಳನ್ನು ಒಬ್ಬ ಡಪ್ಪು ಬಾರಿಸುತ್ತ ಹಾಡಿದರೆ ಇಬ್ಬರು ಹಿಂದೆ ಶೃತಿ, ತಾಳ ಹಿಡಿದು ಗೀಗೀ ಅರೆ ಹಾ ಜೀ ಜೀ ಎನ್ನುತ್ತಿರುತ್ತಾರೆ. ಈ ರೀತಿ ಮೂರು ಜನರ ಮ್ಯಾಳವಿರುತ್ತೆ. ನೀತಿ, ತತ್ವಗಳನ್ನು ಬಿತ್ತರಿಸುವ ಹಾಡುಗಳೇ ಅಧಿಕ ಸಾಮಾಜಿಕ, ಐತಿಹಾಸಿಕ ಹಾಡುಗಳ ಜೊತೆ ದೇಶದ ಸ್ವಾತಂತ್ರ್ಯ ಚಳವಳಿಯನ್ನು ಕುರಿತು ಗಾಂಧೀಜಿ ನೆಹರು, ಸುಭಾಸ ಅವರಂಥ ನಾಯಕರನ್ನು, ಹೋರಾಟಗಾರರನ್ನು ಕುರಿತು ಗೀಗೀ ಪದದಲ್ಲಿ ಮೂಡಿಬಂದಿವೆ.

೧೬-೧೮ರ ಹರೆಯದಲ್ಲಿಯೇ ಹಾಡಲು ಪ್ರಾರಂಭಿಸಿದ ದಾವಲಸಾಬ ನಿರಂತರ ೩೫-೪೦ ವರ್ಷಗಳಿಂದ ಅವರ ಗೀಗೀ ಪದದ ಹಾಡುಗಳು ನಾಡಿನ ಉದ್ದಗಲಕ್ಕೂ ಹರಿದು ಬಂದಿವೆ. ಪ್ರಪ್ರಥಮವಾಗಿ ಇಟಗಿ ಭೀಮಾಂಬಿಕಾ ಜಾತ್ರೆಯಲ್ಲಿ ಕಾರ್ಯಕ್ರಮ (೨೦ರ ಪ್ರಾಯದಲ್ಲಿ) ನೀಡಿದ ದಾವಲಸಾಬ ಸುತ್ತಲೂ ಹಳ್ಳಿಗಳ ಜಾತ್ರೆಗಳಲ್ಲಿ, ಉತ್ಸವಗಳಲ್ಲಿ ಕಾರ್ಯಕ್ರಮ ನೀಡುತ್ತ ಬಂದರು ಹಾಬಲಕಟ್ಟಿ, ಬಾದಿಯನಾಳ, ಯರಗೇರಿ, ಗರೇಬಾಳ, ರಾಂಪುರ, ಹನುಮಸಾಗರ ದುಗ್ಗಲದೋಣಿ, ನಿಲೋಗಲ್ ಮಾರಿಕಲ್ಲ, ಮಾಲಗಿತ್ತಿ, ಹೊಸಳ್ಳಿ ಗ್ರಾಮಗಳಲ್ಲಿ ಜನಪ್ರಿಯ ಕಲಾವಿದರಾಗಿ ಆಕರ್ಷಿಸಿದರು.

ಧಾರವಾಡ, ಬೆಂಗಳೂರುಗಳಂಥ ಜಿಲ್ಲೆಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸರಕಾರಿ ಉತ್ಸವಗಳಲ್ಲಿ ಕೂಡ ಭಾಗವಹಿಸಿ ಪ್ರಮಾಣ ಪತ್ರ ಪಡೆದುಕೊಂಡು ಬಂದ ಕಲಾವಿದ ತನ್ನದೇ ತಂಡ ಕಟ್ಟಿಕೊಂಡ ದಾವಲಸಾಬ ಜಾತ್ರೆ, ಉರುಸು, ಉತ್ಸವಗಳಲ್ಲಿ ಬೆಳಗಾಗುವವರೆಗೆ ಹಾಡಿ ಜನಮನ ರಂಜಿಸಿ ನಿರಂತರ ಕೇಳುಗರ ಮನದಲ್ಲಿ ಉಳಿಯುತ್ತಾನೆ.

ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವ, ಪ್ರಮಾಣ ಪತ್ರ ಪಡೆದ ಈ ಹಾಡುಗಾರ ನೊಂದು ಹೇಳುವ ಮಾತು "ಈಗೀಗ ಗೀಗೀ ಪದಗಳು ಎಲ್ಲಾ ನಮೂನಿ ಬರಲಿಕ್ಕ ಹತ್ಯಾವ್ರಿ ಹಾಸ್ಯ ಇರಬೇಕಂತ ಸಾಹಿತ್ಯ ಕೆಡಿಸಿ ಹಾಡೋದು ಕೇಳಿದ್ರ ಬೇಜಾರಾಗ್ತ್ರಿ. ಗೀಗೀಪದಗಳು ಜನಪದ ಕಲೆಯ ಮೂಲ ಸೊಗಡನ್ನು ಕಳಕೊಳ್ಳದು ನೋಡಿ ನೋವಾಗುತ್ರಿ."

ಜನಪದದ ದೊಡ್ಡ ಮೊತ್ತ ನಮ್ಮ ಗೀಗೀ ಪದ, ಲಾವಣಿ ಪದ. ಈಗ ಅವೆಲ್ಲ ಮಾಯವಾಗುತ್ತಿವೆ. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಇಂಥ ಅನೇಕ ಕಲಾವಿದರು ಸಿಗುತ್ತಿದ್ದರು, ಜಾತ್ರೆ ಉತ್ಸವಗಳಲ್ಲಂತೂ ಗಂಡಿನ ಪಕ್ಷ ಹೆಣ್ಣಿನ ಪಕ್ಷ. ಈ ಹೆಣ್ಣು ಗಂಡಿನ ಮೇಲ್ಮೆಯ ವಾದ ವಿವಾದ ಕೊನೆಯಿಲ್ಲದಂತೆ ಹಾಡುತ್ತಿದ್ದಾಗ ಸಮಯ ಸರಿದಿದ್ದೇ ಗೊತ್ತಾಗುತ್ತಿರಲಿಲ್ಲ. ಈಗ ಪ್ರಚಾರಕ್ಕಾಗಿ ಗೀಗೀಪದ ಹುಟ್ಟಿಕೊಂಡು ಸಾಹಿತ್ಯ-ಸತ್ವ ಕಳೆದುಕೊಳ್ಳುತ್ತಿದೆ.

ದಾವಲಸಾಬ ಮುಸ್ಲಿಂ ಮನೆತನದಲ್ಲಿ ಹುಟ್ಟಿ ಬೆಳೆದು ಹಿಂದು-ಮುಸ್ಲಿಂ ಭಾವೈಕ್ಯದ ವ್ಯಕ್ತಿಯಾಗಿದ್ದಾನೆ. ಜಾನಪದ ಸಾಹಿತ್ಯ, ಪರಂಪರೆಯ ಬಗ್ಗೆ ಅಭಿಮಾನ ಉಳ್ಳ ಈ ಕಲಾವಿದ ಹಳೆಯ ದಿನಗಳನ್ನು ನೆನೆಯುತ್ತ ಆಗಿನ ಆಟ, ಹಾಡು, ಕಲೆ ಸಾಹಿತ್ಯ ಎಷ್ಟೊಂದು ಶ್ರೀಮಂತವಾಗಿತ್ತೆಂದು ಅಭಿಮಾನ ಪಡುತ್ತ ಹೇಳುತ್ತಾನೆ. ಕಾಲಚಕ್ರದ ತೀವ್ರಗತಿಯಲ್ಲಿ ಎಲ್ಲವೂ ಬದಲಾಗುತ್ತಲೇ ಸಾಗುತ್ತಿರುತ್ತಲ್ಲವೆ?

ಮಹಿಬೂಬಸಾಬ ಮಹಿಬೂಬಿ ದಂಪತಿಗಳ ಮಗನಾಗಿ ಜನಿಸಿದವರು. ಕಿರಿಯ ತಮ್ಮ ಶಿಕ್ಷಕ ವೃತ್ತಿಯಲ್ಲಿದ್ದಾನೆ. ಹಿಂದು ಮುಸ್ಲಿಂ ಭಾವೈಕ್ಯದ ಮನೆತನದ ಈ ಕಲಾವಿದ ಭಜನೆ, ಗೀಗೀಪದ ಲಾವಣಿ ಹಾಡುಗಳಲ್ಲಿ ಆಸಕ್ತಿ ಹೊಂದಿ ಪ್ರೇಕ್ಷಕರ ಗಮನ ಸೆಳೆದಿದ್ದಾನೆ.

ದೀರ್ಘಕಾಲ ಜಾನಪದ ಕಲಾವಿದನಾಗಿ, ಉತ್ತಮ ಕಾರ್ಯಕ್ರಮಗಳನ್ನು ಕೊಡುತ್ತ ಬಂದ ನಿಷ್ಠಾವಂತ ದಾವಲಸಾಬ ತಮ್ಮ ಕಲಾಕ್ಷೇತ್ರದಿಂದ ವಿಸ್ತಾರದ ಬದುಕು ಪಡೆದು ಹಿರಿಯ ಕಲಾವಿದರ ಸಾಲಿನಲ್ಲಿ ಗುರುತಿಸಿಕೊಳ್ಳುತ್ತಾನೆ.

**ದಾವಲಸಾಬ ಅತ್ತಾರ**
**ಹಾಬಲಕಟ್ಟಿ, ತಾ : ಕುಷ್ಟಗಿ ಜ : ಕೊಪ್ಪಳ**

## ಮುದುಕವ್ವ ಮಾದರ

ಮೂಲತಃ ಜನಪದ ಸಾಹಿತ್ಯ ದಲಿತರ, ಶೋಷಿತರ, ನಿರಕ್ಷಿಗಳ ಸಾಹಿತ್ಯವಾಗಿದೆ. ಜಾನಪದ ಕಲಾವಿದರ ಸಮೀಕ್ಷೆ ಮಾಡಿದಾಗ ಬಹುಪಾಲು ಕಲಾವಿದರು ದಲಿತರು ದೊರೆಯುತ್ತಾರೆ. ಅವರಲ್ಲಿದ್ದಷ್ಟು ಹಾಡು ಸಂಗ್ರಹ ಇತರರಲ್ಲಿ ಸಿಗಲಾರದೆನಿಸುತ್ತಿದೆ.

ಇಂಥ ಜನಾಂಗದ ಮುದುಕವ್ವ ದೇವದಾಸಿ ಮನೆತನದಿಂದ ಬಂದ ಕಲಾವಿದೆ. ಮುದಕವ್ವ ತಾಯಿ ಭರಮವ್ವ ಕುಷ್ಟಗಿ ತಾಲೂಕಿನ ಹಿರೇಗೊಣ್ಣಾಗರ ಗ್ರಾಮದವರು. ಬಾಲ್ಯದಿಂದಲೇ ಸಂಪ್ರದಾಯದ ಹಾಡು ಕಲಿತ ಈ ಕಲಾವಿದೆ ಕ್ರಮೇಣ ಗೀಗೀ ಪದಗಳತ್ತ ಆಸಕ್ತಿ ಹೊಂದಿ ಫಕೀರಪ್ಪ ಇಲಕಲ್ಲ ಇವರ ಮಾರ್ಗದರ್ಶನದಿಂದ ಗೀಗೀ ಪದಗಳತ್ತ ವಾಲಿ ಆ ಕ್ಷೇತ್ರದಲ್ಲಿ ಗುರುತಿಸಿಕೊಂಡು ಜನಮನ ಸೆಳೆಯುವಷ್ಟು ಬೆಳೆದಳು.

೪೫-೫೦ರ ಪ್ರಾಯದ ಈ ಕಲಾವಿದೆ ಹಾಡಲು ನಿಂತರೆ ಗಂಟೆಗಟ್ಟಲೆ ಹಾಡುತ್ತಾಳೆ. ಭಕ್ತಿ, ಶೃಂಗಾರ, ಕರುಣ, ಹಾಸ್ಯ, ದೇಶ ಭಕ್ತಿಗೀತೆಗಳಂಥ ಅನೇಕ ಹಾಡುಗಳನ್ನು ತನ್ನ ಹಳ್ಳಿಯಲ್ಲಷ್ಟೆ ಅಲ್ಲದೆ ಸುತ್ತಲು ಹಳ್ಳಿಗಳಲ್ಲಿ ಹಾಡಿ ಗುರುತಿಸಿ ಕೊಂಡಿರುವ ಮುದಕವ್ವ ಜನಪ್ರಿಯ ಜಾನಪದ ಕಲಾವಿದೆ.

"ಕುಂತ ನಿಂತ ದೈವದಾಗ
ಕೈ ಮುಗಿದ ಕೇಳತೀನಿ
ಮಾಡಬ್ಯಾಡ್ರಿ ಕಲಾಲಲ ॥

ಎಂದು ಪಲ್ಲವಿಯಲ್ಲಿಯೇ ಜನರನ್ನು ಸ್ಥಬ್ಧಗೊಳಿಸಿ ಆಕರ್ಷಿಸುವ ಶಕ್ತಿ ಈ ಕಲಾವಿದೆಗುಂಟು. ಎರಡು ದಶಕಗಳಿಂದ ತಂಡಕಟ್ಟಿಕೊಂಡು ಊರಿನ ಜಾತ್ರೆ, ಉತ್ಸವಗಳಲ್ಲಿ ಹಾಡುತ್ತ ಅನೇಕ ಹಳ್ಳಿಗಳ ಆಹ್ವಾನ ಸ್ವೀಕರಿಸಿ ಹೋಗಿ ಅಲ್ಲಿಯ ಜನರನ್ನು

ರಂಜಿಸಿ ಮೆಚ್ಚಿಗೆ ಪಡೆದುಕೊಂಡು ಬಂದಿರುವ ಮುದಕವ್ವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆದೇಶದ ಮೇರೆಗೂ ಅಲ್ಲಲ್ಲಿ ಕಾರ್ಯಕ್ರಮಗಳನ್ನು ಕೊಟ್ಟು ಬಂದಿರುವುದುಂಟು. ಯಮನೂರ ಉರುಸು, ಮಾಂತೇಶ್ವರ ಜಾತ್ರೆ, ಹನುಮನಾಳ, ಕುಷ್ಟಗಿ, ಹನುಮಸಾಗರ, ಯರಗೇರಿ, ವಾರಿಕಲ್ಲ, ಹೊಸಹಳ್ಳಿ, ಮುಧೋಳ, ಮ್ಯಾಗೇರಿ, ಕೋನಾಪುರ, ಮಾಲಗಿತ್ತಿ, ವಜ್ರಬಂಡಿ, ಇಲಕಲ್ಲ. ಹೀಗೆ ಅನೇಕ ಜಾತ್ರೆ ಉತ್ಸವಗಳಲ್ಲಿ ಭಾಗವಹಿಸಿ ಬಂದದ್ದುಂಟು. ಕೊಪ್ಪಳ ಜಿಲ್ಲೆಯಾಗಿ ಪರಿವರ್ತಿತ ಹೊಂದುವ ಮೊದಲೇ ದೇವದುರ್ಗದಲ್ಲಿ ಜರುಗಿದ ಪರಿಶಿಷ್ಠ ಕಲಾ ಮೇಳದಲ್ಲಿ ಭಾಗಿಯಾಗಿ ಆಕರ್ಷಿಸಿದ ಈ ಕಲಾವಿದೆ ಸಧ್ಯ ಕೊಪ್ಪಳ ಜಿಲ್ಲೆಯ ಹೆಸರಾಂತ ಗೀಗೀ ಪದ ಕಲಾವಿದೆ.

ಹಿಂದುಳಿದ ಜನಾಂಗದ ಅಶಿಕ್ಷಿತ ಈ ಕಲಾವಿದೆಯಲ್ಲಿ ಹಾಡುಗಳು ಅಪಾರ. ತನ್ನ ವೈಯಕ್ತಿಕ ಕಷ್ಟದ ಬದುಕಿನಲ್ಲಿ, ಬಡತನ, ದಾರಿದ್ರ, ಹಲವಾರು ಸಮಸ್ಯೆಗಳಲ್ಲಿಯೂ ಈ ಕಲೆಯಲ್ಲಿ ಆಸಕ್ತಿ ಹೊಂದಿ ಬೆಳೆದು ಬಂದದ್ದು ಮೆಚ್ಚುವಂತಹದ್ದು.

ಇವರು ಹಾಡುವ ಅನೇಕ ಹಾಡುಗಳು ಬದುಕಿಗೆ ಪಾಠಗಳಾಗಿವೆ. ಮುದಕವ್ವನ ಹಾಡುಗಳ ಸಂಗ್ರಹ ಮಾನವ ಜನಾಂಗದ ಸಂಸ್ಕೃತಿಯ ನಿಧಿಯಾಗಿದೆ.

**ಮುದುಕವ್ವ ಮಾದರ**
**ಅಂಚೆ : ಹಿರೇಗೊಣ್ಣಾಗರ**
**ತಾ : ಕುಷ್ಟಗಿ, ಜಿ : ಕೊಪ್ಪಳ**

# ಯಲ್ಲಪ್ಪ ರಾಜಪ್ಪ ಶಾಖಾಪುರ

ಕುಷ್ಟಗಿ ಹತ್ತಿರದ ಗುಮಗೇರಿ ಗ್ರಾಮದ ಯಲ್ಲಪ್ಪ ರಾಜಪ್ಪ ಶಾಖಾಪುರ ಭಜನೆ ಹಾಡುಗಾರ. ರಾಜಪ್ಪ-ಹನುಮವ್ವ ದಂಪತಿಗಳ ಎರಡನೇ ಮಗನಾಗಿ ಜನ್ಮ ಪಡೆದ ಯಲ್ಲಪ್ಪ ಓದಿದ್ದು ೭ನೇ ತರಗತಿ. ಹಾಡುಕಲಿತಿದ್ದು ತಂದೆಯಿಂದ. ತಂದೆ ಕೂಡ ಭಜನೆ ಹಾಡುಗಳಲ್ಲಿ ಪ್ರಸಿದ್ಧಿ ಪಡೆದಿದ್ದರು.

ನಾಡಿನ ಪ್ರತಿ ಗ್ರಾಮಗಳಲ್ಲಿ ಭಜನೆ ತಂಡ, ಭಜನೆ ಹಾಡುಗಾರರಿದ್ದೇ ಇರುತ್ತಾರೆಂದರೆ ಆಶ್ಚರ್ಯ ಪಡಬೇಕಿಲ್ಲ. ಗ್ರಾಮೀಣ ಜನರಲ್ಲಿ ಭಕ್ತಿ, ಶ್ರದ್ಧೆ, ನಂಬಿಕೆ ಇಂದಿಗೂ ಉಳಿದುಬಂದಿವೆ. ಹಬ್ಬ ಹರಿದಿನಗಳಲ್ಲಿ ಅಮವಾಸೆ, ಹುಣ್ಣಿಮೆಯಲ್ಲಿ ಅಷ್ಟೇ ಏಕೆ ಪ್ರತಿ ಸೋಮವಾರ, ಮಂಗಳವಾರ, ಗುರುವಾರ ಹೀಗೆ ವಾರಕ್ಕೊಮ್ಮೆ ಕೆಲವೆಡೆ ದಿನಂಪ್ರತಿ ದೇವಸ್ಥಾನಗಳಲ್ಲಿ ಭಜನೆ ಹಾಡು ಜರುಗುವುದುಂಟು. ಭಕ್ತಿಯಲ್ಲಿ, ಆರಾಧನೆಯಲ್ಲಿ ಹಾಡುವ ಹಾಡುಗಳು ಜೀವನದ ದಾರಿದೀಪವಾಗಿ ಉತ್ತಮ ಬದುಕಿಗೆ, ಉತ್ತಮ ನಡೆ-ನುಡಿಗಳಿಗೆ ಕಾರಣವಾಗಿ ಹೊರಹೊಮ್ಮುತ್ತವೆ.

ಯಲ್ಲಪ್ಪ ತನ್ನ ಹತ್ತನೇ ವಯಸ್ಸಿನಲ್ಲಿಯೇ ಭಜನಾ ತಂಡದಲ್ಲಿ ತೊಡಗಿ ಹಿರಿಯರ ಜೊತೆ ಹಾಡುತ್ತ ಹಾಡುತ್ತ ಸಾಧನೆಯಿಂದ ಉತ್ತಮ ಹಾಡುಗಾರನಾದ. ಗುಮಗೇರಿಯಲ್ಲಿ ಯಲ್ಲಪ್ಪ ಎಂದರೆ ಭಜನಾ ಹಾಡುಗಾರನೆಂದೇ ಗುರುತಿಸಿಕೊಳ್ಳುವ ಕಲಾವಿದ.

"ಶ್ರೀ ಅವಧೂತ ಶುಕಮುನಿ ಭಜನಾ ಬಂಡಳಿ" ತಂಡದ ನಾಯಕ. ಭಜನಾ ಹಾಡುಗಳ ಜೊತೆ ಉಪಯೋಗಿಸುವ ವಾದ್ಯಗಳಾದ ಹಾರ್ಮೋನಿಯಂ, ದಮ್ಮಡಿ, ಡಗ್ಗಾ, ಚೌಗಡ, ತಾಳ ಹೀಗೆ ಎಲ್ಲಾ ವಾದ್ಯಗಳನ್ನು ಹಾಡಿಗೆ ತಕ್ಕಂತೆ ನುಡಿಸುವುದನ್ನು ಯಲ್ಲಪ್ಪ ಕರಗತ ಮಾಡಿಕೊಂಡಿದ್ದಾನೆ.

ಭಕ್ತಿಯನ್ನೇ ಮೂಲವಾಗಿಟ್ಟುಕೊಂಡು ದೇವರನ್ನು ಆರಾಧಿಸುವ ಭಜನಾ ಹಾಡುಗಳನ್ನು ರಚಿಸಿದ ಅನುಭವ ಕವಿಗಳ ಹಾಡುಗಳನ್ನು ರಾಗ, ತಾಳ, ಲಯಬದ್ಧವಾಗಿ ಮಧುರ ಕಂಠದಿಂದ ಹಾಡಿದಾಗ ದಾರಿಕಾರ ಕೂಡ ನಿಂತುಕೇಳಿ ಆನಂದಿಸುವ, ಮೈಮರೆಯುವ ಸಂದರ್ಭಗಳು ಸಹಜ. ಯಲ್ಲಪ್ಪ ಹಾಡುಗಾರನಾಗಿ, ಭಜನಾ ತಂಡದ ಪ್ರಮುಖ ವ್ಯಕ್ತಿಯಾಗಿ ಸಲ್ಲಿಸಿದ ಸೇವೆ ಸ್ಮರಣೀಯ.

ಸುತ್ತಲು ಹಳ್ಳಿಗಳಲ್ಲಿ ಜಾತ್ರೆ, ಉತ್ಸವ, ಯಾವುದೇ ಮಂಗಲಕಾರ್ಯಕ್ರಮಗಳು ಜರುಗಿದಾಗ ಯಲ್ಲಪ್ಪನಿಗೆ ಆತನ ಭಜನಾ ತಂಡಕ್ಕೆ ಆಮಂತ್ರಣವಿದ್ದೇವಿರುತ್ತೆ. ಅಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಜನಾ ಹಾಡುಗಳಿಂದ ಆಕರ್ಷಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣನಾಗುತ್ತಾನೆ. ಭಕ್ತಿಯ ಸೇವೆಗೆ ಗೌರವಧನದ ಕಟ್ಟಳೆ, ನಿರ್ದಿಷ್ಟತೆ ಇಲ್ಲ. ಕೊಟ್ಟರೂ ಸರಿ ಕೊಡದಿದ್ದರೂ ಸರಿ ಭಕ್ತಿಯ ಸೇವೆ ಮಾತ್ರ ಸಾಗಿಬರುತ್ತದೆ.

೪೫–೪೬ರ ಪ್ರಾಯದ ಯಲ್ಲಪ್ಪನ ಉದ್ಯೋಗ ಬೇಸಾಯ. ಇಡೀ ದಿನ ಹೊಲದಲ್ಲಿ ದುಡಿದು ಬಂದು ಸಂಜೆ ದೇವಸ್ಥಾನದಲ್ಲಿ ಭಜನೆ ಹಾಡು ಹಾಡುತ್ತ ದಣಿದ ಮೈ–ಮನಸ್ಸು ಹಗುರುಗೊಳಿಸಿ ಕೊಳ್ಳುತ್ತ ಭಕ್ತಿಯಲ್ಲಿ, ಆರಾಧನೆಯಲ್ಲಿ ಖುಷಿಪಡುತ್ತಾನೆ, ಆನಂದಿಸುತ್ತಾನೆ. ತನ್ನ ಜೊತೆ ಜೊತೆ ಯುವಕರನ್ನು ಕರೆದುಕೊಂಡು ಹೊಸ ಹೊಸ ಹಾಡುಗಳನ್ನು ಹಾಡುತ್ತಾನೆ.

ನಾಗರಿಕತೆ ಬೆಳೆದು ಬಂದಂತೆ ಆಧುನಿಕತೆಯ ಗಾಳಿ ಹಳ್ಳಿಗಳಿಗೂ ಬೀಸುತ್ತಿದ್ದಂತೆ ಸಂಪ್ರದಾಯ, ಧಾರ್ಮಿಕ ಪರಂಪರೆ, ಭಕ್ತಿ ಶ್ರದ್ಧೆ ಮರೆಯಾಗುತ್ತಿರುವ ಈ ದಿನಗಳಲ್ಲಿ ಯಲ್ಲಪ್ಪನಂಥ ಹಿರಿಯರು ಯುವಕರನ್ನು ಕಟ್ಟಿಕೊಂಡು ಭಜನಾ ತಂಡ ಗಟ್ಟಿಗೊಳಿಸಿ ನಿರಂತರ ಭಜನಾ ಹಾಡುಗಳಿಂದ ಜನರಲ್ಲಿ ಭಕ್ತಿ–ಭಾವ ಉಳಿಯುವಂತೆ, ಬೆಳೆಯುವಂತೆ ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ.

"ನಿನ್ನ ಬಿಟ್ಟು ದೇವರಿಲ್ಲಾ ಈ ಭೂಮಿ ಮ್ಯಾಲೆ
ಕಾಡುಗಲ್ಲು ತಂದು ಕಟೆದು ಮೂರುತಿ ಮಾಡಿ
ದಿನಂಪ್ರತಿ ನೀವು ಸೇವೆ ಮಾಡತೀರಿ
ದೇಹವನು ನಡುಗಿಸಿ ದೇವರ ಹೇಳತೀರಿ
ಸತ್ಯುಳ್ಳ ಶರಣರ ಹಿಂದುಳಿಸೀರಿ"

ದೇವರು ಕಲ್ಲು ಮೂರುತಿಗಳಲಿಲ್ಲ. ಸತ್ಯವುಳ್ಳ ಶರಣನೇ ದೇವರು ಎನ್ನುವ ಅರ್ಥ ಬಿಂಬಿಸುವ ಈ ಹಾಡು ಯಲ್ಲಪ್ಪನಿಂದ ಕೇಳಿದಾಗ ಇನ್ನೂ ಪರಿಣಾಮ ಬೀರುತ್ತಿದೆ.

ಯಲ್ಲಪ್ಪ ಶಾಖಾಪುರ, ಜಿಲ್ಲೆಯ ಅನೇಕ ಭಾಗಗಳಲ್ಲಿ ಕಾರ್ಯಕ್ರಮ ನೀಡಿ ಭಜನಾತಂಡದಿಂದ ಚಿರಪರಿಚಿತ ಕಲಾವಿದ. ಕೊಪ್ಪಳ, ಕುಷ್ಟಗಿ, ದೋಟಿಹಾಳ, ಚಿಕ್ಕಳಕಿ

ಬಿಜಕಲ್, ಹೀಗೆ ಅನೇಕ ಗ್ರಾಮಗಳಲ್ಲಿ ಭಜನಾತಂಡದಿಂದ ಭಾಗವಹಿಸಿದ್ದುಂಟು. ಕೆಲವಡೆ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದು ಯಲ್ಲಪ್ಪನಿಗೆ ಊರವರಿಗೆ ಹೆಗ್ಗಳಿಕೆ.

ಯಲ್ಲಪ್ಪ ಹಾಡುಗಾರನಾಗಿ, ಭಜನಾತಂಡದ ಮುಖ್ಯಸ್ಥನಾಗಿ ಊರಿನ ಯುವಕರಲ್ಲಿ ಉತ್ಸಾಹ ತುಂಬುತ್ತ ಹೊಸಹೊಸ ಹಾಡುಗಾರರನ್ನು ನಿರ್ಮಿಸುತ್ತ ಗಮನಾರ್ಹ ವ್ಯಕ್ತಿಯಾಗಿದ್ದಾನೆ.

ಯಲ್ಲಪ್ಪ ರಾಜಪ್ಪ ಶಾಖಾಪುರ
ಗುಮಗೇರಿ
ತಾ : ಕುಷ್ಟಗಿ, ಜಿ : ಕೊಪ್ಪಳ

## ಶರಣಪ್ಪ ಪಿ. ಗಟ್ಟಿ

ಕುಷ್ಟಗಿ ತಾಲೂಕಿನ ತುಗ್ಗಲದೋಣಿ ಗ್ರಾಮದ ಶರಣಪ್ಪ ಮೋಹರಂ ಹಾಡುಗಾರ. ಮನೆಯಲ್ಲಿ ತಂದೆ, ಅಜ್ಜ ಹಾಡುತ್ತಲೇ ಬಂದ ಹಾಡುಗಾರರು. ಅವರ ಪ್ರಭಾವ ಸಹಜವಾಗಿ ಶರಣಪ್ಪನವರಿಗಾಗಿದೆ. ಪಿಡ್ಡಪ್ಪ-ವೀರಮ್ಮ ದಂಪತಿಗಳ ಎರಡನೆಯ ಮಗನಾಗಿ ೧೨-೭-೧೯೫೮ರಲ್ಲಿ ಜನ್ಮ ಪಡೆದಿದ್ದು. ಓದಿದ್ದು ೭ನೇ ತರಗತಿ.

ಮೋಹರಂ ಮುಸ್ಲಿಂರ ಹಬ್ಬವಾದರೂ ಉತ್ತರ ಕರ್ನಾಟಕದ ಎಲ್ಲಡೆ ಹಿಂದುಗಳೇ ಹೆಚ್ಚು ಭಾಗಿಯಾಗುತ್ತಾರೆ. ಇದೊಂದು ಭಾವೈಕ್ಯತೆಯ ಹಬ್ಬ. ಧರ್ಮಕ್ಕಾಗಿ ಹೋರಾಡಿ ಪ್ರಾಣತೆತ್ತ ಹುತಾತ್ಮರ ಹಬ್ಬವಿದು. ಅವರ ಆರಾಧನೆ, ಪ್ರಾರ್ಥನೆ ಅವರ ಹೋರಾಟ ಬಲಿದಾನವೇ ಹಾಡಿನ ಸಾರಂಶ. ವಿಜಾಪುರ, ರಾಯಚೂರು, ಬೀದರ, ಗುಲಬರ್ಗಾ. ಕೊಪ್ಪಳ ಜಿಲ್ಲೆಯಲ್ಲಿ ಇಂಥ ಹಾಡು ಹಾಡುವವರು ಹೆಚ್ಚು ಕಾಣಿಸಿಕೊಳ್ಳುತ್ತಾರೆ. ಕನ್ನಡದ ಈ ಹಾಡುಗಳಲ್ಲಿ ಉರ್ದು ಪದಗಳು ಹೆಚ್ಚು ಕೂಡಿರುವುದು ಸಹಜ. ಈ ಹಾಡುಗಳಿಗೆ ಕರ್ಬಲಾ ಹಾಡುಗಳೆಂದು, ರಿವಾಯತ್ ಹಾಡುಗಳೆಂದೂ ಕರೆಯುತ್ತಾರೆ.

ಈ ಹಾಡುಗಳ ಜೊತೆ ಐತಿಹಾಸಿಕ ಹುತಾತ್ಮರ ತ್ಯಾಗಿಗಳ ಬಗ್ಗೆಯೂ ಹಾಡುವುದುಂಟು. ಇಂಥ ಹಾಡುಗಳಿಂದ ಪ್ರಸಿದ್ಧಿ ಹೊಂದಿದ ಶರಣಪ್ಪ ಗುಲಬರ್ಗಾ ಆಕಾಶವಾಣಿ ಜಾನಪದ ಕಲಾವಿದನೂ ಹೌದು. ತಂದೆಯಿಂದಲೇ ಹಾಡು ಕಲಿತು ಅವರಿಗಿಂತ ಹೆಚ್ಚು ಆಕರ್ಷಿಸಿದ್ದುಂಟು. ತನ್ನ ಗ್ರಾಮದಲ್ಲಿ ಸುತ್ತಲೂ ಗ್ರಾಮಗಳಲ್ಲಿ ರಿವಾಯತ್ ಪದಗಳೆಂದರೆ ಶರಣಪ್ಪ ಗಟ್ಟಿ ಎನ್ನುವಷ್ಟು ಹೆಸರುವಾಸಿ. ಶರಣಪ್ಪ ತನ್ನ ೧೨ನೇ ವಯಸ್ಸಿನಲ್ಲಿಯೇ ಹಾಡಲು ಪ್ರಾರಂಭಿಸಿ ಇದುವರೆಗೂ ನಿರಂತರ ನಾಲ್ಕು ದಶಕಗಳಿಂದ ಹಾಡುತ್ತ ಬಂದಿದ್ದಾನೆ. ೬ ಜನರ ತಂಡದ ಈ ಹಾಡುಗಾರರಲ್ಲಿ ಶರಣಪ್ಪ

ಮುಂಚೆಗನಾಗಿ ಅದರ ಸಂಚಾಲಕ ಕೂಡ. ಮುಂದೆ ಈತ ಹಾಡಿದಾಗ ಉಳಿದವರೆಲ್ಲ ಹಿಂದೆ ಹಾಡುತ್ತಾರೆ. ಹಾಡುಗಳು ಸ್ಪಷ್ಟವಾಗಿ, ಅರ್ಥಗರ್ಭಿತವಾಗಿ, ಆಕರ್ಷಕವಾಗಿ ಕೇಳಿಬಂದು ಕೇಳುಗರನ್ನು ಆಕರ್ಷಿಸುತ್ತವೆ.

ಶರಣಪ್ಪ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾನೆ. ಕೊಪ್ಪಳದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೋಹರಂ ಹಾಡುಗಳಿಂದ ಸಾವಿರಾರು ಪ್ರೇಕ್ಷಕರ ಗಮನ ಸೆಳೆದಿದ್ದ. ಡಾ. ಎಚ್. ಎಲ್. ನಾಗೇಗೌಡರ "ಸಿರಿಗಂಧ" ಧಾರವಾಹಿ ಕಾರ್ಯಕ್ರಮದಲ್ಲಿ ಮೋಹರಂ ಹಾಡುಗಳಿಂದ ಆಕರ್ಷಿಸಿದ್ದಾನೆ. ಕುಷ್ಟಗಿ, ರಾಯಚೂರು, ದೇವದುರ್ಗ, ಕೊಪ್ಪಳ ಆನೆಗೊಂದಿ ಅನೇಕ ಕಡೆ ಆಮಂತ್ರಣದ ಮೇರೆಗೆ ಹೋಗಿ ಕಾರ್ಯಕ್ರಮ ಕೊಟ್ಟು ಬಂದಿರುವುದುಂಟು.

ಮೋಹರಂ ಹಬ್ಬದಲ್ಲಂತೂ ಅಪಾರ ಬೇಡಿಕೆಯ ಈ ಕಲಾವಿದ ತನ್ನ ತಂಡದಿಂದ ಹೋಗಿ ಹಾಡಿ ಮೋಹರಂ ಹಬ್ಬದ ಯಶಸ್ಸಿಗೆ ಕಾರಣನಾಗುತ್ತಾನೆ. ಸುತ್ತಲೂ ಹಳ್ಳಿಗಳಲ್ಲಿ ಶರಣಪ್ಪನ ತಂಡ ಇರಲೇಬೇಕು. ಹಿರಿರ ಹರೆಯದ ಶರಣಪ್ಪ ತಂದೆ, ತಾತನಂತೆ ಹೆಸರುವಾಸಿಯಾಗಿ ಅವರ ಕಲೆಯನ್ನೇ ಮುಂದುವರಿಸಿಕೊಂಡು ಬಂದಿದ್ದಾನೆ. ಅಭಿಮಾನಿಗಳು, ಕಲಾಸಕ್ತರು ಹಳ್ಳಿ ಹಳ್ಳಿಗಳಲ್ಲಿ ಸನ್ಮಾನಿಸಿ ಗೌರವಿಸಿದ್ದಾರೆ.

**ಶರಣಪ್ಪ ಪಿಡ್ಡಪ್ಪ ಗಟ್ಟಿ**
**ಸಾ : ತುಗ್ಗಲ ದೋಣಿ**
**ತಾ : ಕುಷ್ಟಗಿಮ ಜಿ : ಕೊಪ್ಪಳ**

## ಹನುಮವ್ವ ಹಡಪದ

ಕುಷ್ಟಗಿ ತಾಲೂಕಿನ ಕಲಾವಿದರ ಸಂದರ್ಶನಕ್ಕೆ ಹೋದಾಗ ಕುಷ್ಟಗಿಯ ಪ್ರಸಿದ್ಧ ಜಾನಪದ ಕಲಾವಿದ ಶರಣಪ್ಪ ವಡಗೇರಿ ಹನುಮವ್ವನನ್ನು ತನ್ನ ಸ್ನೇಹಿತನ ಮನೆಗೆ ಕರೆಯಿಸಿ ಸಂಪ್ರದಾಯದ ಹಾಡುಗಳನ್ನು ಹಾಡ ಹಚ್ಚಿದ ಸೋಬಾನ ಹಾಡು, ಬೀಸುಕಲ್ಲಿನ ಹಾಡು, ಜೋಗಳ ಹಾಡು ಹೀಗೆ ಅನೇಕ ಬಗೆಯ ಹಾಡುಗಳನ್ನು ಏಕಾಂಗಿಯಾಗಿ ಗಂಟೆಗಟ್ಟಲೆ ಹಾಡಿದಾಗ ಇನ್ನೂ ಕೇಳ ಬೇಕೆನಿಸುತ್ತಿತ್ತು. ಹಾಡಿನ ಧ್ವನಿ, ಹಾಡಿನ ಅರ್ಥ, ಸತ್ವ, ಸೊಗಸು ಎಲ್ಲವೂ ಆಕರ್ಷಿಸಿದವು.

"ಕಲ್ಲಿಗೆ ಮುಕ್ಕಾಕಿ, ಎಲ್ಲ ದೇವರ ನೆನವೆ
ಹುಲಿಗೆಮ್ಮ ನಮ್ಮ ಮನೆ ದೇವರು
ಹುಲಿಗೆಮ್ಮ ದೇವರ ನೆನದರೆ ಎಲ್ಲ ಭಾಗ್ಯ ನನಗಿಹದು"

*

"ಚೊಚ್ಚಲ ಬಸುರು, ಕಕ್ಕತ ಕಾರುತ
ಒಡ್ತಿಲವುಳ್ಳವರ, ಮನೆಮುರುಷ
ಕುತಗೊಂಡು
ಉತ್ತತ್ತಿ ತರಲೇನ"

*

"ಗುರುಲಗ್ನ ಮಾಡಿಕೊಂಡು
ಗುಣವಂತೆ ಮೈನೆರೆದು
ಸುರಗಿ ನೀರಿನ ಸುಖವೆಂದೆ ॥ ಸೋಬಾನ

ಹೀಗೆ ಅನೇಕ ಹಾಡುಗಳನ್ನು ಕೇಳುತ್ತಿದ್ದಾಗ ಅನಕ್ಷರಸ್ಥರಲ್ಲಿ ಎಂಥ ಪ್ರತಿಭೆ, ಎಂಥ ಕಾವ್ಯ ಶಕ್ತಿ ಅಡಗಿದೆಯಲ್ಲಾ ಎಂದು ಅಚ್ಚರಿಯಾಗುತ್ತದೆ ತವರು ಮನೆಯ ಪ್ರೀತಿ, ಅಣ್ಣ ತಮ್ಮಂದಿರ ವಾತ್ಸಲ್ಯ, ಗಂಡನ ಮೇಲಿನ ಭಕ್ತಿ, ಮಗುವಿನ ಆಟ ಪಾಠ

ಎಲ್ಲವೂ ಗರತಿಗೆ ಧ್ವನಿಯಾಗಿವೆ. ಕಾಲಕಾಲದಿಂದ ಒಬ್ಬರ ಬಾಯಿಂದ ಒಬ್ಬರ ಬಾಯಿಗೆ ಹರಿದು ಬಂದ ಈ ಕಾವ್ಯ "ಕುರಿತೋದದೆಯಿಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎನ್ನುವ ಕವಿಯ ಮಾತು ಅರ್ಥವತ್ತಾದುದು. ಏನೂ ಓದದ, ತರ್ಕಶಾಸ್ತ್ರ ತಿಳಿಯದ ಈ ಅನಕ್ಷರ ವಾಣಿಗಳಲ್ಲಿ ಹಾಡಿನಲ್ಲಿ ಎಂಥ ಶಕ್ತಿ, ಎಂಥ ಮೋಡಿ ಇದೆ ಎನ್ನುವುದು ಹಾಡುಗಳನ್ನು ಕೇಳುತ್ತಿದ್ದಂತೆ ಸ್ಪಷ್ಟವಾಗುತ್ತದೆ. ನಾಡಿನ ತುಂಬ ಹಳ್ಳಿ ಹಳ್ಳಿಗಳಲ್ಲಿ ಇಂಥ ಪ್ರತಿಭೆಗಳಿವೆ. ಇಂಥ ಕೋಗಿಲೆಗಳಿವೆ, ಇಂಥ ಮೋಡಿಗಳಿವೆ. ಎಲೆಮರೆಯ ಕಾಯಿಗಳಂತೆ, ಯಾರಿಗೂ ಗೊತ್ತಾಗದಂತನೇ ಇವರೆಲ್ಲ ಹೋಗಿಬಿಡುತ್ತಾರೆ.

ಇತ್ತೀಚಿಗೆ ಶರಣಪ್ಪ ವಡಗೇರಿ ಕುಷ್ಟಗಿಯಿಂದ ಫೋನ್ ಮಾಡಿ "ಸರ್ ನೀವು ಸಂದರ್ಶಿಸಿಕೊಂಡು ಹೋದ ಹನುಮವ್ವ ಹೋದಳು" ಎಂದಾಗ ನನಗೆ ಬಹಳ ನೋವೆನಿಸಿತು. ಕನಿಷ್ಟ ಈ ಪುಸ್ತಕ ಬರುವವರೆಗಾದರೂ ಇರಬಾರದಿತ್ತೆ ಎನಿಸಿತು. ಹಾಗೆ ನೋಡಿದರೆ ನಮ್ಮ ಜನಪದ ಕವಿಗಳು, ಕಲಾವಿದರು ಎಂದೂ ಪ್ರಚಾರ ಬಯಸಿದವರಲ್ಲ. ಸಾಹಿತಿಗಳಿಗೆ, ಕಲಾವಿದರಿಗಿರುವಂತೆ ಇವರಿಗೆ ಪ್ರಶಸ್ತಿ–ಪಾರಿತೋಷಕದ ಹಪಹಪಿ ಇರುವುದಿಲ್ಲ. ಆದರೂ ಹನುಮವ್ವನ ಅಗಲುವಿಕೆ ಕುಷ್ಟಗಿಯ ಜಾನಪದ ಸಂಪತ್ತೇ ಹೋದಂತಾಯಿತು. ಇಡೀ ಕೇರಿಗೆ, ಊರಿಗೆ ಬೇಕಾಗಿದ್ದ ಹನುಮವ್ವ ಯಾರ ಮನೆಯಲ್ಲಿಯೇ ಆಗಲಿ ಹುಡಿಗೆ ಋತುಮತಿಯಾದಾಗಾಗಲಿ, ಮದುವೆ ಸಂದರ್ಭವಾಗಲಿ, ಸೋಬಾನದ ದಿನವಾಗಲಿ ಅಲ್ಲಿ ಇದ್ದೇ ಇರುತ್ತಿದ್ದಳು.

ಹನುಮವ್ವ ಜನ್ಮ ಪಡೆದುದು ಹಿರೇಮನ್ನಾಪುರ ಗ್ರಾಮದ ಮುದಕಪ್ಪ ಈರಮ್ಮ ದಂಪತಿಗಳ ಮಗಳಾಗಿ, ಓದಿದ್ದು ಪ್ರಾಥಮಿಕ ಶಾಲೆಯ ಅಭ್ಯಾಸ. ಆವಾಗಿನಿಂದಲೇ ಹಾಡಿನಲ್ಲಿ ಆಸಕ್ತಿ. ಸಂಪ್ರದಾಯದ ಹಾಡು ಎಲ್ಲೇ ಕೇಳಿಬಂದರೆ ಸಾಕು ಅಲ್ಲಿ ಹೋಗಿ ಕೂತುಕೊಳ್ಳುವುದು, ಆಸಕ್ತಿಯಲ್ಲಿ ಕೇಳುವುದು ಕ್ರಮೇಣ ಕೇಳುತ್ತ ಕೇಳುತ್ತ ಹಾಡುಗಳು ಕಂಠ ಪಾಠವಾಗಿ ಬಿಡುತ್ತಿದ್ದವೆನ್ನುವ ಹನುಮವ್ವನಲ್ಲಿ ನೂರಾರು ಹಾಡುಗಳ ಸಂಗ್ರಹವಾಗಿದ್ದವು.

ಹನುಮವ್ವ ಅಕ್ಕ ಬಾಳವ್ವ ಇಬ್ಬರೂ ಕುಷ್ಟಗಿಯ ಒಂದೇ ಮನೆಗೆ ಸೊಸೆಯಂದಿರಾಗಿ ಬರುವುದನ್ನು ಊಹಿಸಿರಲಿಲ್ಲ. ಗಂಡನ ಮನೆಗೆ ಬಂದ ನಂತರವೂ ಅಕ್ಕತಂಗಿಯರೀರ್ವರ ಹಾಡುಗಳು ಹರಿದು ಬಂದವು. ಗಂಡ ಕಳಕಪ್ಪ ಪತ್ನಿಯ ಹಾಡುಗಾರಿಕೆಗೆ ಎಂದೂ ಅಡ್ಡಿಯಾಗಲಿಲ್ಲ. ಬೇರೆಯವರ ಮನೆಗೆ ಹೋಗಿ ಗಂಟೆಗಟ್ಟಲೆ ಹಾಡಿ ಬಂದರೂ ಅದು ಸಮಯವ್ಯರ್ಥ ಅಂದುಕೊಳ್ಳಲಿಲ್ಲ. ಇನ್ನೂ ಹೆಚ್ಚು ಹೆಚ್ಚು ಪ್ರೋತ್ಸಾಹಿಸಿದ್ದುಂಟೆಂದು ಸ್ಮರಿಸಿ ಕೊಳ್ಳುತ್ತಿದ್ದ ಹನುಮವ್ವನ ಹಾಡುಗಳೀಗ ಆಕೆಯನ್ನು ಕಳೆದುಕೊಂಡು ಅನಾಥವಾಗಿವೆ.

ದಿ. ಹನುಮವ್ವ ಹಡಪದ
ಡಂಬರ ಓಣಿ
ಕುಷ್ಟಗಿ, ಜಿ : ಕೊಪ್ಪಳ

## ವೆಂಕಟಸಿಂಗ ನರಸಿಂಗ ಬಾನು

ವೆಂಕಟಸಿಂಗ ಕರಡಿಮಜಲು ಕಲಾವಿದ. ಕುಷ್ಟಗಿ ಹತ್ತಿರದ ನಿಡಿಸೇಸಿ ಗ್ರಾಮದ ನರಸಿಂಗ ಬಾನು–ಭೀಮಾಬಾಯಿ. ಉಪ್ಪಾರ ಕೆಲಸ ಮಾಡಿಕೊಂಡಿದ್ದ ಕೂಲಿಕಾರರ ಮಗ. ೬೫–೬೮ರ ಈ ಹಿರಿಯ ಕಲಾವಿದ ಈಗ ಗಂಭೀರ ಆರ್ಥಿಕ ಪರಿಸ್ಥಿತಿ ಎದುರಿಸುತ್ತಿದ್ದಾನೆ. ಶಿಕ್ಷಣ–ಓದು ಬಹು ದೂರದ ಮಾತು. ಕರಡಿ ಹಾಗೂ ಚೌಷ ನುಡಿಸುವಲ್ಲಿ ಹೆಸರುವಾಸಿ.

ತಂದೆ ನರಸಿಂಗ ಬಾನು ಕೂಡ ಕರಡಿಮಜುಲು ಕಲಾವಿದ. ತಂದೆಯಿಂದಲೇ ಕಲಿತಿದ್ದು, ಬೆಳೆದಿದ್ದು, ಸಾಧಿಸಿದ್ದು. "ಜೈ ಹನುಮಾನ ಕರಡಿ ಮಜಲು ಸಂಘ" ನಿಡಿಸೇಸಿ ದಿ. ಸಂಜೀವಪ್ಪ ಹಾವರಗಿ ಇವರ ನೇತೃತ್ವದಲ್ಲಿ ನಾಡಿನ ನಾನಾ ಭಾಗಗಳಲ್ಲಿ ಕಲಾ ಪ್ರದರ್ಶನ ನೀಡಿದ್ದುಂಟು. ರಾಯಚೂರು, ಕೊಪ್ಪಳ, ಬೆಂಗಳೂರುಗಳಲ್ಲಿ ಪ್ರದರ್ಶನ ನೀಡಿ ಆಕರ್ಷಿಸಿದ್ದುಂಟು ಸುತ್ತಲೂ ಹಳ್ಳಿಗಳಲ್ಲಂತೂ ಲೆಕ್ಕವಿಲ್ಲದಷ್ಟು ಕಾರ್ಯಕ್ರಮ ನೀಡಿದ್ದಾರೆ. ಜಾತ್ರೆ–ಉತ್ಸವ, ವೀರಭದ್ರದೇವರ ಗುಗ್ಗಳ, ಮದುವೆ ಹೀಗೆ ಅನೇಕ ಮಂಗಲ ಕಾರ್ಯಗಳ ಸಂದರ್ಭದಲ್ಲಿ ಈ ತಂಡಕ್ಕೆ ಆಮಂತ್ರಣ ವಿದ್ದೇವಿರುತ್ತಿತ್ತು.

ವೆಂಕಟಸಿಂಗ ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿಯೇ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ದೀರ್ಘಸೇವೆ ಸಲ್ಲಿಸಿದ್ದುಂಟು. ಕರಡಿ, ಚೌಗಡ, ದಿಮ್ಮ, ತಾಳ ಹೀಗೆ ಎಲ್ಲಾ ವಾದ್ಯಗಳನ್ನು ನುಡಿಸುವ ಈ ಕಲಾವಿದ ಜನಮನ ಸೆಳೆದ ಕಲಾವಿದ. ಊರಿನ ಹೊಸಪೀಳಿಗೆಗೆ ವೆಂಕಟಸಿಂಗನ ಕಲಾ ಬದುಕು ಗೊತ್ತಿಲ್ಲದಿದ್ದರೂ ಹಿಂದಿನ ಹಿರಿಯರು ಮಾತ್ರ ಈ ಕಲಾವಿದನ ಪ್ರದರ್ಶನದ ಬಗ್ಗೆ ಹೇಳುತ್ತಾರೆ.

ಕರಡಿ ಮಜಲು ಕಾರ್ಯಕ್ರಮದಲ್ಲಿ ಕರಡಿನೇ ಪ್ರಮುಖ ವಾದ್ಯ. ಇದೊಂದು ಚರ್ಮವಾದ್ಯ ಇದರ ಜೊತೆಗೆ ಶಹನಾಯಿ ಕೂಡ ಪ್ರಮುಖವಾಗುತ್ತದೆ. ತಾಳ, ದಿಮ್ಮ ಚೌಗಡ ಹೀಗೆ ಹತ್ತರಿಂದ ಹನ್ನೆರಡು ಜನರಿರುವ ಕಲಾತಂಡವಿದು. ಉತ್ತರ ಕರ್ನಾಟಕದಲ್ಲಿ

ಬಹು ಆಕರ್ಷಕ ಕಲೆ ಇದು. ವಿಶೇಷವಾಗಿ ಮಂಗಲಕಾರ್ಯಗಳಲ್ಲಂತೂ ಇದ್ದೇ ಇರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ಯಲಬುರ್ಗಾ, ಗಂಗಾವತಿ, ಕುಷ್ಟಗಿ ತಾಲೂಕುಗಳಲ್ಲಿ ಹೆಚ್ಚು ಕಲಾತಂಡಗಳನ್ನು ಕಾಣಬಹುದು.

ಗಂಗಾವತಿಯ ನಿಡಿಸೇಸಿಯಲ್ಲಿ ವೆಂಕಟಸಿಂಗನ ನಂತರ ಕಲಾವಿದರು ಹುಟ್ಟಿಕೊಳ್ಳದಿದ್ದುದು ನಿರಾಶಾದಾಯಕ ಆಧುನಿಕ ಈ ದಿನಗಳಲ್ಲಿ ಮನರಂಜನೆಯ ಅನೇಕ ಮಾಧ್ಯಮಗಳಲ್ಲಿ ಜಾನಪದ ಕಲೆಗಳ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ವಿಷಾದದ ಸಂಗತಿ. ಅಳಿದುಳಿದ ಕಲೆ-ಕಲಾವಿದರನ್ನೂ ಗುರುತಿಸದೇ ಹೋಗುತ್ತಿರುವುದು ದುರದೃಷ್ಟಕರ. ವೆಂಕಟಸಿಂಗನಂಥ ಕಲಾವಿದರು ಮೂಲೆಗುಂಪಾಗಿ ಯಾರೂ ಗುರುತಿಸಿದ ಅಜ್ಞಾತವಾಸದ ಕಲಾವಿದರಾಗಿದ್ದಾರೆ. ಈತನನ್ನು ಹುಡಿಕಿಕೊಂಡು ಹೋದಾಗ ಊರಮುಂದಿನ ಹೊಲದ ಬೇವಿನ ಗಿಡದಡಿ ಮಲಗಿದ್ದ. ತನ್ನನ್ನು ಸಂದರ್ಶಿಸಲು ಬಂದಿದ್ದೇವೆಂದು ಹೇಳಿದಾಗ ಖುಷಿಪಟ್ಟ. ತನ್ನೆಲ್ಲ ಕಥೆ-ವ್ಯಥೆ ಹೇಳಿದ. ಭೂಮಿಯಿಲ್ಲ, ಈ ವಯಸ್ಸಿನಲ್ಲಿ ಕೂಲಿಕೆಲಸ ಸಾಧ್ಯವಿಲ್ಲ. ಮೂರು ಜನ ಹೆಣ್ಣು ಮಕ್ಕಳು ಒಬ್ಬ ಗಂಡುಮಗ ಜವಾಬ್ದಾರಿಗಳು ಸಾಕಷ್ಟು. ಮಾಸಾಶನಕ್ಕಾಗಿ ನಮ್ಮಲ್ಲಿ ಮೊರೆಯಿಟ್ಟಾಗ ಮರುಕೆನಿಸಿತು.

**ವೆಂಕಟಸಿಂಗ ನರಸಿಂಗ್‌ಬಾನು**
**ಅಂಚೆ : ನಿಡಸೇಸಿ**
**ತಾ : ಕುಷ್ಟಗಿ ಜಿ : ಕೊಪ್ಪಳ**

## ಭಾಷಾಸಾಬ ಮಹ್ಮದ ಹುಸೇನಸಾಬ

ನಿಮ್ಮ ಕಾಲದ ಜಾನಪದ ರಂಗಭೂಮಿ ಇಂದಿನ ರಂಗಭೂಮಿ ಆಗಿನ ಪ್ರೇಕ್ಷಕರ ಬಗ್ಗೆ ಇಂದಿನ ಪ್ರೇಕ್ಷಕರ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಎಂದು ಕೇಳಿದಾಗ

"ಸರ್ ಆಗಿನ ವೈಭವವೇ ಬೇರೆ ಆಗಿನ ಪ್ರೇಕ್ಷಕರೇ ಬೇರೆ ಈಗ ಆ ರಂಗಭೂಮಿನೂ ಇಲ್ಲ, ಅಂಥ ಪ್ರೇಕ್ಷಕರೂ ಇಲ್ಲ. ಈಗಿನ ಪೀಳಿಗಿಗೆ ಆಸಕ್ತಿ ಇಲ್ಲ ಸರ್. ಇವರಿಗೆ ಟಿ. ವ್ಹಿ. ಸಿನಿಮಾನೇ ಬೇಕು. ಬಯಲಾಟ, ಡಪ್ಪಿನಾಟ ತೀರ ಕಡಿಮೆ ಆಗಿವೆ. ನಮ್ಮ ಕಾಲದಲ್ಲಿ ಪ್ರೇಕ್ಷಕರು ರಾತ್ರಿ ಹತ್ತರಿಂದ ಬೆಳಗಾಗೋತನಕ ಕುತೂಹಲದಿಂದ ಕೂತು ನೋಡುತ್ತಿದ್ದರು. ಈಗಿನವರು ಬೆಳತನ ನಿದ್ದಿಗೆಟ್ಟು ಯಾರ ನೋಡ್ತಾರ ಅದನ ಅಂತಾರ. ಅಂದಿನ ವೈಭವ ನೋಡಿದವರು ನಾವೇ ಇಂದಿನ ಅವನತಿ ನೋಡೋರು ನಾವೆ. ಕಾಲ ಎಲ್ಲಾ ಬದಲಾಗತಾ ಇದೆ ಸರ್."

ಭಾಷಾಸಾಬರು ನೊಂದು ಹೇಳಿದ ಮಾತುಗಳಿವು. ಸತ್ಯಸಂಗತಿಯೂ ಹೌದು. ಹಳ್ಳಿಗಳಲ್ಲಿಯೂ ನಾಗರಿಕತೆಯ ಗಾಳಿಯಿಂದ ಸಿನಿಮಾ, ಟಿ. ವ್ಹಿ.ಗಳಂಥ ಮಾಧ್ಯಮಗಳಿಂದ ಜಾನಪದ ರಂಗಭೂಮಿ ಬಡವಾಗಿದೆ. ಆ ದಿನಗಳಲ್ಲಿ ಪ್ರತಿ ಜಾತ್ರೆ, ಉರುಸು, ಉತ್ಸವಗಳಂಥ ಸಂದರ್ಭದಲ್ಲಿ ಓಣಿಗೊಂದರಂತೆ ಒಂದೇ ಊರಲ್ಲಿ ಎರಡು ಮೂರು ಬಯಲಾಟಗಳಾಗಲಿ, ಡಪ್ಪಿನಾಟಗಳಾಗಲಿ ಪ್ರಯೋಗಗೊಳ್ಳುತ್ತಿದ್ದವು. ಈಗ ವರ್ಷಕ್ಕೊಮ್ಮೆ ಅದೂ ಎಲ್ಲೋ ಕೆಲವರ ಆಸಕ್ತಿ ಮೇರೆಗೆ.

ಭಾಷಾಸಾಬ ವೃತ್ತಿಯಿಂದ ಸರಕಾರಿ ವಾಹನ ಚಾಲನಕನಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಹಿರಿಯ ನಾಗರಿಕ, ಹಿರಿಯ ಜಾನಪದ ರಂಗ ಕಲಾವಿದ, ರಂಗ ನಿರ್ದೇಶಕ ಡಪ್ಪಿನಾಟದ ಮಾಸ್ತರ. ಓದಿದ್ದು ಕಡಿಮೆಯಾಗಿದ್ದರೂ

ಜೀವನಾನುಭವದಲ್ಲಿ ಕಲಿತದ್ದು ಹೆಚ್ಚು. ಪದಿಹರೆಯದಲ್ಲಿ (೨೨ನೇ ವಯಸ್ಸಿನಲ್ಲಿ) "ಸಂಗ್ಯಾ ಬಾಳ್ಯಾ" ಆಟದಲ್ಲಿ ಚಿಕ್ಕ ಪಾತ್ರದಿಂದ ರಂಗಪ್ರವೇಶಿಸಿ ರಂಗದಲ್ಲಿ ಆಕರ್ಷಿಸಿದವರು.

ಕುಷ್ಟಗಿಯ ಮಹ್ಮದಹುಸೇನಸಾಬ ಮೈಬೂಬಬಿ ರೈತ ದಂಪತಿಗಳ ಏಕಪುತ್ರನಾಗಿ ಬೆಳೆದ ಭಾಷಾಸಾಬ ೭೭ರ ಅಂಚಿನಲ್ಲಿದ್ದರೂ ಆಸಕ್ತಿ ಕಳೆದುಕೊಂಡಿಲ್ಲ. ಬಯಲಾಟ, ಡಪ್ಪಿನಾಟದ ವಿಷಯ ಬಂದಿತೆಂದರೆ ನಿರರ್ಗಳ ಮಾತುಗಳು. ಅನುಭವದ ಅನುಭವಿಸಿದ ಹತ್ತಾರು ಪ್ರಸಂಗಗಳು ಗಮನಾರ್ಹ.

ಭಾಷಾಸಾಬ ಡಪ್ಪಿನಾಟ ಕಲಿತಿದ್ದು, ನಿರ್ದೇಶನ, ಮಾರ್ಗದರ್ಶನ ಪಡೆದಿದ್ದು ಕುಷ್ಟಗಿಯ ಮೋದಿನಸಾಬ ಎಲಿಗಾರ ಅವರಿಂದ. ಆಗ ಆ ಭಾಗದ ಪ್ರಸಿದ್ಧ ರಂಗ ನಿರ್ದೇಶಕ. ಮೋದಿನಸಾಬ, ಸಂಗೀತ, ಹಾಡು, ವಾದ್ಯ ನುಡಿಸುವಿಕೆ ಎಲ್ಲದರಲ್ಲಿಯೂ ಪ್ರಸಿದ್ಧಿ. ಸುಮಾರು ಮೂರು-ನಾಲ್ಕು ತಿಂಗಳು ತಾಲೀಂ ನೀಡಿ ರಂಗಭೂಮಿಗೆ ತಂದರೆ ರಂಗಕ್ಕೆ ರಂಗೇರುತಿತ್ತು. ಪ್ರಯೋಗ ಭಾರೀ ಯಶಸ್ಸು ಪಡೆದು ಸುತ್ತಲು ಹಳ್ಳಿಗರ ಮನೆಮಾತಾಗುತಿತ್ತು ಎನ್ನುವ ಅವರ ಮಾತು ಗುರುವಿನ ಪ್ರತಿಭೆ ಹಾಗೂ ಗೌರವದ ಮಾತುಗಳಾಗಿದ್ದವು.

ಭಾಷಾಸಾಬ ಕೂಡ ಗುರುವಿನ ಕೀರ್ತಿಯಷ್ಟೇ ಹೆಸರು ಮಾಡಿದವರು. ನಾಲ್ಕು ದಶಕಗಳ ರಂಗಾನುಭವ, ನುರಿತ ನಿರ್ದೇಶನ, ಡಪ್ಪಿನ ವಾದ್ಯ ಹಾಡುಗಾರಿಕೆ ಎಲ್ಲವೂ ಜಾನಪದ ರಂಗಭೂಮಿಗೆ ಸಲ್ಲಿಸಿದ ಸೇವೆ. ಹತ್ತಿರದ ಶಾಖಾಪುರದಲ್ಲಿ ಹನ್ನೆರಡು ವರ್ಷ ನಿರಂತರ ಕಡ್ಲಿಮಟ್ಟಿ ಸ್ಟೇಶನ ಮಾಸ್ತರ ಕಥೆಯನ್ನು ಆಡಿಸಿದ್ದು ಆ ಭಾಗದಲ್ಲಿ ದಾಖಲೆ. ನಿರಂತರ ಆಟದ ಸುಗ್ಗಿಯೇ ಸುಗ್ಗಿ. ಹಾಗೆ ಮೇಲಿಂದ ಮೇಲೆ ಪ್ರಯೋತಿಸಿದಾಗ ಹುಟ್ಟಿಕೊಂಡ ಕಲಾವಿದರು ನೂರಾರು.

ಸಂಗ್ಯಾಬಾಳ್ಯಾ, ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ, ಬಸವಂತ-ಬಲವಂತ, ಬಾಲ ಬಿಕ್ಷುಕ ರಾಜನ ಕಥೆ, ಬಾಷಾಸಾಬ ನಿರ್ದೇಶಿಸಿ ಪ್ರಯೋಗಿಸಿದ ಕಥೆಗಳು. ಕುಷ್ಟಗಿ ತಾಲೂಕಿನ ಸುತ್ತಲೂ ಹಳ್ಳಿಗಳಿಗೆ ಹೋಗಿ ಕಲಿಸಿ ಪ್ರಯೋಗಿಸಿ ಬರುತ್ತಿದ್ದರು. ಸರಕಾರಿ ನೌಕರಿಯಲ್ಲಿಯೂ ಸಮಯ ಕಲ್ಪಿಸಿಕೊಂಡು ಪ್ರಯೋಗಿಸುತ್ತಿದ್ದುದು ಅವರ ಆಸಕ್ತಿಯನ್ನು ಸ್ಪಷ್ಟಪಡಿಸುತ್ತಿದೆ. ಇಡೀ ದಿನ ವಾಹನ ಚಾಲಕನಾಗಿ ಕಾರ್ಯನಿರ್ವಹಿಸಿ ಬಂದು ಮತ್ತೆ ರಾತ್ರಿಯಲ್ಲಿ ಆಟ ಕಲಿಸುವುದು ಹಾಗೆ ಕಲಿಸುವಾಗ, ಹಾಡುವಾಗ, ಡಪ್ಪು ಬಾರಿಸುವಾಗ ದಿನದ ದಣಿವೆಲ್ಲ ಹೋಗಿ ಮೈ-ಮನಸ್ಸು ಹಗುರಾಗುತ್ತಿತ್ತು ಎನ್ನುವ ಅವರ ಮಾತು ಗಮನಾರ್ಹ.

ಭಾಷಾಸಾಬನ ಶಿಷ್ಯನಾಗಿ ಹೊರಬಂದ ಶಿವಪ್ಪ ಹೊಳಿಯಪ್ಪ ಕೂಡ ಸಣ್ಣಾಟದ ಮಾಸ್ತರನಾಗಿ ಸೇವೆಗೈದದ್ದುಂಟು. ಇಂಥ ಶಿಷ್ಯರಿಂದ, ಕಲಾವಿದರಿಂದ

ತಮಗೆ ತೃಪ್ತಿ ಇದೆ. ತಮ್ಮ ಕಲೆ, ತಮ್ಮ ನಿರ್ದೇಶನ ಸಾರ್ಥಕ ಎನ್ನುವ ಧನ್ಯತೆಯ ಭಾವ ಭಾಷಾಸಾಬ ಅವರದು.

ಪತ್ನಿ ಹುಸೇನಬಿ ಕೂಡ ಇವರ ಕಲೆಗೆ ಪೂರಕವಾಗೇ ಬಂದವರು. ಮಕ್ಕಳೂ ಕೂಡ ತಂದೆಯ ಕಲೆಗೆ ಅಭಿಮಾನ ಪಟ್ಟವರು. ಮಕ್ಕಳೆಲ್ಲ ಪದವೀಧರರು. ಒಳ್ಳೆ ಹುದ್ದೆಯಲ್ಲಿದ್ದವರು. ಭಾಷಾಸಾಬ ಅವರು ಕಲೆ-ಬದುಕು ಸಾರ್ಥಕತೆ ಪಡೆದುಕೊಂಡಿವೆ.

**ಭಾಷಾಸಾಬ ಹೊಕ್ಕಳ**
**ಕುಷ್ಟಗಿ, ಜಿ : ಕೊಪ್ಪಳ**

## ಸಂಗಪ್ಪ ಬಸಪ್ಪ ದೊಡ್ಡಬಸಪ್ಪನವರ್

ಕುಷ್ಟಗಿ ತಾಲೂಕಿನ ಜಾಲಿಹಾಳ ಗ್ರಾಮದ ಸಂಗಪ್ಪ ಭಜನಾ ಹಾಗೂ ತತ್ವಪದಗಳ ಹಾಡುಗಾರ. ಬಸಪ್ಪ-ಬಂದಮ್ಮ ದಂಪತಿಗಳ ಮಗ. ಒಬ್ಬ ಸಹೋದರಿ. ಶಿಕ್ಷಣವಿಲ್ಲ.

ಬಾಲ್ಯದಲ್ಲಿಯೇ ಭಜನಾ ಹಾಡುಗಳಲ್ಲಿ ಆಸಕ್ತಿ ಹೊಂದಿರುವ ಸಂಗಪ್ಪ ಊರಿನ ಭಜನಾ ತಂಡದಲ್ಲಿ ಭಾಗವಹಿಸುತ್ತ ಬೈಲಪ್ಪ ಜಾಲಿಹಾಳ ಅವರಿಂದ ಹಾಡುಗಾರಿಕೆ ಕಲಿತು ಸಧ್ಯ ನೂರಾರು ಹಾಡುಗಳ ಸಂಗ್ರಹದಿಂದ ನಿರರ್ಗಳ ಹಾಡುಗಾರಿಕೆಯ ಕಲಾವಿದ.

ನಿಜಗುಣ ಶಿವಯೋಗಿಗಳ, ಶರೀಫ ಸಾಹೇಬರ, ಕಡಕೋಳ ಮಡಿವಾಳಪ್ಪನವರ, ವಡಕಿ ತಾತನ ತತ್ವಪದಗಳನ್ನು ಹಾಡುತ್ತ ಆಕರ್ಷಿಸಿರುವ ಸಂಗಪ್ಪ ತಾಳ, ತಂಬೂರಿ, ಡಗ್ಗಾ, ದಮಟೆ ವಾದ್ಯಗಳನ್ನು ನುಡಿಸುತ್ತಾರೆ. ಭಜನಾ ತಂಡದಿಂದ ತಿಂತಿಣಿ, ದೋಡಿಹಾಳ, ಅಂಕಲಿ, ಬಿಜಕಲ್ ಹೀಗೆ ಹಲವಾರು ಕಡೆ ಕಾರ್ಯಕ್ರಮ ಕೊಟ್ಟು ಬಂದ ಈ ಕಲಾವಿದ ಸುತ್ತಲೂ ಹಳ್ಳಿಗಳಲ್ಲಿ ಪ್ರಸಿದ್ಧಿ ಪಡೆದಿದ್ದಾನೆ.

ಅನೇಕ ತತ್ವಪದಕಾರರ ಹಾಡುಗಳಲ್ಲದೆ ಆ ಭಾಗದ ಸಾಹಿತಿಗಳು ರಚಿಸಿದ ಭಕ್ತಿಗೀತೆಗಳನ್ನು ಭಜನಕ್ಕಳವಡಿಸಿ ಹಾಡುವ ಸಂಗಪ್ಪ ಶರಣರ ವಚನಗಳನ್ನು ಭಜನೆಯಲ್ಲಿ ಅಳವಡಿಸಿಕೊಂಡಿದ್ದಾನೆ. ಆ ಭಾಗದ ಗ್ರಾಮ ದೇವತೆಗಳನ್ನು ಕುರಿತು ರಚಿಸಿದ ಹಾಡುಗಳೂವುಂಟು. ಭಕ್ತಿಯನ್ನೇ ಪ್ರಮುಖವಾಗಿಟ್ಟು ಅನುಭಾವಿಗಳು ರಚಿಸಿದ ಹಾಡುಗಳನ್ನು ರಾಗಬದ್ಧವಾಗಿ ಹಾಡಲು ಪ್ರಾರಂಭಿಸಿದರೆ ಕೇಳುಗರು ಕುಳಿತಲ್ಲಿಯೇ ತನ್ಮಯತೆ ಪಡೆದು ತಲೆದೂಗಬೇಕು.

ಭಜನಾ ಹಾಡುಗಳು, ತತ್ವಪದಗಳು ಒಬ್ಬರಿಂದೊಬ್ಬರು ಹಾಡುತ್ತ ಮಹತ್ವಪೂರ್ಣ ನಾಡಿನ ಬೆಳಕಾಗಿವೆ. ಕನ್ನಡ ಮೌಲಿಕ ಸಾಹಿತ್ಯ ರಾಶಿಯಲ್ಲಿ ಇಂಥ ಹಾಡುಗಳದೇ ಬಹುಪಾಲು ಅಷ್ಟೇ ಆಕರ್ಷಕ.

ಸಂಗಪ್ಪ ಉತ್ತಮ ಹಾಡುಗಾರರಲ್ಲೊಬ್ಬ. ಊರಿನ ಭಜನಾ ತಂಡದಲ್ಲಿ ಗುರುತಿಸುವಂತಹ ವ್ಯಕ್ತಿ. ಚಿಕ್ಕಂದಿನಿಂದಲೇ ಸುಮಾರು ಹತ್ತು ವರ್ಷದ ಬಾಲಕನಿದ್ದಾಗಿನಿಂದ ಹಾಡುತ್ತ ಬಂದಿರುವ ಈ ಕಲಾವಿದ ಭಜನಾ ತಂಡದಿಂದ ದೀರ್ಘ ಸೇವೆ ಸಲ್ಲಿಸುತ್ತ , ಬರುವ ಪೀಳಿಗೆಗೆ ಪ್ರೋತ್ಸಾಹಿಸುತ್ತ ತನ್ನ ಅಳಿಲು ಸೇವೆ ಸಲ್ಲಿಸುತ್ತಿದ್ದಾನೆ.

ಬೇಸಾಯವನ್ನೇ ಉದ್ಯೋಗ ಮಾಡಿಕೊಂಡಿರುವ ಈ ಕಲಾವಿದನಿಗೆ ಇಬ್ಬರು ಗಂಡು ಮಕ್ಕಳು.

ಸಂಗಪ್ಪ ಬಸಪ್ಪ ದೊಡ್ಡಬಸಪ್ಪನವರ
ಅಂಚೆ : ಜಾಲಿಹಾಳ
ತಾ : ಕುಷ್ಟಗಿ, ಜಿ : ಕೊಪ್ಪಳ

# ದುರಗಪ್ಪ ಗೆನ್ನಕ್ಕಿ

ಸುಗ್ಗಿಯ ಹಾಡುಗಳಲ್ಲಿ ಹಂತಿಯ ಹಾಡುಗಳು ಪ್ರಮುಖವಾಗಿ ಕೇಳಿಬರುವ ಹಾಡುಗಳು. ಇಡೀ ವರ್ಷ ಬೆಳೆದ ಬೆಳೆಯನ್ನು ರಾಶಿಮಾಡಿ ಪಡೆಯುವ ಕಾಲ. ಹೊಲದಲ್ಲಿ ಖಣ ಮಾಡಿ ಬೆಳೆದ ತೆನೆಗಳನ್ನು ಕೊಯ್ದು ಖಣದಲ್ಲಿ ಹಾಕಿ ಎತ್ತು ಕಟ್ಟಿ ತುಳಿಸುತ್ತ ತಿರುಗುವಾಗ ಹಾಡುವ ಹಾಡುಗಳೇ ಹಂತಿ ಹಾಡುಗಳು. ಈ ಹಾಡುಗಳಲ್ಲಿ ಬಸವಣ್ಣನನ್ನು (ಎತ್ತುಗಳನ್ನು) ಸ್ಮರಿಸುತ್ತ ರಾಶಿಯು ಹುಲುಸಾಗುವಂತೆ ಪ್ರಾರ್ಥಿಸುತ್ತ ಹಾಡುವುದೇ ಹೆಚ್ಚು.

"ಹಂತಿಯ ಹೂಡುತಲೆ ಬಸವ ಬಂದು
ಆಸೇನು ಈ ಸೇನು ಎಸುಂದ ಹಂತಿ ತುಳಿದಾನ ॥

ಇಂಥ ಅನೇಕ ಹಾಡುಗಳನ್ನು ಹಾಡುತ್ತ ಎಷ್ಟೋ ರಾಶಿಗಳನ್ನು ಮಾಡುತ್ತ ಬಂದಿರುವ ೮೦ರ ದುರಗಪ್ಪನನ್ನು ಸಂದರ್ಶಿಸಿದಾಗ ತನ್ನ ಕಾಲದ ವೈಭವ ದಿನಗಳನ್ನು ಮಳೆ-ಬೆಳೆಯನ್ನು ಕುರಿತು ಹೇಳುತ್ತ ಇಂದಿನ ಸ್ಥಿತಿ-ಗತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿದನು.

ಕಾಲಗತಿಸಿದಂತೆ ಒಕ್ಕಲಿಗನೂ ಬದಲಾಗುತ್ತ ಆಧುನಿಕ ಬದುಕಿಗೆ ಬದ್ಧನಾಗಿದ್ದಾನೆ. ಇಂದು ಹಂತಿಯಾಗಲಿ, ಹಂತಿ ಹಾಡಾಗಲಿ ಮರೆಯಾಗಿ ಹೋಗಿವೆ. ಈಗ ರಾಶಿ ಮಾಡುವ ಯಂತ್ರ, ಗಾಳಿಗಾಗಿ ಮೇಟಿ ಮೇಲೆ ನಿಂತು ಕಾಯಬೇಕಿಲ್ಲ, ಗಾಳಿಗೂ ಯಂತ್ರ. ರೈತಕೂಡ ಎಲ್ಲಾ ಸಂಪ್ರದಾಯಗಳನ್ನು ಕೈಬಿಟ್ಟು ಯಾಂತ್ರಿಕನಾಗಿದ್ದಾನೆ.

ದುರಗಪ್ಪನಂಥ ಹಿರಿಯ ರೈತರು, ಹಂತಿಪದ ಹಾಡುವ ಕಲಾವಿದರು. ಈಗೆಲ್ಲಿಯೂ ಕಾಣಿಸುತ್ತಿಲ್ಲ. ಇಂಥ ಹಿರಿಯರಿಂದ ಮನೆಯಲ್ಲಾದರೂ ಹಾಡಿಸಿ ಕೇಳುವ ಭಾಗ್ಯ. ಮುಂದಿನ ತಲೆಮಾರಿಗೆ ಪುಸ್ತಕದಲ್ಲಿ ಮಾತ್ರ ಓದುವ ಪ್ರಸಂಗ.

ದುರಗಪ್ಪ ಜನ್ಮ ತಾಳಿದ್ದು ಕುಷ್ಟಗಿಯ ರೈತ ಮನೆತನದ ಕುರುಬ ಜನಾಂಗದಲ್ಲಿ. ಶ್ರೀ ದುರಗಪ್ಪ ಏಕೈಕ ಮಗನಾಗ. ಶಾಲೆಗೆ ಹೋಗಿ ಶಿಕ್ಷಣ ಪಡೆಯದಿದ್ದರೂ ಲೋಕಾನುಭವದಿಂದ, ಜೀವನಾನುಭವದಿಂದ ಪಡೆದಿದ್ದು ಹೆಚ್ಚು. ಶಿಕ್ಷಣ ಪಡೆಯುದಿದ್ದರೂ ಹಾಡುಗಳು ಸ್ಪಷ್ಟವಾಗಿ, ಅರ್ಥಪೂರ್ಣವಾಗಿ ಲಯಬದ್ಧವಾಗಿ ಹೊರ ಹೊಮ್ಮುತ್ತವೆ.

ಹದಿಹರೆಯದಲ್ಲಿಯೇ ಸುಗ್ಗಿಯ ಹಾಡುಗಳನ್ನು, ಲಾವಣಿ ಪದಗಳನ್ನು, ಡೊಳ್ಳಿನ ಹಾಡುಗಳನ್ನು ಕಲಿತ ದುರಗಪ್ಪ ತನ್ನ ಇಪ್ಪತ್ತರ ವಯಸ್ಸಿನಿಂದ ಎಪ್ಪತ್ತರ ವಯಸ್ಸಿನವರೆಗೂ ಹಾಡಿದ್ದುಂಟು. ಹಾಡಿನ ಸಂಗ್ರಹ ಇಷ್ಟೇ ಎಂದು ಹೇಳಲಾಗದು. ದುರಗಪ್ಪನಿಗೆ ಬಾಲ್ಯದಿಂದಲೇ ತಂದೆಯ ಹಾಡಿನಿಂದ ಪ್ರಭಾವಿತನಾಗಿ ಬಹುಬೇಗ ಹಾಡು ಕಲಿತುಕೊಂಡು ರೈತ ಪರಂಪರೆಗೆ, ಜಾನಪದ ಹಾಡುಗಳಿಗೆ ಮಾದರಿಯಾದ.

ದುರಗಪ್ಪ ಹಾಡಿದ್ದು ಸುಮಾರು ಐದು ದಶಕಗಳ ಕಾಲ ತನ್ನ ಹೊಲದ ರಾಶಿಯಷ್ಟೇ ಅಲ್ಲ ಯಾರೇ ಕರೆಯಲಿ ಅವರ ಹೊಲಕ್ಕೆ ಹೋಗಿ ಎಷ್ಟೇ ದಿನಗಳಾದರೂ ರಾಶಿ ಮುಗಿಯುವವರೆಗೂ ಹಾಡಿ ಬಂದದ್ದುಂಟು.

"ಹತ್ತು ಕಣ್ಣಿನವನ ಹದಿನಾರು ಭುಜದವನ
ಕ್ಷತ್ರಿಯ ಕುಲದ ಅಭಿಮನ್ಯು ಹೊಕ್ಕಂತ
ರಾಶಿ ಹುಲುಸಾಗಿ"

ಹೀಗೆ ಹಾಡುಗಳನ್ನು ಜ್ಞಾಪಿಸಿಕೊಳ್ಳುತ್ತ ಹಾಡುವಾಗ ಈ ಅಜ್ಜನಿಗೆ ಎಲ್ಲಿಲ್ಲದ ಖುಷಿ. ಹಿಂದಿನ ದಿನಗಳನ್ನು ರಾಶಿ ಮಾಡಿದ ಸಂದರ್ಭಗಳನ್ನು ನೆನಪಿಸಿಕೊಳ್ಳುತ್ತ ಖುಷಿ ಪಟ್ಟದ್ದುಂಟು.

ರಾತ್ರಿ ಇಡೀ ಹಂತಿಯ ಹಿಂದೆ ತಿರುಗುತ್ತ ಹಾಡಿನೊಂದಿಗೆ ದಣಿವನ್ನೇ ಕಾಣುತ್ತಿದ್ದಿಲ್ಲ. ಆ ದಣಿವರಿಯದ ಹಾಡಿನ ಹುರುಪು ಅಷ್ಟೊಂದು ಹಾಡಿನ ಸಂಗ್ರಹ ಅದ್ಭುತವೆನಿಸುತ್ತಿದೆ.

"ಬೆಳ್ಳಿ ಚುಕ್ಕಿ ಮೂಡ್ಯಾದ ಬೆಳಗೊಂದು ತಾಸಿಗೆ
ಒಳ್ಳೊಳ್ಳೆ ಮೀನು ಗರಿಬಿಚ್ಚಿ ಹಾಡ್ಯಾವ
ತಾಯಿ ಗಂಗವ್ವನ ಉಡಿಯಾಗ"

ಹೀಗೆ ರೈತರು ತಮ್ಮ ಆಸರ ಬ್ಯಾಸರಕ ಅನೇಕ ಬಗೆಯ ಹಾಡುಗಳನ್ನು ಹಾಡುತ್ತ, ಹಾಡುಗಳನ್ನು ಕಟ್ಟುತ್ತ ಸಾಗುತ್ತಾರೆ. ಎಷ್ಟೋ ಸಲ ಶಬ್ದಕ್ಕೆ ಅರ್ಥವಿರದಿದ್ದರೂ ಧಾಟಿ, ಧ್ವನಿಗೆ ಅರ್ಥವಿದ್ದೇ ಇರುತ್ತೆ ಆ ಹಾಡುಗಳು ಹೃದಯದ ಭಾವದ ಹೊನಲು. ಅದು

ತನ್ನಿಂದ ತಾನೇ ಹೊರಹೊಮ್ಮುವುದು. ದುರಗಪ್ಪನಲ್ಲಿ ಅನೇಕ ಬಗೆಯ ಜಾನಪದ ಹಾಡಿನ ಸಂಗ್ರಹವುಂಟು.

ಈ ಇಳಿವಯಸ್ಸಿನಲ್ಲಿ ಪತ್ನಿ ಸೊಸೆಯೊಂದಿಗೆ ಕಾಲ ತಳ್ಳುವ ದುರಗಪ್ಪ ಹದಿಹರೆಯದ ಮಗನನ್ನು ಕಳೆದುಕೊಂಡು ನೋವನ್ನು; ಯಾತನೆಯನ್ನು ಅನುಭವಿಸುತ್ತ ಕೊರಗುತ್ತಿದ್ದಾನೆ.

**ದುರಗಪ್ಪ ದುರಗಪ್ಪ ಗೆನ್ನಕ್ಕಿ**
**ಕುರಬರ ಓಣಿ**
**ಕುಷ್ಟಗಿ, ಜಿ : ಕೊಪ್ಪಳ**

# ಮಲ್ಲಿಕಾರ್ಜುನಪ್ಪ ಗುರಪ್ಪ ಗಾಣಿಗೇರ

ಕುಷ್ಟಗಿ ತಾಲೂಕಿನ ಹೂಲಿಗೇರಿ ಗ್ರಾಮದ ಮಲಕಾಜಪ್ಪ ಭಜನೆ ಹಾಡುಗಾರ ; ಕರಡಿ ಮಜಲು ಕಲಾವಿದ ಕೂಡ. ಗುರಪ್ಪ-ಮಲ್ಲಮ್ಮ ರೈತ ದಂಪತಿಗಳ ಒಬ್ಬನೇ ಮಗನಾಗಿ ಜನ್ಮ ಪಡೆದಿದ್ದು ೨೩-೬-೧೯೬೬ರರಲ್ಲಿ. ಓದಿದ್ದು ಇಲಕಲ್ಲ ಹೈಸ್ಕೂಲಿನಲ್ಲಿ ೮ನೇ ತರಗತಿಯವರೆಗೆ. ಭಜನೆ ಹಾಡುಗಳು ಆಕರ್ಷಿಸಿ ಬಹುಬೇಗ ಆ ಕಡೆ ವಾಲಿದ್ದುಂಟು. ಹಾಡು, ತಾಳ ಕಲಿತಿದ್ದು ವಾಸು ಮಾಸ್ತರ ಹೂಲಗೇರಿ ಅವರಿಂದ.

ಭಜನೆ ಹಾಡುಗಾರರನ್ನು, ಭಜನೆ ತಂಡಗಳನ್ನು ಪ್ರತಿ ಹಳ್ಳಿಗಳಲ್ಲಿ ನಾವು ಗುರುತಿಸಬಹುದು. ಒಂದೊಂದು ಹಳ್ಳಿಯಲ್ಲಿ ಮೂರು ನಾಲ್ಕು ತಂಡಗಳು ಅಷ್ಟೇ ಏಕೆ ಓಣಿ ಓಣಿಗಳಲ್ಲಿ ತಂಡಗಳನ್ನು, ಕಲಾವಿದರನ್ನು ಕಾಣಬಹುದು. ಭಕ್ತಿ, ತತ್ವ, ಭಜನೆಗಳ ಜೀವನಾಡಿ, ದಮಡಿ, ತಾಳ, ಏಕತಾರಿಗಳನ್ನು ವಾದ್ಯಗಳನ್ನಾಗಿ ಬಳಿಸುತ್ತ ಮುಂದೆ ಪ್ರಮುಖ ಹಾಡುಗಾರ ಹಾಡಿದಂತೆ ಉಳಿದವರೆಲ್ಲ ಹಿಂದೆ ಹಾಡುತ್ತಾರೆ.

ಮುಂದೆ ಹಾಡುವ ಪ್ರಮುಖ ಕಲಾವಿದರಾಗಿ ಮಲ್ಲಿಕಾರ್ಜುನಪ್ಪ ಹೂಲಿಗೇರಿ ಗ್ರಾಮದಲ್ಲಿ ಆಕರ್ಷಿಸುತ್ತಾರೆ. ಇವರ ತಂಡ "ಶ್ರೀ ಬಸವೇಶ್ವರ ಭಜನಿ ಮಂಡಳ" ಬಸವೇಶ್ವರ ಗುಡಿಯಲ್ಲಿ ತಮ್ಮ ಭಜನಾ ತಂಡದಿಂದ ಹಾಡುತ್ತಾರೆ. ಕಡಕೋಳ ಮಡಿವಾಳಪ್ಪ, ರಾಮಪುರದ ಬೊಕ್ಕಪ್ಪ, ಶರೀಫ ಸಾಹೇಬರ ತತ್ವಪದಗಳು ಇವರ ಭಜನಾ ಹಾಡುಗಳಾಗಿವೆ. ಹತ್ತು-ಹನ್ನೆರಡು ಜನರ ಈ ತಂಡ ಸುತ್ತಲೂ ಹಳ್ಳಿಗಳ ಅನೇಕ ಉತ್ಸವಗಳಲ್ಲಿ, ಜಾತ್ರೆಗಳಲ್ಲಿ, ಗುಡಿ-ಗುಂಡಾರಗಳಲ್ಲಿ ಮಠ-ಮಂದಿರಗಳಲ್ಲಿ ಕಾರ್ಯಕ್ರಮ ನೀಡಿದ್ದುಂಟು.

೧೯-೧೮ರ ಹರೆಯದಲ್ಲಿ ಹಾಡಲು ಪ್ರಾರಂಭಿಸಿದ ಮಲ್ಲಿಕಾರ್ಜುನಪ್ಪ ನಿರಂತರವಾಗಿ ಇಂದಿಗೂ ಹಾಡುತ್ತಲೇ ಇದ್ದಾನೆ. ಮಧುರ ಕಂಠದಿಂದ ಭಕ್ತಿಯಲಿ

ಸ್ವರವೆತ್ತಿ ಹಾಡಿದರೆ ಸಹಜವಾಗಿ ಯಾರಿಗಾದರೂ ಆ ಕಡೆ ಲಕ್ಷಗೊಟ್ಟು ಕೇಳುವಂತೆ ಮಾಡುತ್ತದೆ. ತತ್ವಪದಗಳಲ್ಲದೆ ಜಾನಪದ ಅನೇಕ ಪ್ರಕಾರದ ಹಾಡುಗಳನ್ನು ಹಾಡುವ ಈ ಕಲಾವಿದ ರಿವಾಯತ್ ಪದಗಳನ್ನೂ ಅಷ್ಟೇ ಆಕರ್ಷಕವಾಗಿ ಹಾಡುತ್ತಾರೆ. ರಾಯಚೂರು ಆಕಾಶವಾಣಿಯಲ್ಲಿ ಭಜನಾ ಕಾರ್ಯಕ್ರಮ ನೀಡಿದ್ದಾರೆ.

ಊರಿನ ಕರಡಿಮಜಲು ಕಲಾವಿದರ ತಂಡದಲ್ಲಿಯೂ ಜನಮನ ಸೆಳೆದಿದ್ದಾರೆ. ತೀರ್ಥಪ್ಪ ಭಜಂತ್ರಿ ಗುರುವಿನಿಂದ ಕರಡಿ, ದಿಮ್ಮು ನುಡಿಸುವುದನ್ನು ಕಲಿತು "ಬಸವೇಶ್ವರ ಕರಡಿ ಮಜಲು ತಂಡ" ದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ. ಕುಷ್ಟಗಿ, ಹನುಮಸಾಗರ ಇಲಕಲ್, ಹುನುಗುಂದ, ಯಲಬುರ್ಗಾ ನಾಡಿನ ದೂರದೂರದ ಉತ್ಸವಗಳಲ್ಲಿಯೂ ಭಾಗಿಯಾಗಿ ಬಂದ ಶ್ರೇಯಸ್ಸು ಇವರದು.

ಆಶಿರ ಹರೆಯದ ಈ ಕಲಾವಿದ ಯಾವುದೇ ಪ್ರಕಾರದ ಹಾಡುಗಳನ್ನು ಹಾಡ ಹಚ್ಚಿದರೂ ದಣಿವರಿಯದಂತೆ ಹಾಡುತ್ತಾರೆ. ಮಧುರ ಕಂಠದಲ್ಲಿ ತತ್ವಪದಗಳಂತೂ ಪರಿಣಾಮಕಾರಿಯಾಗಿ ಮೂಡಿ ಬಂದು ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತವೆ. ಮಲ್ಲಿಕಾಜಪ್ಪ ರೈತಾಪಿ ಜನರಲ್ಲಿ ಪ್ರತಿಭಾವಂತ ಕಲಾವಿದರೆನ್ನುವಲ್ಲಿ ಎರಡು ಮಾತಿಲ್ಲ

**ಮಲಿಕಾರ್ಜುನಪ್ಪ ಗುರಪ್ಪ ಗಾಣಿಗೇರ**
**ಸಾ : ಹೊಲಗೇರಿ**
**ತಾ : ಕುಷ್ಟಗಿ, ಜಿ : ಕೊಪ್ಪಳ**

## ಕೃಷ್ಣಪ್ಪ ಹುಲಿಗೆಪ್ಪ ಗೊಂದಲಿಗ

"ಆದಿಶಕ್ತಿ ಬಾ ತಾಯಿ ಜಗದಂಬಾ
ನಿನ್ನ ಸ್ತುತಿಸುವೆ ಬಾ ಜಗದಂಬಾ ॥

ಎಂದು ಆದಿಶಕ್ತಿಯನ್ನು ಪ್ರಾರ್ಥಿಸಿಯೇ ಮುಂದೆ ಸಾಗುವ ಈ ಕಲಾವಿದರು ಗಂಟೆಗಟ್ಟಲೆ ಅಷ್ಟೇ ಏಕೆ ಇಡೀ ಹಗಲು-ರಾತ್ರಿ ಒಂದೇ ಕಥೆಯನ್ನು ಚೌಡಕಿ-ಸಾಂಬಾಳ ವಾದ್ಯಗಳೊಂದಿಗೆ ಹಾಡುತ್ತ ಮೂಲ ಹಾಡಿನ ಕಥೆಗೆ ಪೂರಕವಾಗುವಂತೆ ಚಿಕ್ಕ ಚಿಕ್ಕ ಕಥೆಗಳನ್ನು ಜೋಡಿಸಿಕೊಂಡು ಗದ್ಯ ಪದ್ಯ ಎರಡರಲ್ಲೂ ಕಥೆ ಹೇಳುತ್ತ ಸಾಗುವ ಈ ಕಲಾವಿದರ ಹಾಡುಗಳು ಜಾನಪದ ಸಾಹಿತ್ಯದಲ್ಲಿಯೇ ಆಕರ್ಷಕ.

ಲಕ್ಷ್ಮಿಪತಿರಾಜನ ಕಥೆ, ಬಾಲಬಿಕ್ಷುಕನ ಕಥೆ, ಜೈ ರಾಣಿಕಥೆ, ಇಗ್ನಾವತಿ ಕಥೆ, ನೀಲಕುಮಾರ ಕಥೆ, ಅಡವಿಕುಮಾರನ ಕಥೆ, ನೀಲಕಂಠರಾಜನ ಕಥೆ, ಭೋಜರಾಜನ ಕಥೆ, ಶಿವಧಾರ ಶಿವಲೋಚ ಕಥೆ, ಶಂಕಿಕುಮಾರ ಕಥೆ ಹೀಗೆ ಅನೇಕ ಪೌರಾಣಿಕ, ಸುಂದರ ಸುಂದರ ನೀತಿಪ್ರಧಾನ ಕಥೆಗಳನ್ನು ಹೇಳುತ್ತ ಮನರಂಜನೆ ನೀಡುವ ಈ ಕಲಾವಿದರು ಹೆಚ್ಚು ಗಮನ ಸೆಳೆಯುತ್ತಾರೆ.

ಇಂಥ ಕಲಾವಿದರಲ್ಲಿ ಕುಷ್ಟಗಿ ತಾಲೂಕಿನ ಮನ್ನೇರಾಳ ಗ್ರಾಮದ ಕೃಷ್ಣಪ್ಪ ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಕಲಾವಿದ. ಸುಮಾರು ೮೫ರ ಈ ಇಳಿವಯಸ್ಸಿನಲ್ಲಿಯೂ ಹಾಡುತ್ತಾರೆಂದಾಗ ಆಶ್ಚರ್ಯವೆನಿಸುತ್ತಿದೆ. ಕೃಷ್ಣಪ್ಪನವರನ್ನು ಕಂಡು ಹಾಡಿಸಿದಾಗ ಖುಷಿ ಎನಿಸಿತು. ಈ ಕಲೆಯನ್ನು ತಮ್ಮ ಉದ್ಯೋಗವನ್ನೇ ಮಾಡಿಕೊಂಡು ನಾಡನ್ನೆಲ್ಲ ಸುತ್ತಿ ಈ ವಯಸ್ಸಿನಲ್ಲಿಯೂ ಮುಂದುವರೆಸಿಕೊಂಡು ಬಂದಿರುವ ಕೃಷ್ಣಪ್ಪನ ಕಥೆ ವ್ಯಥೆ ಕೇಳಿದಾಗ ನೋವೆನಿಸುತ್ತಿದೆ. ಈಗೀಗ ಇಂಥ ಹಾಡುಗಳನ್ನು ಕೇಳುವ ಆಸಕ್ತರು ಕಡಿಮೆಯಾಗಿ ಎಲ್ಲಿಯೋ ಕೆಲವು ಮನೆಗಳಲ್ಲಿ ಸಂಪ್ರದಾಯ

ದಂತೆ ಮಂಗಲ ಕಾರ್ಯಗಳಲ್ಲಿ ಹಾಡಿಸುವುದುಂಟು ಎನ್ನುವ ಕೃಷ್ಣಪ್ಪ ಆದರೂ ನಿರಾಶೆಗೊಂಡಿಲ್ಲ.

ಮನ್ನೇರಾಳ ಗ್ರಾಮದ ಹುಲಿಗೆಪ್ಪ-ನಾಗಮ್ಮ ದಂಪತಿಗಳ ಮಗನಾಗಿ ಜನ್ಮ ಪಡೆದ ಕೃಷ್ಣಪ್ಪನಿಗೆ ಶಾಲೆ ದೂರದ ಮಾತು, ತನ್ನ ಹದಿಹರೆಯದ ವಯಸ್ಸಿನಲ್ಲಿ (೨೨ನೇ ವಯಸ್ಸಿನಲ್ಲಿ) ಹಾಡಲು ಪ್ರಾರಂಭಿಸಿ ಈಗಲೂ ಹಾಡುತ್ತಲೇ ಇದ್ದಾನೆ. ಜೀವನದ ದೀರ್ಘ ಬದುಕಿನಲ್ಲಿ ಆರು ದಶಕಗಳಿಂದ ಹಾಡುತ್ತ ಬಂದಿರುವ ಕೃಷ್ಣಪ್ಪ ಬದುಕಿನಲ್ಲಿ ಅನೇಕ ಏರಿಳಿತ ಕಂಡಿದ್ದಾನೆ. ಬಡತನ, ದಾರಿದ್ರ್ಯ ಸೋಲು-ಗೆಲುವುಗಳು ಎಲ್ಲಾ ರೀತಿಯ ಅನುಭವ ನೀಡಿವೆ.

ಈ ಕಲೆ ಇವರಿಗೆ ವಂಶಪರಂಪರೆಯಿಂದ ಬಂದದ್ದು ತಂದೆ, ಅಜ್ಜ, ಮುತ್ತಜ್ಜ ಹೀಗೆ ತಲೆ ತಲೆಮಾರಿನಿಂದ ಬಂದ ಈ ಕಲೆಯನ್ನು ಮಕ್ಕಳಿಗೂ ಕಲಿಸಿ ಇದನ್ನೇ ಉದ್ಯೋಗ ಮಾಡಿಕೊಂಡು ಹೊರಟಿದ್ದಾನೆ.

ಏನೇ ಆದರೂ ಈ ಕಲಾವಿದರಿಗೆ ದೇವಿ ಭಕ್ತರು ಆಶ್ರಯಿಸುತ್ತಲೇ ಬಂದಿದ್ದಾರೆ. ಕ್ಷತ್ರಿಯರು, ಬ್ರಹ್ಮಣರು, ಗೌಳಿಗೇರು ಸಿಂಪಿಗೆಯವರು ತಮ್ಮ ಮನೆಗಳಲ್ಲಿ ಲಗ್ನ, ಮುಂಜವಿ ಎಂಥದೋ ಮಂಗಲ ಕಾರ್ಯದಲ್ಲಿ ಈ ಕಲಾವಿದರಿಗೆ ಆಮಂತ್ರಣ ನೀಡಿದಾಗ ಹೋಗಿ ರಾತ್ರಿ-ಹಗಲು ಹಾಡಿ ದೇವಿಯನ್ನು ಆರಾಧಿಸಿ ತಮ್ಮ ಸೇವೆ ಸಲ್ಲಿಸಿ ಅವರಿಂದ ಗೌರವಧನ, ಬಟ್ಟೆ ಧಾನ್ಯ ಪಡೆದುಕೊಂಡು ಬರುವುದು ಇಂದಿಗೂ ಸಂಪ್ರದಾಯ. ದಸರಾ ಹಬ್ಬದಲ್ಲಂತೂ ಬಿಡುವಿಲ್ಲದಷ್ಟು ಬೀಜಿಯಾಗಿರುತ್ತಾರೆ.

ಕೃಷ್ಣಪ್ಪ ಈ ಉದ್ಯೋಗದಿಂದಲೇ ಬಂದು ಇದ್ದುದರಲ್ಲಿಯೇ ತೃಪ್ತಿ ಪಟ್ಟುಕೊಂಡಿದ್ದಾನೆ. ಹಾಡಿನ ದಾಟಿ, ಹಾಡಿನ ಆಕರ್ಷಕ ಶೈಲಿ ನಡುನಡುವೆ ಗದ್ಯದಲ್ಲಿ ಹೇಳುವ ರೀತಿ ಖುಷಿ ಕೊಡುತ್ತದೆ.

"ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ
ಈ ಕಲಿಯುಗದಲ್ಲಿ ಯಾವ ಗ್ರಾಮ ಬೆಳಿತಾವಂದ್ರ
ದರ್ಮಾವತಿ ಪಟ್ಟಣ ಧರ್ಮಸೇನ ಮಹಾರಾಜ
ರಾಜನಿಗೆ ಹನ್ನೆರಡು ಸಾವಿರ ದಂಡು ಮುನ್ನೂರು ಬಾರಿನ ಮಂದಿ
ತಮ್ಮ ಪ್ರಜೆಗಳ ಕರಕೊಂಡು ಸಿಂಹಾಸನದ ಮೇಲೆ
ಕೂತುಕೊಂಡು ಯಾವ ಚಂದದಲ್ಲಿ ಪುಣ್ಯವ
ಮಾತಡಾನಂದ್ರ ........................"

ಹೀಗೆನೇ ಕಥೆ ಮುಂದುವರೆಸಿಕೊಂಡು ಹೋದ ಕೃಷ್ಣಪ್ಪ ಮಕ್ಕಳಿಂದ ಮುದುಕರವರೆಗೂ ಆಕರ್ಷಿಸುತ್ತಾನೆ. ಹಿರಿಯಮಗ ರಾಮಚಂದ್ರಪ್ಪನನ್ನು ಕರೆದುಕೊಂಡು

ಸಾಂಬಾಳ ಬಾರಿಸುತ್ತ ಕಥೆ ಹೇಳುತ್ತ ಹೊರಟರೆ ನಾಡಿನ ನಾನಾ ಭಾಗದಲ್ಲಿ ತಿರುಗುತ್ತ ತಿರುಗುತ್ತ ಅನೇಕ ದಿನಗಳವರೆಗೆ ಹೊರಗನೇ ಸಾಗುವುದುಂಟು.

ಧಾರವಾಡ, ಬಿಜಾಪುರ, ರಾಯಚೂರು, ಹುಬ್ಬಳ್ಳಿ, ಬೆಂಗಳೂರು, ಕೊಪ್ಪಳ ಜಿಲ್ಲೆಗಳ ನಾನಾ ಭಾಗಗಳಲ್ಲಿ ಹಾಡುತ್ತ ಹಾಡುತ್ತ ಸಂಚರಿಸುವ ಕೃಷ್ಣಪ್ಪ ದಣಿವರಿಯದ ಕಲಾವಿದ. ಇತ್ತೀಚಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈತನ ದೀರ್ಘ ಸೇವೆ ಪರಿಗಣಿಸಿ ಮಾಸಾಶನ ಮಂಜೂರಿಸಿರುವುದು ಸಮಾಧಾನಕರ.

ಭಕ್ತರು ಮನೆಗೆ ಕರೆಯಿಸಿ ಮಂಗಲ ಕಾರ್ಯದಲ್ಲಿ ಹಾಡಿಸಿದಾಗ ೨೦೦೦ ದಿಂದ ೩೦೦೦ ರೂ. ಗೌರವಧನ ನೀಡಿ ಕಳಿಸುವುದು ತೃಪ್ತಿಕರ. ಕುಷ್ಟಗಿ ತಾಲೂಕಿನ ಕೆಲವು ಕಾರ್ಯಕ್ರಮಗಳಲ್ಲಿ ಕೃಷ್ಣಪ್ಪನನ್ನು ಸನ್ಮಾನಿಸಿ ಗೌರವಿಸಿದ್ದುಂಟು.

ಏನೇ ಆದರೂ ಈ ಜನಾಂಗ ಕಲೆಯಲ್ಲಿ ಕಡಿಮೆಯಾಗುತ್ತ ಬೇರೆ ಬೇರೆ ಉದ್ಯೋಗ ಅರಿಸಿಕೊಂಡು ಹೋಗುತ್ತ ಈಗ ತನ್ನ ಆಕರ್ಷಣೆಯನ್ನು ಈ ಕಲೆ ಕಳೆದುಕೊಳ್ಳುತ್ತಿದೆ. ಕೃಷ್ಣಪ್ಪನಂಥ ಕಲಾವಿದರ ತಲೆಮಾರೆ ಕೊನೆಯದಾಗುತ್ತದೆಯೇನೋ ಎನ್ನುವ ಸಂಶಯ ಕಾಡುತ್ತಿದೆ. ಇಂಥ ಕಲೆ-ಕಲಾವಿದರನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ನಾಡಿನ ಸಮಸ್ತ ಜನರ ಕರ್ತವ್ಯವಾಗಿದೆ.

ಕೃಷ್ಣಪ್ಪ ಕೊಪ್ಪಳ ಜಿಲ್ಲೆಯ ಉತ್ತಮ ಗೊಂದಲಿಗ ಕಲಾವಿದ. ದೀರ್ಘ ಬದುಕನ್ನು ಹಾಡುತ್ತಲೇ ಕಳೆದವನು. ಜಿಲ್ಲೆ ಕಂಡ ಅಪರೂಪದ ಗೊಂದಲಿಗ ಕಲಾವಿದ.

**ಕೃಷ್ಣಪ್ಪ ಹುಲಿಗೆಪ್ಪ ಗೊಂದಲಿಗ**
**ಅಂಚೆ : ಮನ್ನೇರಾಳ**
**ತಾ : ಕುಷ್ಟಗಿ, ಜಿ : ಕೊಪ್ಪಳ**

# ಚಂದ್ರಶೇಖರ ಲಿಂಗದಳ್ಳಿ

ಕುಷ್ಟಗಿ ತಾಲೂಕಿನ ಲಿಂಗದಳ್ಳಿ ಗ್ರಾಮದ ಚಂದ್ರಶೇಖರ ಜಾನಪದ ಹಾಡುಗಾರ, ಕವಿ ಕೂಡ. ಮಲ್ಲಪ್ಪ ಈರಮ್ಮ ದಂಪತಿಗಳ ಹಿರಿಯಮಗ, ಮೂರು ಜನ ಸಹೋದರರು ಒಬ್ಬ ಸಹೋದರಿ. ಓದಿದ್ದು ೭ನೇ ತರಗತಿ. ಮನೆಯಲ್ಲಿ ಎಲ್ಲಾ ಸಹೋದರರು ಒಂದಿಲ್ಲ ಒಂದು ಕಲೆಯಲ್ಲಿ ಆಸಕ್ತಿ ಹೊಂದಿದ ಕಲಾರಾಧಕರು. ಈ ಎಲ್ಲಾ ಮಕ್ಕಳಿಗೂ ತಂದೆ ಮಲ್ಲಪ್ಪ ಪ್ರೇರಕರು. ಉತ್ತಮ ಹಾಡುಗಾರರಾಗಿದ್ದ ಮಲ್ಲಪ್ಪ ಮಕ್ಕಳಿಗೆ ಪ್ರೋತ್ಸಾಹ ನೀಡಿ ಕಲೆಯಲ್ಲಿ ತೊಡಗಿಸಿಕೊಂಡು ಬೆಳೆಯುವಂತೆ ಮಾಡಿದರು.

೫೦ರ ಗಡಿಯಲ್ಲಿರುವ ಚಂದ್ರಶೇಖರ ಜಾನಪದ ಹಾಡುಗಳಿಂದ ಬಹಳಷ್ಟು ಪ್ರಸಿದ್ಧಿ ಪಡೆದವರು. ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಅವರ ಜಾನಪದ ಹಾಡುಗಳ ಕ್ಯಾಸೆಟ್, ಸಿ.ಡಿ. ದೊರೆಯುತ್ತಿವೆ. ಭಕ್ತಿಗೀತೆ, ತತ್ವಪದ, ಸುಗ್ಗಿ ಹಾಡು, ಲಾವಣಿ ಹೀಗೆ ಜಾನಪದದ ಎಲ್ಲಾ ಹಾಡುಗಳ ಹಾಡುಗಾರ ಈ ಕಲಾವಿದ. ಹಾಡುವ ದಾಟಿ, ಧ್ವನಿ ಆಕರ್ಷಕ. ತತ್ವಪದಗಳಿಂದ ಆನೆಗೊಂದಿ ಉತ್ಸವದಲ್ಲಿ ಜನಮನ ಸೆಳೆದು ಉತ್ತಮ ಹಾಡುಗಾರರಲ್ಲಿ ಪರಿಗಣಿಸಿ ಪ್ರಶಸ್ತಿ ಪತ್ರ (೨೦೦೬) ಜಿಲ್ಲಾ ಆಡಳಿತದಿಂದ ಪಡೆದಿದ್ದಾರೆ.

೧೯೭೭ರಿಂದ (ಮೂರು ದಶಕಗಳಿಂದ) ಜಾನಪದ ಕ್ಷೇತ್ರದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳಿಂದ ಸೇವೆಸಲ್ಲಿಸುತ್ತ ಬಂದಿರುವ ಚಂದ್ರಶೇಖರ ಈಗಲೂ ನಿರಂತರ ವಿವಿಧ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ತತ್ವಪದಕಾರರಲ್ಲಿ ಶರೀಫರ, ಕಡಕೋಳ ಮಡಿವಾಳಪ್ಪನವರ, ಹೇರೂರು ವಿರುಪಾಕ್ಷಪ್ಪ ಗೌಡರ ಪದಗಳು ಈ ಕಲಾವಿದರಿಂದ ನಿರಂತರ ಕೇಳಿಬರುವ ಪದಗಳಾಗಿವೆ.

ಇವರ ಭಕ್ತಿ ಹಾಡುಗಳು ತಾತ್ವಿಕ ಹಿನ್ನಲೆಯ, ಶರಣರ ಜೀವನದ ಸ್ತುತಿಗಳೂ ಕೂಡ. ಹೀಗೆ ಅನೇಕ ಬಗೆಯ ಕಾವ್ಯಗಳನ್ನು ರಚಿಸಿ ತಾವೇ ಧಾಟಿ ಹಾಕಿ ಹಾಡಿದ್ದುಂಟು. ಹಳ್ಳಿಗರ ಮನದಲ್ಲಿ ಹಾಸುಹೊಕ್ಕಿವೆ ಇವರ ಹಾಡುಗಳು.

"ಹೊಕ್ಕು ನೋಡುವವರಿಲ್ಲ
ಬಯಲೊಳ, ಲೆಕ್ಕ ಮಾಡುವವರಿಲ್ಲ
ಕಕ್ಕುಲಾತಿಗೆ ಬಡಿದಾಡುತಿಹರು
ಮುಕ್ಕಣ್ಣನರಿಯದಲೆ"

ಈ ರೀತಿಯ ಅನೇಕ ಹಾಡುಗಳನ್ನು ರಚಿಸಿದ್ದುಂಟು. ಅರ್ಥಪೂರ್ಣ ಪ್ರಬುದ್ಧ ಕವನಗಳು ರಚನೆಗೊಂಡು ಉತ್ತರ ಕರ್ನಾಟಕದಲ್ಲಿ ವಿಪುಲವಾಗಿ ಉಪಲಬ್ಧ ಇವೆ. ಅವರ ರಚನೆಯ ಹಾಡಿನ ವ್ಯಾಪಕತೆ, ವಿಶಿಷ್ಟತೆ, ಆಕರ್ಷತೆ ಗಮನಾರ್ಹ.

ಚಂದ್ರಶೇಖರ ಹಾರ್ಮೋನಿಯಂ, ತಬಲಾ ವಾದಕರೂ ಹೌದು. ಅನೇಕ ಹಳ್ಳಿಗಳಲ್ಲಿ ನಾಟಕ ಪ್ರಯೋಗಕ್ಕೆ ಸಾಹಿತ್ಯ ಸಂಗೀತ ಒದಗಿಸಿದ್ದುಂಟು.

ದಾವಣಗೆರೆ "ಹಡಪದ ಅಪ್ಪಣ್ಣ ಸೇವಾ ಸಂಘ" (೨೦೦೬) ಕಾಯಕರತ್ನ ಪ್ರಶಸ್ತಿ, ಬೆಂಗಳೂರಿನ "ವಿಶ್ವ ಮಾನವ ಬಸವಣ್ಣ ಕಲಾನಿಕೇತನ (ರಿ) ಸಂಸ್ಥೆಯಿಂದ (೨೦೦೪) ಕಾಯಕರತ್ನ ಪ್ರಶಸ್ತಿ, ಕೊಪ್ಪಳ ಜಿಲ್ಲೆಯ ಜಿಲ್ಲಾಡಳಿತ ಪ್ರಶಸ್ತಿ ಸುವರ್ಣ ಕರ್ನಾಟಕ ಕಲಾಪ್ರಶಸ್ತಿ ಹೀಗೆ ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಬಿರುದು ಪಡೆದ ಶ್ರೇಯಸ್ಸು ಈ ಕಲಾವಿದರದು.

ಜಾನಪದ ಹಾಡುಗಾರರಾಗಿ, ಜಾನಪದ ಸಾಹಿತ್ಯ ರಚನೆಕಾರರಾಗಿ, ಧ್ವನಿಸುರಳಿಗಳ ನಿರ್ಮಾಪಕರಾಗಿ, ಜಾನಪದ ಕ್ಷೇತ್ರಕ್ಕೆ ಸೇವೆಸಲ್ಲಿಸುತ್ತ ಸಾಗಿರುವ ಹೆಚ್. ಚಂದ್ರಶೇಖರ ಕೊಪ್ಪಳ ಜಿಲ್ಲೆಯ ಆಕರ್ಷಕ ವ್ಯಕ್ತಿಗಳಾಗಿ ನಾಡಿನಾದ್ಯಂತ ಗಮನಸೆಳೆಯುವ ಕಲಾವಿದರಾಗಿದ್ದಾರೆ.

**ಎಚ್. ಚಂದ್ರಶೇಖರ**
**ಪೊ : ಲಿಂಗದಳ್ಳಿ**
**ತಾ : ಕುಷ್ಟಗಿ, ಜಿ : ಕೊಪ್ಪಳ**

# ಫಕೀರಸಾಬ ಮೌಲಾಸಾಬ ಭಾವಿಕಟ್ಟಿ

ಹಿಂದು ಮುಸ್ಲಿಂ ಭಾವೈಕ್ಯತೆಯ ಬದುಕಿನ ಫಕೀರಸಾಬ ಮೌಲಾಸಾಬ ಭಾವಿಕಟ್ಟಿ ಆದರ್ಶ ಬದುಕು ಪಡೆದು ಗೌರವಾನ್ವಿತರಾಗಿದ್ದಾರೆ. ಕುಷ್ಟಗಿ ತಾಲೂಕಿನ ಗುಮಗೇರಿ ಗ್ರಾಮದ ಮೌಲಾಸಾಬ-ಫಾತಿಮಾ ದಂಪತಿಗಳ ಹಿರಿಯಮಗನಾಗಿ ಜನ್ಮ ಪಡೆದ ಫಕೀರಸಾಬ ಓದಿದ್ದು ಓದಲು ಬರೆಯಲು ಬರುವಷ್ಟು.

ತತ್ವಪದ, ಭಜನಾಪದ, ರಿವಾಯತ್ ಪದ ಹಾಡುಗಾರರಾದ ಫಕೀರಸಾಬ ಕಲಿತಿದ್ದು ಮನೆಯಿಂದಲೆ. ಅಜ್ಜ, ಅಪ್ಪ ಕೂಡ ಅಷ್ಟೇ ಏಕೆ ಅಜ್ಜಿ ಕೂಡ ರಿವಾಯತ್ ಪದ ಹಾಡುತ್ತಿದ್ದರು. ಮನೆಯವರ ಪ್ರಭಾವ ಹಿಂದು ಗೆಳೆಯರ ಸಹವಾಸ. ಭಾವೈಕ್ಯತೆಯ ಬದುಕಿಗೆ ಮಾದರಿಯಾದ ಮನೆತನ ಇದು. ಎಲ್ಲವೂ ಈ ಕಲಾವಿದ ಬೆಳೆದು ಬರಲು ಕಾರಣವಾದವು.

ದುರ್ಗಾದೇವಿಯ ದೇವಸ್ಥಾನದಲ್ಲಿ ಭಜನಾಮಂಡಳಿಯಿಂದ ಬಾಲ್ಯದಲ್ಲಿಯೇ ಗುರುತಿಸಿಕೊಂಡು ಭಜನಾ ಹಾಡು, ತತ್ವಪದ ಕಲಿತು ಇಂದಿಗೂ ನಿಜಗುಣ ಶಿವಯೋಗಿಗಳ, ವಡಕಿತಾತ, ವಡ್ರಟ್ಟಿ ಫಕೀರೇಶ ಶಿಸುನಾಳ ಶರೀಫರಂತ ತತ್ವಜ್ಞಾನಿಗಳ ಹಾಡನ್ನು ಹಾಡುವ ಫಕೀರೇಶ ಉತ್ತಮ ಹಾಡುಗಾರನೆಂದೇ ಗುರುತಿಸಿಕೊಂಡು ಪ್ರಸಿದ್ಧಿಪಡೆದಿದ್ದಾನೆ. ಮೋಹರಂ ಬಂದಿತೆಂದರೆ ಈ ಕಲಾವಿದನ ರಿವಾಯತ್ ಹಾಡುಗಳಿಗೆ ಆಮಂತ್ರಣ ವಿದ್ದೇವಿರುತ್ತೆ.

ಭಕ್ತಿಯ ಹಾಡುಗಳು, ಹುತಾತ್ಮರ ಹಾಡುಗಳು, ಕರ್ಬಲ ಹಾಡುಗಳು, ಫಕೀರ ಸಾಬನ ಹಾಡಿನ ಸಂಗ್ರಹ ಸಂಪತ್ತು. ಕನ್ನಡ ಸಾಹಿತ್ಯದಲ್ಲಿ ಈ ತತ್ವಪದಗಳಿಗೆ ವಿಶಿಷ್ಟ ಸ್ಥಾನವುಂಟು. ತಮ್ಮ ಆಧ್ಯಾತ್ಮದ ಅನುಭವದ ಸಾರವೇ ಈ ಹಾಡುಗಳಲ್ಲಿ. ಅವುಗಳನ್ನು ಏಕತಾರಿಯಲ್ಲಾಗಲಿ ಇಲ್ಲವೆ ತಾಳ-ರಾಗಗಳ ಭಜನೆಗಳಲ್ಲಾಗಲಿ ಮಧುರ ಕಂಠದಿಂದ

ಹಾಡಿದಾಗ ಇಡೀ ವಾತಾವರಣವೇ ಭಕ್ತಿಯಲ್ಲಿ ತೇಲಿದಂತೆ. ವಿಶೇಷವಾಗಿ ಹೈದ್ರಾಬಾದ ಕರ್ನಾಟಕದಲ್ಲಿ ಇಂತಹ ಭಾವೈಕ್ಯತೆಯ ಹಾಡುಗಳನ್ನು ಕಾಣಲು ಸಾಧ್ಯವಾಗುತ್ತದೆ. ಅಂಥ ಅನುಭಾವಿಗಳ ಪ್ರಭಾವದಿಂದಲೇ ಫಕೀರಸಾಬನಂತ ಕಲಾವಿದ ಹಿಂದುಗಳ ಭಜನಾ ತಂಡಗಳಲ್ಲಾಗಲಿ ಮುಸಲ್ಮಾನರ ಮೋಹರಂ ಹಬ್ಬಗಳಲ್ಲಾಗಲಿ ಗುರುತಿಸಿಕೊಂಡು ಭಾವೈಕ್ಯತೆಯ ಬದುಕಿನಿಂದ ಬದುಕುತ್ತ ಹಿಜಿರ ಹರೆಯದಲ್ಲಿಯೂ ಈ ಕಲಾವಿದ ಆಕರ್ಷಿಸಿದ್ದಾನೆ.

ಗಾಡದಾಳ, ವಡ್ರಕಲ್ಲ, ತಿಪ್ಪನಾಳ, ಹುಲಿಯಾಪುರ, ಕುಷ್ಟಗಿ ಚೆಳಗೇರಿ, ಜೂಲಕಟ್ಟಿ ಹೀಗೆ ಅನೇಕ ಗ್ರಾಮಗಳಲ್ಲಿ ಮೋಹರಂ ಹಾಡುಗಳಲ್ಲಿ ಕಾರ್ಯಕ್ರಮ ನೀಡಿದ್ದಾನೆ. ರಾಜ್ಯಮಟ್ಟದ ಭಜನಾ ತಂಡದಲ್ಲಿ ಗುರುತಿಸಿಕೊಂಡಿದ್ದಾನೆ. ಇತ್ತೀಚಿಗೆ ಮುಕ್ತ ಭಜನಾ ಸ್ಪರ್ಧೆಯಲ್ಲಿ ಬಿಜಕಲ್ಲದಲ್ಲಿ ಜರುಗಿದಾಗ ಹಾಡುಗಳಿಂದ ಪ್ರಥಮ ಬಹುಮಾನ ಪಡೆದ ಶ್ರೇಯಸ್ಸು ಈ ಕಲಾವಿದನದು.

**ಫಕೀರಸಾಬ ಮೌಲಾಸಾಬ ಭಾವಿಕಟ್ಟಿ**
**ಸಾ : ಗುಮಗೇರಿ**
**ತಾ : ಕುಷ್ಟಗಿ, ಜಿ : ಕೊಪ್ಪಳ**

## ಕೆ. ದೊಡ್ಡವೀರಣ್ಣ

ಉತ್ತರ ಕರ್ನಾಟಕದಲ್ಲಿ ಬಯಲಾಟ ತುಂಬ ಪ್ರಸಿದ್ಧಿ ಪಡೆದ ಜಾನಪದ ರಂಗ ಪ್ರದರ್ಶನ ಕಲೆ. ಈ ಭಾಗದಲ್ಲಿ ಅದರಲ್ಲೂ ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಬಯಲಾಟಗಳು ಪ್ರದರ್ಶನ ಗೊಳ್ಳುತ್ತಲೇ ಇರುತ್ತವೆ. ಊರಿನ ಜಾತ್ರೆ, ಉತ್ಸವ, ಉರುಸು, ಮೋಹರಂ ಹಬ್ಬಗಳಲ್ಲಿ ಎಲ್ಲ ಜನರೂ ಒಂದಾಗಿ ಬೆರೆಯುವ ಸಾಂಸ್ಕೃತಿಕ ಅಂಶವಿದಾಗಿದೆ.

ಕೊಪ್ಪಳ ತಾಲೂಕಿನ ಗಂಗಾವತಿ ಹಾಗೂ ಸುತ್ತಲೂ ಹಳ್ಳಿಗಳಲ್ಲಿ ಬಯಲಾಟ ಪ್ರದರ್ಶನಗಳಿಗೆ ಲೆಕ್ಕವೇ ಇಲ್ಲ. ಗಂಗಾವತಿಯಲ್ಲಂತೂ ಎರಡು ತಂಡಗಳು ಸುಮಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತ ಇಂದಿಗೂ ಜೀವಂತವಾಗಿವೆ. "ನೀಲಕಂಠೇಶ್ವರ ಬಯಲಾಟ ತಂಡ" ಬಹಳಷ್ಟು ವರ್ಷಗಳಿಂದ ಸುಸಜ್ಜಿತ-ಸುಪ್ರಸಿದ್ಧ ತಂಡವಾಗಿದ್ದು ಇದರಿಂದ ಅನೇಕ ಕಲಾವಿದರು ಪ್ರಸಿದ್ಧಿ ಪಡೆದು ಜನಮನ ಸೆಳೆದಿದ್ದಾರೆ. ಅಂಥವರಲ್ಲಿ ಕೆ. ದೊಡ್ಡ ವೀರಣ್ಣ ಒಬ್ಬರು.

೭೨ ರ ಹರೆಯದ ವೀರಣ್ಣನವರು ಈಗಲೂ ನಾಟಕ, ಬಯಲಾಟ, ಸಂಗೀತದ ಮಾತು ಬಂದರೆ ಏನೆಲ್ಲ ಬಿಟ್ಟು ಕೂಡುತ್ತಾರೆ. ಆ ವಿಷಯಗಳ ಚರ್ಚೆಯಲ್ಲಿ ಅವರಿಗೆ ಸಮಯದ ಅರಿವೂ ಇರುವುದಿಲ್ಲ. ಈಗಲೂ ಯುವಕರನ್ನು ಹುರುದುಂಬಿಸುತ್ತ ಅವರಲ್ಲಿ ಆಸಕ್ತಿ ಹುಟ್ಟಿಸುತ್ತ ಮಾರ್ಗದರ್ಶಕರಾಗಿ ಬಯಲಾಟ ಪ್ರಯೋಗಗೊಳ್ಳುವಂತೆ ಮಾಡುವ ಚೇತನ ಅವರು.

ದೊಡ್ಡವೀರಣ್ಣ ತಮ್ಮ ೧೦-೧೨ರ ಪ್ರಾಯದಲ್ಲಿಯೇ (೧೯೪೮ರಲ್ಲಿ) "ಕನಕಾಂಗಿ ಕಲ್ಯಾಣ" ಆಟದಲ್ಲಿ ಕನಕಾಂಗಿಯಾಗಿ ಸ್ತ್ರೀ ಪಾತ್ರದಿಂದ ರಂಗಭೂಮಿ ಪ್ರವೇಶಿಸಿದವರು. ೧೯೪೮ ರಿಂದ ೧೯೭೫ ರ ವರೆಗೆ ನಿರಂತರ ರಂಗದಲ್ಲಿ

ತೊಡಗಿಸಿಕೊಂಡು ದುಡಿದವರು. ಮೂರು ದಶಕದ ಹತ್ತಿರ ಹತ್ತಿರದವರೆಗೂ ಸಲ್ಲಿಸಿದ ಸೇವೆ ಸಣ್ಣದಲ್ಲ. ನಟರಾಗಿ, ಸಂಗೀತಗಾರರಾಗಿ, ಸಂಘಟಕರಾಗಿ, ಮಾರ್ಗದರ್ಶಕರಾಗಿ, ಸಂಪನ್ಮೂಲಭರಿತರಾಗಿ ಹೀಗೆ ವಿವಿಧ ಮುಖದಲ್ಲಿ ಜಾನಪದ ರಂಗಭೂಮಿಗೆ ಸೇವೆ ಸಲ್ಲಿದೆ. ಈ ಅವಧಿಯಲ್ಲಿ ಅನೇಕ ಏರಿಳಿತ ಅನೇಕ ಸಮಸ್ಯ ಕಂಡುದುಂಟು.

ತಮ್ಮ ಕಾಲದ ರಂಗಭೂಮಿಯನ್ನು, ರಂಗ ನಟರನ್ನು ಸ್ಮರಿಸಿಕೊಳ್ಳುತ್ತಿದ್ದಾಗ ಏನೋ ಅವ್ಯಕ್ತ ಸಂತಸ ಅನುಭವಿಸಿದಂತೆ. ಬಹು ಹೆಮ್ಮೆಯಿಂದ ಆ ದಿನಗಳನ್ನು ನೆನಪಿಸಿಕೊಳ್ಳುವ ವೀರಣ್ಣನವರು ತಮ್ಮ ಅಭಿನಯ ಕಾಲದಲ್ಲಿ ಮೈಕಿಲ್ಲ, ಲೈಟಿಲ್ಲ. ಈಗಿನಷ್ಟು ಅನುಕೂಲತೆಗಳಿಲ್ಲದಾಗಲೂ ಯಶಸ್ವಿಯಾಗಿ ಸಾವಿರಾರು ಜನರನ್ನು ರಂಜಿಸಿದ್ದೇವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆಗಿನ ಕಲಾವಿದರ ಕಂಠ ಏರಿಳಿತ ಹಾಡಿನ ಧ್ವನಿ ಪ್ರಶಾಂತ ವಾತಾವರಣದಲ್ಲಿ ಸುತ್ತಲೂ ಹತ್ತಿರದ ಹಳ್ಳಿಗಳಲ್ಲಿ ಕೇಳುವಷ್ಟು ಎನ್ನುವಾಗ ಆಶ್ಚರ್ಯವಾಗುತ್ತದೆ. ಈಗ ಮೈಕಿನಲ್ಲಿ ಮಾತು ಹೇಳಿದರೂ ಹಿಂದೆ ಕುಳಿತವರು ಮೈಕ್ ಮೈಕ್ ಎನ್ನುತ್ತಿರುತ್ತಾರೆ.

ಕನಕಾಂಗಿ ಕಲ್ಯಾಣದಲ್ಲಿ ಕನಕಾಂಗಿ ಪಾತ್ರದಿಂದ ಪ್ರಾರಂಭವಾದ ವೀರಣ್ಣನವರ ಅಭಿನಯ ಕ್ರಮೇಣ ಗಿರಿಜಾ ಕಲ್ಯಾಣದಲ್ಲಿ ನಾರದ ಹಾಗೂ ರುಕ್ಮಿಣಿ, ದಕ್ಷಬ್ರಹ್ಮದಲ್ಲಿ ಲಕ್ಷ್ಮಿ ಹಾಗೂ ಮನ್ಮಥ ಕನಕಾಂಗಿಯಲ್ಲಿ ಕನಕಾಂಗಿ ಹಾಗೂ ಬಲರಾಮ ಈ ಪಾತ್ರಗಳು ನಿರಂತರ ಬೆಳಗುತ್ತಲೇ ಬಂದಿವೆ. ಒಂದೊಂದು ಪಾತ್ರದ ಅಭಿನಯದಲ್ಲಿಯೂ ಮಿಂಚಿದ್ದುಂಟು. ಪ್ರತಿವರ್ಷ ಶಿವರಾತ್ರಿ ಹಾಗೂ ಪಂಪಾಪತಿ ಜಾತ್ರೆಗೆ ಬಯಲಾಟ ಪ್ರದರ್ಶನ ಗೊಳ್ಳಲೇಬೇಕು. ಕನಕಾಂಗಿಯಲ್ಲಿಯ ಬಲರಾಮ ಪಾತ್ರವಂತೂ ಭಾರೀ ಯಶಸ್ವಿಯಾಗಿ ಆ ಪಾತ್ರಕ್ಕಾಗಿಯೇ ಊರಿನ ಹಿರಿಯರು, ಅಭಿಮಾನಿಗಳು ಮತ್ತೆ ಮತ್ತೆ ಅದನ್ನೇ ಪ್ರಯೋಗಿಸಲು ಆಮಂತ್ರಿಸುತ್ತಿದ್ದರು. ಅವರ ಒಟ್ಟು ಅಭಿನಯದಲ್ಲಿ ಹೆಚ್ಚು ಪ್ರಯೋಗಗೊಂಡ ಆಟ ಕನಕಾಂಗಿ ಹಾಗೂ ಗಿರಿಜಾ ಕಲ್ಯಾಣ.

ವೀರಣ್ಣನವರಿಗೆ ರಂಗಾಸಕ್ತಿ, ಅಭಿನಯದತ್ತ ಒಲವು ಮೂಡಿದ್ದು ತಂದೆಯಿಂದಲೇ. ತಂದೆ ಕೂಡ ಉತ್ತಮ ಬಯಲಾಟ ಕಲಾವಿದರಾಗಿದ್ದರು. ತಂದೆಯ ಪ್ರೋತ್ಸಾಹ ತಂದೆಯ ಮಾರ್ಗದರ್ಶನವೇ ಇವರನ್ನು ಒಬ್ಬ ಉತ್ತಮ ನಟರನ್ನಾಗಿ ಮಾಡಲು ಸಾಧ್ಯವಾಗಿದೆ. ಕರಬಸಪ್ಪ ಮಾಸ್ತರ, ದೊಡ್ಡಣ್ಣ ಬಿಂಗಿ ಇವರಿಂದ ಸಂಗೀತ, ಹಾಡುಗಾರಿಕೆ ಕಲಿಯಲು ಸಾಧ್ಯವಾಯಿತೆಂದು ಸ್ಮರಿಸುತ್ತಾರೆ. ಅಭಿನಯದಲ್ಲಿ ಅಕ್ಕಸಾಲಿ ಭೀಮಣ್ಣ ಕೂಡ ಹೇಳಿಕೊಟ್ಟದ್ದು ಸ್ಮರಣೀಯ ಎನ್ನುತ್ತಾರೆ.

ವೀರಣ್ಣನವರು ಸಂಗೀತ ಕಲಾವಿದರೂ ಹೌದು ಶ್ರೀ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯದ ಶ್ರೀ ಎಂ. ಆರ್. ದುರ್ಗೇಶ, ಶ್ರೀ ಗೋವಿಂದರಾಜ ಬೊಮ್ಮಲಾಪುರ, ಶ್ರೀ ಸೋಮಶೇಖರ ಪಾಟೀಲ ಇವರೆಲ್ಲ ಸಂಗೀತ ಗುರುಗಳು. ಬಯಲಾಟದ

ಸಂಗೀತದಲ್ಲಿ ಆಗ ವಾಯಿಲಿನ್ ಪ್ರಮುಖವಾದ್ಯ. ವಾಯಿಲಿನ್ ನುಡಿಸುವುದು ಮುಮ್ಮೇಳ ಹಾಡುವುದು ಹೀಗೆ ಅಭಿನಯದಷ್ಟೇ ಬಯಲಾಟ ಪ್ರದರ್ಶನದಲ್ಲಿ ಸಂಗೀತ ಸೇವೆಯೂ ಸಲ್ಲಿದೆ.

ಕುರುಗೋಡ ಶಂಕರಪ್ಪ ಶ್ರೀಮತಿ ನಾಗಮ್ಮ ದಂಪತಿಗಳ ಮಗನಾಗಿ ೩೧-೮-೧೯೩೭ರಲ್ಲಿ ಗಂಗಾವತಿಯಲ್ಲಿ ಜನಿಸಿದ ವೀರಣ್ಣನವರು ಓದಿದ್ದು ಕನ್ನಡ ಪ್ರಾಥಮಿಕ ದವರೆಗೆ ಮಾತ್ರ. ೪ ಜನ ಸಹೋದರರು ಒಬ್ಬ ಸಹೋದರಿಯನ್ನು ಪಡೆದು ಬೆಳೆದಿದ್ದಾರೆ. ಎಲ್ಲಾ ಸಹೋದರರು (ಒಬ್ಬ ಸಹೋದರ ಹೊರತು ಪಡಿಸಿ) ಜಾನಪದ ರಂಗದಲ್ಲಿ ಮಿಂಚಿದವರೆ. ಎಲ್ಲರೂ ಸ್ಪರ್ಧಾತ್ಮಕವಾಗಿ ರಂಗದಲ್ಲಿ ಬೆಳೆದವರು.

ವೀರಣ್ಣನವರು ಬಯಲಾಟ ಕಲಾವಿದರಾಗಿ, ಸಂಗೀತಗಾರರಾಗಿ ಸೇವೆಸಲ್ಲಿಸುತ್ತ ಸಮಾಜಸೇವೆ, ಉದ್ಯಮದಲ್ಲಿಯೂ ಆಕರ್ಷಿಸಿದ್ದಾರೆ. ಗಂಗಾವತಿಯ ಪುರಸಭಾ ಸದಸ್ಯರಾಗಿ, ಕೋಳಿ ಸಾಕಣಿಕೆ ಹಾಗೂ ಹಾಲು ಉತ್ಪಾದನಾ ಸಂಘದ ಅಧ್ಯಕ್ಷರಾಗಿ, ವಿ. ಎಸ್. ಎಸ್. ಸಂಸ್ಥೆಯ ನಿರ್ದೇಶಕರಾಗಿ, ಕೊಟ್ಟೂರೇಶ್ವರ ಸಂಗೀತ ಸಂಸ್ಥೆಯ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಗಂಗಾವತಿಯಲ್ಲಿ ಪಂಡಿತ ಪಂಚಾಕ್ಷರ ಗವಾಯಿಗಳ ಪುಣ್ಯಸ್ಮರಣೆಯ ಕಾರ್ಯಕ್ರಮವನ್ನು ನಿರಂತರ ನಡೆಸಿಕೊಂಡು ಬಂದ ಕೀರ್ತಿ ವೀರಣ್ಣನವರದು.

ಗಂಗಾವತಿಯ ಸುತ್ತುಮುತ್ತಲು ಸಂಘ ಸಂಸ್ಥೆಗಳು ಈ ಕಲಾವಿದರನ್ನು ಸನ್ಮಾನಿಸಿವೆ. ಗದುಗಿನ ವೀರೇಶ ಪುಣ್ಯಾಶ್ರಮದಲ್ಲಿ ಪಂಡಿತ ಪುಟ್ಟರಾಜ ಅವರಿಂದ ಸನ್ಮಾನ ಸಲ್ಲಿದೆ. ಇತ್ತೀಚಿಗೆ ಗಂಗಾವತಿಯಲ್ಲಿ (೨೦೦೫) ಜರುಗಿದ ಪ್ರಥಮ ಜಾನಪದ ಮೇಳದ ಅಧ್ಯಕ್ಷರನ್ನಾಗಿ ಒಮ್ಮತದಿಂದ ಆಯ್ಕೆ ಮಾಡಿ ಗೌರವಿಸಲಾಗಿದೆ.

ಶ್ರೀ ವೀರಣ್ಣನವರು ಕೊಪ್ಪಳ ಜಿಲ್ಲೆ ಕಂಡ ಅಪರೂಪದ ಕಲಾವಿದರು, ಜಾನಪದ ರಂಗ ಸಂಪತ್ತು.

**ಕೆ. ದೊಡ್ಡವೀರಣ್ಣ**
**C/o ನೀಲಕಂಠೇಶ್ವರ ದೇವಸ್ಥಾನ**
**ಗಂಗಾವತಿ, ಜಿ : ಕೊಪ್ಪಳ**

## ರಂಗಪ್ಪ ಮಾರ್ತಂಡಪ್ಪ ಐಲಿ

ಗಂಗಾವತಿಯಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದ ಹಿರಿಯ ನಟ-ನಿರ್ದೇಶಕ ಕುಡಗೋಡ ದೊಡ್ಡವೀರಣ್ಣನವರ ಪ್ರಭಾವ, ಪ್ರೇರಣೆ, ಪ್ರೋತ್ಸಾಹ ರಂಗಕ್ಷೇತ್ರಕ್ಕೆ ಬರಲು ಕಾರಣವೆನ್ನುವ ರಂಗಪ್ಪ ಐಲಿ ಗದಗ-ಬೆಟಗೇರಿಯಲ್ಲಿ ೧-೨-೧೯೭೪ರಲ್ಲಿ ಜನ್ಮಪಡೆದರೂ ಬಾಲ್ಯದಲ್ಲಿಯೇ ಗಂಗಾವತಿಗೆ ಬಂದು ನೆಲೆಸಿ ದೀರ್ಘ ಬದುಕನ್ನು ಗಂಗಾವತಿಯಲ್ಲಿಯೇ ಕಳೆದವರು. ತಂದೆ ಮಾರ್ತಂಡಪ್ಪ ತಾಯಿ ದೊಡ್ಡಮ್ಮ ನೇಯಕಾರ ಮನೆತನದವರು. ರಂಗಪ್ಪನವರ ಓದು SSLC ಗಂಗಾವತಿ ಪುರಸಭೆಯಲ್ಲಿಯೇ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದವರು.

ಗಂಗಾವತಿಯಲ್ಲಿ ೧೬-೧೮ರ ಪ್ರಾಯದಲ್ಲಿ ಗಿರಿಜಾ ಕಲ್ಯಾಣ ಕಥೆಯಲ್ಲಿ ನಂದಿಶ್ವರನ ಪಾತ್ರದಿಂದ ರಂಗಭೂಮಿ ಪ್ರವೇಶಿಸಿದರು ಮುಂದೆ ನಿವೃತ್ತಿಯವರೆಗೂ ನಾಲ್ಕಾರು ಕಥೆಗಳಲ್ಲಿ ಹೆಚ್ಚು ಕಡಿಮೆ ಪ್ರತಿವರ್ಷ ಅಭಿನಯಿಸುತ್ತ ಬಂದರು. ಅವರ ಇತರ ಪಾತ್ರಗಳೆಂದರೆ ಕನಕಾಂಗಿ ಕಥೆಯಲ್ಲಿ ಘಟೋದ್ಗಜ, ದಕ್ಷಬ್ರಹ್ಮರಲ್ಲಿ ದಕ್ಷ ಬ್ರಹ್ಮ ಅಭಿಮನ್ಯು ಕಾಳಗದಲ್ಲಿ ಸುಭದ್ರ (ಸ್ತ್ರೀ ಪಾತ್ರ) ಗಿರಿಜಾ ಕಲ್ಯಾಣದಲ್ಲಿ ನಾರದ ಹಾಗೂ ಪರಮೇಶ್ವರ ಇವು ಇವರ ಪ್ರಮುಖ ಪಾತ್ರಗಳು.

ದಕ್ಷಬ್ರಹ್ಮ ಕಥೆಯ ಘಟೋದ್ಗಜ ಇವರ ಜನಮೆಚ್ಚಿಕೆಯ ಪಾತ್ರ. ಅವರಿಗೂ ತೃಪ್ತಿ ತಂದ ಪಾತ್ರ ಕೂಡ ಅದೇ ಆಗಿದೆ. ಈ ಪಾತ್ರದ ಭರ್ಜರಿ ವೇಷಭೂಷಣ ದೇವತೆಗಳಿಗೆ ಸವಾಲಾಗಿ ಹೇಳುವ ಭಾರೀ ಭಾರೀ ಮಾತುಗಳು ರೌದ್ರ, ಭಯಾನಕದ ಪ್ರಸಂಗ ಒಟ್ಟಿನಲ್ಲಿ ಅಭಿನಯಕ್ಕೆ ಸಾಕಷ್ಟು ಅವಕಾಶವಿರುವುದರಿಂದ ಮಾತು, ಹಾಡು, ಅಭಿನಯ ವ್ಯಕ್ತ ಪಡಿಸಲು, ಪ್ರತಿಭೆ ಪ್ರದರ್ಶಿಸಲು ಸಾಧ್ಯವಿದ್ದು ರಂಗಪ್ಪನವರು ಈ ಪಾತ್ರದಿಂದ ಜನಮನ ಸೆಳೆದವರು. ಈಗಲೂ ಆ ಕಥೆಯ ಎಲ್ಲಾ ಪಾತ್ರಗಳ ಮಾತು ಬಾಯಿಪಾಠ ಅವರಿಗೆ,

ಗಿರಿಜಾಕಲ್ಯಾಣದ ಕಥೆಯ ಮನ್ಮಥನ ಮಾತು ಹೇಳಿದಾಗ ನಾನು ಆಶ್ಚರ್ಯಪಟ್ಟೆ. ಆ ಮಾತಿನಲ್ಲಿಯ ಸಾಹಿತ್ಯ ಮನ್ಮಥ ಪ್ರಪಂಚದ ಸೃಷ್ಟಿಯ ಅದ್ಭುತ ಅರ್ಥಪೂರ್ಣ ಮಾತುಗಳನ್ನು ಕೇಳಿದಾಗ ಆ ಪಾತ್ರ ನನ್ನೆದುರು ಸುಳಿದು ಹೋಯಿತು. ಅವರು ತಮ್ಮ ದೀರ್ಘರಂಗದನುಭವ ಹೇಳುವುದು ಕೇಳಿದಾಗ ಅವರ ನಿಷ್ಠೆ, ಶ್ರದ್ಧೆ, ಆಸಕ್ತಿ ರಂಗಭೂಮಿಯ ಬಗ್ಗೆ ಇದ್ದ ಗೌರವ, ಪಾವಿತ್ರತೆ ಎಲ್ಲವೂ ಸ್ಪಷ್ಟವಾಗುತ್ತಿದೆ.

ರಂಗಪ್ಪನವರನ್ನು ಪ್ರೇಕ್ಷಕರ ಬಗ್ಗೆ ಪ್ರಶ್ನಿಸಿದಾಗ..... ಸುಮಾರು ಐದು ಸಾವಿರ ಜನ ಸೇರುತ್ತಿದ್ದರು ಎನ್ನುವ ಮಾತು ಆಶ್ಚರ್ಯವೆನಿಸುತ್ತದೆ. ಊರಿನ ಜನರು, ಸುತ್ತಲೂ ಹಳ್ಳಿಯ ಜನರು, ಪಾತ್ರಧಾರಿಗಳ ಬಂಧು-ಬಳಗ ಹೀಗೆ ಜನ ತಂಡೋಪ ತಂಡದಲ್ಲಿ ಬಂದು ಸೇರಿದಾಗ ಅಟ್ಟದಲ್ಲಿ ಕುಳಿತು ನೋಡಿದರೆ ಜನ ಸಾಗರದಂತೆ ಕಾಣುತ್ತಿರುತ್ತಿತ್ತು ಎನ್ನುವ ಮಾತು ಪ್ರೇಕ್ಷಕರ ಆಸಕ್ತಿಯನ್ನೇ ಸ್ಪಷ್ಟಪಡಿಸುತ್ತಿದೆ. ಹತ್ತು ಗಂಟೆಗೆ ಆಟ ಪ್ರಾರಂಭವಾದರೆ ಬೆಳಕು ಹರಿಯುವ ಹೊತ್ತಿಗೆ ಮುಗಿಯುತ್ತಿತ್ತು. ಜನಸ್ಥಬ್ಧವಾಗಿ ಶಾಂತವಾಗಿ ಕೂತಿರುತ್ತಿದ್ದರೆಂದರೆ ಆಶ್ಚರ್ಯವೆನಿಸಿದರೂ ಸತ್ಯಸಂಗತಿಯದು. ಅಷ್ಟೇ ಏಕೆ ಅವರು ಹೇಳಿದಂತೆ ಈಗಲೂ ಗಂಗಾವತಿ ಹಾಗೂ ಹತ್ತಿರದ ಆನೆಗೊಂದಿಯಲ್ಲಿ ಅಂಥ ಆಸಕ್ತಿಯ ಪ್ರೇಕ್ಷಕರಿರುವುದರಿಂದಲೇ ಇನ್ನೂ ಅಲ್ಲಿ ಜಾನಪದ ರಂಗ ಭೂಮಿ ಶ್ರೀಮಂತನಾಗಿಯೇ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಗಂಗಾವತಿಯಲ್ಲಿ ಪ್ರಮುಖರ, ಧುರೀಣರ ಪ್ರೋತ್ಸಾಹ ಇಂದಿಗೂ ಇದೆ. ದೊಡ್ಡವೀರಣ್ಣ ಎಂ. ನಾಗಪ್ಪ ತಟ್ಟಿ ಶಿವಪ್ಪ ಹೀಗೆ ಅನೇಕ ಪ್ರಮುಖರು ಸಹಾಯ-ಸಹಕಾರ ನೀಡಿ ಪ್ರೋತ್ಸಾಹಿಸುತ್ತ ಬಂದುದರಿಂದಲೇ ಅಲ್ಲಿ ಇನ್ನೂ ಬಯಲಾಟಗಳು, ಕಲಾವಿದರು ಜೀವಂತವಾಗಿ ಉಳಿಯಲು ಸಾಧ್ಯವಾಗಿದೆ.

ರಂಗಪ್ಪ ಐಲಿ
**C/o** ನೀಲಕಂಠೇಶ್ವರ ದೇವಸ್ಥಾನ
ಗಂಗಾವತಿ, ಜಿ : ಕೊಪ್ಪಳ

# ಶಂಕರಪ್ಪ ಗುರುಪಾದಪ್ಪ ಮಾಂತಾ

ಶಂಕರಪ್ಪ ಜನ್ಮ ತಾಳಿದ್ದು ಬಳ್ಳಾರಿ ಜಿಲ್ಲೆಯ ಕುರುಗೋಡ ಗ್ರಾಮವಾಗಿದ್ದರೂ ಬಾಲ್ಯದಲ್ಲಿಯೇ ಬಂದು ನೆಲೆಸಿದ್ದು ಗಂಗಾವತಿಯಲ್ಲಿ. ಬಯಲಾಟದ ಕಲಾವಿದನೆಂದು ಗುರುತಿಸಿಕೊಂಡದ್ದು ಪ್ರಸಿದ್ಧಿ ಪಡೆದಿದ್ದು ಇಲ್ಲಿಯೆ. ಜೀವನದ ದೀರ್ಘ. ಅವಧಿ ಗಂಗಾವತಿಯಲ್ಲಿಯೇ ಕಳೆದು ಸಂಪೂರ್ಣ ಗಂಗಾವತಿ ನಿವಾಸಿ ಈಗ.

ಗುರುಪಾದಪ್ಪ-ನಾಗಮ್ಮ ನೇಕಾರ ಮನೆತನದಲ್ಲಿ ಜನ್ಮ ಪಡೆದ ಶಂಕ್ರಪ್ಪನವರು ಟೇಲರಿಂಗ ಉದ್ಯೋಗ ಮಾಡಿಕೊಂಡು ಬಂದವರು. ಉದ್ಯೋಗದ ಜೊತೆ ಜೊತೆ ರಂಗಾಸಕ್ತಿಯಿಂದ ರಂಗಭೂಮಿಯಲ್ಲಿಯೂ ದೀರ್ಘ ಸೇವೆಸಲ್ಲಿಸಿದವರು. ೮-೧೧ರ ಬಾಲ್ಯದಲ್ಲಿಯೇ ದುಶ್ಯಾಸನ ಕಥೆಯಲ್ಲಿ ಬಾಲಕೃಷ್ಣನ ಪಾತ್ರದಿಂದ ಜಾನಪದ ರಂಗಭೂಮಿ ಪ್ರವೇಶಿಸಿದ ಶಂಕರಪ್ಪ ಐದು ದಶಕಗಳಿಂದ ನಿರಂತರ ಅಭಿನಯಿಸುತ್ತ ಜನಮನ ಸೆಳೆದವರು.

ಗಿರಿಜಾ ಕಲ್ಯಾಣ – ಕಂಠೀರವ, ಕನಕಾಂಗಿ – ಕರ್ಣ, ದಕ್ಷಬ್ರಹ್ಮ-ನಂದೀಶ್ವರ, ಅಭಿಮನ್ಯು ಕಾಳಗ-ದ್ರೋಣ, ದೇವೀ ಮಹಾತ್ಮೆ ದೇವಿ ಪಾತ್ರಗಳಿಂದ ಶಂಕ್ರಪ್ಪನವರ ಅಭಿನಯ ಶ್ರೀಮಂತಗೊಂಡಿದೆ. ಗಂಗಾವತಿಯ "ನೀಲಕಂಠೇಶ್ವರ ದೇವಾಲಯ" ತಂಡದಿಂದ ನಿರಂತರ ರಂಗದಲ್ಲಿ ಕಾಣಿಸಿಕೊಂಡಿದ್ದಾರೆ.

ದೇವಿಮಹಾತ್ಮೆಯ ಬಯಲಾಟದಲ್ಲಿ ದೇವಿ ಪಾತ್ರದಿಂದ ಸಾಕಷ್ಟು ಪ್ರಸಿದ್ಧಿ ಪಡೆದ ಶಂಕರಪ್ಪ ಆ ಪಾತ್ರದ ವಿಶಿಷ್ಟ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ. ಆ ಪಾತ್ರ ಅವರಿಗನೂ ತೃಪ್ತಿ ತಂದ ಪಾತ್ರವಾಗಿದೆ. ಆ ಪಾತ್ರದ ಬಗ್ಗೆ ಶಂಕರಪ್ಪನವರಿಗೆ ಬಹಳಷ್ಟು ಶ್ರದ್ಧೆ, ಭಕ್ತಿ, ದೇವೀ ಕಥೆ ಆಡುವುದೆಂದು ಗೊತ್ತು ಪಡಿಸಿ ತಾಲೀಮ್ ಹಚ್ಚಿದರಾಯಿತು. ಶಂಕ್ರಪ್ಪನವರ ಕಟ್ಟುನಿಟ್ಟು ವ್ರತ. ಒಂದೇ ಹೊತ್ತು ಊಟ, ಮಧ್ಯ, ಮಾಂಸ ಮುಟ್ಟುವಂತಿಲ್ಲ.

ಸ್ನಾನ ಮಾಡಿಯೇ ತಾಲೀಮ್ ಮನೆಗೆ ಪ್ರವೇಶ. ರಂಗಭೂಮಿ ಪ್ರವೇಶಿಸಿದಾಗಂತೂ ಸಾಕ್ಷಾತ್ ದೇವಿ ಅವತರಿಸಿದ್ದಾಳೇನೋ ಎನ್ನುವಂತಹ ಭಾವಾವೇಶ. ಎದುರಿನ ಶುಂಭ–ನಿಶುಂಭ ಪಾತ್ರಧಾರಿಗಳ ಝುಂಗಾಬಲವೇ ಉಡುಗಿ ಭಯಭೀತರಾಗುತ್ತಿದ್ದರೆನ್ನುವ ಮಾತು ಕೇಳಿದಾಗಾಗಲಿ, ರಾಕ್ಷಸರ ಸಂಹಾರದ ಸಂದರ್ಭದಲ್ಲಿ ಕುಣಿಯುವ ಆವೇಶದ ಸಂದರ್ಭ ಕೇಳಿದಾಗಾಗಲಿ ಅವರ ಪಾತ್ರ ತಲ್ಲೀನತೆ ಹಾಗೂ ಉತ್ತಮ ಅಭಿನಯ ಸ್ಪಷ್ಟವಾಗುತ್ತಿದೆ ಅಷ್ಟೇ ಪ್ರಸಿದ್ಧ ಇನ್ನೊಂದು ಪಾತ್ರ. "ವೀರ ಅಭಿಮನ್ಯ ಕಾಳಗ" ಕಥೆಯ ದ್ರೋಣನ ಪಾತ್ರ.

ರಂಗಭೂಮಿಯಲ್ಲಿ ಅಭಿನಯ ಕಲಿಸಿದವರು ಬಿಂಗಿ ದೊಡ್ಡಪ್ಪ ತರಗೇರಿ. ಇವರು ಹೆಜ್ಜೆ ಹಾಕುವುದನ್ನು, ಮಾತುಗಳನ್ನು ನುಡಿಸುವುದನ್ನು ಹೇಳಿಕೊಟ್ಟವರೆಂದು ಆಗಾಗ ಸ್ಮರಿಸುತ್ತಾರೆ.

ಶಂಕರಪ್ಪನವರನ್ನು ಸಂದರ್ಶಿಸಿದಾಗ ಅವರ ಅನುಭವ ಅವರ ಪಾತ್ರಗಳ ಮಾತು ಕೇಳಿದರನೇ ಸಂತೋಷವೆನಿಸುತ್ತಿದೆ. ಆಗ ಅವರು ರಂಗಪ್ರವೇಶಿಸಿದಾಗ ವಿದ್ಯುತ್ ದೀಪಗಳಾಗಲಿ, ಧ್ವನಿವರ್ಧಕಗಳಾಗಲಿ ಇರಲಿಲ್ಲ. ಇನ್ನೊಂದು ಪ್ರಮುಖ ಅಂಶ ಸ್ತ್ರೀ ಪಾತ್ರಗಳನ್ನು ಪುರುಷರೇ ಸ್ತ್ರೀಯರು ಬೆರಗಾಗುವಂತೆ ಅಭಿನಯಿಸುತ್ತಿದ್ದರು. ಆಗ ಜನರಲ್ಲಿ ಆಸಕ್ತಿ ಇತ್ತು. ಅದಕ್ಕೆ ಬಲವಾದ ಕಾರಣ ಮನರಂಜನೆಗೆ ಈ ರಂಗಭೂಮಿಯೊಂದೇಯಾಗಿತ್ತು. ಈಗಿನಂತೆ ಹಲವಾರು ಮಾಧ್ಯಮಗಳಿರಲಿಲ್ಲ. ಈಗ ಜಾನಪದ ರಂಗಭೂಮಿ ಬಡವಾಗುತ್ತಿದೆ ಎನ್ನುವ ಮಾತನ್ನು ಬಹಳಷ್ಟು ನೊಂದು ಹೇಳುವ ಶಂಕರಪ್ಪ ಇಂದಿನ ಸ್ಥಿತಿಗೆ ಬಹಳಷ್ಟು ನಿರಾಶೆ ಹೊಂದಿದ್ದಾರೆ.

ಏನೇ ಆದರೂ ಗಂಗಾವತಿಯಲ್ಲಿ ಇನ್ನೂ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಪ್ರತಿವರ್ಷ ಬಯಲಾಟಗಳು ಪ್ರದರ್ಶಿಸುತ್ತಲೇ ಇವೆ. ನೀಲಕಂಠೇಶ್ವರ ಸಂಘ, ಚಲುವಾದಿಯರ ಮೇಳ, ಎಲಿಗಾರ ಓಣಿ ಮೇಳ ಸಶಕ್ತವಾಗಿದ್ದು ಉತ್ತಮ ಆಟಗಳನ್ನು ಪ್ರದರ್ಶಿಸುತ್ತ ಜಾನಪದ ರಂಗಭೂಮಿಯ ಜೀವಂತಿಕೆಗೆ ಸಾಕ್ಷಿಯಾಗಿವೆ. ಹಿಂದಿನ ಅನೇಕ ಪ್ರಸಿದ್ಧ ಕಲವಿದರು ರಂಗಕ್ಕಾಗಿ ದುಡಿದು ಹೋಗಿದ್ದಾರೆ.

ಶಂಕರಪ್ಪನವರಿಗೆ ತಂದೆಯ ರಂಗ ಪ್ರಭಾವವೂ ಆಗಿದೆ. ತಂದೆ ಕೂಡ ರಂಗಾಸಕ್ತರು ರಂಗಭೂಮಿ ಸೇವೆಸಲ್ಲಿಸಿದವರು. ಶಂಕರಪ್ಪನವರ ಉತ್ತಮ ಅಭಿನಯಕ್ಕೆ ನಾಡಿನ ಕೆಲವಡೆ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಶರಕರಪ್ಪ ಕೊಪ್ಪಳ ಜಿಲ್ಲೆಯ ರಂಗಕಲಾವಿದರಲ್ಲಿ ಬಹುಬೇಗ ಗುರುತಿಸಿಕೊಳ್ಳುವ ಕಲಾವಿದರೆನ್ನುವಲ್ಲಿ ಎರಡು ಮಾತಿಲ್ಲ.

ಶಂಕರಪ್ಪ ಮಾಂತಾ
C/o ನೀಲಕಂಠೇಶ್ವರ ದೇವಸ್ಥಾನ
ಗಂಗಾವತಿ, ಜಿ : ಕೊಪ್ಪಳ

# ನಾಗಪ್ಪ ಡೋಣಾಪುರ

ಸಾರಥಿ ನಾಗಪ್ಪನೆಂದೇ ಪ್ರಸಿದ್ಧಿ ಹೊಂದಿರುವ ಗಂಗಾವತಿ ತಾಲೂಕಿನ ಡೋಣಾಪುರ ಗ್ರಾಮದ ನಾಗಪ್ಪ ಇಂದಿಗೂ ಜನಪ್ರಿಯ ನಟ. ಆತನ ಸಾರಥಿ ಮಾತು ಈ ಎಂಬತ್ತರ ವೃದ್ಧಾಪ್ಯದಲ್ಲಿಯೂ ಕೇಳಬೇಕು. ಸಮಯ, ಸಂದರ್ಭ, ಊರು, ಕೇರಿ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಆಗಿಂದಾಗಲೆ, ಪ್ರಾಸ ಬದ್ಧವಾಗಿ ಮಾತು ಹೆಣೆಯುವುದು ಸುಲಭದ ಮಾತಲ್ಲ. ಆ ಭಾಗದ ಜಾನಪದ ರಂಗಭೂಮಿಗೆ ನಾಗಪ್ಪನ ಕೊಡಿಗೆ ಅಪಾರ.

ಜೀವನದ ದೀರ್ಘ ಅವಧಿಯಲ್ಲಿ ಅನೇಕ ಬಯಲಾಟಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಿದ್ದರೂ ಸಾರಥಿ ಪಾತ್ರದಿಂದಲೇ ಜನಪ್ರಿಯ. ಸುತ್ತಲೂ ಹಳ್ಳಿಗಳಲ್ಲಿ ಬಯಲಾಟವಿದ್ದರೆ ಬಹುಪಾಲು ಆಟಗಳಲ್ಲಿ, ನಾಗಪ್ಪನೇ ಸಾರಥಿ. ಅಷ್ಟೇ ಏಕೆ, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಯ ಅನೇಕ ಕಡೆಯಿಂದ ನಾಗಪ್ಪನಿಗೆ ಆಹ್ವಾನ, ಹಾಗೆ ಸಾರಥಿ ಪಾತ್ರಕ್ಕೆ ಹೋದಾಗ ವಿಶೇಷ ಆತಿಥ್ಯ, ಗೌರವ, ಮನ್ನಣೆ.

ಬಯಲಾಟಗಳಲ್ಲಿ ಪಾತ್ರಗಳನ್ನು ಪರಿಚಯಿಸುವುದು ತನ್ನ ಪರಿಚಯ ಪಾತ್ರಗಳಿಗೆ ತಿಳಿಸುವುದು, ಪಾತ್ರ-ಪಾತ್ರಗಳ ಕೊಂಡಿಯಾಗಿ ಕಾರ್ಯನಿರ್ವಹಿಸುವ ಸಾರಥಿ ಇಡೀ ಆಟ ಮುಗಿಯುವವರೆಗೂ ರಂಗದಲ್ಲಿ ಕಾಣಿಸಿಕೊಳ್ಳುತ್ತಾನೆ. ಹಾಗೆ ನೋಡಿದರೆ ಚಾಣಾಕ್ಷನಿದ್ದ ಸಾರಥಿಗೆ ಕಥೆಯಲ್ಲಿಯ ಮಾತುಗಳೇ ಬೇಕಾಗಿಲ್ಲ.

ನಾಗಪ್ಪನಿಗೆ ಅಂಥ ಸಾರಥಿ ಮಾತು ಹೇಳಲು ರಂಗ ಭೂಮಿಯೇ ಬೇಕೆಂದಿಲ್ಲ. ಸಮಯ ಸಂದರ್ಭಕ್ಕೆ ಚಾಣಾಕ್ಷತನದಿಂದ ಮಾತು ಜೋಡಿಸಿ ಎಲ್ಲಿಯೇ ಆಗಲಿ ಹೇಳಿಬಿಡುವುದು ವಾಡಿಕೆ. ಒಂದು ಉದಾಹರಣೆ : ನಾಗಪ್ಪ ಬಸ್ಸಿನಲ್ಲಿ ಹೊರಟಾಗ ಕೂಡಲು ಸ್ಥಳವಿಲ್ಲದೆ ನಿಂತಾಗ ಪಕ್ಕದಲ್ಲಿ ಕೂತಿದ್ದ ಗೌಡರೊಬ್ಬರು ಕಛೇರಿಯಲ್ಲಿ

ಲಂಚಕೊಟ್ಟರೂ ತಮ್ಮ ಕೆಲಸವಾಗದಿದ್ದುದ್ದಕ್ಕೆ ಪೇಚಾಡುತ್ತ ಯಾರದೋ ಮುಂದೆ ಹೇಳುವುದನ್ನು ಕೇಳಿಸಿಕೊಂಡ ನಾಗಪ್ಪ ಅಲ್ಲಿಯೇ ಅದಕ್ಕೊಂದು ಮಾರ್ಮಿಕ ಮಾತು ಹೆಣೆದು ಹೇಳಿದಾಗ ಗೌಡರು ನಾಗಪ್ಪನಿಗೆ ಸ್ಥಳ ಮಾಡಿ ಪಕ್ಕದಲ್ಲಿ ಕೂಡಿಸಿಕೊಂಡದ್ದು ಕೇಳಿದಾಗ ನಾಗಪ್ಪನ ಪ್ರತಿಭೆಗೆ, ಬುದ್ಧಿವಂತಿಕೆಗೆ ನಿದರ್ಶನ.

ಇಂಥದ್ದೇ ಇನ್ನೊಂದು ಪ್ರಸಂಗ. ಸಿಂಧನೂರು ತಾಲೂಕಿನ ಜಾಲಿಹಾಳದಲ್ಲಿ "ಕರ್ಣಾರ್ಜುನರ ಕಾಳಗ" ಬಯಲಾಟದ ಸಾರಥಿ ಪಾತ್ರಕ್ಕೆ ಹೋದಾಗ ಇಂದಿನ ಎಂ. ಪಿ. ವಿರುಪಾಕ್ಷಪ್ಪನವರು ಆಗ ಎಂ.ಎಲ್.ಸಿ. ಅತಿಥಿಯಾಗಿ ಬಂದದ್ದನ್ನು ಗಮನಿಸಿ ಸಂದರ್ಭೋಚಿತವಾಗಿ ಅವರನ್ನು ಕುರಿತು ಸಾರಥಿ ಮಾತು ಹೇಳಿದಾಗ ಮಾನ್ಯ ವಿರುಪಾಕ್ಷನವರು ಸಾರಥಿಗೆ ಸನ್ಮಾನಿಸಿ ೨೫ರೂ. ಆಯಾರು ಮಾಡಿದ್ದನ್ನು ನಾಗಪ್ಪ ಈಗಲೂ ನೆನಪಿಸಿಕೊಳ್ಳುತ್ತಾನೆ.

ನಾಗಪ್ಪ ತಮ್ಮ ದೀರ್ಘರಂಗಭೂಮಿ ಸೇವೆಯಲ್ಲಿ ಅಭಿನಯಿಸಿದ ಪಾತ್ರಗಳೆಂದರೆ.....

ಕನಕಾಂಗಿ – ಬೃಹಸ್ಮತಿ ಬಬ್ರುವಾಹನ – ಭೀಮ ದುಶ್ಶಾಸನ – ಭೀಮ

ಅಭಿಮನ್ಯು ಕಾಳಗ–ಕೌರವ ಮಾರ್ಕಂಡೇಯ–ಮೃತ್ಯು ದೇವತೆ ಹಾಗೂ ಬೃಂಗಿ

ಸಾರಥಿ ಪಾತ್ರಕ್ಕಂತೂ ಲೆಕ್ಕವಿಲ್ಲ. ಸುಮಾರು ಮುನ್ನೂರು ನಾಲ್ಕುನೂರು ಪ್ರಯೋಗಗಳಾಗಿರಬೇಕೆನ್ನುತ್ತಾರೆ. ನಾಗಪ್ಪನವರಿಗೆ ತಮ್ಮ ಹಳ್ಳಿ ಹಾಗೂ ಸುತ್ತಮುತ್ತಲಿನ ಹಳ್ಳಿಯಲ್ಲಿ ಈಗಲೂ ಗೌರವ – ಆದರದಿಂದ ಕಾಣುತ್ತಾರೆ. ತಮ್ಮ ಭಾಗದ ಕಲಾಸಂಪತ್ತು ಎಂದು ಹೇಳುವ ಅಲ್ಲಿಯ ಜನರ ಪ್ರೀತಿ, ವಿಶ್ವಾಸ, ಗೌರವ ಸ್ಪಷ್ಟವಾಗುತ್ತಿದೆ.

ನಾಗಪ್ಪ ಜನ್ಮ ತಾಳಿದ್ದು ಡೋಣಾಪುರ ಗ್ರಾಮದ ಅಯ್ಯಪ್ಪ ಬಕಾರ ಈರಮ್ಮ ದಂಪತಿಗಳ ಮಗನಾಗಿ. ಕನ್ನಡ ಪ್ರಾಥಮಿಕದವರೆಗೆ ವಿದ್ಯಾಭ್ಯಾಸ. ಹದಿಹರೆಯಲ್ಲಿ ಅಟ್ಟವೇರಿದ ನಾಗಪ್ಪ ಇತ್ತೀಚಿಗೆ ರಂಗದಿಂದ ನಿವೃತ್ತಿ ಹೊಂದಿದ್ದಾನೆ. ಆದರೂ ರಂಗಾಸಕ್ತಿ ಕಳೆದುಕೊಂಡಿಲ್ಲ. ಹಿಂದಿನ ಆಟ–ದೊಡ್ಡಾಟಗಳ ಬಗ್ಗೆ ಜ್ಞಾಪಿಸಿದರೆ ಸಾಕು ಆ ದಿನಗಳನ್ನು ಸ್ಮರಿಸಿಕೊಳ್ಳುತ್ತ ಖುಷಿ ಪಡುತ್ತಾನೆ. ಶಕ್ತಿ ಸಾಲದೇ ಹೋದರು ಬೃಹಸ್ಪತಿ ಹಾಗೂ ಭೀಮನ ಮಾತುಗಳನ್ನು ಅದೇ ಪೌರುಷ ದರ್ಪದಲ್ಲಿ ಹೇಳಲು ಪ್ರಯತ್ನಿಸಿದಾಗ ಖುಷಿ ಎನಿಸುತ್ತದೆ.

ನಾಗಪ್ಪನವರಿಗೆ ಗುರುವಾಗಿ ಹೇಳಿಕೊಟ್ಟವರು ಬೂದಗುಂಪಿ (ಗಣಂಗಳು) ಅಯ್ಯನವರು ಹಾಗೂ ಕರೂರು ತಮ್ಮಣ್ಣಪ್ಪನವರು.

ಇಂದಿನ ಪೀಳಿಗೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಎಂದಾಗ ಬಹಳ ನೊಂದು ಹೇಳುತ್ತಾರೆ. "ಈಗಿನವರಿಗೆ ಇಂಥ ಆಟ-ದೊಡ್ಡಾಟ ಬೇಕಾಗಿಲ್ಲ ಸರ್ ಅಷ್ಟೇ ಅಲ್ಲ ನಾನು ಹೇಳೋ ಮಾತು-ಪದ ಕೇಳುವ ತಾಳ್ಮೆಯೂ ಇಲ್ಲ. ಒಂದೊಂದು ಸಲ ಊಟವಾದ ಮೇಲೆ ಹೊರಗೆ ಹೊರಸಿನ ಮೇಲೆ ಮಲಗಿ ಖುಷಿಯಿಂದ ಬಯಲಾಟದ ಪದ ಹಾಡಿದರೆ ಮನೆಯ ಹುಡುಗರು, ಅಕ್ಕಪಕ್ಕದವರು ಏನ ಹಾಡ್ತಿಯಪ್ಪ ಸುಮ್ನ ಮಲ್ಕೊ ಯಾರಿಗೆ ಬೇಕು ನಿನ್ನ ಹಾಡು ಎಂದಾಗ ಈ ಕಲಾವಿದನಿಗಾಗುವ ನೋವು ವ್ಯಥೆ ಇಂದಿನ ದಿನಮಾನಗಳಲ್ಲಿ ಗಂಭೀರವಾಗಿ ಚಿಂತಿಸುವಂತಹದ್ದು.

**ನಾಗಪ್ಪ ದೋಣಾಪುರ**
**ಅಂಚೆ : ದೋಣಾಪುರ**
**ತಾ : ಗಂಗಾವತಿ**
**ಜಿ : ಕೊಪ್ಪಳ**

# ಚಿದಾನಂದಪ್ಪ ಮುಷ್ಟೂರ

ಗಂಗಾವತಿ ತಾಲೂಕಿನ ಮುಷ್ಟೂರ ಗ್ರಾಮಕ್ಕೆ ಮೇಲಿಂದ ಮೇಲೆ ದಯಮಾಡಿಸುತ್ತಿದ್ದ ಚಿಕೇನಕೊಪ್ಪದ ಪೂಜ್ಯಶ್ರೀ ಚೆನ್ನವೀರ ಶರಣರು ಅಲ್ಲಿ ಅನುಷ್ಠಾನ ಗೈದು ಜನರನ್ನು ಭಕ್ತಿಮಾರ್ಗದತ್ತ ; ಶ್ರಮ-ಶ್ರದ್ಧೆಯತ್ತ ತಂದು ಅಲ್ಲಿಯ ಆರಾಧ್ಯ ದೈವವಾದರು. ಕೊಪ್ಪಳ ಜಿಲ್ಲೆ ಕಂಡ ಬೆಳಕಿನ ಕಿರಣ ಈ ಶರಣರು.

ಮುಷ್ಟೂರು ಗ್ರಾಮದಲ್ಲಿ ೧೯೬೮ ರಲ್ಲಿ ಬಯಲಾಟದ ಸಂಘಟನೆ ಮಾಡಿ ಆ ತಂಡ ನಿರಂತರ "ಗಿರಿಜಾ ಕಲ್ಯಾಣ" ಬಯಲಾಟ ಪ್ರಯೋಗಗೊಳ್ಳುವಂತೆ ಆಶೀರ್ವದಿಸಿದರು. ಗಿರಿಜಾ ಕಲ್ಯಾಣ ಪ್ರಯೋಗಗೊಳ್ಳುವಾಗ ಶರಣರು ಆಟ ನೋಡುತ್ತ ನೋಡುತ್ತ ತನ್ಮಯರಾಗಿ ಶಿವ-ಪಾರ್ವತಿಯರ ಕಲ್ಯಾಣದ ದೃಶ್ಯ ಕಣ್ಣು ತುಂಬಿ ಕೊಂಡು ಖುಷಿಪಡುತ್ತಿದ್ದರು. "ಗಿರಿಜಾ ಕಲ್ಯಾಣ" ಕೇವಲ ಒಂದು ಬಯಲಾಟವಾಗದೇ ಭಕ್ತಿಯ ಸೆಲೆಯಾಗಿ ಹರಿಯಿತು ಆ ಗ್ರಾಮದಲ್ಲಿ.

"ಶರಣರ ಬಯಲಾಟ ಬಳಗ" ಇಂದಿಗೂ ಅಸ್ತಿತ್ವದಲ್ಲಿದ್ದು ವರ್ಷಕ್ಕೊಮ್ಮೆ "ಗಿರಿಜಾ ಕಲ್ಯಾಣ" ಆಟ ಪ್ರಯೋಗಿಸುತ್ತಲೇ ಇದೆ. ಈ ಕಥೆ ಪ್ರಯೋಗಿಸುವುದರಿಂದ ಊರಿಗೆ ಕಲ್ಯಾಣವಾಗಿ ಜನರು ಸುಖ-ಸಮೃದ್ಧಿಯಲ್ಲಿ ನೆಮ್ಮದಿಯ ಬದುಕು ಪಡೆಯುತ್ತಾರೆನ್ನುವ ನಂಬಿಕೆ ಇಲ್ಲಿಯ ಜನರಲ್ಲಿ ಬಲವಾಗಿದೆ. ನಿರಂತರ ಮೂವತ್ತು ವರ್ಷಗಳಿಂದ ಇದೊಂದೇ ಕಥೆ ಪ್ರಯೋಗಿಸುತ್ತ ಬಂದುದರಿಂದ ಕಥೆ ಇಲ್ಲಿ ಮನೆ ಮಾತಾಗಿದೆ. ಎಲ್ಲಾ ಪಾತ್ರಗಳ ಮಾತುಗಳು ಎಲ್ಲಾ ಕಲಾವಿದರ ಬಾಯಿಯಲ್ಲಿ ತೇಲುತ್ತಿವೆ.

ಈ "ಗಿರಿಜಾ ಕಲ್ಯಾಣ" ಬಯಲಾಟದಲ್ಲಿ ಎಲ್ಲಾ ಕಲಾವಿದರು ಸಮರ್ಥರೆ. ವಿಶೇಷವಾಗಿ ಕೃಷ್ಣನ ಪಾತ್ರದಲ್ಲಿ ಆಕರ್ಷಿಸುತ್ತ ಬಂದಿರುವ ಚಿದಾನಂದಪ್ಪ ಜನಪ್ರಿಯ ಕಲಾವಿದ. ಇಪ್ಪತ್ತೆಂಟನೇ ವಯಸ್ಸಿನಿಂದ ಅರವತ್ತರವರೆಗೂ ಈ ಪಾತ್ರದಲ್ಲಿ ಆಕರ್ಷಿಸಿದ

ಕಲಾವಿದ. ಹಳೆಯ ಹಾಗೂ ಹೊಸ ತಲೆಮಾರಿನ ಕೊಂಡಿಯಾಗಿ ಉಳಿದಿರುವ ಚಿದಾನಂದಪ್ಪ ಅಪರೂಪದ ಕಲಾವಿದ.

ಚಿದಾನಂದಪ್ಪನವರನ್ನು ಸಂದರ್ಶಿಸಿದಾಗ ತಾವು ಕಂಡ ಜಾನಪದ ರಂಗಭೂಮಿಯನ್ನು ಕುರಿತು ಅಭಿಮಾನದಿಂದ ಹೇಳಿದರು. ಆಗ ವಿದ್ಯುತ್ತಿರಲಿಲ್ಲ, ಮೈಕಿರಲಿಲ್ಲ. ಅಂಥದರಲ್ಲಿಯೇ ರಂಗಭೂಮಿಗೆ ರಂಗೇರಿದಾಗ ಸುತ್ತಲೂ ಹಳ್ಳಿಗೆ ಹಿಮ್ಮೇಳನದ ಹಾಡು ಹರಡುತಿತ್ತು ಎನ್ನುವ ಮಾತು ಅರ್ಥವತ್ತಾದುದು.

ಗಿರಿಜಾ ಕಲ್ಯಾಣದಲ್ಲಿ ಶಿವನ ತಪಸ್ಸು ಕೆಡಿಸಲು ಮನ್ಮಥನನ್ನು ಕಳುಹಿಸುವಾಗಿನ ದೃಶ್ಯದ ಹಾಡೊಂದು ಹಾಡಿ ತೋರಿಸಿದಾಗ ಮತ್ತೆ ಮತ್ತೆ ಕೇಳಬೇಕೆನಿಸುತ್ತಿತ್ತು. ಆ ಧಾಟಿ, ಆ ಧ್ವನಿ ಈಗಲೂ ಆಕರ್ಷಕ. ಕೃಷ್ಣನ ಪಾತ್ರಧಾರಿಯಾಗಿ ಬಂದಿರುವ ಚಿದಾನಂದಪ್ಪನವರಿಗೆ ಎಲ್ಲಾ ಪಾತ್ರಗಳ ಅಷ್ಟೇ ಏಕೆ ಇಡೀ ಕಥೆ ಬಾಯಿಪಾಠವಿದೆ. ಇದು ಕಲಾವಿದನ ಆಸಕ್ತಿ.

ಮುಷ್ಟೂರಲ್ಲಿ "ಗಿರಿಜಾ ಕಲ್ಯಾಣ" ಬಯಲಾಟವೆಂದರೆ ಸಾಕು ಸುತ್ತಲೂ ಹಳ್ಳಿಗಳ ಜನ ತಂಡೋಪ ತಂಡದಲ್ಲಿ ಬಂದು ಸೇರುತಿದ್ದರು ಎನ್ನುವ ಮಾತು ಆಶ್ಚರ್ಯವೇನಲ್ಲ. ಶ್ರೀ ಚೆನ್ನವೀರಶರಣರ ನೇತೃತ್ವದಲ್ಲಿ ಅವರ ಆಶೀರ್ವಾದದಲ್ಲಿ ಆಟ ಜರುಗುತ್ತಿದೆ ಎನ್ನುವ ಕಾರಣ ಒಂದಾದರೆ ಇನ್ನೊಂದು "ಗಿರಿಜಾ ಕಲ್ಯಾಣ" ಪಾರ್ವತಿ-ಪರಮೇಶ್ವರರ ಕಲ್ಯಾಣ. ಈ ಕಲ್ಯಾಣ ಲೋಕ ಕಲ್ಯಾಣವೆಂದರೆ ತನ್ನನ್ನು ತಾನು ಅರ್ಪಿಸಿಕೊಳ್ಳುವ ಮನ್ಮಥನ ತ್ಯಾಗ, ರತಿಯ ಪ್ರಲಾಪ ಹೀಗೆ ಒಂದೊಂದು ಸನ್ನಿವೇಶವೂ ಸುಂದರ. ಆಕರ್ಷಕ. ಅದಕ್ಕಾಗಿ ಜನಸಾಗರದಂತೆ ಸಾಗಿಬರುತ್ತಿತ್ತು. "ಮಾರ್ಕಂಡೇಯ" ಬಯಲಾಟದಲ್ಲಿ ಮುರುಧ್ವತಿ ಸ್ತ್ರೀ ಪಾತ್ರದಿಂದ ಹೆಸರುವಾಸಿಯಾಗಿದ್ದರು.

ಚಿದಾನಂದಪ್ಪ ೧೩-೧೪ರ ಹರೆಯದಲ್ಲಿ "ವೀರ ಅಭಿಮನ್ಯು" ಕಥೆಯಲ್ಲಿ ಕನಕಾಂಗಿ ಸ್ತ್ರೀ ಪಾತ್ರದಿಂದ ಜಾನಪದ ರಂಗಭೂಮಿ ಪ್ರವೇಶಿಸಿದರು. ಮುಂದೆ ೧೯೮೮ ರಿಂದ ನಿರಂತರ ಗಿರಿಜಾ ಕಲ್ಯಾಣದಲ್ಲಿ "ಕೃಷ್ಣ"ನ ಪಾತ್ರದಲ್ಲಿ ಅಭಿನಯಿಸುತ್ತ ಉತ್ತಮ ಕಲಾವಿದರೆನಿಸಿಕೊಂಡರು. ಹದಿಹರೆಯದ ರಂಗಾಸಕ್ತಿ, ಅಭಿನಯದ ಹುಚ್ಚು ಇಂದಿಗೂ ಇದೆ. ಈಗಲೂ ಬಯಲಾಟದ ಮಾತೆತ್ತಿದರೆ ಸಾಕು ಉತ್ಸುಕರಾಗೇ ಮಾತನಾಡುತ್ತಾರೆ. ಮನ್ಮಥನ ಅರ್ಥಗರ್ಭಿತ ಮಾತು ನುಡಿಯುತ್ತಾರೆ. ಆದರೆ ಇಂದಿನ ಯುವಕರಿಗೆ ಆಸಕ್ತಿ ಇಲ್ಲದ್ದು ನಿರಾಶೆಯನ್ನುಂಟು ಮಾಡಿದ ಅವರಿಗೆ ಜಾನಪದ ರಂಗಭೂಮಿ ಉಳಿದು ಬೆಳೆದು ಬರಬೇಕೆಂಬುದೇ ಈ ಹಿರಿಯ ಕಲಾವಿದನ ಆಶೆ.

ಚಿದಾನಂದಪ್ಪ ಜನ್ಮ ತಾಳಿದ್ದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮುಷ್ಟೂರು ಗ್ರಾಮದಲ್ಲಿ. ತಂದೆ ಪಂಪನಗೌಡ ತಾಯಿ ನಾಗಮ್ಮ ರೈತ ಮನೆತನದವರು. ಬೇಸಾಯವೇ ಇವರ ಉದ್ಯೋಗ. ಚಿದಾನಂದಪ್ಪ ಓದಿದ್ದು ಕನ್ನಡ ಐದನೇ ತರಗತಿಯವರೆಗೆ. ಇವರಿಗೆ ಬಯಲಾಟದ ಪ್ರಪ್ರಥಮ ಗುರುವಾಗಿ ಉದ್ಯಾನಪ್ಪ ಮೇಷ್ಟ್ರು ನಂತರ ವೆಂಕಟಾಪುರದ ಮಲ್ಲಿಕಾರ್ಜುನಸ್ವಾಮಿ.

ಸುತ್ತಲೂ ಹಳ್ಳಿಗೆ ಪ್ರಸಿದ್ಧಿ ಪಡೆದ ಚಿದಾನಂದಪ್ಪನ ಮಕ್ಕಳು ಈ ಕ್ಷೇತ್ರಕ್ಕೆ ಬಾರದಿದ್ದುದು ವಿಷಾದನೀಯ.

**ಚಿದಾನಂದಪ್ಪ ಮುಷ್ಟೂರ**
**ಅಂಚೆ : ಮುಷ್ಟೂರ,**
**ತಾ : ಗಂಗಾವತಿ**
**ಜಿ : ಕೊಪ್ಪಳ**

## ಈರಮ್ಮ ಲೈನದಾರಿ

ಈರಮ್ಮ ಜನ್ಮ ಪಡೆದುದು ಬಳ್ಳಾರಿ ಜಿಲ್ಲೆಯ ಆನೆಗೊಂದಿಯಲ್ಲಿ. ತಾಯಿ ನಾಗಮ್ಮನೇ ಸರ್ವಸ್ವವಾಗಿದ್ದರು. ಶಾಲೆ ದೂರದ ಮಾತು. ಕನಕಗಿರಿಯ ಯಮನಪ್ಪನನ್ನು ಕೈಹಿಡಿದು ಬಂದ ನಂತರವೇ ಹಾಡಿನಲ್ಲಿ ಹೆಚ್ಚಿನ ಆಸಕ್ತಿ. ತಾಯಿಯ ಮನೆಯಲ್ಲಿ ಗಂಡನ ಮನೆಯಲ್ಲಿ ಕೂಲಿಯೇ ಉದ್ಯೋಗ. ಇಂದಿಗೂ ಬಡತನ, ದಾರಿದ್ರ್ಯ ಈ ಕಲಾವಿದೆಯಿಂದ ದೂರಾಗಿಲ್ಲ. ಹಾಡುಗಳಿಂದ ಮಾತ್ರ ಈರಮ್ಮ ಶ್ರೀಮಂತಿಕೆ ಪಡೆದಿದ್ದಾಳೆ.

ಮಳೆರಾಯನ ಹಾಡು, ಕುಟ್ಟೋ ಬೀಸೋ ಹಾಡು, ತೊಟ್ಟಿಲ ಹಾಡು, ಹೂ ಮುಡಿಸೋ ಹಾಡು, ದೇವರ ಹಾಡು, ಬೀಗರ ಹಾಡು ಹೀಗೆ ಊರಿನ ಯಾರದೇ ಮನೆಯಲ್ಲಿ ಯಾವುದೇ ಕಾರಣವಿದ್ದಾಗ ಈರಮ್ಮ ಅಲ್ಲಿ ಇರಲೇಬೇಕು. ಮುಮ್ಮೇಳದಲ್ಲಿ ಈರಮ್ಮ ಪ್ರಮುಖ ಹಾಡುಗಾರ್ತಿಯಾಗಿ ಆಕರ್ಷಿಸಿದರೆ ಹಿಮ್ಮೇಳದಲ್ಲಿ ಇಬ್ಬರು ಕಲಾವಿದೆಯರು ಪಲ್ಲವಿ ನುಡಿಯುತ್ತಿರುತ್ತಾರೆ.

ಊರಿನ ದೇವಸ್ಥಾನದಲ್ಲಾಗಲಿ, ಪ್ರಮುಖ ಕಾರ್ಯಕ್ರಮಗಳಲ್ಲಾಗಲಿ ಈರಮ್ಮ ; ಹೊನ್ನಮ್ಮ ; ಹೊನ್ನಂಬಿ ಇರಲೇಬೇಕು. ಇವರ ಹಾಡುಗಳನ್ನು ಕೇಳಿದಾಗ ನಮ್ಮ ಎಲ್ಲಾ ಸಂಪ್ರದಾಯ, ಸಂಸ್ಕೃತಿ, ಪರಂಪರೆ ನಮ್ಮೆದುರು ಹಾದು ಹೋಗುತ್ತಿವೆ. ಪರಂಪರೆ, ನಂಬುಗೆ, ಆಚರಣೆ, ಜೀವನ ವಿಧಾನ ಎಲ್ಲವೂ ಹಳ್ಳಿಗಳಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿದ್ದರೆ ಇಂಥ ಕಲಾವಿದರಿಂದ.

"ಬಸವ ದಂಡ ನಿನ್ನ ಪಾದವ ನೆನೆದರೆ
ಪಾಪ ಹೋದೀತು ದೂರ
ಶಿಸುವಿನಂದದಿ ಸಲಹು ನನ್ನ
ಬಸವದೇವ"

ಈರಮ್ಮನಿಂದ ಈ ಹಾಡು ಕೇಳಿದಾಗ, ಗುರುವಿನ ಮೇಲಿನ ಭಕ್ತಿ, ನಂಬಿಕೆ ಗುರುವಿನೆದರು ತಾನೊಂದು ಶಿಸು ಎನ್ನುವ ಹಾಡು ಅರ್ಥಗರ್ಭಿತ.

೭೦ರ ವೃದ್ಧಾಪ್ಯದಲ್ಲಿರುವ ಈರಮ್ಮ ಮುವತ್ತು ನಲವತ್ತು ವರ್ಷಗಳಿಂದ ಸೇವೆಸಲ್ಲಿಸಿದವರು. ಹಾಡಿಗಾಗಿ ಡಿಮಾಂಡ ಮಾಡಿದವಳಲ್ಲ, ಕಾಡಿ ಬೇಡಲಿಲ್ಲ, ಖುಷಿಯಲ್ಲಿ ಪ್ರೀತಿಗಾಗಿ ಯಾರಾದರೂ ಬಟ್ಟೆ ನಗದು ಕೊಟ್ಟರೆ ಮಾತ್ರ ಸ್ವೀಕರಿಸಿದವಳು. ಊರಿನ ಗಣ್ಯರಿಂದ ಸಾಮಾನ್ಯರವರೆಗೆ ಯಾರೇ ಕರೆಯಲಿ ತನ್ನ ಮನೆಕೆಲಸ ಬಿಟ್ಟು ಹೋಗಿ ಹಾಡಿಬರುವ ಹಿರಿಯ ಗುಣ.

ಈರಮ್ಮನಲ್ಲಿ ಎಲ್ಲ ಬಗೆಯ ಹಾಡು ಸುಮಾರು ನೂರಕ್ಕೂ ಮಿಕ್ಕಿ ಇರಬೇಕು. ತ್ರಿಪದಿ, ಚೌಪದಿ, ದೀರ್ಘ ಕಥನ ಗೀತ ಎಲ್ಲ ಸಂಗ್ರಹವುಂಟು. ಹೊಲದಲ್ಲಿ ಕಳೆ ತೆಗೆಯುವಾಗ, ಭತ್ತ ನೆಡುವಾಗ ದೀರ್ಘ ಕಥನ ಕವನಗಳಲ್ಲಿ ಹೊತ್ತು ಹೋದದ್ದೇ ಗೊತ್ತಾಗುವುದಿಲ್ಲ. ಬೇಸರವೆನಿಸದೇ ಹಾಡಿನಲ್ಲಿ ಕೆಲಸ–ಕಾರ್ಯ ಮುಗಿದು ಹೋಗುತ್ತದೆ.

ಈರಮ್ಮನ ಹಾಡುಗಾರಿಕೆಗೆ ಗಂಡ ಯಮುನಪ್ಪ ಎಂದೂ ಬೇಜಾರು ಪಟ್ಟುಕೊಳ್ಳಲಿಲ್ಲ. ಹಾಗೆ ಹಾಡಲು ಹೋದಾಗ ತನ್ನ ಮನಕೆಲಸವಾಗಲಿ, ಕೂಲಿ ಕೆಲಸವಾಗಲಿ ನಿಲ್ಲುತ್ತದೆಯಂದು ಚಿಂತಿಸಲಿಲ್ಲ. ತನ್ನ ಪತ್ನಿ ಇಷ್ಟು ಹಾಡುಗಳನ್ನು ಸಂಗ್ರಹಿಸಿಕೊಂಡು ಊರಿನವರಿಗೆಲ್ಲ ಬೇಕಾಗಿ ತನ್ನ ಹಾಡುಗಾರಿಕೆಯಿಂದ ತನಗೂ ತನ್ನ ಮನೆಗೂ ಹೆಮ್ಮೆ ಎಂದುಕೊಂಡವನಾಗಿದ್ದ.

ಈ ದಂಪತಿಗಳಿಗೆ ಒಂದು ಗಂಡು ಒಂದು ಹೆಣ್ಣು. ಅವರಾರು ಹಾಡುವುದಿಲ್ಲ. ಹಾಡುವ ತಾಯಿಯ ಬಗ್ಗೆ ಬಹಳಷ್ಟು ಹೆಮ್ಮೆ ಪಟ್ಟುಕೊಳ್ಳುತ್ತಾರೆ.

**ಈರಮ್ಮ ಲೈನದಾರಿ**
**ಗಂಗಾವತಿ**

## ಹೊನ್ನಂಬಿ ಗೊರಳ್ಳಿ

ಗಂಗಾವತಿ ತಾಲೂಕಿನ ಕನಕಗಿರಿಯ ರಾಜೇಸಾಬ-ಪೀರಮ್ಮ ದಂಪತಿಗಳ ಮಗಳಾದ ಹೊನ್ನಂಬಿ ಸಂಪ್ರದಾಯದ ಹಾಡುಗಾರರಲ್ಲಿ ವಿಶೇಷ-ವಿಶಿಷ್ಟ ಉಲ್ಲೇಖಕ್ಕೆ ಬರುತ್ತಾಳೆ. ಭಾವೈಕ್ಯತೆಯ ಬದುಕಿಗೆ ನಿದರ್ಶನವಾಗುತ್ತಾಳೆ.

ಮುಸ್ಲಿಂ ಮಹಿಳೆಯೊಬ್ಬಳು ಅಚ್ಚಗನ್ನಡದಲ್ಲಿ ನೂರಾರು ಹಾಡುಗಳನ್ನು ಸಂಗ್ರಹಿಸಿಕೊಂಡು ಊರಿನ ಜನರಲ್ಲಿ ಆಕರ್ಷಿಸಿದ್ದಾಳೆ. ಊರಿನ ಹಿಂದುಗಳ ಮನೆಗಳಲ್ಲಿ ಮಂಗಲಕಾರ್ಯ ನಡೆದಾಗ ಸಂಪ್ರದಾಯದ ಹಾಡುಗಾರರ ಮಹಿಳೆಯಲ್ಲಿ ಹೊನ್ನಂಬಿ ಯೊಬ್ಬಳು. ಹೊನ್ನಂಬಿ ಎಲ್ಲ ಬಗೆಯ ಹಾಡುಗಳನ್ನು ಹಾಡುತ್ತಾಳೆ.

ಹೊನ್ನಂಬಿಯ ಹಾಡುಗಾರಿಕೆಗೆ ತಾಯಿಯ ಪ್ರೇರಣೆ ಹಾಗೂ ಪ್ರಭಾವ. ಬಾಲ್ಯದಲ್ಲಿ ಕಲಿತಿದ್ದು ತಾಯಿಯಿಂದಲೇ ನಂತರ ಇತರರ ಜೊತೆ ಬೆರೆತು ಹಾಡುತ್ತ ಹಾಡುತ್ತ ರೂಢಿಸಿಕೊಂಡು ಈಗ ಹಾಡುಗಾರ ಮಹಿಳೆಯರಲ್ಲಿ ಗುರುತಿಸಿಕೊಂಡು ಜನಮನ ಸೆಳೆದವಳಾಗಿದ್ದಾಳೆ. ಹಾಡುಗಳ ಸಂಗ್ರಹ ಇಷ್ಟೇ ಎಂದು ಹೇಳಲಾಗದಿದ್ದರೂ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ನಿರಂತರ ಹಾಡುವಷ್ಟು ಸಂಗ್ರಹವೆನ್ನುತ್ತಾಳೆ.

ಮಳೆಗಾಲದಲ್ಲಿ ಮಳೆರಾಜ ಮುನಿಸಿಕೊಂಡು ಭೂಮಿಗೆ ಬೀಳದಿದ್ದಾಗ ರೈತ ಕಂಗಾಲಾಗಿ ತಲೆಮೇಲೆ ಕೈಹೊತ್ತು ಕುಳಿತಾಗ ಹೊನ್ನಂಬಿ ಹಾಗೂ ಸಂಗಡಿಗರು ಮಳೆರಾಯುನನ್ನು ಕುರಿತು ಪ್ರಾರ್ಥಿಸುತ್ತಾರೆ. ಮಳೆರಾಯುನನ್ನು ಕುರಿತು ಪ್ರಾರ್ಥಿಸುವುದಾಗಲಿ, ಮಳೆರಾಯ ಧೋ ಎಂದು ಸುರಿಯುವುದಾಗಲಿ ಹಾಡಿನಲ್ಲಿ ಬರುವ ಅಲಂಕಾರ ಸುಲಭ-ಸರಳ ಶೈಲಿ ಹಾಡುಗಳಿಗೆ ಶೋಭೆ ತರುತ್ತಿವೆ.

ಕೂಲಿ ಕೆಲಸ ಮಾಡಿಕೊಂಡಿರುವ ಹೊನ್ನಂಬಿ ಮದುವೆಯಾಗದೇ ಏಕಾಂಗಿಯಾಗಿ ಸಮಾಜ ಸೇವೆ ಮಾಡುತ್ತ ಬಂದುದು ವಿಶಿಷ್ಟ. ಈಕೆಯ ಇನ್ನೊಂದು

ವಿಶೇಷತೆ ಹೆರಿಗೆ ಮಾಡಿಸುವುದು. ಇದು ಕೂಡ ತಾಯಿಯಿಂದಲೇ ಬಂದುದು. ಜಾನಪದ ಕಲಾವಿದೆಯಷ್ಟೆ ಜಾನಪದ ವೈದ್ಯಕೀಯ ವಿಶೇಷ ಲೆಕ್ಕಕ್ಕೆ ಬರುತ್ತಿದೆ. ಬದುಕಿನ ದೀರ್ಘ ಕಾಲ ಇಂಥ ಸೇವೆ ಮಾಡುತ್ತ ಜನರ ಮನ್ನಣೆಯಲ್ಲಿ ಬದುಕುತ್ತಿರುವ ಹೊನ್ನಂಬಿಯ ಬದುಕು ಅರ್ಥಪೂರ್ಣ. ಒಬ್ಬ ವೈದ್ಯ ಮಾಡುವ ಕೆಲಸವನ್ನು ಹೊನ್ನಂಬಿ ಮಾಡುತ್ತಾಳೆ. ಹಳ್ಳಿಗಳಲ್ಲಿ ಆಸ್ಪತ್ರೆ ತೀರ ಕಡಿಮೆ ಪಟ್ಟಣಕ್ಕೆ ಹೋಗಲು ಸಮಯದ ಅಭಾವ ವೈದ್ಯಕೀಯ ಸೌಲಭ್ಯ ದೊರೆಯದಿದ್ದಾಗ ಹೊನ್ನಂಬಿ ತನಗೆ ತಿಳಿದಂತೆ, ತನ್ನ ಅನುಭವದಿಂದ ಹೆರಿಗೆ ಮಾಡಿಸಿ ಬಡವರ ದೀನ-ದಲಿತರ ಪಾಲಿಗೆ ವೈದ್ಯಳಾಗಿದ್ದಾಳೆ.

ಹೊನ್ನಂಬಿ ಕಲಾವಿದಳಾಗಿ, ಸೂಲಗಿತ್ತಿಯಾಗಿ ತನ್ನ ಗ್ರಾಮಕ್ಕೆ ಸೇವೆಸಲ್ಲಿಸುತ್ತ ಅಪರೂಪದ ಮಹಿಳೆಯಾಗಿ ಆಕರ್ಷಿಸುತ್ತಾಳೆ.

**ಹೊನ್ನಂಬಿ ಗೊರಳ್ಳಿ**
**ಅಂಚೆ : ಕನಕಗಿರಿ, ತಾ : ಗಂಗಾವತಿ**
**ಜಿ : ಕೊಪ್ಪಳ**

## ಶಿರಸಪ್ಪಯ್ಯ ವಿಶ್ವಕರ್ಮ

೭೬ರ ಹರೆಯದ ಶಿರಸಪ್ಪಯ್ಯ ಜನ್ಮಪಡೆದುದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಸೋಮಪ್ಪ-ಚಂದಮ್ಮ ವಿಶ್ವಕರ್ಮ ಜನಾಂಗದ ಮನೆತನದಲ್ಲಿ, ಓದಿದ್ದು, ಅಕ್ಷರಾಭ್ಯಾಸ. ತಂದೆ ತಾಯಿಗಳ ಉದ್ಯೋಗವಾಗಿದ್ದ ಕಮ್ಮಾರಿಕೆಯನ್ನೇ ಶಿರಸಪ್ಪಯ್ಯಕೂಡ ಮುಂದುವರೆಸಿಕೊಂಡು ಬಂದವರು. ಕಲೆ ತಂದೆಯಿಂದ ಸಹಜವಾಗಿ ಬಂದುದು. ಬಾಲ್ಯದಿಂದಲೇ ಹಾಡು, ಕುಣಿತ, ಭಜನೆ ಸಾಗಿ ಬಂದಿವೆ.

ಬಯಲಾಟದ ಅಭಿನಯಕ್ಕಿಂತ ಹೆಚ್ಚು ಆಕರ್ಷಿದ್ದು ಭಜನಾ ಪದಗಳಿಂದ; ತತ್ವಪದಗಳಿಂದ, ನಿರಂತರ ಮೂರು ನಾಲ್ಕು ದಶಕಗಳಿಂದ ಹಾಡುತ್ತ ಬಂದ ಶಿರಸಪ್ಪಯ್ಯ ಬಹಳಷ್ಟು ಜನಮನ ಸೆಳೆದವರಾಗಿದ್ದಾರೆ. ಅವರ ಹಾಡು ಕೇಳಿದಾಗ ಅಚ್ಚರಿ ಎನಿಸಿತು. ಈಗಲೂ ಕಂಠ ಆಕರ್ಷಣೆ ಪಡೆದಿದೆ.

"ತೇರು ಸಾಗುತದಮ್ಮ ತಂಗಿ
ನೋಡಲಿಕ್ಕೆ ಹೋಗೋಣ ಬಾ ಬಾ"

"ಯಾವೂರೆಂದರೆ ಏನು ಹೇಳಲಿ
ನಗೆಯ ಬರುತಿದೆ ನನಗೆ"

ಹೀಗೆ ಅರ್ಥಗರ್ಭಿತ ಹಾಡುಗಳನ್ನು ಕೇಳಿದಾಗ ಆಕರ್ಷಕವೆನಿಸಿತು. ಆದರೆ ಆಯಾಸ ದಮ್ಮು ಹೆಚ್ಚಿದಾಗ ಹೆಚ್ಚಿನ ತೊಂದರೆ ಕೊಡುವುದು ಬೇಡವೆನಿಸಿತು. ಈ ವಯಸ್ಸಿನಲ್ಲೂ ಹಾಡುಗಳನ್ನು ಯಾವ ಯಾವ ಹಾಡು ಯಾರ ಯಾರ ರಚನೆ ಎಂಬುದನ್ನಾಗಲಿ ನೆನಪಿಟ್ಟು ಕೊಂಡಿರುವುದು ಆಶ್ಚರ್ಯವೆನಿಸುತ್ತದೆ.

"ಎಷ್ಟು ತೊಳೆಯಲಮ್ಮ
ಮನದ ಮೈಲಿಗೆ ಹೋಗದು"

ಕಡಕೋಳ ಮಡಿವಾಳಪ್ಪನವರ ಈ ಹಾಡು ಬಹಳಷ್ಟು ಅರ್ಥ ಪಡೆದುಕೊಂಡಿತ್ತು.

ನಾಡಿನ ಅನೇಕ ಶರಣರ ಸಾಧು-ಸತ್ಪುರುಷರ, ತತ್ವಜ್ಞಾನಿಗಳ ಹಾಡುಗಳು ಅವರಲ್ಲಿ ಸಂಗ್ರಹವಾಗಿವೆ. ಶರೀಫರ, ಕಡಕೋಳರ ನೀರಲಕೇರಿ ಬಸಲಿಂಗಪ್ಪಜ್ಜನವರ, ಒಡಕಿ ತಾತನವರ ಅನೇಕರ ಹಾಡುಗಳನ್ನು ಸಂಗ್ರಹಿಸಿಟ್ಟುಕೊಂಡಿರುವ ಶಿರಸಪ್ಪಯ್ಯನವರು ನಾಡಿನ ಸಂಪತ್ತು.

ತತ್ವಪದಗಳನ್ನು ಕೇಳಿದಾಗ ಆ ಹಾಡುಗಳಲ್ಲಿಯ ಚಿಂತನೆ, ಜೀವನದ ಮೌಲ್ಯ, ಮಾನವ ಕಲ್ಯಾಣ ಸದ್ಧರ್ಮ, ಸದಾಚಾರ ಸ್ಪಷ್ಟವಾಗುತ್ತಿವೆ. ಇವತ್ತಿನ ಯಾಂತ್ರಿಕ ಬದುಕಿನಲ್ಲಿ, ಬೆರೆಕೆಯ ಬಜಾರದಲ್ಲಿ ಮನುಷ್ಯ ಮನುಷ್ಯನನ್ನು ನಂಬದಂತಹ ಕಾಲದಲ್ಲಿ ಈ ಹಾಡುಗಳು ಮಾನವನ ಸನ್ಮಾರ್ಗಕ್ಕೆ ಕಾರಣವಾಗುತ್ತಿವೆ.

ಕಾಳಿಕಾದೇವಿ ಭಜನಾ ತಂಡದಿಂದ ಹಾಡುತ್ತ ಬಂದ ಶಿರಸಪ್ಪಯ್ಯನವರೀಗ ಜನಪ್ರಿಯ ಕಲಾವಿದರಾಗಿದ್ದಾರೆ. ನಿರಂತರ ಹಾಡುಗಾರಿಕೆ ಅವರನ್ನು ಆ ಕ್ಷೇತ್ರದಲ್ಲಿ ಎತ್ತರಕ್ಕೆ ತಂದಿದೆ. ತಂದೆಯ ಪ್ರೋತ್ಸಾಹ, ಬೆನ್ನೂರ ಬಾಲಪ್ಪ ಹಜಾಮರ ನಾಗಪ್ಪ ತಮಗೆ ಮಾರ್ಗದರ್ಶಕರೆಂದು ಬಹಳಷ್ಟು ಗೌರವದಿಂದ ಹೇಳುತ್ತಾರೆ.

ಶಿರಸಪ್ಪಯ್ಯನವರ ಭಕ್ತಿ, ಆರಾಧನೆ, ಭಜನೆಗೆ ಮೂಲಕಾರಣ, ಕಾಳಿಕಾದೇವಿ ಆರಾಧ್ಯ ದೇವತೆಯಾಗಿರುವುದು, ಮನೆಯ ಹಿಂದೆಯೇ ದೇವಿಯ ಗುಡಿ ಇಂದಿಗೂ ಭಕ್ತಿ, ಶ್ರದ್ಧೆ ಆರಾಧನೆ ನಡೆದಿರುತ್ತದೆ.

ಶಿರಸಪ್ಪಯ್ಯನವರು ಬಯಲಾಟಗಳಲ್ಲಿಯೂ ಅಭಿನಯಿಸಿದ್ದನ್ನು ಇಲ್ಲಿಸ್ಮರಿಸಲೇಬೇಕು. ಹದಿಹರೆಯದಲ್ಲಿ ರಂಗಮಂಚವೇರಿದವರು. "ಚಿತ್ರಸೇನ ಗಂಧರ್ವ" ಕಥೆಯಲ್ಲಿ ದುರ್ವಾಸ ಮುನಿಯ ಪಾತ್ರ ಪ್ರೇಕ್ಷಕರನ್ನು ಆಕರ್ಷಿಸಿದ ಪಾತ್ರವಾಗಿದೆ. ಕನಕಗಿರಿಯಲ್ಲಿಯೇ ಇದು ಸುಮಾರು ೮-೧೦ ಪ್ರಯೋಗ ಪ್ರಯೋಗ ಗೊಂಡಿರಬೇಕು.

ಶಿರಸಪ್ಪಯ್ಯನವರು ಎಲೆಮರೆಯ ಕಾಯಿಯಂತೆ. ಸನ್ಮಾನ-ಪುರಸ್ಕಾರ ಯಾವುದನ್ನೂ ಬಯಸಿದವರಲ್ಲ. ಎಲ್ಲವೂ ತಮ್ಮ ಖುಷಿಗಾಗಿ ಎನ್ನುತ್ತಾರೆ. ನಮ್ಮ ಜಾನಪದ ಕಲಾವಿದರೇ ಹಾಗೆ ಅವರು ಯಾವುದನ್ನೂ ಬಯಸದೆ ಏನನ್ನೂ ನಿರೀಕ್ಷಿಸದೆ ತಮ್ಮ ಪಾಡಿಗೆ ತಾವು ಹಾಡಿಕೊಂಡು ಹೋದವರು ಹೋಗುವವರು.

ಶಿರಸಪ್ಪಯ್ಯನವರ ಹಾಡುಗಳಿಂದ ಜೀವನದ ಮೌಲ್ಯ ನೀತಿ, ನ್ಯಾಯ ಬದುಕಿನ ಸಾರ್ಥಕತೆ ಅಂತರ್‌ವಾಹಿನಿಯಾಗಿ ಹರಿಯುತ್ತಿರುವುದು ಕಂಡಾಗ; ಕೇಳಿದಾಗ ಕೇಳುಗರ ಮನಸ್ಸು-ಹೃದಯ ಬಿಚ್ಚಿಕೊಳ್ಳುತ್ತಿವೆ.

**ಶಿರಸಪ್ಪಯ್ಯ ವಿಶ್ವಕರ್ಮ**

**ಕಾಳಿಕಾದೇವಿ ಗುಡಿ ಹತ್ತಿರ, ಗಂಗಾವತಿ, ಜಿ : ಕೊಪ್ಪಳ**

## ದೊಡ್ಡಹನುಮಂತಪ್ಪ ಹೂಗಾರ

ದೊಡ್ಡಹನುಮಂತಪ್ಪನವರ ಅಭಿನಯದ ಬಗ್ಗೆ, ವೀರಾವೇಶದ ಬಗ್ಗೆ ಕೇಳಿದರನೇ ರೋಮಾಂಚನವಾಗುತ್ತಿದೆ. "ಗಿರಿಜಾ ಕಲ್ಯಾಣ" ದೊಡ್ಡಾಟದ ತಾರಕಾಸುರ ಪಾತ್ರ ಬಹಳಷ್ಟು ಪ್ರಸಿದ್ಧಿ ಪಡೆದ ಅವರ ಪಾತ್ರ. ಐದು ದಶಕದ ಜಾನಪದ ರಂಗಭೂಮಿಯಲ್ಲಿ ಅದೊಂದು ಮೈಲುಗಲ್ಲು. ಆ ಪಾತ್ರಕ್ಕೆ ಅವರ ವ್ಯಕ್ತಿತ್ವ ಅವರ ಗಾಂಭೀರ್ಯ, ಅವರ ಕಂಚಿನ ಕಂಠವೂ ಕಾರಣವೆನ್ನದಿರಲಾಗದು. ೭೦ರ ಗಡಿಯಲ್ಲಿರುವ ಇವರನ್ನು ನೋಡಿದಾಗ ಈಗಲೂ ಆ ಪಾತ್ರಕ್ಕೆ ತಕ್ಕ ಪರ್ಸನಾಲಿಟಿ ಎನಿಸುತ್ತಿದೆ. ಇನ್ನು ವಯಸ್ಸಿನಲ್ಲಿ ಹೇಗಿದ್ದರಬಹುದೆನ್ನುವುದು ಉಹಿಸಿದಾಗ ತಾರಕಾಸುರ ನಮ್ಮೆದುರು ನಿಲ್ಲುತ್ತಾನೆ.

ತಾರಕಾಸುರನ ಪಾತ್ರದ ಅಭಿನಯದ ಬಗ್ಗೆ ಪ್ರೇಕ್ಷಕರು ಹೇಳುವ ಮಾತುಗಳೇ ಅಚ್ಚರಿ ಮೂಡಿಸುತ್ತವೆ. ಆ ಪಾತ್ರದಲ್ಲಿ ಗುಡುಗಿದರೆ ಮುಂದೆ ಕುಳಿತವರ ಝುಂಗಾ ಬಲವೇ ಉಡುಗಿ ಹೋಗುತಿತ್ತು ಎನ್ನುವ ಮಾತಾಗಲಿ, ಗರ್ಭಿಣಿ ಸ್ತ್ರೀಯೋರ್ವಳ ಭಯದಿಂದ ಚೀರಿದಾಗ ಅಲ್ಲಿಯೇ ಹೆರಿಗೆಯಾಯಿತು ಎನ್ನುವ ವಿಷಯವಾಗಲಿ ಅವರ ಅಭಿನಯದ ಪರಾಕಷ್ಟತೆಯನ್ನೇ ಹೇಳುತ್ತಿದೆ. ಪಾತ್ರದ ಗುಣ, ಸ್ವಭಾವ ಅರಿತು ಗುಡುಗುವ ಮಾತುಗಳಾಗಲಿ, ಮಾತುಗಳ ತೀವ್ರತೆಯಾಗಲಿ ಅವರ ಪ್ರಬುದ್ಧತೆ ಅವರ ಪ್ರತಿಭೆ, ಅವರ ಪಾತ್ರದಲ್ಲಿಯ ತಲ್ಲೀನತೆಯನ್ನೇ ಸ್ಪಷ್ಟಪಡಿಸುತ್ತಿವೆ. ಇಂಥ ಕಲಾವಿದರು ಅಪರೂಪ.

ಹನುಮಂತಪ್ಪ ಅವರು ಅಟ್ಟ ಏರಿದ್ದು ೧೨-೧೩ರ ಪ್ರಾಯದಲ್ಲಿ ದೇವಿ ಮಹಾತ್ಮೆಯಲ್ಲಿ ರಂಭೆಯ ಪಾತ್ರದಿಂದ ನಂತರ ೨೦ರ ಪ್ರಾಯದವರೆಗೂ ಸ್ತ್ರೀ ಪಾತ್ರಗಳಲ್ಲಿಯೇ ಅಭಿನಯಿಸಿದ್ದಾರೆ. ಮಾರ್ಕಂಡೇಯ – ಮುರಧ್ವಜಿ, ದಕ್ಷಬ್ರಹ್ಮ, ಸರಸ್ವತಿ, ಕನಕಾಂಗಿ ಕಲ್ಯಾಣ, ದೇವಕಿ, ಗಿರಿಜಾ ಕಲ್ಯಾಣದಲ್ಲಿ ಶಚಿ ಹಾಗೂ ಮೇನಕೆ ಪಾತ್ರಗಳು ಆಕರ್ಷಿಸಿವೆ.

ಹನುಮಂತಪ್ಪ ಹರೆಯಕ್ಕೆ ಬಂದಾಗ ಧ್ವನಿಗಡುಸಾಗಿ ಒಳ್ಳೆಯ ಮೈಕಟ್ಟಿನಿಂದ ಅಜಾನುಬಾಹು ವ್ಯಕ್ತಿತ್ವ ಹೊಂದಿದಾಗ ರೌದ್ರ ಪಾತ್ರ, ರಾಕ್ಷಸ ಪಾತ್ರಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ದಕ್ಷಬ್ರಹ್ಮದಲ್ಲಿ ವೀರಭದ್ರ, ಗಿರಿಜಾಕಲ್ಯಾಣದಲ್ಲಿ ತಾರಕಾಸುರ, ಕನಕಾಂಗಿ ಕಲ್ಯಾಣದಲ್ಲಿ ಬಲರಾಮ ಪಾತ್ರಗಳು ಜನಮನ ಸೆಳೆದವು. ವಿಶೇಷವಾಗಿ ತಾರಕಾಸುರ ಪಾತ್ರ ದಾಖಲೆಯಾಗಿ ಪರಿಣಮಿಸಿತು.

ಐದು ದಶಕದ ಜಾನಪದ ರಂಗಭೂಮಿಯ ಸೇವೆ ಅವರಿಗೆ ತೃಪ್ತಿ ತಂದಿದೆ. ದೀರ್ಘ ರಂಗಸೇವೆ ಪರಿಗಣಿಸಿ ನಾಡಿನ ಅನೇಕ ಭಾಗಗಳಲ್ಲಿ ಸನ್ಮಾನ, ಗೌರವ, ಪ್ರಶಸ್ತಿ ಲಭಿಸಿವೆ. ಕರ್ನಾಟಕದ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಗಂಗಾವತಿ ತಾಲೂಕು ಕಛೇರಿಯಲ್ಲಿ, ರಾಮುಲು ರಂಗ ಮಂದಿರದಲ್ಲಿ ವಿವಿಧ ಸಂಘಟನೆಗಳಿಂದ ಸನ್ಮಾನಿಸಲಾಗಿದೆ. ಕನಕಗಿರಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಿಲ್ಲಾ ಬಯಲಾಟ ಸ್ಪರ್ಧೆ ಸಂದರ್ಭದಲ್ಲಿ (೨೦೦೬) ಅಕಾಡೆಮಿ ಸನ್ಮಾನಿಸಿದೆ.

ಹನುಮಂತಪ್ಪನವರಿಗೆ ಬಾಲ್ಯದಿಂದಲೇ ರಂಗಾಸಕ್ತಿ. ಅದಕ್ಕೆ ಕಾರಣ ತಾಯಿಯ ಅಣ್ಣಂದಿರು (ಸೋದರ ಮಾವಂದಿರು) ಜಾನಪದ ರಂಗಭೂಮಿಯ ಪ್ರಸಿದ್ಧ ಸಂಗೀತ ಕಲಾವಿದರು, ಮೃದಂಗ, ಪಿಟೀಲ, ಮದ್ದಳೆ ವಾದ್ಯಗಳನ್ನು ನುಡಿಸುವಲ್ಲಿ, ಹಾಡುವಲ್ಲಿ ಹೆಸರುವಾಸಿಯಾಗಿದ್ದರು. ಅಂಥವರ ಒಡನಾಟ, ಮಾರ್ಗದರ್ಶನ ಹನುಮಂತಪ್ಪನವರನ್ನು ಶ್ರೇಷ್ಠ ಕಲಾವಿದರನ್ನಾಗಿ ಮಾಡಿವೆ.

ಈ ಕಲಾವಿದ ಜನ್ಮ ತಾಳಿದುದು ಗಂಗಾವತಿ ಹತ್ತಿರದ ಗುಂಡೂರು ಗ್ರಾಮದಲ್ಲಿ (೧೯೩೨) ತಂದೆ ಪಂಪಣ್ಣ ಹೂಗಾರ ತಾಯಿ ಲಕ್ಷ್ಮಮ್ಮ ಬೇಸಾಯ ಮನೆತನದವರು. ಹನುಮಂತಪ್ಪ ಓದಿದ್ದು ನಾಲ್ಕನೇ ತರಗತಿಯವರೆಗೆ. ಒಬ್ಬ ತಮ್ಮ ಒಬ್ಬ ಅಕ್ಕನನ್ನು ಪಡೆದು ಬೆಳೆದ ಹನುಮಂತಪ್ಪ ಮಾತ್ರ ಆ ಮನೆಯಲ್ಲಿ ಕಲಾವಿದ.

ಹನುಮಂತಪ್ಪ ಜಾನಪದರಂಗಭೂಮಿಯಷ್ಟೇ ಹವ್ಯಾಸಿ (ವೃತ್ತಿ ಶೈಲಿಯ) ರಂಗನಟರೂ ಹೌದು. ಗುಂಡೂರಿನ ಎಸ್. ವ್ಹಿ. ಪಾಟೀಲರ ಅನೇಕ ನಾಟಕಗಳಲ್ಲಿ ಉತ್ತಮ ಅಭಿನಯ ನೀಡಿದ್ದಾರೆ. ಇಲ್ಲಿಯೂ ಇವರ ಪ್ರತಿಭೆಗೆ ಒಂದು ನಿದರ್ಶನ ಹೇಳಲೇಬೇಕು. ಗುಂಡೂರಿಗೆ ಗಂಗಾವತಿಯ ಪಂಪನಗೌಡರ ಕಂಪನಿಯೊಂದು ಕ್ಯಾಂಪ ಮಾಡಿತ್ತು. ಗಂಗಾವತಿಯ ಪಂಪನಗೌಡರ ಕಂಪನಿಯಲ್ಲಿ ನಾಟಕ ಪ್ರಯೋಗ ಗೊಳ್ಳುತ್ತಿದ್ದಾಗ ಪಾತ್ರಧಾರಿಯೊಬ್ಬ ಊರಿಗೆ ಹೋದವನು ಬಾರದಿದ್ದಾಗ ಕಂಪನಿ ಮಾಲಿಕರು ಊರಿನ ಸರಪಂಚರನ್ನು ಕಂಡು ತಮ್ಮ ಸ್ಥಿತಿ ಹೇಳಿಕೊಂಡು ಅನಿವಾರ್ಯವಾಗಿ ನಾಟಕ ನಿಲ್ಲಿಸುತ್ತೇವೆಂದಾಗ ಸರಪಂಚರು ಬೇಡ ನಮ್ಮಲ್ಲೊಬ್ಬ ಪ್ರತಿಭಾನ್ವಿತ ಪ್ರಬುದ್ಧ ಕಲಾವಿದನಿದ್ದಾನೆ ಅವನಿಗೆ ಒಪ್ಪಿಸುತ್ತೇನೆ ಎಂದು

ಹನುಮಂತಪ್ಪನನ್ನು ಕರೆಯ ಕಳಿಸಿದರು. ಹನುಮಂತಪ್ಪ ಬಂದಾಗ ಎಲ್ಲಾ ವಿವರಿಸಿದಾಗ ಆಯ್ತು ಎಂದು ನಾಟಕ ಪುಸ್ತಕ ತೆಗೆದುಕೊಂಡುಹೋಗಿ ತನ್ನ ಪಾತ್ರದ ಮಾತುಗಳನ್ನೆಲ್ಲ ಬಾಯಿಪಾಠ ಮಾಡಿ ಒಂದೆರಡು ಪ್ರ್ಯಾಕ್ಟೀಸ ಕೊಟ್ಟು ರಾತ್ರಿ ಹತ್ತು ಗಂಟೆಗೆ ರಂಗದಲ್ಲಿ ಕಂಡಾಗ ಗುಂಡೂರಿನ ಜನರಿಗೆ ಅಚ್ಚರಿ. ಇದು ಎಷ್ಟು ಜನಕ್ಕೆ ಸಾಧ್ಯ. ಹಾಗೆಂದೇ ಹನುಮಂತಪ್ಪ ಗುಂಡೂರಿನ ಕಲಾ ಸಂಪತ್ತು ಅಷ್ಟೇ ಏಕೆ ನಾಡಿನ ರಂಗಭೂಮಿಯ ಸಂಪತ್ತೆಂದರೆ ಅತಿಶಯೋಕ್ತಿಯಲ್ಲ.

ದೊಡ್ಡಹನುಮಂತಪ್ಪ
ಅಂಚೆ : ಗುಂಡೂರು, ತಾ : ಗಂಗಾವತಿ
ಜಿ : ಕೊಪ್ಪಳ

# ಕೆ. ಸರೋಜಾಬಾಯಿ ಗಡ್ಡಿ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಶ್ರೀಮತಿ ಸರೋಜಾ ಗಡ್ಡಿ ಅವರ ಹಾಡುಗಳನ್ನು ಗಂಟೆಗಟ್ಟಲೆ ಕೇಳಿದಾಗ ಅವರ ಹಾಡಿನ ಅಪಾರ ಸಂಗ್ರಹ ತಿಳಿದಾಗ ಆಶ್ಚರ್ಯ ಅಷ್ಟೇ ಸಂತೋಷವೆನಿಸುತ್ತಿದೆ. ಹಾಡುಗಳು ಕೇಳುಗರ ಮನ ತಟ್ಟುತ್ತವೆ. ಹಾಡಿನ ಅರ್ಥ ಜೀವನದ ಮೌಲ್ಯಗಳನ್ನು ಬಿಂಬಿಸುವ ಅನೇಕ ಹಾಡುಗಳು ಬದುಕಿನ ಅನುಭವದ ಗಡ್ಡೆಯಾಗಿವೆ ಸರೋಜಾಬಾಯಿ ಗಡ್ಡಿಯವರಲ್ಲಿ.

ವೈವಿಧ್ಯಮಯ ಹಾಡುಗಳನ್ನು ವೈವಿಧ್ಯಮಯ ಬದುಕಿನ ಸಮಗ್ರ ಕಲ್ಪನೆ ಕೊಡುತ್ತವೆ. ಹಾಡಿನ ಅರ್ಥ, ಪ್ರಾದೇಶಿಕ ಹಿನ್ನಲೆ, ಪ್ರಾದೇಶಿಕ ಭಾಷೆಯ ಪ್ರಭಾವ, ಧಾರ್ಮಿಕ ನಿಲುವು ಮುಗ್ಧ ಹಳ್ಳಿಗರ ಸಂಸ್ಕೃತಿ ಸಂಪ್ರದಾಯ ಈ ನಾಗರಿಕತೆಯ ದಾಳಿಯಲ್ಲಿಯೂ ಅವರಿಂದ ಉಳಿದು ಬಂದಿರುವುದು ಖುಷಿ ತರುತ್ತಿದೆ.

"ಕೋಲು ಕೋಲೆನ್ನ ಕೋಲಾ
ಮುತ್ತಿನ ಕೋಲು ಕೋಲೆನ್ನ ಕೋಲಾ
ಚಿನ್ನದ ಕೋಲು ಕೋಲೆನ್ನ ಕೋಲಾ
ಕೋಲನ್ನಾಡೋಣ ಬನ್ನಿ ನೀಲಕಂಠನ ಮೇಲೆ"

*

"ಶರೀರ ಸ್ಥಿರವಲ್ಲ
ದೇಹ ತನ್ನದಲ್ಲ"

ಕೋಲಾಟ ಹಾಗೂ ತತ್ವಪದ ಕೇಳಿದಾಗ ಒಂದು ಕೋಲಾಟದಿಂದ ಖುಷಿಕೊಡುವ ಹಾಡಾಗಿದ್ದರೂ ಅದರಲ್ಲಿ ಬರುವ ಗೌರಿ-ಗಂಗೆಯ ವಾದ-ಸಂವಾದ ನಂತರ ಪರಮೇಶ್ವರ ಇಬ್ಬರನ್ನೂ ಸಂತೈಸಿ, ಲೋಕ ಕಲ್ಯಾಣದಲ್ಲಿ ಅವರಿಬ್ಬರ ಪಾತ್ರ

ಮುಖ್ಯ. ಹೀಗೆ ದೀರ್ಘ ಕಥನ ಕವನ ಅದಾದರೆ ಇನ್ನೊಂದು ತಾತ್ವಿಕ ಹಿನ್ನೆಲಯ ಹಾಡೊಂದು ಪರಿಣಾಮಕಾರಿ.

ಮನೆಯ ಧಾರ್ಮಿಕ ಕಾರ್ಯಗಳಲ್ಲಿ, ದೇವಾಲಯದ ಕಾರ್ಯಗಳಲ್ಲಿ ಶ್ರೀಮತಿ ಸರೋಜಮ್ಮ ಆಕರ್ಷಕ ಹಾಡುಗಾರರಾಗಿ ಕಾಣುತ್ತಾರೆ. ಸುಸಂಸ್ಕೃತ ಬ್ರಾಹ್ಮಣ ಮನೆತನದಲ್ಲಿ ಜನ್ಮ ತಾಳಿದ ಸರೋಜಮ್ಮನವರಿಗೆ ಹಾಡುಗಾರಿಕೆ ಮನೆತನದಿಂದಲೇ ಬಂದುದು. ಮೂರುಜನ ಸಹೋದರಿಯರಿದ್ದು ಮೂವರೂ ಒಬ್ಬರಿಗಿಂತ ಒಬ್ಬರು ಮಿಗಿಲಾದಿ ಹಾಡುಗಾರರು.

ಹಾಡಿನಲ್ಲಿಯ ಕಲ್ಪನೆ, ಭಾವನೆ, ಚೆಲುವು ಹಾಡುವ ಮಧುರ ಧ್ವನಿ ಕೇಳುಗರನ್ನು ಖುಷಿಪಡಿಸುತ್ತವೆ. ಹಾಡುಗಳಲ್ಲಿಯ ಏರಿಳಿತ, ಸ್ಪಷ್ಟತೆ ಎಲ್ಲವೂ ಪರಿಣಾಮಕಾರಿ. ೮–೧೦ ವರ್ಷದ ಬಾಲ್ಯದಿಂದಲೇ ಬಂದ ಹಾಡುಗಾರಿಕೆ ಅರ್ಥ ಪಡೆದು ಪರಿಣಾಮ ಬೀರಿದೆ.

ಗೌರಿ ಹಬ್ಬದಲಿ, ಮನೆಯ ಧಾರ್ಮಿಕ ಕಾರ್ಯಗಳಲ್ಲಿ, ಊರಿನ ಉತ್ಸವಗಳಲ್ಲಿ ಹೀಗಿ ಸಂದರ್ಭ ಬಂದಾಗಲೆಲ್ಲ ಸರೋಜಮ್ಮನವರ ಹಾಡುಗಾರಿಕೆ ಇದ್ದೇ ಇರುತ್ತದೆ. ದೀರ್ಘ ಬದುಕಿನಲಿ ಇದುವರೆಗೆ ಸಾಕಷ್ಟು ಸಂದರ್ಭಗಳಲ್ಲಿ, ಸಾಕಷ್ಟು ಕಾರ್ಯಕ್ರಮಗಳಲ್ಲಿ ಹಾಡಿ ಪ್ರಶಂಸೆ ಪಡೆದಿರುವ ಸರೋಜಮ್ಮನವರಲ್ಲಿ ಇಂಥ ಪ್ರಕಾರದ ಹಾಡು ಇಲ್ಲವೆನ್ನುವಂತಿಲ್ಲ.

ಕನಕಗಿರಿಯ ನಾಗೇಶರಾವ್–ಸೇತುಬಾಯಿ ದಂಪತಿಗಳ ಮಗಳಾಗಿ ಜನ್ಮ ಪಡೆದ ಶ್ರೀಮತಿ ಸರೋಜಾಬಾಯಿ ಅದೇ ಊರಿನ ಪ್ರಭಾಕರ್‌ರಾವ್ ಗಡ್ಡಿ ಅವರನ್ನು ಪತಿಯನ್ನಾಗಿ ಪಡೆದು ಬಂದರು. ಪತಿಯ ಮನೆಯಲ್ಲಿ ಎಲ್ಲರೂ ಹಾಡಿಗೆ ಪೂರಕವಾದರು. ಪತಿಯ ಹಾಗೂ ಮನೆಯವರ ಪ್ರೋತ್ಸಾಹದಿಂದ ಹೆಚ್ಚಿಗೆ ಗುರುತಿಸಿಕೊಳ್ಳುವಂತಾಯಿತು ಎನ್ನುವ ಸರೋಜಮ್ಮ ಈ ವಯಸ್ಸಿನಲ್ಲೂ ಹಾಡಿನಲ್ಲಿ ಉತ್ಸಾಹ ಕಳೆದುಕೊಂಡಿಲ್ಲ.

ಸರಳ ಸಜ್ಜನಿಕೆಯ ಸರೋಜಮ್ಮ ಬದುಕು–ಕಲೆ ಎರಡನ್ನೂ ಬೆಳೆಸಿಕೊಂಡು ಬೆಸೆದುಕೊಂಡು ಬಂದಿದ್ದಾರೆ. ಯಾವುದಕ್ಕೂ ಹಪಾಹಪಿ ಇಲ್ಲ. ಏನೇ ಆಗಲಿ ಜಾನಪದ ಜಗತ್ತು, ಸಂಘ ಸಂಸ್ಥೆಗಳು ಇಂಥ ಕಲಾವಿದೆಯನ್ನು ಗುರುತಿಸಿ ಗೌರವಿಸುವುದು ಅವಶ್ಯಕತೆಯಿದೆ.

**ಕೆ. ಸರೋಜಾಬಾಯಿ**
**ಮುಖ್ಯ ಬೀದಿ, ಕನಕಗಿರಿ**
**ತಾ : ಗಂಗಾವತಿ, ಜಿ : ಕೊಪ್ಪಳ**

## ಖುದಾನಸಾಬ ಜೂಲಕೇರಿ

ಕನಕಗಿರಿಯ ಬಯಲಾಟದ ಕಲಾವಿದರನ್ನು ಕುರಿತು ಬರೆಯುವಾಗ ಕೊಪ್ಪಳ ಜಿಲ್ಲೆಯ ಬಯಲಾಟ ಸ್ಪರ್ಧೆಯನ್ನು ೨೦೦೬ರಲ್ಲಿ ನಾನು ಜಾನಪದ ಅಕಾಡೆಮಿ ಸದಸ್ಯನಾಗಿದ್ದಾಗ ಏರ್ಪಡಿಸಿದ್ದು ನೆನಪಿಗೆ ಬರುತ್ತಿದೆ. ಮೂರು ದಿನಗಳವರೆಗೆ ಜಿಲ್ಲೆಯ ತಂಡಗಳೆಲ್ಲ ಭಾಗವಹಿಸಿ ಪ್ರದರ್ಶಿಸಿದ್ದು ಈಗಲೂ ಕಣ್ಣುಮುಂದೆ ಕಟ್ಟಿದಂತೆ.

ಐತಿಹಾಸಿಕ ಪ್ರಸಿದ್ಧಿ ಪಡೆದಷ್ಟೇ ಕನಕಗಿರಿ ಸಾಂಸ್ಕೃತಿಕವಾಗಿಯೂ ಶ್ರೀಮಂತಿಕೆ ಪಡೆದ ಗ್ರಾಮ. ಬಯಲಾಟದ ಮೂಲ ಕಥೆ ಕೃಷ್ಣಪಾರಿಜಾತ ಕಥೆ. ರಾಯಚೂರು ಜಿಲ್ಲಾ ಕವಿಯಿಂದ ಪ್ರಾರಂಭವಾದರೂ ಅದು ಪೂರ್ಣಗೊಂಡಿದ್ದು ಕನಕಗಿರಿಯಲ್ಲಿ. ಕನಕಗಿರಿ ಬಯಲಾಟ ಪ್ರದರ್ಶನಕ್ಕೆ ಹೆಸರುವಾಸಿಯಾಗಿತ್ತು. ಕನಕಗಿರಿಯಲ್ಲಿ ಮನೆಮನೆಗೆ ಬಯಲಾಟ ಕಲಾವಿದರು ಇರುತ್ತಿದ್ದರೆಂದರೆ ಅತಿಶಯೋಕ್ತಿಯಲ್ಲ.

ಜೂಲಕೇರಿ ಓಣಿ, ಆರೇರ ಓಣಿ, ಪಿಂಜಾರ ಓಣಿ ತಂಡಗಳು ಸ್ಪರ್ಧಾತ್ಮಕವಾಗಿ ಆಟಗಳನ್ನು ಪ್ರಯೋಗಿಸುತ್ತಿದ್ದವು. ಒಂದಕ್ಕೊಂದು ತಂಡ ಅದ್ಭುತ ಪ್ರದರ್ಶನ ನೀಡುತ್ತಿದ್ದವು. ಚಿತ್ರ ಸೈನ್ಯ ಗಂಧರ್ವ, ಸುಭದ್ರ ಕಲ್ಯಾಣ, ಕೀಚಕ ವಧ ಕಥೆಗಳು ಒಂದೊಂದು ತಂಡದಿಂದ ಪ್ರಸಿದ್ಧಿ ಹೊಂದಿದ್ದವು. ಊರ ಹಿರಿಯರ ಪ್ರೋತ್ಸಾಹದಿಂದ ಜಾನಪದ ರಂಗಭೂಮಿ ಆ ಊರಲ್ಲಿ ಬೆಳೆದು ಬರುವಲ್ಲಿ ಕಾರಣ. ವಿಶೇಷವಾಗಿ ಸಮಗಂಡಿ ಮಲ್ಲಯ್ಯ, ಬಸಪ್ಪ ಮಾಸ್ತರ ಸ್ಮರಣೀಯರು.

ಕಲಾವಿದರಾಗಿ ಮರೆಯಾದ ಹನುಮಪ್ಪ ಕಿಸ್‌ಗುಂಡಿ, ಯಮುನಪ್ಪ ಹಟ್ಟಿ, ಚಿತ್ತಾರಿ ಭಾಷಾ, ತಿಪ್ಪಣ್ಣ ಪಿಂಜಾರ ಇನ್ನೂ ಅನೇಕ ಕಲಾವಿದರು ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ. ಅದರಲ್ಲೂ ಬಡಾ ಹುಸೇನಸಾಬ ಅದ್ವಿತೀಯ ಕಲಾವಿದ. ಇಡೀ ಕಥೆ ಬಾಯಿಪಾಠವಾಗಿ ವಯಸ್ಸಾದ ಮೇಲೆ ಮನೆಯ ಹೊರಗಡೆ ಕುಳಿತು ಬಯಲಾಟದ

ತಾಲೀಮದಲ್ಲಿ ಕೇಳಿಬರುತ್ತಿದ್ದ ಮಾತುಗಳನ್ನು ಅವಲೋಕಿಸುತ್ತ ಇಂಥ ಪಾತ್ರಧಾರಿ ಇಂಥಲ್ಲೇ ಮಾತು ತಪ್ಪಿದ ಎಂದು ಹೇಳುತ್ತಿದ್ದರಂತೆ.

ಇಂಥ ಕಲಾವಿದನ ಸಂಬಂಧಿಯ ಪ್ರಭಾವದಲ್ಲಿ, ಮಾರ್ಗದರ್ಶನದಲ್ಲಿ ಬೆಳೆದು ಬಂದ ಖುದಾನಸಾಬ ಇಂದಿನ ಹಿರಿಯ ಕಲಾವಿದ. ಇತ್ತೀಚಿಗೆ ಇವರನ್ನು ಸಂದರ್ಶಿಸಿದಾಗ ಹಿಂದಿನ ಕಥೆ-ವ್ಯಥೆ ಎಲ್ಲವನ್ನೂ ಪ್ರಾಂಜಲ ಮನಸ್ಸಿನಿಂದ ತೆರೆದಿಟ್ಟರು.

ಗಂಗಾವತಿ ತಾಲೂಕಿನ ಕನಕಗಿರಿಯ ಕಾಸೀಮಸಾಬ ಅಮೀಮಬಿ ದಂಪತಿಗಳ ರೈತ ಮನೆತನದಲ್ಲಿ ಜನ್ಮತಾಳಿದ ಖುದಾನಸಾಬ ಇಬ್ಬರು ಸಹೋದರರನ್ನು ಐದು ಜನ ಸಹೋದರಿಯರನ್ನು ಪಡೆದು ಬೆಳೆದವರು. ಓದು ಕನಸಿನ ಮಾತು. ಬಡತನ, ಆರ್ಥಿಕ ಪರಿಸ್ಥಿತಿ ಹಲವಾರು ಕಾರಣಗಳಿಂದ ಬಹುಬೇಗ ದುಡಿಮೆಗೆ ಬರಬೇಕಾಯಿತು.

ಸುಮಾರು ೭೫ ವಯಸ್ಸಿನ ಖುದಾನಸಾಬ ರಂಗಭೂಮಿ ಪ್ರವೇಶಿಸಿದ್ದು ೪೦ರ ಹರೆಯದಲ್ಲಿ. ರತಿಕಲ್ಯಾಣಿ ಕಥೆಯಲ್ಲಿ ಅರ್ಜುನ ಹಾಗೂ ಕೌಂಡ್ಲೀಕ ಪಾತ್ರಗಳಲ್ಲಿ ಅಭಿನಯ. ಇದೊಂದೇ ಕಥೆ ಈ ಕಲಾವಿದರ ತಂಡದಿಂದ ಸುಮಾರು ೩೦-೪೦ ಪ್ರಯೋಗ ಗೊಂಡಿರಬೇಕು. ಪ್ರತಿವರ್ಷ ಜಾತ್ರೆ-ಉತ್ಸವಗಳಲ್ಲಿ ಹಲವಾರು ಪ್ರಯೋಗ ಆಡಿದ್ದುಂಟು. ಈ ಆಟದ ನಿರ್ದೇಶನ ದಿ. ಬಡಾಹುಸೇನಸಾಬನದೇ ಆಗಿತ್ತು.

ಬಯಲಾಟದ ಹುಚ್ಚು, ಕಲೆಯ ಆಸಕ್ತಿಗೆ ಅವರ ಅನುಭವದ ಒಂದು ಉದಾಹರಣೆ ಹೇಳಲೇಬೇಕು. ಒಂದು ವರ್ಷ ಬರಗಾಲ ಬದುಕೇ ಕಷ್ಟ ಅಂಥ ದಿನಗಳಲ್ಲಿಯೂ ಬಯಲಾಟ ಆಡುವ ಆಸಕ್ತಿ ದೀಪಕ್ಕೆ ಎಣ್ಣೆ ತರಲು ಈ ತಂಡದ ಕಲಾವಿದರಿಗೆ ಸಾಧ್ಯವಿರದ ಸಂದರ್ಭ ಆಗ ಕಲಾವಿದರ ಆಸಕ್ತಿ ಕಂಡ ಊರಿನ ಪಂಚಾಯತಿ ಅಧ್ಯಕ್ಷರಾಗಿದ್ದ ಬಸಣ್ಣ ಸಮಗಂಡಿ ಅವರು ಪ್ರ್ಯಾಕ್ಟೀಸಿನಿಂದ ಹಿಡಿದ ಆಟ ಪ್ರಯೋಗಿಸುವವರೆಗೂ ಖರ್ಚು ನಿಭಾಯಿಸಿದ್ದು ಸ್ಮರಿಸುತ್ತಾರೆ ಖುದಾನಸಾಬ. ಇಂದಿಗೂ "ಮಲ್ಲಯ್ಯ ತಾತ ಸಮಗಂಡಿ ಬಯಲಾಟ ತಂಡ" ವೆಂದೇ ಬಯಲಾಟ ಪ್ರಯೋಗಿಸುವುದುಂಟು.

ಖುದಾನಸಾಬ ಅವರನ್ನು ತಾವು ಅಭಿನಯಿಸಿದ ಪಾತ್ರದ ಒಂದು ಡೈಲಾಗ ಹೇಳಬೇಕೆಂದಾಗ.

"ಭಲರೇ ಎಲೈ ಭಂಡಗೊಲ್ಲರ ಮಗನಾದ ಮನ್ಮಥ
ನೀನೆಂತಹ ಮೂರ್ಖ ರಂಡೆಯರ ಮುಂದೆ ನಿನ್ನ
ಭಂಡ ಪೌರಷವನ್ನು ಹೇಳುವುದು ಬಿಟ್ಟು

ಮಾರನೋ, ಧೀರನೋ ಎಂದು ಅನಿಸಿಕೊಳ್ಳುವುದು ಬಿಟ್ಟು
ಒಳ್ಳೆಯ ಪೌರುಷ ತಾಳಿ ನನ್ನೊಡೆ ಯುದ್ಧವ ಮಾಡುವುದು
ಬಿಟ್ಟು ಜಯಪತ್ರಿಕೆ ಹೊಂದಲೇ ಬೇಕೆಂದು ಬಂದಿರುವೆಯಾ
ಒಳ್ಳೆಯದು ಬಾ ಪಶುವೆ ಎಶವ ಬಾಣವನು
ನಿತ್ತರಿಸಿಕೊಳ್ಳಲ್ಲೈ ಅಧಮ ನೋಡೆನ್ನ ಪರಾಕ್ರಮ"

ಖುದಾನಸಾಬ ಈ ಹಿರಿಯ ವಯಸ್ಸಿನಲ್ಲಿಯೂ ಅದೇ ಪೌರುಷದ ಧಾಟಿಯಲ್ಲಿ ಹೇಳಿದ ಮಾತು ಖುಷಿ ತಂದಿತು. ಈ ಕಲಾವಿದನನ್ನು ಕರ್ನಾಟಕ ಜಾನಪದ ಅಕಾಡೆಮಿ ಕನಕಗಿರಿಯಲ್ಲಿ ಏರ್ಪಡಿಸಿದ್ದ ಬಯಲಾಟ ಸ್ಪರ್ಧೆಯಲ್ಲಿ ಸನ್ಮಾನಿಸಿ ಗೌರವಿಸಿದೆ.

---

ಖುದಾನಸಾಬ ಜೂಲಕೇರಿ
ಅಂಚೆ : ಕನಕಗಿರಿ, ತಾ : ಗಂಗಾವತಿ
ಜಿ : ಕೊಪ್ಪಳ

# ಮಹಾದೇವಮ್ಮ ಶೆಟ್ಟರ

ನಮ್ಮ ಸಂಪ್ರದಾಯದ ಹಾಡುಗಳಲ್ಲಿ ನಮ್ಮ ಸಂಸ್ಕೃತಿ ಅರಳಿ ನಿಂತಿದೆ. ನಮ್ಮ ಆರಾಧನೆ, ನಮ್ಮ ದೇವರು, ನಂಬಿಕೆಗಳೆಲ್ಲ ಜನಪದ ಹಾಡುಗಳಲ್ಲಿ ಅಡಕವಾಗಿವೆ. ಇಂಥ ಕಲೆ–ಕಲಾವಿದರು ಈ ಆಧುನಿಕ ಯುಗದಲ್ಲಿ ಎಲ್ಲೋ ಕೆಲವಡೆ ಮಾತ್ರ ಉಳಿದಿರುವುದು ಸಮಾಧಾನಕರ.

"ಒಂದು ಸೇರ ಎಣ್ಣಿಯ ತಂದು
ಒಂದು ದಿನದಿ ಹೋಳಿಗೆಯ ಮಾಡಿ
ರಾಯರಾಡೋದು ಹಾದಿ ಬೀದಿಯಾಗ
ಸೆಟ್ಟರಾಡೋದು ಪಟ್ಟಣ ಸಾಲ್ಯಾಗ
ನಾವಾಡೋದು ಗೌರಿಪೋಳ್ಯಾಗ
ಏಕದಾರಿತೆ ಬೆಳಗುವೆ ಆರತಿ"

ಗೌರಿ ಹಬ್ಬದ ದಿನ ಗೌರಿಯನ್ನು ಕೂಡಿಸಿ ಹಾಡುವ ಈ ಹಾಡು ಕೇಳಿದಷ್ಟು ಕೇಳ ಬೇಕೆನಿಸುತ್ತಿತ್ತು. ಹಾಡಿನ ಹಿಂದಿರುವ ಸಂಪ್ರದಾಯ ಬದುಕಿನ ಏರಿಳಿತ, ಗುಣ ಸ್ವಭಾವ ಹೀಗೆ ಒಂದು ಪರಂಪರೆಯನ್ನು; ಒಂದು ಸಂಸ್ಕೃತಿಯನ್ನು ಬಿತ್ತರಿಸುವ ಹಾಡುಗಳು ನಮ್ಮ ನಾಡಿನ, ದೇಶದ ಸಂಪತ್ತು. ಇಂಥ ಹಾಡುಗಳನ್ನು ಉಳಿಸಿಕೊಂಡು ಬಂದಿರುವ ನಮ್ಮ ಕಲಾವಿದೆಯರು ನಾಡಿನ ಸಂಪತ್ತು.

ಕನಕಗಿರಿಯ ಮಹಾದೇವಮ್ಮ ಗೌರಿಹಬ್ಬದಲ್ಲಿ, ಶ್ರಾವಣದ ಪಂಚಮಿಯ ದಿನದಲಿ, ಹೀಗೆನೇ ಹಬ್ಬ ಹರಿದಿನಗಳಲ್ಲಿ ಸಂದರ್ಭಾನುಸಾರ ತಮ್ಮ ಮನೆಯ ಧಾರ್ಮಿಕ ಕಾರ್ಯಗಳಲ್ಲಿ ಹಾಡುತ್ತ ಎಲೆಮರೆಯ ಕಾಯಿಯಂತಿರುವ ಪ್ರತಿಭೆ. ಮಹಾದೇವಮ್ಮ ಹೊರಗಡೆ ಕಾರ್ಯಕ್ರಮಗಳಲ್ಲಾಗಲಿ, ವೇದಿಕೆಯಲ್ಲಾಗಲಿ ಮಾಧ್ಯಮಗಳಲ್ಲಾಗಲಿ ಹೋಗಿ ಹಾಡಿದವರಲ್ಲ. ತಮ್ಮ ಖುಷಿಗಾಗಿ ಹಾಡುವುದನ್ನು ರೂಢಿಸಿಕೊಂಡು ಬಂದವರು.

ಸಂಪ್ರದಾಯದ ಹಾಡು, ಭಕ್ತಿ ಗೀತೆ, ತತ್ವ ಪದ ಹೀಗೆ ಸುಮಾರು ಗಂಟೆಗಟ್ಟಲೆ ಹಾಡುವಷ್ಟು ವೈವಿಧ್ಯಮಯ ಹಾಡುಗಳ ಸಂಗ್ರಹವುಂಟು. ೧೫-೧೬ರ ಪ್ರಾಯದಿಂದಲೇ ಹಾಡಿನ ಆಸಕ್ತಿ. ಆ ಆಸಕ್ತಿ ಇಂದಿನವರೆಗೂ ಉಳಿದು ಬೆಳೆದು ಬಂದಿರುವುದು ಸಂತಸದ ಸಂಗತಿ.

ಮಹಾದೇವಮ್ಮ ಹುಟ್ಟಿಬೆಳೆದಿದ್ದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ತಳಕಲ್ಲ ಗ್ರಾಮದ ಫಕೀರಪ್ಪ ರಾಚಮ್ಮ ದಂಪತಿಗಳ ರೈತಮನೆತನದಲ್ಲಿ. ಓದಿದ್ದು ಎಸ್.ಎಸ್.ಎಲ್.ಸಿ.ವರೆಗೆ ತಾಯಿ ತತ್ವಪದ ಹಾಡುತ್ತಿದ್ದುದೇ ಪ್ರಭಾವ. ತಂದೆ ಸ್ವಾತಂತ್ರ್ಯ ಯೋಧರು. ನಾಡು, ನುಡಿ, ಕಲೆ-ಸಾಹಿತ್ಯ ಈ ಎಲ್ಲ ಆಸಕ್ತಿಗೆ ಮನೆಯ ವಾತಾವರಣ ಸಹಜವಾಗಿ ಪ್ರಭಾವ ಬೀರಿದೆ.

ಕನಕಗಿರಿಯ ಗುರುಸಿದ್ಧಪ್ಪ ಹಾದಿಮನಿ ಅವರನ್ನು ಪತಿಯನ್ನಾಗಿ ಪಡೆದು ಬಂದಾಗಲೂ ಕಲೆ-ಸಾಹಿತ್ಯಾಸಕ್ತಿಗೆ ಧಕ್ಕೆ ಬರಲಿಲ್ಲ. ರೈತ ಮನೆತನದಲ್ಲಿಯೂ ಪ್ರೋತ್ಸಾಹ ದೊರೆತು ಹೆಚ್ಚು ಹೆಚ್ಚು ತಮ್ಮನ್ನು ಮನೆಯ ಹಾಗೂ ಅಕ್ಕಪಕ್ಕದ ಮನೆಯ ಸಂಪ್ರದಾಯದ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಳ್ಳುವಲ್ಲಿ ಸಾಧ್ಯವಾಗಿದೆ ಎನ್ನುವ ಮಹಾದೇವಮ್ಮ ೫೩ರ ಅಂಚಿನಲ್ಲಿ ಕಾಲಿರಿಸುತ್ತಿದ್ದಾರೆ.

ಏನೇ ಆಗಲಿ ಮಹಾದೇವಮ್ಮನಂಥ ವಿದ್ಯಾವಂತೆ, ಗ್ರಾಮಪಂಚಾಯತಿ ಮಾಜಿ ಸದಸ್ಯೆ ಹಳ್ಳಿಯ ಮುಗ್ಧ ಕಲಾವಿದರಿಗೆ ಮಾರ್ಗದರ್ಶಿಯಾಗಬೇಕು. ಹಳ್ಳಿಯ ಹಬ್ಬ ಹರಿದಿನಗಳಲ್ಲಿ, ಕಾರ್ಯಕ್ರಮಗಳಲ್ಲಿ, ವೇದಿಕೆಯಲ್ಲಿ ಕಾಣಿಸಿಕೊಳ್ಳಬೇಕು. ತಮ್ಮಲ್ಲಿದ್ದ ಹಾಡಿನ ಸಂಗ್ರಹ ಹರಿದು ಹಂಚಿಬರಬೇಕೆಂಬುದೇ ಎಲ್ಲರ ಹಿರಿಯಾಸೆ.

**ಮಹಾದೇವಮ್ಮ ಶೆಟ್ಟರ**
**ಮಾಜಿ ಗ್ರಾಮ ಪಂಚಾಯತ ಸದಸ್ಯೆ**
**ಅಂಚೆ : ಕನಕಗಿರಿ**
**ತಾ : ಗಂಗಾವತಿ, ಜಿ : ಕೊಪ್ಪಳ**

## ಕರಿಯಪ್ಪ ಮಾಸ್ತರ ಗುರಿಕಾರ

ಗಂಗಾವತಿ ತಾಲೂಕಿನ ಹುಲಿಹೈದರ ಗ್ರಾಮದ ಬೇಸಾಯ ಮನೆತನದ ಯಮನಪ್ಪ-ಹನುಮವ್ವ ದಂಪತಿಗಳ ಹಿರಿಯ ಮಗನಾಗಿ ಜನ್ಮಪಡೆದ ಕರಿಯಪ್ಪ ಗುರಿಕಾರ ಮೂರು ಜನ ಸಹೋದರರನ್ನು ಒಬ್ಬ ಸಹೋದರಿಯನ್ನು ಪಡೆದು ಬೆಳೆದಿದ್ದಾರೆ. ಓದಿದ್ದು ಕನ್ನಡ ೭ನೇ ತರಗತಿ. ಬೆಳೆದಿದ್ದು ಕುಷ್ಟಗಿಯಲ್ಲಿ. ಅರವತ್ತರಂಚಿನಲ್ಲಿರುವ ಕರಿಯಪ್ಪ ಗುರಿಕಾರ ಸಧ್ಯ ಹುಲಿಹೈದರಿನಲ್ಲಿಯೇ ವಾಸವಾಗಿದ್ದು ಡಪ್ಪಿನ ಮಾಸ್ತರರೆಂದೇ ಪ್ರಸಿದ್ಧಿ ಪಡೆದಿದ್ದಾರೆ.

ಉತ್ತರ ಕರ್ನಾಟಕ ಜಾನಪದ ರಂಗಭೂಮಿಯಲ್ಲಿ ಬಯಲಾಟದಷ್ಟೇ ಪ್ರಸಿದ್ಧಿ ಪಡೆದ ಡಪ್ಪಿನಾಟ ಜನಪ್ರಿಯ ಆಟ. ಬಯಲಾಟದಷ್ಟು ಆಡಂಬರ, ವೈಭವ ಪ್ರಯೋಗ ಇದರಲಿಲ್ಲ. ಬಹು ಸರಳ ಪ್ರದರ್ಶನ. ಬಯಲಾಟಕ್ಕಿಂತ ಭಿನ್ನವಾದದ್ದು. ಡಪ್ಪೇ ಇದರ ಪ್ರಮುಖ ವಾದ್ಯ. ಸಾಮಾಜಿಕ ಹಾಗೂ ಶರಣರ ಬದುಕಿನ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ರಚಿಸಿದ ಕಥೆಗಳೇ ಪ್ರದರ್ಶನಕ್ಕೆ ಬಂದಿವೆ. ಮನೋರಂಜನೆಯ ಜೊತೆ ನೋಡಿ ನೀತಿಬೋಧಿಸುವ ಉದ್ದೇಶ ಈ ಆಟಗಳದ್ದು. ಡಪ್ಪಿನ ಪ್ರದರ್ಶನಕೂಡ ಇಡೀ ರಾತ್ರಿ ಜರುಗುವುದುಂಟು.

ಇಂಥ ಡಪ್ಪಿನಾಟಕ್ಕೆ ಬಹುಬೇಗ ಮಾರುಹೋದ ಕರಿಯಪ್ಪನವರು ಕಲಿತಿದ್ದು ಕುಷ್ಟಗಿಯ ದಿ. ಹೊಳಿಯಪ್ಪ ಗೂಳಿ ಮಾಸ್ತರರ ಶಿಷ್ಯನಾಗಿ. ಹೊಳಿಯಪ್ಪ ಮಾಸ್ತರ ಒಂದು ರೀತಿಯಲ್ಲಿ ಸಂಬಂಧಿಕರೂ ಆಗಿದ್ದರು. ೧೨ನೇ ವಯಸ್ಸಿನಲ್ಲಿಯೇ ಕರಿಯಪ್ಪ "ರತಿಕಲ್ಯಾಣ"ದಲ್ಲಿ ರತಿಯ ಪಾತ್ರದಲ್ಲಿ ಅಭಿನಯಿಸಿ ಜನಮನ ಸೆಳೆದ ಕಲಾವಿದರಾಗಿದ್ದರು. ಡಪ್ಪು, ಮದ್ಲಿ, ಹಾರ್ಮೋನಿಯಂ ವಾದ್ಯಗಳನ್ನು ನುಡಿಸುವ ಕರಿಯಪ್ಪ ಮಾಸ್ತರ "ಮಾರುತೇಶ್ವರ ನಾಟ್ಯ ಡಪ್ಪಿನ ಸಂಘ"ದ ಸಂಚಾಲಕರೂ ಹೌದು. ಇವರ ಹಿರಿತನದಲ್ಲಿ, ನಿರ್ದೇಶನದಲ್ಲಿ ತಂಡ ಜಿಲ್ಲೆಯ ನಾನಾ ಭಾಗಗಳಲ್ಲಿ ಹೋಗಿ ಪ್ರದರ್ಶನ ನೀಡಿಬಂದದ್ದುಂಟು.

ಸುಮಾರು ಮೂರು ದಶಕಗಳಿಂದ ಜಾನಪದ ರಂಗಭೂಮಿಯ ಆರಾಧಕರಾಗಿ ಅಭಿನಯ, ನಿರ್ದೇಶನ, ವಾದ್ಯನುಡಿಸುವಿಕೆಯಿಂದ ಸೇವೆ ಸಲ್ಲಿಸುತ್ತ ಜನಮನ ಸೆಳೆದಿದ್ದಾರೆ. ಎಂಥ ಕಠಿಣ ಪ್ರಸಂಗದಲ್ಲಿಯೂ ಹಿಂದೆ ಸರಿದವರಲ್ಲ. ಎಲ್ಲ ಕಷ್ಟ ನಷ್ಟ ಎದುರಿಸುತ್ತ ತಮ್ಮ ಕಲೆ ಪ್ರದರ್ಶಿಸುತ್ತ ಹೊಸ ಹೊಸ ಯುವಕರನ್ನು ಹುರಿದುಂಬಿಸಿ ರಂಗ ಕ್ಷೇತ್ರಕ್ಕೆ ತರುತ್ತ ರಂಗಭೂಮಿಗೆ ತಮ್ಮದೇ ಆದ ಕೊಡುಗೆ ಕೊಟ್ಟವರು.

ಕರಿಯಪ್ಪ ಮಾಸ್ತರ ನಿರ್ದೇಶಿಸಿದ ಡಪ್ಪಿನಾಟಗಳೆಂದರೆ ಬಾಲಬಿಕ್ಷುಕ ರಾಜ, ಬಸವಂತ ಬಲವಂತ, ಛತ್ರಪತಿ ರಾಜನ ಕಥೆ, ಸಂಗ್ಯಾಬಾಳ್ಯಾ, ಕಬೀರದಾಸ ಪ್ರಮುಖ ಕಥೆಗಳು. ಛತ್ರಪತಿ ರಾಜನ ಕಥೆ, ಬಸವಂತ ಬಲವಂತ ಕಥೆಗಳಂತೂ ಕುಷ್ಟಗಿಯ ಓಣಿ ಓಣಿಯಲ್ಲಿ ಅನೇಕವರ್ಷಗಳವರೆಗೆ ಸ್ಪರ್ಧಾತ್ಮಕವಾಗಿ ಪ್ರಯೋಗಗೊಂಡದ್ದುಂಟು. ಕುಷ್ಟಗಿಯಲ್ಲಿರುವವರೆಗೂ ನಿರಂತರ ಸುತ್ತಲು ಹಳ್ಳಿಹಳ್ಳಿಗಳಲ್ಲಿ ಪ್ರದರ್ಶಿಸಿ ಜನಮನ ಸೆಳೆದಿದ್ದನ್ನು ಇಂದಿಗೂ ಆ ಭಾಗದ ಅಭಿಮಾನಿಗಳು ಕಲಾಪ್ರಿಯರು ಸ್ಮರಿಸುತ್ತಾರೆ.

ಕುಷ್ಟಗಿ ಟಿಕ್ಕಳಕಿ ಹುಲಿಹೈದರ, ಗೌರಿಪುರ, ಅಡವಿಭಾವಿ, ಕನಕಗಿರಿ, ಕಾರಟಗಿ, ತಾವರಗೇರಿ, ನಾಗಕಲ್ಲಿ, ಸಂಗನಾಳ ಇವರು ಪ್ರಯೋಗಿಸಿದ ಗ್ರಾಮಗಳು.

ಕರಿಯಪ್ಪ ಮಾಸ್ತರ ಡಪ್ಪಿನಾಟದ ನಿರ್ದೇಶಕರಾಗೇ ಪ್ರಸಿದ್ಧಿ ಪಡೆದಿದ್ದರೂ ಉತ್ತಮ ಜಾನಪದ ಹಾಡುಗಾರರೂ ಹೌದು. ಭಜನೆ, ತತ್ವಪದ, ಹಂತಿಪದ, ಡೊಳ್ಳಿನ ಪದ ಹಾಡಲು ಪ್ರಾರಂಭಿಸಿದರೆ ಬೀದಿಯಲ್ಲಿ ಹೋಗುವ ಜನರು ಸಹಜವಾಗಿ ಹಾಡಿನತ್ತ ತಿರುಗಿ ನಿಂತು ಕೇಳಿ ಹೋಗುತ್ತಾರೆ ಎನ್ನುವ ಮಾತು ಕೇಳಿದಾಗ ಅವರ ಉತ್ತಮ ಹಾಡುಗಾರಿಕೆಯನ್ನೇ ಸ್ಪಷ್ಟಪಡಿಸುತ್ತದೆ.

ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ, ಸಂಘ ಸಂಸ್ಥೆಗಳ ಆಹ್ವಾನದಿಂದ ಅನೇಕ ಕಡೆ ಉತ್ಸವಗಳಲ್ಲಿ, ಜಾತ್ರೆಗಳಲ್ಲಿ ಕಾರ್ಯಕ್ರಮ ಕೊಟ್ಟು ಬಂದದ್ದುಂಟು. ವಿಶೇಷವಾಗಿ ಜಿಲ್ಲೆಯ ಆನೆಗೊಂದಿ ಉತ್ಸವ, ಕನಕಗಿರಿ ಉತ್ಸವ, ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಪ್ರದರ್ಶನ ಪ್ರಮುಖವಾಗುತ್ತವೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಜನ ಜಾಗ್ರತಿಗಾಗಿ ಪ್ರಸಾರಗೊಂಡ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸಂದರ್ಭಾನುಸಾರ ಸ್ವತಃ ಹಾಡು ರಚಿಸಿ ಹಾಡಿ ಆಕರ್ಷಿಸಿದ್ದುಂಟು. ವಿಶೇಷವಾಗಿ ಕುಟುಂಬ ಕಲ್ಯಾಣ, ಶಿಕ್ಷಣದ ಅವಶ್ಯಕತೆ, ಉಳಿತಾಯ ಯೋಜನೆಗಳಂತಹ ಕಾರ್ಯಕ್ರಮಗಳಲ್ಲಿಯೂ ಆಕರ್ಷಿಸಿದ್ದಾರೆ.

ಈ ಜಾನಪದ ರಂಗಭೂಮಿಯ ಹಿರಿಯ ಈ ಕಲಾವಿದರನ್ನು ಅನೇಕ ಅಭಿಮಾನಿಗಳ ಸಂಘ ಸಂಸ್ಥೆಗಳು ಸನ್ಮಾನಿಸಿವೆ.

ಜಿ. ಕರಿಯಪ್ಪ ಮಾಸ್ತರ

ಹುಲಿಹೈದರ, ತಾ : ಗಂಗಾವತಿ, ಜಿ : ಕೊಪ್ಪಳ

# ಹೊನ್ನಮ್ಮ ಆರಬಳ್ಳು

"ಆರತಿ ಮಾಡೋಣ ಬಾರ ಸಖಿ
ಉಡುರಾಜ ಮುಖಿ"

"ಮುಡಿಸಿರಿ ಮಲ್ಲಿಗೆ
ಸರಸಿಜಾಕ್ಷಿಗೆ ಬೇಗ"

ಹೀಗೆ ಅನೇಕ ಹಾಡುಗಳನ್ನು ಹಾಡಿ ಖುಷಿಪಡಿಸಿದ ಹೊನ್ನಮ್ಮ ಆರಬಳ್ಳು ೮೦ರ ವೃದ್ಧೆ. ಕನಕಗಿರಿಯ ಸಾಂಸ್ಕೃತಿ ಸಂಪತ್ತು, ಸೋಬಾನ ಹಾಡು, ಬೀಸುವಕಲ್ಲಿನ ಹಾಡು, ತೊಟ್ಟಿಲ ಹಾಡು, ಮಳೆರಾಯನ ಹಾಡು, ಹೀಗೆ ಜಾನಪದ ಹಾಡುಗಳ ಸಂಗ್ರಹವೇ ಅಲ್ಲಿ ಕಣಜವಾಗಿ ತುಂಬಿವೆ.

ಹೊನ್ನಮ್ಮ ಹಾಡಲು ಪ್ರಾರಂಭಿಸಿದ್ದು ಹತ್ತು-ಹನ್ನೆರಡರ ಹದಿಹರೆಯದಿಂದ. ಬದುಕಿನ ದೀರ್ಘ ಕಾಲ ಹಾಡುವುದರಲ್ಲಿಯೇ ಕಳೆದಿದೆ. ಊರಿನ ಯಾರದೇ ಮನೆಯಲ್ಲಿ ಯಾವುದೇ ಕಾರಣವಿರಲಿ ಅಲ್ಲಿ ಹೊನ್ನಮ್ಮ ಇದ್ದೇ ಇರುತ್ತಿದ್ದರು. ಇತ್ತೀಚಿಗೆ ಹಾಡುವುದನ್ನು ನಿಲ್ಲಿಸಿದ್ದರೂ ಆಸಕ್ತಿ-ಹುಮ್ಮಸ್ಸು ಕಳೆದಿಲ್ಲ ಆದರೆ ವೃದ್ಧಾಪ್ಯ ಹಾಡಿಗೆ ಸಹಕರಿಸುತ್ತಿಲ್ಲ. ಧ್ವನಿ ಸಾಲದು, ಹಾಡಿನ ಏರಿಳಿತ ಕಷ್ಟ.

ಹೊನ್ನಮ್ಮನಿಗೆ ಹಾಡು ತಾಯಿಯ ಕೊಡಿಗೆಯಾಗಿ ಬಂದಿದೆ. ತಾಯಿಯಿಂದ ಬಂದ ಈ ಹಾಡುಗಾರಿಕೆ ಗಂಡನ ಮನೆಗೆ ಬಂದಾಗಲೂ ಸಾಗಿ ಬಂದಿದೆ. ಗಂಡನ ಮನೆಯಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಕೂಲಿ ಕೆಲಸ ಮಾಡಿಕೊಂಡಿದ್ದ ಗಂಡ ಎಂಥ ಕಷ್ಟದಲ್ಲಿಯೂ ಹೊನ್ನಮ್ಮನ ಕಲೆಗೆ ತಡೆ ತಂದಿಲ್ಲ. ಯಾರಾದರೂ ಹಾಡಲು ಕರೆಯಲು ಬಂದರೆ ಕೆಲಸ ಬಿಡಿಸಿ ಕಳಿಸಿದ ಗಂಡನ ಪ್ರೋತ್ಸಾಹ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ ಹೊನ್ನಮ್ಮ.

ಹೊನ್ನಮ್ಮನಲ್ಲಿ ದೀರ್ಘ ಕಥನ ಗೀತೆಗಳೂವುಂಟು. ಹೊಲದಲ್ಲಿ ಕಳೆ ತೆಗೆಯುವಾಗ, ಭತ್ತ ನೆಡುವಾಗ ಬೆಳಗ್ಗೆಯಿಂದ ಸಂಜೆಯವರೆಗೆ ಹಾಡುತ್ತ ಕೆಲಸದಲ್ಲಿ ತೊಡಗಿದ್ದರೆ ಹೊತ್ತು ಸರಿದಿದ್ದೇ ಗೊತ್ತಾಗುತ್ತಿದ್ದಿಲ್ಲ ಎನ್ನುವ ಮಾತು ಕೇಳಿದಾಗ ಬೆಳಿಗ್ಗೆಯಿಂದ ಸಂಜೆಯವರೆಗೆ ಹಾಡುತ್ತಿದ್ದ ಈ ಕಲಾವಿದೆಯ ಹಾಡಿನ ಸಂಗ್ರಹವಾದರೂ ಎಷ್ಟಿರಬೇಕೆಂದು ಊಹಿಸಲೂ ಸಾಧ್ಯವಾಗದು.

ಹೊನ್ನಮ್ಮ ಹಾಡುಕಲಿತಿದ್ದು ತಾಯಿಯ ಪ್ರೋತ್ಸಾಹವಾಗಿದ್ದರೂ ಮುಂದೆ ಗಂಡನ ಮನೆಗೆ ಬಂದನಂತರ ಹಾಗೆನೆ ಒಬ್ಬರಿಂದೊಬ್ಬರು ಹಾಡುವುದನ್ನು ಕೇಳುತ್ತ ಅವರ ಜೊತೆ ಜೊತೆ ಹಾಡುತ್ತ ಇಂದು ಹಾಡಿನ ಅಪಾರ ಸಂಗ್ರಹ ಅವರಲ್ಲಿದೆ.

ಹೊನ್ನಮ್ಮ ಹವ್ಯಾಸಕ್ಕಾಗಿ ಹಾಡುವುದು. ಯಾರಿಂದಲೂ ಏನೂ ನಿರೀಕ್ಷಿಸರು. ಬಡತನ, ಕಷ್ಟ ಏನೇ ಇದ್ದರೂ ಯಾರನ್ನೂ ಕೇಳಿದವರಲ್ಲ. ಯಾವುದೇ ಕಾರ್ಯಕ್ರಮಕ್ಕೆ ಯಾರದೇ ಮನೆಗೆ ಹೋಗಿರಲಿ, ಮದುವೆ ಇರಬಹುದು ಕನ್ಯ ಋತುಮತಿಯಾದಾಗಿನ ಸಂದರ್ಭನೇ ಇರಬಹುದು ರಾತ್ರಿಯಿಂದ ಬೆಳಗಾಗುವರೆಗೆ ಹಾಡಿದರೂ ಏನೂ ಪಡೆಯದೆ ಅವರಾಗಿನೆ ಗೌರವದಿಂದ ಉಡಿತುಂಬಿ ಸೀರಿನೋ, ರವಿಕೆ, ಬಟ್ಟೆನೋ ಕೊಟ್ಟರೆ ಮಾತ್ರ ತರುವುದು. ಇಡೀ ದಿನ ಕೂಲಿ ಮಾಡಿ ದಣಿದು ಬಂದರೂ ಯಾರೇ ಕರೆಯಲಿ ಬೇಜಾರು ಪಟ್ಟುಕೊಳ್ಳದೆ ತನ್ನ ಜೊತೆ ಹಾಡುವವರನ್ನು ಕರೆದುಕೊಂಡು ಹೋಗಿ ಹಾಡಿ ಬಂದದ್ದುಂಟು.

ಕನಕಗಿರಿಯ ಫಕೀರಸಾಬ-ರಾಜಮ್ಮ ದಂಪತಿಗಳ ಮಗಳಾದ ಹೊನ್ನಮ್ಮ ಅದೇ ಊರಿನ ಯಮನೂರಸಾಬನನ್ನು ಪತಿಯನ್ನಾಗಿ ಪಡೆದು ಬಡತನ, ಕಷ್ಟ-ನಷ್ಟಗಳಲ್ಲಿಯೂ ಸಂಪ್ರದಾಯದ ಹಾಡುಗಳಿಂದ ಶ್ರೀಮಂತವಾಗಿ ಬಂದಿದ್ದಾಳೆ.

**ಹೊನ್ನಮ್ಮ ಆರುಬಳ್ಳ**
**ಅಂಚೆ : ಕನಕಗಿರಿ**
**ತಾ : ಗಂಗಾವತಿ, ಜಿ : ಕೊಪ್ಪಳ**



ಜಾನಪದದ ಸರ್ವಾಂಗೀಣವೂ, ತಲಸ್ಪರ್ಶಿಯೂ ಆದ ಅಧ್ಯಯನ ಇಂದಿನ ತುರ್ತು. ಬದಲಾದ ಕಾಲಮಾನ, ವಸಾಹತೋತ್ತರ ಜಿಜ್ಞಾಸೆ, ಆಧುನಿಕತೆಗಳ ಆಯಾಮಗಳನ್ನು ಮೀರಿದ ದೇಶಿ ಹುಡುಕಾಟ ಹಿಂದೆಂದಿಗಿಂತಲೂ ಇಂದು ಪ್ರಸ್ತುತ.

ಆ ನೆಲೆಯಲ್ಲಿ ಅಕಾಡೆಮಿ ಭಿನ್ನ ಆಲೋಚನೆಗಳಿಂದ ತನ್ನನ್ನು ಪುನಃ ರೂಪಿಸಿಕೊಳ್ಳುತ್ತಿದೆ. ಗ್ರಾಮೀಣ ಜಾನಪದದ ಬೆನ್ನೆಲುಬಾದ ಕಲಾವಿದರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವುದರ ಜೊತೆ ಜಾನಪದದ ಬೌದ್ಧಿಕ ಅಸ್ತಿತ್ವಕ್ಕೂ ಯತ್ನಿಸಲಾಗಿದೆ. ಆ ದಿಕ್ಕಿನಲ್ಲಿ ಅಕಾಡೆಮಿ ಹಮ್ಮಿಕೊಳ್ಳುವ ವಿಚಾರಸಂಕಿರಣಗಳು ಗಮನಾರ್ಹ. ಈ ದಿಶೆಯಲ್ಲಿ ಅಕಾಡೆಮಿ ಅವ್ಯಾಹತವಾಗಿ ಕ್ರಿಯಾಶೀಲವಾಗಿದೆ.

30 ಜಿಲ್ಲೆಗಳ ಕಲಾವಿದರ ಪರಿಚಯದ ಮಾಲಿಕೆಗಳು ಅಕಾಡೆಮಿಯ ಸ್ತುತ್ಯ ಪ್ರಕಟಣೆಗಳಾಗಿವೆ. ದೇಶೀಯತೆಯ ವಕ್ತಾರರಾದ, ಸಾಂಸ್ಕೃತಿಕ ರಾಯಭಾರಿಗಳಾದ ಈ ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಉದ್ದೇಶದ ಈ ಮಾಲಿಕೆ ಜನಪದರಿಗೆ ಹಾಗೂ ಜನಪದಕ್ಕೆ ನಿಜವಾಗಿಯೂ ಸಲ್ಲಿಸಿದ ಗೌರವವಾಗಿದೆ.

ಡಾ. ಎಸ್. ಪ್ರಸಾದಸ್ವಾಮಿ

ರಿಜಿಸ್ಟ್ರಾರ್

